ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ

ಹೊಸ 'ಗಂಧದಗುಡಿ'ಯ ನಿರ್ಮಾಣದಲ್ಲಿ ದಿವಂಗತ ಪುನೀತ್ ರಾಜ್‌ಕುಮಾರ್ ಜತೆಗೆ ಅಮೋಘವರ್ಷ ಅವರು ಹೆಜ್ಜೆ ಹಾಕಿದ ನೆನಪು



ಸಂಖ್ಯೆ-ಸುದ್ದಿ

ಅರ್ಧ ಜಗತ್ತಿನ ಕೈ ಖಾಲಿ

ಜೈಲಿನಿಂದ ಸುಧಾ ಭಾರದ್ವಾಜ್ ಬಿಡುಗಡೆ 6

ಅನಧಿಕೃತ ಕಟ್ಟಡ ತೆರವುಗೊಳಿಸಿ 3C

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
58,807 ▲	17,516 ▲	₹49,320 (ಬೆಂಗಳೂರು) ▼	₹62,100 (ಬೆಂಗಳೂರು) ▼	75.60 ▼

ಕೇಂದ್ರದ ಭರವಸೆಯನ್ನು ಒಪ್ಪಿದ ರೈತ ಸಂಘಟನೆಗಳು

ರೈತರ ಪ್ರತಿಭಟನೆ ಸದ್ಯಕ್ಕೆ ಸ್ಥಗಿತ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇಂದ್ರದ ಮೂರು ಕೃಷಿ ಕಾಯ್ದೆಗಳ ವಿರುದ್ಧ ದೆಹಲಿಯ ಮೂರು ಗಡಿಗಳಲ್ಲಿ ಸುಮಾರು 380 ದಿನಗಳಿಂದ ನಡೆಸುತ್ತಿದ್ದ ಪ್ರತಿಭಟನೆಯನ್ನು ಸ್ಥಗಿತಗೊಳಿಸಲು ರೈತರು ನಿರ್ಧರಿಸಿದ್ದಾರೆ. 15 ತಿಂಗಳ ಹಿಂದೆ ಜಾರಿಗೆ ಬಂದಿದ್ದ ಕಾಯ್ದೆಗಳನ್ನು 10 ದಿನಗಳ ಮೊದಲು, ಸಂಸತ್ತಿನ ಚಳಿಗಾಲದ ಅಧಿವೇಶನದಲ್ಲಿ ಹಿಂದಕ್ಕೆ ಪಡೆಯಲಾಗಿತ್ತು. ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ ಖಾತರಿಗೆ ಕಾನೂನು ರೂಪಿಸುವುದು ಸೇರಿ ರೈತರ ಇತರ ಬೇಡಿಕೆಗಳನ್ನು ಈಡೇರಿಸುವುದಾಗಿ ಕೇಂದ್ರ ಸರ್ಕಾರವು ಲಿಖಿತ ಭರವಸೆ ಕೊಟ್ಟಿದೆ. ಹಾಗಾಗಿ, ಪ್ರತಿಭಟನೆಯನ್ನು ಸ್ಥಗಿತಗೊಳಿಸಲು ರೈತರು ಮುಂದಾಗಿದ್ದಾರೆ.

ಪ್ರತಿಭಟನೆಯನ್ನು 'ಚಾರಿತ್ರಿಕ' ಎಂದು ಸಂಯುಕ್ತ ಕಿಸಾನ್ ಮೋರ್ಚಾವು (ಎಸ್‌ಕೆಎಂ) ಬಣ್ಣಿಸಿದೆ. ರೈತರು ಪ್ರತಿಭಟನೆಯ ಸ್ಥಳವನ್ನು ತೆರವು ಮಾಡುವ ಕೆಲಸವನ್ನು ಶನಿವಾರ ಆರಂಭಿಸಲಿದ್ದಾರೆ. ರೈತರು ತಮ್ಮ ಊರುಗಳಿಗೆ 'ವಿಜಯ ಯಾತ್ರೆ' ನಡೆಸಲಿದ್ದಾರೆ ಎಂದಿದೆ. ಸರ್ಕಾರವು ಭರವಸೆಗಳನ್ನು ಈಡೇರಿಸದೇ ಇದ್ದರೆ 2022ರ ಜನವರಿ 15ರಿಂದ ಪ್ರತಿಭಟನೆ ಪುನರಾರಂಭ ಆಗಲಿದೆ ಎಂಬ ಎಚ್ಚರಿಕೆಯನ್ನೂ ಎಸ್‌ಕೆಎಂ ನೀಡಿದೆ. 2022ರ ಜನವರಿ 15ರಂದು ರೈತ ಮುಖಂಡರು ಸಭೆ ನಡೆಸಿ, ಬೇಡಿಕೆಗಳು ಈಡೇರಿವೆಯೇ ಎಂದು ಪರಿಶೀಲಿಸಲಿದ್ದಾರೆ.

'ಎಲ್ಲ ರೈತರು ದೆಹಲಿಯ ಗಡಿ ತೊರೆಯಲು ಕೆಲವು ದಿನಗಳು ಬೇಕಾಗಬಹುದು. ನಾನು ಇದೇ 14ರಂದು ಮನೆಗೆ ಹೋಗುತ್ತೇನೆ. 13ರಂದು ಸ್ವರ್ಣ ಮಂದಿರಕ್ಕೆ ಹೋಗುತ್ತೇನೆ' ಎಂದು ಪ್ರತಿಭಟನೆಯ ನೇತೃತ್ವ ವಹಿಸಿದ್ದ ರಾಕೇಶ್ ಟಿಕಾಯತ್ ಹೇಳಿದ್ದಾರೆ.

ಕೇಂದ್ರದ ಮೂರು ಕೃಷಿ ಕಾಯ್ದೆಗಳ ವಿರುದ್ಧ ಕಳೆದ 2020ರ ನವೆಂಬರ್ 26ರಂದು ರೈತರು ಪ್ರತಿಭಟನೆ ಆರಂಭಿಸಿದ್ದರು. ಕಾಯ್ದೆಗಳನ್ನು ಹಿಂದಕ್ಕೆ ಪಡೆಯುವುದಾಗಿ ಪ್ರಧಾನಿ ನರೇಂದ್ರ ಮೋದಿ ಪ್ರತಿಭಟನೆಗೆ ವರ್ಷ ತುಂಬುವುದಕ್ಕೆ ವಾರ ಮೊದಲು ಅಂದರೆ 2021ರ ನವೆಂಬರ್ 19ರಂದು ಘೋಷಿಸಿದ್ದರು. ಸಂಸತ್ತಿನ ಚಳಿಗಾಲದ ಅಧಿವೇಶನದ ಮೊದಲ ದಿನವೇ (ನವೆಂಬರ್ 29) ಕಾಯ್ದೆಗಳನ್ನು ಹಿಂದಕ್ಕೆ ಪಡೆಯುವ ಮಸೂದೆ ಅಂಗೀಕಾರ ಆಗಿತ್ತು.

ಆದರೆ, ಕನಿಷ್ಠ ಬೆಂಬಲ ಬೆಲೆಗೆ ಕಾನೂನು ಖಾತರಿ ಮತ್ತು ಇತರ ಬೇಡಿಕೆಗಳ ಕಾರಣದಿಂದ ರೈತರು ಪ್ರತಿಭಟನೆ ಮುಂದುವರಿಸಿದ್ದರು.

ಕೇಂದ್ರದ ಲಿಖಿತ ಭರವಸೆ

ಕೇಂದ್ರದ ಕೃಷಿ ಮತ್ತು ರೈತ ಕಲ್ಯಾಣ ಸಚಿವಾಲಯವು ಎಸ್‌ಕೆಎಂಗೆ ಪತ್ರ ಕಳುಹಿಸಿದೆ. ಪ್ರಸ್ತಾವನೆಯ ಮೂಲಕ ಎಸ್‌ಕೆಎಂ ಮುಂದಿಟ್ಟಿರುವ ಬೇಡಿಕೆಗಳನ್ನು ಸರ್ಕಾರ ಅಂಗೀಕರಿಸಿದೆ. ಎಲ್ಲ ಐದು ಬೇಡಿಕೆಗಳನ್ನೂ ಒಪ್ಪಿಕೊಳ್ಳಲಾಗಿದೆ. ಹಾಗಾಗಿ, ರೈತರು ಪ್ರತಿಭಟನೆ ಮುಂದುವರಿಸುವುದಕ್ಕೆ ಈಗ ಯಾವ ಸಮರ್ಥನೆಯೂ ಇಲ್ಲ. ರೈತರು ತಮ್ಮ ಪ್ರತಿಭಟನೆ ಕೈಬಿಡಬೇಕು ಎಂದು ಈ ಮೂಲಕ ಕೋರಲಾಗಿದೆ ಎಂದು ಪತ್ರದಲ್ಲಿ ಹೇಳಲಾಗಿದೆ. ಸಚಿವಾಲಯದ ಕಾರ್ಯದರ್ಶಿ ಸಂಜಯ್ ಅಗರ್‌ವಾಲ್ ಅವರು ಪತ್ರಕ್ಕೆ ಸಹಿ ಹಾಕಿದ್ದಾರೆ.

ಪ್ರತಿಭಟನೆಯ ಅವಧಿಯಲ್ಲಿ ರೈತರ ಮೇಲೆ ದಾಖಲಾಗಿರುವ ಎಲ್ಲ ಪ್ರಕರಣಗಳನ್ನು ತಕ್ಷಣವೇ ಹಿಂದಕ್ಕೆ ಪಡೆಯಲು ಉತ್ತರ ಪ್ರದೇಶ, ಉತ್ತರಾಖಂಡ, ಹಿಮಾಚಲ ಪ್ರದೇಶ, ಮಧ್ಯ ಪ್ರದೇಶ ಮತ್ತು ಹರಿಯಾಣ ರಾಜ್ಯಗಳ ಸರ್ಕಾರಗಳು ಈಗಾಗಲೇ ಒಪ್ಪಿಗೆ ಸೂಚಿಸಿವೆ ಎಂದು ಕೇಂದ್ರವು ರೈತರಿಗೆ ತಿಳಿಸಿದೆ. ಕೇಂದ್ರ ಸರ್ಕಾರದ ಸಂಸ್ಥೆಗಳು, ದೆಹಲಿ ಸರ್ಕಾರ ಇನ್ನಷ್ಟೇ ಒಪ್ಪಿಗೆ ನೀಡಬೇಕಿದೆ. ಪ್ರಕರಣಗಳನ್ನು ಕೈಬಿಡುವಂತೆ ಕೇಂದ್ರವು ದೆಹಲಿ ಸರ್ಕಾರಕ್ಕೆ ಮನವಿ ಮಾಡಿಕೊಳ್ಳಲಿದೆ ಎಂದೂ ಪತ್ರದಲ್ಲಿ ತಿಳಿಸಲಾಗಿದೆ.

ಉತ್ತರ ಪ್ರದೇಶ ಮತ್ತು ಹರಿಯಾಣ ಸರ್ಕಾರಗಳು ಪರಿಹಾರ ನೀಡಲು ತಾತ್ವಿಕ ಒಪ್ಪಿಗೆ ಸೂಚಿಸಿವೆ. ಕೃಷಿ ತ್ಯಾಜ್ಯ ಸುಡುವುದಕ್ಕೆ ಸಂಬಂಧಿಸಿ ಅಪರಾಧಿಕ ಹೊಣೆಗಾರಿಕೆಯಿಂದ ರೈತರನ್ನು ಮುಕ್ತ ಮಾಡಲಾಗಿದೆ. ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆಯ ಖಾತರಿಗಾಗಿ ಕಾನೂನು ರೂಪಿಸುವ ವಿಚಾರದಲ್ಲಿ ಸಮಿತಿಯೊಂದನ್ನು ರಚಿಸಲಾಗುವುದು. ರೈತ ಸಂಘಟನೆಗಳ ಪ್ರತಿನಿಧಿಗಳು, ಕೃಷಿ ವಿಜ್ಞಾನಿಗಳು ಸಮಿತಿಯಲ್ಲಿ ಇರಲಿದ್ದಾರೆ. ಸದ್ಯಕ್ಕೆ, ಈಗ ಇರುವ ಕನಿಷ್ಠ ಬೆಂಬಲ ಬೆಲೆ ವ್ಯವಸ್ಥೆ ಮುಂದುವರಿಯಲಿದೆ ಎಂದೂ ಸರ್ಕಾರ ವಿವರಿಸಿದೆ.

> ರೈತರು ಪ್ರತಿಭಟನೆ ಸ್ಥಗಿತಗೊಳಿಸಿದ್ದರೂ ಅವರಿಗೆ ಆಗಿರುವ ಗಾಯ ಮಾಯಲು ಸಮಯ ಬೇಕು. 700ಕ್ಕೂ ಹೆಚ್ಚು ರೈತರು ಪ್ರತಿಭಟನೆ ವೇಳೆ ಮೃತಪಟ್ಟಿದ್ದಾರೆ
>
> **ಶಿರೋಮಣಿ ಅಕಾಲಿ ದಳ**

> ಪ್ರತಿಭಟನೆಯನ್ನು ಸದ್ಯಕ್ಕೆ ಸ್ಥಗಿತಗೊಳಿಸಿದ್ದೇವೆ. ಹೋರಾಟ ಇನ್ನೂ ಮುಗಿದಿಲ್ಲ. ಭರವಸೆಗಳು ಈಡೇರದೇ ಇದ್ದರೆ ಪ್ರತಿಭಟನೆ ಮತ್ತೆ ಆರಂಭ ಆಗಲಿದೆ
>
> **ಗುರ್ನಾಮ್ ಸಿಂಗ್ ಚಡೂನಿ**, ರೈತ ನಾಯಕ

ಸೇನಾ ಹೆಲಿಕಾಪ್ಟರ್ ಪತನ: ದೆಹಲಿ ತಲುಪಿದ ಮೃತದೇಹಗಳು

ತನಿಖೆಗೆ ಏರ್‌ಮಾರ್ಷಲ್ ನೇತೃತ್ವ

ಕೂನೂರು/ನವದೆಹಲಿ (ಪಿಟಿಐ): ತಮಿಳುನಾಡಿನ ಕೂನೂರು ಸಮೀಪ ಬುಧವಾರ ಸೇನಾ ಹೆಲಿಕಾಪ್ಟರ್ ಪತನಗೊಂಡ ಪ್ರಕರಣದ ತನಿಖೆಯನ್ನು ಮೂರೂ ಸೇನೆಗಳ ಸದಸ್ಯರು ಇರುವ ಸಮಿತಿ ನಡೆಸಲಿದೆ. ಏರ್ ಮಾರ್ಷಲ್ ಮಾನವೇಂದ್ರ ಸಿಂಗ್ ಅವರು ತನಿಖೆಯ ನೇತೃತ್ವ ವಹಿಸಲಿದ್ದಾರೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ನೀಡಿದ ಹೇಳಿಕೆಯಲ್ಲಿ ಪ್ರಕಟಿಸಿದ್ದಾರೆ.

ತನಿಖಾಧಿಕಾರಿಗಳ ತಂಡವು ವೆಲ್ಲಿಂಗ್ಟನ್‌ಗೆ ಬುಧವಾರವೇ ತಲುಪಿದೆ. ಅವರು ತನಿಖೆಯನ್ನೂ ಆರಂಭಿಸಿದ್ದಾರೆ ಎಂದು ರಾಜನಾಥ್ ಅವರು ತಿಳಿಸಿದ್ದಾರೆ.

ಪತನಗೊಂಡ ಹೆಲಿಕಾಪ್ಟರ್‌ನ ಹಾರಾಟ ದತ್ತಾಂಶ ದಾಖಲಾಗಿರುವ ಬ್ಲ್ಯಾಕ್ ಬಾಕ್ಸ್ ಗುರುವಾರ ಸಿಕ್ಕಿದೆ. ಪತನಕ್ಕೆ ಸಂಬಂಧಿಸಿ ಮಹತ್ವದ ಸುಳಿವುಗಳು ಬ್ಲ್ಯಾಕ್ ಬಾಕ್ಸ್‌ನಿಂದ ಸಿಗುವ ಸಾಧ್ಯತೆ ಇದೆ. ಸೇನಾ ಪಡೆಗಳ ಮೊದಲ ಮುಖ್ಯಸ್ಥ (ಸಿಡಿಎಸ್) ಬಿಪಿನ್ ರಾವತ್ ಮತ್ತು ಇತರ 12 ಮಂದಿ ಹೆಲಿಕಾಪ್ಟರ್ ಪತನದಲ್ಲಿ ಮೃತಪಟ್ಟಿದ್ದಾರೆ.

ಪತನದ ಸ್ಥಳದ 300 ಮೀಟರ್ ವ್ಯಾಪ್ತಿಯಲ್ಲಿ ನಡೆಸುತ್ತಿದ್ದ ಶೋಧವನ್ನು ಅಧಿಕಾರಿಗಳು ಒಂದು ಕಿ.ಮೀ.ಗೆ ವಿಸ್ತರಿಸಿದ ಬಳಿಕ ಬ್ಲ್ಯಾಕ್ ಬಾಕ್ಸ್ ಸೇರಿ ಎರಡು ಪೆಟ್ಟಿಗೆಗಳು ಸಿಕ್ಕಿವೆ. ಈ ಪೆಟ್ಟಿಗೆಗಳನ್ನು ದೆಹಲಿ ಅಥವಾ ಬೆಂಗಳೂರಿಗೆ ಒಯ್ದು, ಅದರಲ್ಲಿರುವ ದತ್ತಾಂಶಗಳನ್ನು ಸಂಗ್ರಹಿಸಿ, ಹೆಲಿಕಾಪ್ಟರ್ ಪತನದ ಕಾರಣ ಕಂಡು ಹಿಡಿಯಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

3D | ಪುಟ ನೋಡಿ



ದುರಂತದಲ್ಲಿ ಮೃತರಾದವರಿಗೆ ಪ್ರಧಾನಿ ನರೇಂದ್ರ ಮೋದಿ ಗುರುವಾರ ನಮನ ಸಲ್ಲಿಸಿದರು –ಎಎಫ್‌ಪಿ ಚಿತ್ರ

ವಿರಳ ತನಿಖೆ

ಹೆಲಿಕಾಪ್ಟರ್ ಅಥವಾ ವಿಮಾನ ಪತನದಂತಹ ದುರಂತದ ಬಗ್ಗೆ ಮೂರೂ ಪಡೆಗಳ ಸದಸ್ಯರು ಇರುವ ಸಮಿತಿಯಿಂದ ತನಿಖೆ ನಡೆಸುವುದು ವಿರಳಾತಿ ವಿರಳ. ಈ ಸಮಿತಿಯು ಹಾರಾಟದ ಮಾರ್ಗ, ಹಾರಾಟದ ಸ್ಥಿತಿಗತಿ, ಸಂಭವಿಸಿರಬಹುದಾದ ತಾಂತ್ರಿಕ ಸಮಸ್ಯೆಗಳು, ದಿಢೀರ್ ಕೆಳಕ್ಕೆ ಉರುಳಲು ಕಾರಣ ಇತ್ಯಾದಿ ವಿಚಾರಗಳಿಗೆ ಗಮನ ಹರಿಸಲಿದೆ.

ಹೆಲಿಕಾಪ್ಟರ್ ಹಾರಾಟ ನಡೆಸುತ್ತಿದ್ದ ವಿಂಗ್ ಕಮಾಂಡರ್ ಪೃಥ್ವಿ ಸಿಂಗ್ ಚೌಹಾಣ್ ಅವರು ಸೂಲೂರಿನ 109 ಹೆಲಿಕಾಪ್ಟರ್ ಘಟಕದ ಕಮಾಂಡಿಂಗ್ ಅಧಿಕಾರಿಯಾಗಿದ್ದವರು. ಅವರಿಗೆ ಎರಡು ದಶಕಗಳ ಹೆಲಿಕಾಪ್ಟರ್ ಹಾರಾಟದ ಅನುಭವ ಇತ್ತು.

ಇನ್ನಷ್ಟು ಸುದ್ದಿಗಳು | 5, 10

ರಾತ್ರಿ ಕರ್ಫ್ಯೂ: ಮುಂದಿನವಾರ ನಿರ್ಧಾರ- ಸಿಎಂ

ಬೆಂಗಳೂರು: ಓಮೈಕ್ರಾನ್ ಪ್ರಕರಣಗಳು ಪತ್ತೆಯಾಗಿರುವುದು ಮತ್ತು ಕೋವಿಡ್ ಪ್ರಕರಣಗಳನ್ನು ನಿಯಂತ್ರಿಸಲು ರಾತ್ರಿ ಕರ್ಫ್ಯೂ ವಿಧಿಸಬೇಕೇ ಎಂಬ ಬಗ್ಗೆ ಮುಂದಿನ ಒಂದು ವಾರದ ಪರಿಸ್ಥಿತಿ ಅವಲೋಕಿಸಿದ ಬಳಿಕ ತೀರ್ಮಾನ ತೆಗೆದುಕೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು. 3A

ವಿಧಾನ ಪರಿಷತ್ ಚುನಾವಣೆ ಇಂದು ಮತದಾನ

ಬೆಂಗಳೂರು: ರಾಜ್ಯದ 20 ಸ್ಥಳೀಯ ಸಂಸ್ಥೆಗಳಿಂದ ವಿಧಾನಪರಿಷತ್ತಿನ 25 ಕ್ಷೇತ್ರಗಳಿಗೆ ಶುಕ್ರವಾರ (ಡಿ.10) ಮತದಾನ ನಡೆಯಲಿದ್ದು, ಮತದಾರರನ್ನು ಒಲಿಸಿಕೊಳ್ಳಲು ಅಭ್ಯರ್ಥಿಗಳು ಗುರುವಾರ ಸಂಜೆಯವರೆಗೆ ಕೊನೇ ಕ್ಷಣದ ಪ್ರಯತ್ನ ನಡೆಸಿದರು. 4

ಚಿನಕುರಳಿ

ಪ್ರಕಾಶ್ ಶೆಟ್ಟಿ



ಸಂಕ್ಷಿಪ್ತ ಸುದ್ದಿ

ಸಿಂಡಿಕೇಟ್‌ಗೆ ನೇಮಕ

ಬೆಂಗಳೂರು: ಬೆಂಗಳೂರು ನಗರ ವಿಶ್ವವಿದ್ಯಾಲಯದ ಸಿಂಡಿಕೇಟ್‌ಗೆ ಕೋಲಾರ ಜಿಲ್ಲೆಯ ಹೂಹಳ್ಳಿ ಗ್ರಾಮದ ಎಂ.ವಿ. ರಂಗಪ್ಪ ಮತ್ತು ನಗರದ ಸಮರ್ಥ ಮುನಿರಾಜು ಅವರನ್ನು ನೇಮಿಸಲಾಗಿದೆ.

ಮುಂದಿನ ಮೂರು ವರ್ಷಗಳ ಅವಧಿಗೆ ಈ ಇಬ್ಬರನ್ನು ನಾಮನಿರ್ದೇಶನ ಮಾಡಿರುವ ಬಗ್ಗೆ ಬೆಂಗಳೂರು ನಗರ ವಿಶ್ವವಿದ್ಯಾಲಯವು ಅಧಿಸೂಚನೆ ಹೊರಡಿಸಿದೆ.

ದತ್ತಿ ಪ್ರಶಸ್ತಿಗೆ ಅರ್ಜಿ ಆಹ್ವಾನ

ಬೆಂಗಳೂರು: ಕನ್ನಡ ಸಂಘರ್ಷ ಸಮಿತಿಯು 'ಚಿರಂತನ ಪ್ರಕಾಶನ ದತ್ತಿ ಪ್ರಶಸ್ತಿ'ಗೆ 2021ನೇ ಸಾಲಿನಲ್ಲಿ ಪ್ರಕಟವಾದ ಕೃತಿಗಳನ್ನು ಆಹ್ವಾನಿಸಿದೆ.

ವೈಚಾರಿಕ ಕೃತಿಗೆ ಈ ಪ್ರಶಸ್ತಿ ನೀಡಲಾಗುವುದು. ಸ್ವವಿವರದ ಪತ್ರದೊಂದಿಗೆ ಮೂರು ಪ್ರತಿಗಳನ್ನು ಇದೇ 31ರೊಳಗೆ ಎ.ಎಸ್. ನಾಗರಾಜಸ್ವಾಮಿ, ಅಧ್ಯಕ್ಷರು, ಕನ್ನಡ ಸಂಘರ್ಷ ಸಮಿತಿ, ನಂ.3, 1ನೇ ತಿರುವು, 1ನೇ ಮುಖ್ಯ ರಸ್ತೆ, ಅನ್ನಪೂರ್ಣೇಶ್ವರಿ ಬಡಾವಣೆ, ಉಲ್ಲಾಳು ಮುಖ್ಯ ರಸ್ತೆ, ಬೆಂಗಳೂರು-560 056 ಈ ವಿಳಾಸಕ್ಕೆ ಕಳುಹಿಸಬೇಕು ಎಂದು ಪ್ರಕಟಣೆ ತಿಳಿಸಿದೆ.

ಸಂಪರ್ಕ: 9739001410

ಮಗನ ಭೇಟಿ– ತಾಯಿಯ ಹಂಬಲಕ್ಕೆ ಹೈಕೋರ್ಟ್ ಸ್ಪಂದನೆ



ಬೆಂಗಳೂರು: 'ಕೌಟುಂಬಿಕ ಕಲಹದ ಕಾರಣ ನನ್ನ ಮಗ ನನ್ನ ಪತಿಯ ಬಳಿಯೇ ಉಳಿದಿದ್ದು ಅವನನ್ನು ಎರಡೂವರೆ ವರ್ಷಗಳಿಂದ ನೋಡಲು ಸಾಧ್ಯವಾಗಿಲ್ಲ. ಆತನ ಭೇಟಿಗೆ ಹಂಬಲಿಸುತ್ತಿರುವ ನನ್ನ ಮನವಿಯನ್ನು ದಯವಿಟ್ಟು ಪುರಸ್ಕರಿಸಿ ಮಗನ ಭೇಟಿಗೆ ಅವಕಾಶ ಕಲ್ಪಿಸಿಕೊಡಿ' ಎಂಬ ತಾಯಿಯ ಮೊರೆಗೆ ಹೈಕೋರ್ಟ್ ಸ್ಪಂದಿಸಿದೆ.

'ಮಗುವನ್ನು ಶುಕ್ರವಾರ (ಡಿ.10) ಬೆಳಿಗ್ಗೆ 10.30ಕ್ಕೆ ಸರಿಯಾಗಿ ಕೋರ್ಟ್‌ಗೆ ಹಾಜರುಪಡಿಸಬೇಕು' ಎಂದು ಪ್ರತಿವಾದಿಯೂ ಆಗಿರುವ ಅರ್ಜಿದಾರ ಮಹಿಳೆಯ ಪತಿಗೆ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ಆದೇಶಿಸಿದೆ.

ವಿಚಾರಣೆ ವೇಳೆ ತಾಯಿಯ ಪರ ವಕೀಲ ಸಿ.ಪ್ರಜಿತ್ ಅರ್ಜಿದಾರರ ಮನವಿಯನ್ನು ನ್ಯಾಯಪೀಠಕ್ಕೆ ಅರುಹಿದರು. ಮನವಿ ಪುರಸ್ಕರಿಸಿದ ನ್ಯಾಯಪೀಠ 'ಶುಕ್ರವಾರ ಬೆಳಿಗ್ಗೆ ಮಗುವನ್ನು ಕೋರ್ಟ್‌ಗೆ ಹಾಜರುಪಡಿಸಿ' ಎಂದು ಪ್ರತಿವಾದಿ ಪರ ವಕೀಲರಿಗೆ ಆದೇಶಿಸಿತು.

ಇದಕ್ಕೆ ಪತಿಯ ಪರ ವಕೀಲರು ವಿಡಿಯೊ ಕಾನ್ಫರೆನ್ಸ್ ಮುಖಾಂತರ ಉತ್ತರಿಸಿ, 'ಶುಕ್ರವಾರ ಹಾಜರುಪಡಿಸುವುದು ಕಷ್ಟಸಾಧ್ಯ. ಕನಿಷ್ಠ ಮೂರು ನಾಲ್ಕು ದಿನವಾದರೂ ಅವಕಾಶ ಕೊಡಿ' ಎಂದು ಕೋರಿದರು. ಇದನ್ನು ಒಪ್ಪದ ನ್ಯಾಯಪೀಠ, 'ಶುಕ್ರವಾರವೇ ಮಗುವನ್ನು ತಂದೆಯ ಜೊತೆ ಕೋರ್ಟ್‌ಗೆ ಹಾಜರುಪಡಿಸಬೇಕು' ಎಂದು ನಿರ್ದೇಶಿಸಿತು.

ಆದರೆ, 'ಈ ನಿರ್ದೇಶನ ಪಾಲಿಸಲು ಸಾಧ್ಯವಾಗದು ಎಂದು ಪದೇ ಪದೇ ಪುನರುಚ್ಚರಿಸುತ್ತಲೇ ಹೋದ ವಕೀಲರ ಮನವಿಯನ್ನು ಸಾರಾಸಗಟಾಗಿ ತಳ್ಳಿ ಹಾಕಿದ ನ್ಯಾಯಪೀಠ, 'ಒಂದು ವೇಳೆ ಶುಕ್ರವಾರ ಬೆಳಿಗ್ಗೆ ಹಾಜರುಪಡಿಸದೇ ಹೋದರೆ, ಬೆಂಗಳೂರು ನಗರ ಪೊಲೀಸ್ ಆಯುಕ್ತರಿಗೆ ನಿರ್ದೇಶಿಸಿ, ಬಂಧಿಸಿ ಕರೆತರಲು ಆದೇಶಿಸಬೇಕಾಗುತ್ತದೆ' ಎಂದು ಖಡಕ್ಕಾಗಿ ಎಚ್ಚರಿಸಿತು. ವಿಚಾರಣೆಯನ್ನು ಶುಕ್ರವಾರ ಬೆಳಗ್ಗೆ 10.30ಕ್ಕೆ ಮುಂದೂಡಲಾಗಿದೆ.

ಮಗನ ಭೇಟಿಗೆ ಅವಕಾಶ ಕೋರಿರುವ ಅರ್ಜಿದಾರ ತಾಯಿಗೆ ಈಗ 35 ವರ್ಷ. ಪತಿಗೆ 43 ವರ್ಷ. ಸುಶಿಕ್ಷಿತರಾಗಿರುವ ಇಬ್ಬರೂ ಸದ್ಯ ಬೆಂಗಳೂರಿನ ನಿವಾಸಿಗಳು. ಕೌಟುಂಬಿಕ ಕಲಹದ ಕಾರಣ ಪ್ರತ್ಯೇಕವಾಗಿ ಬೆಂಗಳೂರಿನಲ್ಲಿಯೇ ಬದುಕುತ್ತಿದ್ದಾರೆ. ಇವರಿಬ್ಬರ ದಾಂಪತ್ಯ ಕಲಹದಲ್ಲಿ ಮಗ ತಂದೆಯೇ ಬಳಿಯೇ ಉಳಿದಿದ್ದು ಅವನನ್ನು ನೋಡಲು ತಾಯಿಗೆ ಸಾಧ್ಯವಾಗಿಲ್ಲ.

ಶ್ವಾನಗಳ ಮೂತ್ರ ವಿಸರ್ಜನೆ: ಕ್ರಮಕೈಗೊಳ್ಳಲು ಬಿಬಿಎಂಪಿಗೆ ಹೈಕೋರ್ಟ್ ತಾಕೀತು

ಕಬ್ಬನ್ ಪಾರ್ಕ್‌ನಲ್ಲಿ ನಾಯಿ ಹಾವಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಾಯಿಗಳನ್ನು ಸಾರ್ವಜನಿಕ ಸ್ಥಳಗಳಿಗೆ ಕರೆತಂದು ಮಲ,ಮೂತ್ರ ವಿಸರ್ಜನೆ ಮಾಡಿಸುವುದನ್ನು ತಡೆಯಬೇಕು. ಈ ವಿಷಯದಲ್ಲಿ ಬಿಬಿಎಂಪಿ ತಾನಾಗಿಯೇ ಕ್ರಮ ಜರುಗಿಸಬೇಕು. ಇಲ್ಲವಾದರೆ ನ್ಯಾಯಾಲಯವೇ ಈ ಸಂಗತಿಯನ್ನು ಪರಿಗಣನೆಗೆ ತೆಗೆದುಕೊಂಡು ನೋಟಿಸ್ ಜಾರಿ ಮಾಡಲು ಆದೇಶಿಸಬೇಕಾಗುತ್ತದೆ' ಎಂದು ಹೈಕೋರ್ಟ್ ಮೌಖಿಕ ಎಚ್ಚರಿಕೆ ನೀಡಿದೆ.

'ಕಬ್ಬನ್ ಪಾರ್ಕ್‌ಗೆ ಸೇರಿದ ಜಾಗವನ್ನು ವಿವಿಧ ಸಂಸ್ಥೆಗಳು ಅತಿಕ್ರಮಿಸಿ ಕಟ್ಟಡ ನಿರ್ಮಿಸಿವೆ' ಎಂದು ಆರೋಪಿಸಿ ಕಬ್ಬನ್ ಪಾರ್ಕ್ ನಡಿಗೆದಾರರ ಸಂಘ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಮುಖ್ಯ ನ್ಯಾಯಮೂರ್ತಿಗಳು, 'ಬೆಳಗಿನ ಸಮಯದಲ್ಲಿ ನಾಯಿಗಳನ್ನು ಕಬ್ಬನ್ ಪಾರ್ಕ್ ಒಳಗೆ ಬಿಡುವುದಕ್ಕೆ ಯಾವುದೇ ನಿರ್ಬಂಧ ಇಲ್ಲವೇ, ಇದಕ್ಕೆ ಯಾವುದೇ ಶುಲ್ಕ ನಿಗದಿಪಡಿಸಿಲ್ಲವೇ, ಸಾರ್ವಜನಿಕ ಪ್ರದೇಶದಲ್ಲಿ ನಾಯಿಗಳ ಪ್ರವೇಶಕ್ಕೆ ಹೇಗೆ ಅನುಮತಿ ನೀಡಲಾಗಿದೆ. ಬೀದಿ ಮತ್ತು ಸಾಕು ನಾಯಿಗಳ ನಿರ್ವಹಣೆಗೆ ಏನೆಲ್ಲಾ ಕ್ರಮ ಕೈಗೊಳ್ಳಲಾಗಿದೆ' ಎಂದು ಪ್ರಶ್ನಿಸಿದರು.

ಮುಖ್ಯಾಂಶಗಳು

- ನಾಯಿ ಮತ್ತು ಜಾನುವಾರುಗಳ ಹಾವಳಿ ಗಂಭೀರ ವಿಚಾರ
- ಕಬ್ಬನ್ ಪಾರ್ಕ್‌ನಲ್ಲಿ ನಾಯಿಗಳ ಮಲ,ಮೂತ್ರ ವಿಸರ್ಜನೆ
- ಸ್ವಚ್ಛಗೊಳಿಸದಿದ್ದರೆ ಸಂಚಾರ ಸಾಧ್ಯವಾಗುವುದಿಲ್ಲ

ನಾಯಿ, ಬೆಕ್ಕು ಸೇರಿ ಸಾಕು ಪ್ರಾಣಿಗಳನ್ನು ಸಾಕಲು ಸಂಬಂಧಪಟ್ಟ ಪ್ರಾಧಿಕಾರದಿಂದ ಅನುಮತಿ ಪಡೆಯುವಂತಾಗಬೇಕು. ಅವುಗಳ ನಿರ್ವಹಣೆ ಮೇಲೆ ನಿಗಾ ವಹಿಸುವ ವ್ಯವಸ್ಥೆ ತರಬೇಕು

ಋತುರಾಜ್ ಅವಸ್ಥಿ
ಮುಖ್ಯ ನ್ಯಾಯಮೂರ್ತಿ

ಮುಖ್ಯ ನ್ಯಾಯಮೂರ್ತಿಗಳ ಯುರೋಪ್ ಅನುಭವ...

'ನಾನೊಮ್ಮೆ ಯುರೋಪ್‌ಗೆ ಹೋಗಿದ್ದೆ. ಬೆಳಗ್ಗೆ ಹೋಟೆಲ್‌ನಲ್ಲಿ ಕಿಟಕಿ ಪಕ್ಕ ನಿಂತಿದ್ದ ಸಮಯದಲ್ಲಿ ಎದುರಿನ ರಸ್ತೆಗೆ ಒಬ್ಬರು ನಾಯಿಯೊಂದಿಗೆ ಬಂದರು. ಆ ನಾಯಿ ರಸ್ತೆ ಮಧ್ಯದಲ್ಲೇ ಮಲ ವಿಸರ್ಜನೆ ಮಾಡಿತು. ಕೂಡಲೇ ಆ ವ್ಯಕ್ತಿ ತಮ್ಮ ಜೇಬಿನಿಂದ ಪ್ಲಾಸ್ಟಿಕ್ ಕವರ್ ತೆಗೆದು ನಾಯಿಯ ಮಲ ಸಂಗ್ರಹಿಸಿ ಕಸದ ಬುಟ್ಟಿಗೆ ಹಾಕಿದರು' ಎಂದು ಮುಖ್ಯ ನ್ಯಾಯಮೂರ್ತಿಗಳು ತಮ್ಮ ಅನುಭವವನ್ನು ವಿವರಿಸಿದರು.

'ನಮ್ಮಲ್ಲಿ ಶಿಕ್ಷಿತರೇ ಸಾಕು ನಾಯಿಗಳನ್ನು ರಸ್ತೆಗೆ ಕರೆತಂದು ಮಲ ವಿರ್ಸಜನೆ ಮಾಡಿಸುತ್ತಾರೆ. ಇದು ನಿಜಕ್ಕೂ ದುರದೃಷ್ಟಕರ ಸಂಗತಿ. ಇದನ್ನೆಲ್ಲಾ ತಡೆಯಲು ಸೂಕ್ತವಾದ ಕ್ರಿಯಾ ಯೋಜನೆ ರೂಪಿಸಬೇಕು' ಎಂದರು.

'ಮಾಲೀಕರು ತಮ್ಮ ಸಾಕು ನಾಯಿಗಳನ್ನು ಪಾರ್ಕ್ ಒಳಗೆ ಕರೆತಂದು ಸ್ವತಂತ್ರವಾಗಿ ಅಲೆಯಲು ಬಿಟ್ಟಿರುತ್ತಾರೆ. ಅವುಗಳಿಗೆ ಸರಪಳಿ ಕೂಡಾ ಹಾಕಿರುವುದಿಲ್ಲ. ಇನ್ನೂ ಕೆಲವರು ವಾಹನಗಳಲ್ಲಿ ಆಹಾರ ತಂದು ಬೀದಿ ನಾಯಿಗಳಿಗೆ ಹಾಕುತ್ತಾರೆ. ಅವುಗಳ ಮುಂದೆ ಜನರು ಹೋದರೆ ಅವು ವ್ಯಗ್ರವಾಗಿ ವರ್ತಿಸುತ್ತವೆ. ಕೆಲವೊಮ್ಮೆ ಬೆನ್ನಟ್ಟುತ್ತವೆ. ಬೆಳಗ್ಗೆ ವಾಯುವಿಹಾರಕ್ಕೆ ಬರುವವರಿಗೆ ಇದು ನಿಜಕ್ಕೂ ಅಪಾಯಕಾರಿ' ಎಂದು ಕಳವಳ ವ್ಯಕ್ತಪಡಿಸಿದರು.

'ಜಾನುವಾರುಗಳನ್ನೂ ರಸ್ತೆಗಳ ಮೇಲೆ ಬಿಡಲಾಗುತ್ತಿದೆ. ಇದರಿಂದ ವಾಹನಗಳ ಸುಗಮ ಸಂಚಾರಕ್ಕೆ ಸಮಸ್ಯೆಯಾಗುತ್ತಿದೆ. ಉದ್ಯಾನದ ಒಳಗೆ ಮತ್ತು ರಸ್ತೆಗಳ ಮೇಲೆ ನಾಯಿ ಹಾಗೂ ಜಾನುವಾರುಗಳನ್ನು ಬೇಕಾಬಿಟ್ಟಿ ಅಲೆಯಲು ಬಿಡುವುದನ್ನು ನಿಯಂತ್ರಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು' ಎಂದು ನ್ಯಾಯಮೂರ್ತಿಗಳು ಬಿಬಿಎಂಪಿಗೆ ಮೌಖಿಕ ನಿರ್ದೇಶನ ನೀಡಿದರು.

ಇದೇ 15ರಿಂದ 'ಡಿಸೈನೂರು' ವಿನ್ಯಾಸ ಉತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸ್ಥಳೀಯ ಕುಶಲಕರ್ಮಿಗಳನ್ನು ಪ್ರೋತ್ಸಾಹಿಸಲು ಇನ್‌ಸ್ಟಿಟ್ಯೂಟ್ ಆಫ್ ಇಂಡಿಯನ್ ಇಂಟೀರಿಯರ್ ಡಿಸೈನರ್ಸ್ (ಐಐಐಡಿ) ವತಿಯಿಂದ 'ಡಿಸೈನೂರು' ಶೀರ್ಷಿಕೆಯಡಿ ಡಿ.15ರಿಂದ 22ರವರೆಗೆ ಎಂ.ಜಿ. ರಸ್ತೆಯ ರಂಗೋಲಿ ಕೇಂದ್ರದಲ್ಲಿ 'ವಿನ್ಯಾಸ ಉತ್ಸವ' ಹಮ್ಮಿಕೊಳ್ಳಲಾಗಿದೆ' ಎಂದು ಐಐಐಡಿ ಬೆಂಗಳೂರು ಪ್ರಾದೇಶಿಕ ವಿಭಾಗದ ಅಧ್ಯಕ್ಷೆ ಕವಿತಾ ಶಾಸ್ತ್ರಿ ತಿಳಿಸಿದರು.

ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು,'ಸ್ಥಳೀಯವಾಗಿ ಲಭ್ಯವಿರುವ ವಸ್ತುಗಳನ್ನು ಬಳಸಿಕೊಂಡು ಮೇಕ್ ಇನ್ ಇಂಡಿಯಾ ಅಭಿಯಾನ ಉತ್ತೇಜಿಸಲು ಹಾಗೂ ಕುಶಲಕರ್ಮಿಗಳಿಗೆ ನೆರವಾಗಲು ಈ ಉತ್ಸವ ಹಮ್ಮಿಕೊಳ್ಳಲಾಗಿದೆ' ಎಂದರು.

'ವಾಸ್ತುಶಿಲ್ಪ ಮತ್ತು ವಿನ್ಯಾಸಕ ವಿದ್ಯಾರ್ಥಿಗಳಿಗೆ ಈ ಉತ್ಸವ ಶೈಕ್ಷಣಿಕ ಸರಣಿಯಾಗಲಿದೆ. ಸಂವಾದ, ಕಾರ್ಯಾಗಾರ, ಚಲನಚಿತ್ರ ಪ್ರದರ್ಶನ, ಕಲಾವಿದರ ಪ್ರದರ್ಶನ ಸೇರಿದಂತೆ ವಿವಿಧ ಚಟುವಟಿಕೆಗಳೂ ನಡೆಯಲಿವೆ' ಎಂದು ವಿವರಿಸಿದರು.

'4ಜಿ ವಿನಾಯಿತಿ: ಕಮಿಷನ್ ಎಷ್ಟು'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿಯ ಮಹದೇವಪುರ ವಲಯ ವ್ಯಾಪ್ತಿಯಲ್ಲಿ 110 ಹಳ್ಳಿಗಳಿಗೆ ಮೂಲಸೌಕರ್ಯ ಕಲ್ಪಿಸುವ ಯೋಜನೆಯಡಿ ಕೈಗೆತ್ತಿಕೊಳ್ಳುವ ರಸ್ತೆ ಕಾಮಗಾರಿಗೆ ಹೆಚ್ಚುವರಿಯಾಗಿ ₹119.62 ಕೋಟಿ ಪ್ರಸ್ತಾವನೆ ಸಲ್ಲಿಕೆಯಾಗಿದ್ದು, ಟೆಂಡರ್ ಕರೆಯದೇ ಕಾಮಗಾರಿ ನಿರ್ವಹಿಸುವ ಸಲುವಾಗಿ ಕೆಟಿಪಿಪಿ ಕಾಯ್ದೆಯಡಿ 4 ಜಿ ವಿನಾಯಿತಿ ಕೋರಿರುವುದನ್ನು ಕಾಂಗ್ರೆಸ್ ಶಾಸಕ ದಿನೇಶ್ ಗುಂಡೂರಾವ್ ಅವರು ಟೀಕಿಸಿದ್ದಾರೆ.

ಈ ಕುರಿತು ಗುರುವಾರ ಟ್ವೀಟ್ ಮಾಡಿರುವ ಅವರು, 'ಮಹದೇವಪುರ ವಲಯದ ರಸ್ತೆ ಕಾಮಗಾರಿಗೆ ಹೆಚ್ಚುವರಿ ₹119.82 ಕೋಟಿ ಅನುದಾನದ ಪ್ರಸ್ತಾವನೆ ಸಲ್ಲಿಸಲಾಗಿದೆ. ತಮ್ಮ ಹಿಂಬಾಲಕರಿಗೆ ಅಕ್ರಮ ತುಂಡು ಗುತ್ತಿಗೆ ನೀಡಲು ಈ ಕಾಮಗಾರಿಗಳಿಗೆ ಟೆಂಡರ್ ಕರೆಯದೇ, 4ಜಿ ವಿನಾಯತಿ ಕೇಳಲಾಗಿದೆ. ಟೆಂಡರ್ ಕರೆದರೆ ಶೇ 40 ರಷ್ಟು ಕಮಿಷನ್ ಕೊಡಬೇಕು. 4ಜಿ ವಿನಾಯತಿ ಪಡೆದರೆ ಎಷ್ಟು ಕಮಿಷನ್, ಯಾರಿಗೆ ಎಷ್ಟು ಪಾಲು' ಎಂದು ಪ್ರಶ್ನಿಸಿದ್ದಾರೆ.

'110 ಹಳ್ಳಿಗಳ ರಸ್ತೆ ಕಾಮಗಾರಿಗೆ 4ಜಿ ವಿನಾಯಿತಿ' ಶೀರ್ಷಿಕೆಯಡಿ 'ಪ್ರಜಾವಾಣಿ'ಯು ಗುರುವಾರದ ಸಂಚಿಕೆಯಲ್ಲಿ ವಿಶೇಷ ವರದಿ ಪ್ರಕಟಿಸಿ ಗಮನ ಸೆಳೆದಿತ್ತು.

ಬೀಜಿಂಗ್ ಒಲಿಂಪಿಕ್ಸ್ ವಿರೋಧಿಸಿ ಬೈಕ್ ಯಾತ್ರೆ ಇಂದಿನಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಚೀನಾದಿಂದ ಆಗುತ್ತಿರುವ ಮಾನವ ಹಕ್ಕುಗಳ ಉಲ್ಲಂಘನೆ, ದಬ್ಬಾಳಿಕೆ ಖಂಡಿಸಿ ಹಾಗೂ 2022ರಲ್ಲಿ ಬೀಜಿಂಗ್‌ನಲ್ಲಿ ನಡೆಯಲಿರುವ ಒಲಿಂಪಿಕ್ಸ್ ಬಹಿಷ್ಕರಿಸಿ ಪ್ರಾದೇಶಿಕ ಟಿಬೆಟಿಯನ್ ಯುವ ಕಾಂಗ್ರೆಸ್ ಬೆಂಗಳೂರಿನಿಂದ ನವದೆಹಲಿಯವರೆಗೆ ಬೈಕ್ ಯಾತ್ರೆ ಹಮ್ಮಿಕೊಂಡಿದೆ' ಎಂದು ಸಂಸ್ಥೆಯ ಕಾರ್ಯದರ್ಶಿ ಟೆಂಝಿನ್ ಧೋಂಡೆನ್ ತಿಳಿಸಿದರು.

ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು,'ನೆರೆಯ ದೇಶಗಳ ಮೇಲೆ ನಿರಂತರ ದೌರ್ಜನ್ಯ ಎಸಗುತ್ತಿರುವ ಚೀನಾ, ಒಲಿಂಪಿಕ್ಸ್ ನಡೆಸಲು ಅರ್ಹ ರಾಷ್ಟ್ರವಲ್ಲ. ಟಿಬೆಟ್ ಜನರ ಮೇಲೆ ಚೀನಾದ ಚಿತ್ರಹಿಂಸೆ ಮಿತಿಮೀರಿದೆ. ಈ ಬಗ್ಗೆ ವಿಶ್ವದ ಗಮನ ಸೆಳೆಯಲು ಈ ಬೈಕ್ ಯಾತ್ರೆ ಹಮ್ಮಿಕೊಂಡಿದ್ದೇವೆ' ಎಂದರು.

'ಮಾನವ ಹಕ್ಕುಗಳ ದಿನವಾದ ಡಿ.10ರಂದೇ ಬೈಕ್ ಯಾತ್ರೆ ಆರಂಭಗೊಳ್ಳಲಿದ್ದು, ಕೋರಮಂಗಲದ ಟಿಬೆಟಿಯನ್ ವಸತಿ ನಿಲಯದಿಂದ ದೆಹಲಿಯತ್ತ ಯಾತ್ರೆ ಸಾಗಲಿದೆ' ಎಂದೂ ಹೇಳಿದರು.

ಇಂಗ್ಲಿಷ್ ಕೋರ್ಸ್ ಆರಂಭ

ಬೆಂಗಳೂರು: ಯುವಜನರು ಇಂಗ್ಲಿಷ್ ಜ್ಞಾನ ಪಡೆದು ಉದ್ಯೋಗ ಗಿಟ್ಟಿಸಿಕೊಳ್ಳಲು ನೆರವಾಗುವ ಸಲುವಾಗಿ ದಿ ನಡ್ಜ್ ಫೌಂಡೇಶನ್ ವತಿಯಿಂದ 'ಫ್ಯೂಚರ್ ಪರ್ಫೆಕ್ಟ್' ಎಂಬ ಕೋರ್ಸ್ ಆರಂಭಿಸಲಾಗಿದೆ. 'ಅಭ್ಯರ್ಥಿಗಳು ಮನೆಯಲ್ಲೇ ನಿತ್ಯ 2 ಗಂಟೆ ಅಭ್ಯಾಸ ನಡೆಸಿ 2 ತಿಂಗಳಲ್ಲಿ ಕೋರ್ಸ್ ಪೂರ್ಣಗೊಳಿಸಬಹದು. ಉದ್ಯೋಗ ಪಡೆದುಕೊಳ್ಳಲು ಪೂರಕವಾಗಿ ಸಂಸ್ಥೆಯಿಂದ ಪ್ರಮಾಣಪತ್ರವನ್ನೂ ನೀಡಲಾಗುವುದು' ಎಂದು ಫೌಂಡೇಷನ್ ಸಂಸ್ಥಾಪಕ ಅತುಲ್ ಸತೀಜ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಂಪರ್ಕ:8050029299, ವೆಬ್‌ಸೈಟ್ https://fp.thenudge.org/

ಪರಸ್ಪರ ಅಂತರ ಕಾಯ್ದುಕೊಳ್ಳಿ

ಹಳೆ ಮದ್ರಾಸ್ ರಸ್ತೆಯಲ್ಲಿ ಉನ್ನತೀಕರಣ ಕಾಮಗಾರಿಯಿಂದ ಜನರಿಗೆ ನಡೆದಾಡಲು ಅಡ್ಡಿ

ಸುಸಜ್ಜಿತ ಪಾದಚಾರಿ ಮಾರ್ಗ ಮರು ನಿರ್ಮಾಣಕ್ಕೆ ಆಕ್ಷೇಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಳೆ ಮದ್ರಾಸ್ ರಸ್ತೆಯಲ್ಲಿನ ಸುಸಜ್ಜಿತವಾದ ಪಾದಚಾರಿ ಮಾರ್ಗವನ್ನು ಅಗೆದು, ಹೊಸದಾಗಿ ನಿರ್ಮಾಣ ಮಾಡುತ್ತಿರುವುದಕ್ಕೆ ಸ್ಥಳೀಯರಿಂದ ಆಕ್ಷೇಪ ವ್ಯಕ್ತವಾಗಿದೆ.

ರಾಜ್ಯ ಸರ್ಕಾರವು 'ಮಿಷನ್–2022'ಅಡಿ ತೀವ್ರ ದಟ್ಟಣೆ ಇರುವ 12 ಕಾರಿಡಾರ್‌ಗಳ ಉನ್ನತೀಕರಣ ಹಾಗೂ ನಿರ್ವಹಣೆಯ ಕಾರ್ಯ ಕೈಗೆತ್ತಿಕೊಂಡಿದೆ. ಇದರಲ್ಲಿ ಹಳೆ ಮದ್ರಾಸ್ ರಸ್ತೆ (ಟ್ರಿನಿಟಿ ವೃತ್ತ–ಇಂದಿರಾನಗರ–ಕೆ.ಆರ್.ಪುರ ಕೇಬಲ್ ಸ್ಟೇ ಸೇತುವೆವರೆಗೆ ಮತ್ತು ಕೆ.ಆರ್.ಪುರ ರೈಲ್ವೆ ನಿಲ್ದಾಣ– ಹೂಡಿ–ಹೋಪ್‌ಫಾರ್ಮ್–ವೈಟ್‌ಫೀಲ್ಡ್) ಕೂಡ ಸೇರಿದೆ. ಹೆಚ್ಚು ವಾಹನ ದಟ್ಟಣೆ ಕಾಣಿಸಿಕೊಳ್ಳುತ್ತಿದ್ದ ಈ ಮಾರ್ಗದ 18.50 ಕಿ.ಮೀ ಅಂತರದಲ್ಲಿ ಚರಂಡಿ, ಪಾದಚಾರಿ ಮಾರ್ಗ ಸೇರಿದಂತೆ ವಿವಿಧ ಕಾಮಗಾರಿಗಳನ್ನು ಹಮ್ಮಿಕೊಳ್ಳಲಾಗಿದೆ.

ಹಳೆ ಮದ್ರಾಸ್ ರಸ್ತೆಯಲ್ಲಿ (ಎಚ್‌ಎಎಲ್ ವಸತಿ ಸಮುಚ್ಚಯದ ಬಳಿ) ಸದ್ಯ ಪಾದಚಾರಿ ಮಾರ್ಗದ ಅಭಿವೃದ್ಧಿ ಕಾರ್ಯ ನಡೆಯುತ್ತಿದೆ. ಸುಸಜ್ಜಿತವಾಗಿದ್ದ ಇಂಟರ್ ಲಾಕ್‌ಗಳನ್ನು ಕಳೆದೊಂದು ವಾರದಿಂದ ಕೀಳಲಾಗುತ್ತಿದೆ. ಈಗಾಗಲೇ 200 ಮೀ. ದೂರದವರೆಗೆ ಇಂಟರ್ ಲಾಕ್‌ಗಳನ್ನು ಕಿತ್ತು, ಅಲ್ಲಿಯೇ ರಾಶಿ ಹಾಕಲಾಗಿದೆ. ಇದರಿಂದಾಗಿ ಪಾದಚಾರಿಗಳ ಸಂಚಾರಕ್ಕೆ ಅಡ್ಡಿಯಾಗಿದ್ದು, ರಸ್ತೆಯಲ್ಲಿಯೇ ಸಾಗಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ.

ಹೊಸದಾಗಿ ಅಳವಡಿಸಲು ತಂದಿರುವ ಬಣ್ಣದ ಇಂಟರ್ ಲಾಕ್‌ಗಳನ್ನು ರಸ್ತೆಯಲ್ಲಿಯೇ ಇರಿಸಲಾಗಿದೆ. ಇದರಿಂದ ವಾಹನ ಸಂಚಾರಕ್ಕೆ ಸಮಸ್ಯೆಯಾಗಿದೆ.

ವಾಹನ ದಟ್ಟಣೆ: 'ಕೆಲ ವರ್ಷಗಳ ಹಿಂದಷ್ಟೇ ಪಾದಚಾರಿ ಮಾರ್ಗಕ್ಕೆ ಇಂಟರ್ ಲಾಕ್‌ಗಳನ್ನು ಅಳವಡಿಸಲಾಗಿತ್ತು. ಈಗ ಅದನ್ನು ಕೀಳಲಾಗುತ್ತಿದೆ. ಉನ್ನತೀಕರಣದ ನೆಪದಲ್ಲಿ ಸುಸಜ್ಜಿತ ಮಾರ್ಗಕ್ಕೆ ಹಣ ವ್ಯಯ ಮಾಡಲಾಗುತ್ತಿದೆ. ಈಗ ಪಾದಚಾರಿ ಮಾರ್ಗವನ್ನು ಅಗೆದುಹಾಕಿರುವುದರಿಂದ ಜನರು ರಸ್ತೆಯಲ್ಲಿಯೇ ಸಾಗಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಬೆಳಿಗ್ಗೆ ಹಾಗೂ ಸಂಜೆ ವಾಹನ ದಟ್ಟಣೆ ಉಂಟಾಗುತ್ತಿದೆ' ಎಂದು ಎಚ್‌ಎಎಲ್ ವಸತಿ ಸಮುಚ್ಚಯದ ನಿವಾಸಿಗಳು ಬೇಸರ ವ್ಯಕ್ತಪಡಿಸಿದರು.

ಹಳೆ ಮದ್ರಾಸ್ ರಸ್ತೆಯ (ಬೈಯಪ್ಪನಹಳ್ಳಿ ಮೆಟ್ರೊ ನಿಲ್ದಾಣದ ಕಡೆ) ಇನ್ನೊಂದು ಕಡೆಯ ಪಾದಚಾರಿ ಮಾರ್ಗ ಕಿತ್ತು ಹೋಗಿದ್ದು, ಇಲ್ಲಿ ನಡೆದುಕೊಂಡು ಹೋಗುವ ಜನರು ಸಮಸ್ಯೆ ಅನುಭವಿಸುತ್ತಿದ್ದಾರೆ. ಇದನ್ನು ಸರಿಪಡಿಸುವ ಬದಲು ಸುಸಜ್ಜಿತವಾಗಿರುವ ಪಾದಚಾರಿ ಮಾರ್ಗವನ್ನು ಅಗೆದು, ಹೊಸದಾಗಿ ನಿರ್ಮಾಣ ಮಾಡುತ್ತಿರುವುದು ಸರಿಯಲ್ಲ ಎಂದು ತಿಳಿಸಿದರು.

'ಟ್ರಿನಿಟಿ ವೃತ್ತದಿಂದ ಕೆ.ಆರ್.ಪುರದವರೆಗೂ ಸದಾ ವಾಹನ ದಟ್ಟಣೆ ಇರುತ್ತದೆ. ಪಾದಚಾರಿ ಮಾರ್ಗದ ಕಾಮಗಾರಿಯಿಂದ ಜನರು ರಸ್ತೆಯಲ್ಲಿಯೇ ಸಾಗಬೇಕಾಗಿದೆ. ಬೆಳಿಗ್ಗೆ ಮತ್ತು ಸಂಜೆ ವೇಳೆ ವಾಹನ ಸವಾರರು ವೇಗವಾಗಿ ಬರುತ್ತಾರೆ. ಇದರಿಂದಾಗಿ ಪಾದಚಾರಿಗಳು ರಸ್ತೆಯಲ್ಲಿ ಸಾಗುವುದು ಕಷ್ಟವಾಗಿದೆ' ಎಂದು ಸದಾನಂದನಗರದ ನಿವಾಸಿ ವೆಂಕಟೇಶ್ ತಿಳಿಸಿದರು.

ಈ ಬಗ್ಗೆ ಪ್ರತಿಕ್ರಿಯೆಗೆ ಬಿಬಿಎಂಪಿ ಅಧಿಕಾರಿಗಳು ಲಭ್ಯವಾಗಲಿಲ್ಲ.





ಹಳೆ ಮದ್ರಾಸ್ ರಸ್ತೆಯ ಎಚ್‌ಎಎಲ್ ವಸತಿ ಸಮುಚ್ಚಯದ ಬಳಿ ಉತ್ತಮವಾಗಿರುವ ಪಾದಚಾರಿ ಮಾರ್ಗದ ಇಂಟರ್ ಲಾಕ್‌ಗಳನ್ನು ಕಾರ್ಮಿಕರೊಬ್ಬರು ಕೀಳುತ್ತಿರುವುದು (ಎಡ ಚಿತ್ರ), ಪಾದಚಾರಿ ಮಾರ್ಗದಲ್ಲಿ ಅಳವಡಿಸಲು ತಂದಿರುವ ಹೊಸ ಇಂಟರ್ ಲಾಕ್‌ಗಳನ್ನು ರಸ್ತೆಯಲ್ಲಿಯೇ ಇಡಲಾಗಿದೆ –ಪ್ರಜಾವಾಣಿ ಚಿತ್ರಗಳು/ಅನೂಪ್ ರಾಘ.ಟಿ.

ಸಚಿವ ಸಂಪುಟ ಸಭೆಯ ಬಳಿಕ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿಕೆ

ರಾತ್ರಿ ಕರ್ಫ್ಯೂ: ಮುಂದಿನವಾರ ನಿರ್ಧಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಓಮೈಕ್ರಾನ್ ಪ್ರಕರಣಗಳು ಪತ್ತೆಯಾಗಿರುವುದು ಮತ್ತು ಕೋವಿಡ್ ಪ್ರಕರಣಗಳನ್ನು ನಿಯಂತ್ರಿಸಲು ರಾತ್ರಿ ಕರ್ಫ್ಯೂ ವಿಧಿಸಬೇಕೇ ಎಂಬ ಬಗ್ಗೆ ಮುಂದಿನ ಒಂದು ವಾರದ ಪರಿಸ್ಥಿತಿ ಅವಲೋಕಿಸಿದ ಬಳಿಕ ತೀರ್ಮಾನ ತೆಗೆದುಕೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.



ಬಸವರಾಜ ಬೊಮ್ಮಾಯಿ

ಸಚಿವ ಸಂಪುಟ ಸಭೆಯ ಬಳಿಕ ಸುದ್ದಿಗಾರರಿಗೆ ಗುರುವಾರ ಈ ವಿಷಯ ತಿಳಿಸಿದ ಅವರು, ಕ್ರಿಸ್‌ಮಸ್ ಮತ್ತು ಹೊಸ ವರ್ಷ ಆಚರಣೆಯ ವಿಚಾರವಾಗಿ ಮುಂದಿನ ವಾರ ನಿರ್ಧಾರ ತೆಗೆದುಕೊಳ್ಳುವುದಾಗಿ ಹೇಳಿದರು.

'ಕೋವಿಡ್ ತಾಂತ್ರಿಕ ಸಲಹಾ ಸಮಿತಿಯ ಅಧ್ಯಕ್ಷ ಡಾ.ಎಂ.ಕೆ.ಸುದರ್ಶನ್ ಅವರು ಸಂಪುಟ ಸಭೆಯ ಮುಂದೆ ಈ ವಿಚಾರವಾಗಿ ಕೆಲವು ಮಾಹಿತಿಗಳನ್ನು ನೀಡಿದ್ದಾರೆ. ಅವರು ನೀಡಿದ ವಿವರಗಳು ಹಾಗೂ ಕೋವಿಡ್ ದೃಢಪಡುತ್ತಿರುವ ಸಂಖ್ಯೆ ನೋಡಿದಾಗ ಯಾರೂ ಗಾಬರಿಯಾಗುವ ಪರಿಸ್ಥಿತಿ ಸದ್ಯಕ್ಕಂತೂ ಇಲ್ಲ' ಎಂದೂ ಬೊಮ್ಮಾಯಿ ಹೇಳಿದರು.

ಹಾಸ್ಟೆಲ್‌ಗಳಲ್ಲಿ ಸುರಕ್ಷಿತ ಕ್ರಮಗಳನ್ನು ತೆಗೆದುಕೊಳ್ಳುವ ಕುರಿತು ಸುದರ್ಶನ್ ಅವರು ಕೆಲವು ಸಲಹೆಗಳನ್ನು ನೀಡಿದ್ದಾರೆ. ಹಾಸ್ಟೆಲ್‌ಗಳಲ್ಲಿ ದಿನಕ್ಕೆ ಎರಡು ಬಾರಿ ಸ್ಯಾನಿಟೈಸ್ ಮಾಡುವುದು, ಹಾಸ್ಟೆಲ್‌ಗಳಿಗೆ ಭೇಟಿ ನೀಡುವವರ ಸಂಖ್ಯೆಯನ್ನು ಕಡಿಮೆ ಮಾಡುವುದು, ಅಡುಗೆ ಮತ್ತಿತರ ಕೆಲಸ ಮಾಡುವವರಿಗೆ ಎರಡು ಡೋಸ್ ಲಸಿಕೆ ನೀಡುವುದು, ಸೋಂಕಿತರನ್ನು ಪ್ರತ್ಯೇಕಗೊಳಿಸಲು ಐಸೋಲೇಶನ್ ಕೊಠಡಿ ಸಿದ್ಧಪಡಿಸಲು ಸೂಚಿಸಿದ್ದಾರೆ ಎಂದು ಅವರು ತಿಳಿಸಿದರು.

ಎರಡು–ಮೂರು ತಿಂಗಳ ಹಿಂದೆ ಕೋವಿಡ್ ಲಸಿಕೆಯ ವಿಶೇಷ ಅಭಿಯಾನ ನಡೆಸಿದಂತೆ ಮತ್ತೊಮ್ಮೆ ವಿಶೇಷ ಅಭಿಯಾನ ನಡೆಸಬೇಕು. ಈವರೆಗೆ ಲಸಿಕೆ ಪಡೆಯದವರಿಗೆ ಇದರಿಂದ ಅನುಕೂಲವಾಗುತ್ತದೆ ಎಂದು ಸಚಿವ ಸಹೋದ್ಯೋಗಿಗಳು ಸಲಹೆ ನೀಡಿದ್ದು, ಅದಕ್ಕೆ ಒಪ್ಪಿಗೆ ನೀಡಲಾಗಿದೆ ಎಂದರು.

ಕೇರಳದಿಂದ ಬರುವ ವಿದ್ಯಾರ್ಥಿಗಳು ಮತ್ತು ಇತರರು ಆರ್‌ಟಿ–ಪಿಸಿಆರ್ ಪರೀಕ್ಷೆ ಮಾಡಿಸಿಕೊಂಡು ಬರುವುದು ಕಡ್ಡಾಯ. ಉಳಿದಂತೆ ಈಗ ಇರುವ ಮಾರ್ಗಸೂಚಿಯನ್ನೇ ಮುಂದುವರಿಸಲಾಗುವುದು. ಕ್ಲಸ್ಟರ್ ನಿರ್ವಹಣೆಯನ್ನು ಕಟ್ಟುನಿಟ್ಟಾಗಿ ಮಾಡಲಾಗುವುದು. ಮೂರು ಜನರಿಗೆ ಕೋವಿಡ್ ದೃಢಪಟ್ಟರೆ ಕ್ಲಸ್ಟರ್ ಎಂದು ಪರಿಗಣಿಸಲಾಗುವುದು. ಹೊಸದಾಗಿ ಯಾವುದೇ ನಿರ್ಬಂಧ ವಿಧಿಸಿಲ್ಲ ಎಂದು ಬೊಮ್ಮಾಯಿ ಹೇಳಿದರು.

ಸುಧಾಕರ್ ಗೈರು: ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ಅವರು ಸಚಿವ ಸಂಪುಟ ಸಭೆಯಲ್ಲಿ ಹಾಜರಿರಲಿಲ್ಲ. ಈ ಬಗ್ಗೆ ಬೊಮ್ಮಾಯಿ ಅವರನ್ನು ಪ್ರಶ್ನಿಸಿದಾಗ, ಅನುಮತಿ ಪಡೆದು ಗೈರಾಗಿದ್ದಾರೆ ಎಂದು ಅವರು ತಿಳಿಸಿದರು.

ಮದುವೆಗೆ ಒಪ್ಪಿದ್ದ ಮಹಿಳೆ ಚಿನ್ನದ ಜತೆ ಪರಾರಿ

ಹೊಳೆಹೊನ್ನೂರು: ಪತ್ನಿ ಕಳೆದುಕೊಂಡ ನಂತರ ಮತ್ತೆ ಮದುವೆಯಾಗಲು ಬಯಸಿದ್ದ 60ರ ವಯೋಮಾನದ ವ್ಯಕ್ತಿಯೊಬ್ಬರು ಮದುವೆಯಾಗಲು ಒಪ್ಪಿಕೊಂಡಿದ್ದ ಮಹಿಳೆಯಿಂದ ವಂಚನೆಗೆ ಒಳಗಾಗಿದ್ದಾರೆ.

ಹೊಳೆಹೊನ್ನೂರಿನ ನಂಜುಂಡಪ್ಪ ಮೋಸ ಹೋದವರು. ಬೆಂಗಳೂರಿನ ಯಲಹಂಕದ ಚಂದ್ರಿಕಾ ಎಂಬ ಮಹಿಳೆ ನಂಜುಂಡಪ್ಪ ಅವರನ್ನು ಮದುವೆಯಾಗಲು ಒಪ್ಪಿಗೆ ಸೂಚಿಸಿದ್ದರು. ನ. 15ರಂದು ಸಿಗಂದೂರು ದೇವಸ್ಥಾನದಲ್ಲಿ ಮದುವೆಗೆ ಸಿದ್ಧತೆ ನಡೆದಿತ್ತು. ಊಟ ಮಾಡಿ ಬರುವುದಾಗಿ ಹೇಳಿ ಹೋಗಿದ್ದ ಮಹಿಳೆ ಚಿನ್ನದ ತಾಳಿಯೊಂದಿಗೆ ಪರಾರಿಯಾಗಿದ್ದಾರೆ.

ಸುದ್ದಿ 2 ನಿಮಿಷ

ಕೋವಿಡ್: 2 ಜಿಲ್ಲೆ ಸೋಂಕು ಮುಕ್ತ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಸಕ್ರಿಯ ಪ್ರಕರಣಗಳ ಸಂಖ್ಯೆ ಏರಿಕೆ ಕಂಡಿದ್ದು, ಸದ್ಯ 7,332 ಮಂದಿ ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಯಾದಗಿರಿ ಹಾಗೂ ಗದಗ ಕೋವಿಡ್ ಮುಕ್ತವಾಗಿದೆ.

ಒಂದು ದಿನದ ಅವಧಿಯಲ್ಲಿ 1.18 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಗುರುವಾರ 373 ಮಂದಿ ಕೋವಿಡ್ ಪೀಡಿತರಾಗಿರುವುದು ದೃಢಪಟ್ಟಿದೆ. 19 ಜಿಲ್ಲೆಗಳಲ್ಲಿ ಹೊಸದಾಗಿ ಪ್ರಕರಣಗಳು ವರದಿಯಾಗಿದ್ದು, ಸೋಂಕು ದೃಢ ಪ್ರಮಾಣ ಶೇ 0.31ರಷ್ಟಿದೆ. ಆರು ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ, 12 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ಬಳ್ಳಾರಿ, ಬೀದರ್ ಸೇರಿದಂತೆ 11 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು ವರದಿಯಾಗಿಲ್ಲ.

ಬೆಂಗಳೂರು ನಗರದಲ್ಲಿ 211 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಶಿವಮೊಗ್ಗದಲ್ಲಿ 30, ಕೊಡಗಿನಲ್ಲಿ 21, ಹಾಸನದಲ್ಲಿ 12, ತುಮಕೂರು ಹಾಗೂ ದಕ್ಷಿಣ ಕನ್ನಡದಲ್ಲಿ ತಲಾ 11 ಪ್ರಕರಣಗಳು ವರದಿಯಾಗಿವೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 10ಕ್ಕಿಂತ ಕಡಿಮೆಯಿದೆ. ಈವರೆಗೆ ವರದಿಯಾದ ಒಟ್ಟು ಪ್ರಕರಣಗಳ ಸಂಖ್ಯೆ 30 ಲಕ್ಷದ ಗಡಿ (29,99,471) ಸಮೀಪಿಸಿದೆ.

ಸೋಂಕಿತರಲ್ಲಿ 292 ಮಂದಿ ಚೇತರಿಸಿಕೊಂಡಿದ್ದಾರೆ. ಗುಣಮುಖರಾದವರ ಒಟ್ಟು ಸಂಖ್ಯೆ 29.53 ಲಕ್ಷ ದಾಟಿದೆ. ಬೆಂಗಳೂರಿನಲ್ಲಿ 5,509 ಸೋಂಕಿತರಿದ್ದಾರೆ. ವಿಜಯಪುರ, ರಾಮನಗರ ಸೇರಿದಂತೆ 7 ಜಿಲ್ಲೆಗಳಲ್ಲಿ ಸೋಂಕಿತರ ಸಂಖ್ಯೆ 10ಕ್ಕಿಂತ ಕಡಿಮೆಯಿದೆ.

ಕೋವಿಡ್ ಪೀಡಿತರಲ್ಲಿ ಬೆಂಗಳೂರಿನಲ್ಲಿ ನಾಲ್ವರು ಮೃತಪಟ್ಟಿರುವುದು ಖಚಿತಪಟ್ಟಿದೆ. ಉಳಿದ ಜಿಲ್ಲೆಗಳಲ್ಲಿ ಹೊಸದಾಗಿ ಮರಣ ಪ್ರಕರಣ ವರದಿಯಾಗಿಲ್ಲ. ಮರಣ ಪ್ರಮಾಣ ದರವು ಶೇ 1.07 ರಷ್ಟು ಇದೆ. ಈವರೆಗೆ ಕೋವಿಡ್‌ಗೆ ಸಾವಿಗೀಡಾದವರ ಒಟ್ಟು ಸಂಖ್ಯೆ 38,253ಕ್ಕೆ ಏರಿಕೆಯಾಗಿದೆ.

'ಕೋವಿಡ್ ಲಸಿಕೆ: ಮೊದಲ ಸ್ಥಾನದಲ್ಲಿ ರಾಜ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದೇಶದಲ್ಲಿ ಕೋವಿಡ್ ಲಸಿಕೆಯ ಮೊದಲ ಡೋಸ್ ವಿತರಣೆಯಲ್ಲಿ ಕರ್ನಾಟಕವು ಮೊದಲ ಸ್ಥಾನದಲ್ಲಿದೆ. ಶೇ 94.38 ರಷ್ಟು ಮಂದಿ ಮೊದಲ ಡೋಸ್ ಲಸಿಕೆ ಪಡೆದಿದ್ದಾರೆ' ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ತಿಳಿಸಿದ್ದಾರೆ.


ಈ ಬಗ್ಗೆ ಅವರು ಟ್ವೀಟ್ ಮಾಡಿದ್ದು, 'ರಾಜ್ಯದಲ್ಲಿ 4.89 ಲಕ್ಷ ಮಂದಿ ಕೋವಿಡ್ ಲಸಿಕೆ ಪಡೆಯಲು ಅರ್ಹರಾಗಿದ್ದು, ಅವರಲ್ಲಿ 4.61 ಲಕ್ಷ ಮಂದಿ ಮೊದಲ ಡೋಸ್ ಪಡೆದುಕೊಂಡಿದ್ದಾರೆ. ಗುಜರಾತ್‌ನಲ್ಲಿ ಲಸಿಕೆ ಪಡೆಯಲು ಅರ್ಹರಾದ 4.89 ಲಕ್ಷ ಜನರಲ್ಲಿ 4.61 ಲಕ್ಷ ಮಂದಿ (ಶೇ 94.37 ರಷ್ಟು) ಮೊದಲ ಡೋಸ್ ಹಾಕಿಸಿಕೊಂಡಿದ್ದಾರೆ. ಮಧ್ಯ ಪ್ರದೇಶದಲ್ಲಿ 5.49 ಲಕ್ಷ ಜನರಲ್ಲಿ 5.12 ಲಕ್ಷ ಮಂದಿಗೆ (ಶೇ 93.77 ರಷ್ಟು) ಮೊದಲ ಡೋಸ್ ವಿತರಿಸಲಾಗಿದೆ' ಎಂದು ಹೇಳಿದ್ದಾರೆ.




ರಾಜ್ಯದಲ್ಲಿ ಗುರುವಾರ 3.03 ಲಕ್ಷ ಡೋಸ್‌ಗಳನ್ನು ವಿತರಿಸಲಾಗಿದೆ. ಇದರೊಂದಿಗೆ ಈವರೆಗೆ ನೀಡಲಾದ ಒಟ್ಟು ಡೋಸ್‌ಗಳ ಸಂಖ್ಯೆ 7.93 ಕೋಟಿಗೆ ತಲುಪಿದೆ. 3.31 ಕೋಟಿ ಮಂದಿ ಎರಡೂ ಡೋಸ್‌ಗಳನ್ನು ಪಡೆದುಕೊಂಡಿದ್ದಾರೆ. ಈ ವರ್ಷದ ಅಂತ್ಯದೊಳಗೆ 18 ವರ್ಷ ಮೇಲ್ಪಟ್ಟ ಎಲ್ಲರಿಗೂ ಎರಡು ಡೋಸ್ ಲಸಿಕೆ ವಿತರಿಸುವ ಗುರಿಯನ್ನು ಸರ್ಕಾರ ಹಾಕಿಕೊಂಡಿದೆ.

18 ರಿಂದ 44 ವರ್ಷದೊಳಗಿನವರಲ್ಲಿ 2.64 ಕೋಟಿ ಮಂದಿ ಮೊದಲ ಡೋಸ್ ಹಾಗೂ 1.72 ಕೋಟಿ ಮಂದಿ ಎರಡನೇ ಡೋಸ್ ಲಸಿಕೆ ಪಡೆದುಕೊಂಡಿದ್ದಾರೆ. 45 ವರ್ಷ ಮೇಲ್ಪಟ್ಟವರಲ್ಲಿ 1.80 ಕೋಟಿ ಮಂದಿ ಮೊದಲ ಡೋಸ್ ಹಾಕಿಸಿಕೊಂಡಿದ್ದಾರೆ. ಅವರಲ್ಲಿ 1.42 ಕೋಟಿ ಮಂದಿ ಎರಡೂ ಡೋಸ್‌ಗಳನ್ನು ಪಡೆದಿದ್ದಾರೆ.

ಆರೋಗ್ಯ ಕಾರ್ಯಕರ್ತರಲ್ಲಿ 7.64 ಲಕ್ಷ ಹಾಗೂ ಕೋವಿಡ್ ಮುಂಚೂಣಿ ಯೋಧರಲ್ಲಿ 9.43 ಲಕ್ಷ ಮಂದಿ ಮೊದಲ ಡೋಸ್ ಪಡೆದಿದ್ದಾರೆ. ಇವರಲ್ಲಿ ಕ್ರಮವಾಗಿ 7.10 ಲಕ್ಷ ಮಂದಿ ಹಾಗೂ 8.76 ಲಕ್ಷ ಮಂದಿ ಎರಡೂ ಡೋಸ್ ಲಸಿಕೆ ಹಾಕಿಸಿಕೊಂಡಿದ್ದಾರೆ.





ಸೋಂಕಿತರ ಸಂಪರ್ಕಿತರಲ್ಲಿ ಪತ್ತೆಯಾಗಿಲ್ಲ ಓಮೈಕ್ರಾನ್



ಬೆಂಗಳೂರು: ಕೊರೊನಾ ವೈರಾಣುವಿನ ರೂಪಾಂತರ ತಳಿ ಓಮೈಕ್ರಾನ್ ಸೋಂಕಿತ ವ್ಯಕ್ತಿಯ ಸಂಪರ್ಕಕ್ಕೆ ಬಂದಿದ್ದವರಲ್ಲಿ ಸದ್ಯಕ್ಕೆ ಯಾರಿಗೂ ಓಮೈಕ್ರಾನ್ ದೃಢಪಟ್ಟಿಲ್ಲ.

'ಓಮೈಕ್ರಾನ್ ಸೋಂಕಿತ ವೈದ್ಯರ ಸಂಪರ್ಕಕ್ಕೆ ಬಂದಿದ್ದ ಐವರ ಮಾದರಿಗಳನ್ನು ವೈರಾಣು ವಂಶವಾಹಿ ಸಂರಚನೆ ವಿಶ್ಲೇಷಣೆಗೆ(ಜಿನೋಮ್ ಸೀಕ್ವೆನ್ಸಿಂಗ್) ಕಳುಹಿಸಲಾಗಿತ್ತು. ಅವುಗಳ ವರದಿ ಗುರುವಾರ ಬಂದಿದ್ದು, ಒಬ್ಬರಲ್ಲಿ ಡೆಲ್ಟಾ ಪ್ಲಸ್ ರೂಪಾಂತರ ತಳಿ ಪತ್ತೆಯಾಗಿದೆ. ಇನ್ನುಳಿದ ನಾಲ್ವರಲ್ಲಿ ಯಾವ ತಳಿ ಇತ್ತು ಎಂಬುದು ವರದಿಯಲ್ಲಿ ಖಚಿತವಾಗಿಲ್ಲ. ಆದ್ದರಿಂದ ಮಾದರಿಗಳನ್ನು ಮತ್ತೊಮ್ಮೆ ಪರೀಕ್ಷೆಗೆ ಒಳಪಡಿಸುವಂತೆ, ಕೋರಲಾಗಿದೆ' ಎಂದು ಬಿಬಿಎಂಪಿ ಮುಖ್ಯ ಆರೋಗ್ಯಾಧಿಕಾರಿ ಡಾ.ಬಾಲಸುಂದರ್ 'ಪ್ರಜಾವಾಣಿ'ಗೆ ತಿಳಿಸಿದರು.

ಓಮೈಕ್ರಾನ್ ಸೋಂಕಿತರ ಸಂಪರ್ಕಕ್ಕೆ ಬಂದಿದ್ದ ಇನ್ನೂ ನಾಲ್ವರ ಜೀನೋಮ್ ಸೀಕ್ವೆನ್ಸಿಂಗ್ ವರದಿ ಬಂದಿಲ್ಲ. ಶುಕ್ರವಾರ ವರದಿ ಬರುವ ನಿರೀಕ್ಷೆ ಇದೆ ಎಂದು ಹೇಳಿದರು.

'ಕೋವಿಡ್ ದೃಢಪಟ್ಟವರಲ್ಲಿ ಪ್ರತಿನಿತ್ಯ ಆಯ್ದ 120ರಿಂದ 150 ಮಂದಿಯ ಮಾದರಿಗಳನ್ನು ಜೀನೋಮ್ ಸೀಕ್ವೆನ್ಸಿಂಗ್‌ಗೆ ಕಳುಹಿಸುತ್ತಿದ್ದೇವೆ. ಇಂತಹ ಮದರಿಗಳಿಗೆ ಸಂಬಂಧಿಸಿ ಸದ್ಯಕ್ಕೆ ಯಾರಲ್ಲೂ ಓಮೈಕ್ರಾನ್ ಪತ್ತೆಯಾಗಿಲ್ಲ' ಎಂದು ಅವರು ಸ್ಪಷ್ಟಪಡಿಸಿದರು.



ನಗರದಲ್ಲಿ ಗುರುವಾರ 'ಪದ' ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆಯೋಜಿಸಿದ್ದ 'ಶಿಶಿರ ರಂಗೋತ್ಸವ–2021' ಕಾರ್ಯಕ್ರಮದಲ್ಲಿ ಹರೇಕಳ ಹಾಜಬ್ಬ ಅವರಿಗೆ 'ಪದ ಗೌರವ' ನೀಡಿ ಸನ್ಮಾನಿಸಲಾಯಿತು. ಜಿಪಿಓ ಚಂದ್ರು, ಶಿವಲಿಂಗ ಪ್ರಸಾದ್, ಡಾ.ಅಬ್ದುಲ್ ಖಾದರ್, ಕೆ.ಆರ್.ಪ್ರಭಾವತಿ, ಡಾ.ಎನ್.ಮಹೇಶ್, ಬಿಬಿಎಂಪಿ ವಿಶೇಷ ಆಯುಕ್ತ ಕೆ.ಎ.ದಯಾನಂದ, ಚಿತ್ರ ಕಲಾವಿದ ಎಂ.ಎಸ್.ಮೂರ್ತಿ, ಬೆಂಗಳೂರು ವಿಶ್ವವಿದ್ಯಾಲಯ ಸಂವಹನ ವಿಭಾಗದ ಮುಖ್ಯಸ್ಥ ಬಿ.ಕೆ.ರವಿ, ನೀಲಕಂಠ ಇದ್ದಾರೆ

–ಪ್ರಜಾವಾಣಿ ಚಿತ್ರ

'ರಘುನಾಥ್‌ಗೆ ಬ್ರಾಹ್ಮಣ ಉಪಪಂಗಡಗಳ ಬೆಂಬಲ'

ಬೆಂಗಳೂರು: 'ಡಿ.12 ಮತ್ತು 19ರಂದು ನಡೆಯಲಿರುವ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ (ಎಕೆಬಿಎಂಎಸ್) ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನದ ಅಭ್ಯರ್ಥಿ ಎಸ್.ರಘುನಾಥ್ ಅವರಿಗೆ ರಾಜ್ಯದ ಬಹುತೇಕ ಬ್ರಾಹ್ಮಣ ಉಪಪಂಗಡಗಳಿಂದ ಬೆಂಬಲ ನೀಡಲು ಒಮ್ಮತದಿಂದ ತೀರ್ಮಾನಿಸಲಾಗಿದೆ' ಎಂದು ಬ್ರಾಹ್ಮಣ ಉಪಪಂಗಡಗಳ ಮಹಾ ಒಕ್ಕೂಟ ತಿಳಿಸಿದೆ.

ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಿರ್ನಾಡು ಮಹಾಸಭಾದ ಅಧ್ಯಕ್ಷ ಸುದರ್ಶನಂ,'ಮಹಾಸಭಾ ಬೆಂಗಳೂರಿಗಷ್ಟೇ ಕೇಂದ್ರಿತವಾಗಿದ್ದು, ಬಸವನಗುಡಿಯನ್ನು ಬಿಟ್ಟು ಹೊರ ಹೋಗಿಲ್ಲ. ಇದರಿಂದ ರಾಜ್ಯದ ಮೂಲೆಗಳಲ್ಲಿರುವ ಬ್ರಾಹ್ಮಣ ಉಪಪಂಗಡಗಳ ಜನರ ಸಂಕಷ್ಟಗಳನ್ನು ಕೇಳುವವರೇ ಇರಲಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

'ಬ್ರಾಹ್ಮಣರನ್ನು ನಿಂದಿಸಿದಾಗ ಅದರ ವಿರುದ್ಧ ಧ್ವನಿ ಎತ್ತುವವರು ಮಹಾಸಭಾದ ನಾಯಕತ್ವ ವಹಿಸಬೇಕು. ಇದಕ್ಕೆ ಸಮರ್ಥರಾಗಿರುವ ರಘುನಾಥ್ ಅವರನ್ನು ಬೆಂಬಲಿಸಲು ಬ್ರಾಹ್ಮಣ ಉಪಪಂಗಡಗಳೆಲ್ಲ ಒಗ್ಗೂಡಿವೆ' ಎಂದು ಹೇಳಿದರು.

'ಮೈಸೂರು, ಶಿವಮೊಗ್ಗ, ಹಾಸನ, ಹುಬ್ಬಳ್ಳಿ ಮತ್ತು ರಾಯಚೂರಿನಲ್ಲಿ ಡಿಸೆಂಬರ್ 12ರಂದು ಮೊದಲ ಹಂತದ ಚುನಾವಣೆ ನಡೆಯಲಿದೆ. ಡಿಸೆಂಬರ್ 19ರಂದು ಎರಡನೇ ಹಂತದ ಚುನಾವಣೆ ಬೆಂಗಳೂರಿನ ಬಸವನಗುಡಿಯ ಚಂದ್ರಶೇಖರ ಭಾರತಿ ಕಲ್ಯಾಣ ಮಂಟಪದಲ್ಲಿ ನಡೆಯಲಿದೆ' ಎಂದರು.

ಬಡಗನಾಡು, ಉಲುಚುಕಮ್ಮೆ, ಮುಲಕನಾಡು, ಯಾಜ್ಞವಲ್ಕ್ಯ, ಮಾಧ್ವ ಸೇರಿದಂತೆ ವಿವಿಧ ಬ್ರಾಹ್ಮಣ ಒಳಪಂಗಡ ಸಂಘಗಳ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು ಭಾಗವಹಿಸಿದ್ದರು.





ಉದಯಪುರ ಗ್ರಾಮದ ಬಳಿಯ ಡಾಂಬರು ರಸ್ತೆ ಕಿತ್ತು ಹೋಗಿರುವುದು (ಎಡಚಿತ್ರ) ಬೆಂಗಳೂರಿನಿಂದ ಕನಕಪುರಕ್ಕೆ ಸಂಪರ್ಕ ಕಲ್ಪಿಸುವ ರಾಷ್ಟ್ರೀಯ ಹೆದ್ದಾರಿಯ ದುಃಸ್ಥಿತಿ– ಪ್ರಜಾವಾಣಿ ಚಿತ್ರಗಳು

ಕಣ್ಣು ಹಾಯಿಸಿದಲ್ಲೆಲ್ಲಾ ಗುಂಡಿ: ನಿತ್ಯ ಸವಾರರ ಪಡಿಪಾಟಲು; ಅಪಘಾತದಿಂದ ಪ್ರಾಣ ಕಳೆದುಕೊಳ್ಳುತ್ತಿರುವ ಜನ

ಕನಕಪುರ ಹೆದ್ದಾರಿಯಲ್ಲಿ ಸಂಚರಿಸುವುದೇ ಕಷ್ಟ

● ಜಿ.ಶಿವಕುಮಾರ

ಬೆಂಗಳೂರು: ಅಲ್ಲಲ್ಲಿ ಕಿತ್ತು ಹೋಗಿರುವ ರಸ್ತೆ. ಮಾರುದ್ದದ ಗುಂಡಿಗಳು. ಮುಖಕ್ಕೆ ರಾಚುವ ದೂಳು. ಕಿರಿದಾದ ರಸ್ತೆಯಲ್ಲಿ ಸಾಗಲು ಹರಸಾಹಸ ಪಡುವ ವಾಹನ ಸವಾರರು. ಸ್ವಲ್ಪ ಎಚ್ಚರ ತಪ್ಪಿದರೂ ರಸ್ತೆ ಪಕ್ಕದ ಕೆರೆಗಳಿಗೆ ಉರುಳಿ ಬೀಳುವ ಅಪಾಯ...

ಬೆಂಗಳೂರಿನಿಂದ ಕನಕಪುರ ತಾಲ್ಲೂಕು ಕೇಂದ್ರಕ್ಕೆ ಸಂಪರ್ಕ ಕಲ್ಪಿಸುವ ರಾಷ್ಟ್ರೀಯ ಹೆದ್ದಾರಿಯ ಚಿತ್ರಣವಿದು.

ಇದು ಹೆಸರಿಗಷ್ಟೇ ಹೆದ್ದಾರಿ. ದ್ವಿಪಥದ ಈ ದಾರಿಯಲ್ಲಿ ಸಾಗುವವರಿಗೆ ಕಿರಿಕಿರಿ ತಪ್ಪಿದ್ದಲ್ಲ. ನಗರದಿಂದ ರೇಷ್ಮೆ ಸಂಸ್ಥೆ ಮೆಟ್ರೊ ನಿಲ್ದಾಣದವರೆಗಿನ ಹಾದಿ ಸುಸಜ್ಜಿತವಾಗಿದೆ. ನೈಸ್ ರಸ್ತೆಗೆ ಸಂಪರ್ಕ ಕಲ್ಪಿಸುವ ಮೇಲ್ಸೇತುವೆ ದಾಟಿ ಮುಂದೆ ಹೋದರೆ ಹದಗೆಟ್ಟ ರಸ್ತೆಯ ದರ್ಶನವಾಗುತ್ತದೆ.

ಲಕ್ಷ್ಮೀಪುರ, ಉದಯಪುರ, ಸಾಲು ಹುಣಸೆ, ಕಗ್ಗಲೀಪುರ, ಗಾಂಧಿನಗರ, ಸೋಮನಹಳ್ಳಿ, ಹೊಸದೊಡ್ಡಿ, ಬೋಳಾರೆ, ಗಂಟಕನದೊಡ್ಡಿ, ಪರ್ವೇನ್ ಪಾಳ್ಯ, ಹಾರೋಹಳ್ಳಿ, ಜಕ್ಕಸಂದ್ರ, ದೇವರ ಕಗ್ಗನಹಳ್ಳಿ ಹೀಗೆ ಯಶವಂತಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ 20ಕ್ಕೂ ಹೆಚ್ಚು ಹಳ್ಳಿಗಳು ಹೆದ್ದಾರಿಯ ಇಕ್ಕೆಲಗಳಲ್ಲೇ ಇವೆ. ಪ್ರತಿಷ್ಠಿತ ವಿದ್ಯಾಸಂಸ್ಥೆಗಳು, ಆಧ್ಯಾತ್ಮಿಕ ಕೇಂದ್ರಗಳು ಹಾಗೂ ಕೈಗಾರಿಕಾ ಪ್ರದೇಶಗಳೂ ಈ ಮಾರ್ಗದ ಆಸುಪಾಸಿನಲ್ಲೇ ಇವೆ.

ಶಾಲೆ-ಕಾಲೇಜು ಹಾಗೂ ಕಾರ್ಖಾನೆಗಳಿಗೆ ಹೋಗುವ ಸಾವಿರಾರು ವಿದ್ಯಾರ್ಥಿಗಳು ಹಾಗೂ ಕಾರ್ಮಿಕರು ಈ ರಸ್ತೆಯನ್ನೇ ಅವಲಂಬಿಸುವುದು ಅನಿವಾರ್ಯವಾಗಿದೆ. ಈ ಪ್ರದೇಶಗಳ ರೈತರು ಕೃಷಿ ಉತ್ಪನ್ನಗಳನ್ನು ಬೆಂಗಳೂರು, ರಾಮನಗರ ಅಥವಾ ಕನಕಪುರಕ್ಕೆ ಕೊಂಡೊಯ್ಯಲೂ ಇದೇ ರಸ್ತೆಯನ್ನು ಆಶ್ರಯಿಸಬೇಕಾಗಿದೆ.

ಹದಗೆಟ್ಟಿರುವ ಈ ರಸ್ತೆಯ ಪ್ರಯಾಣ ಹಲವರ ಪ್ರಾಣಕ್ಕೆ ಸಂಚಕಾರ ತಂದೊಡ್ಡುತ್ತಿದೆ. ಗುಂಡಿ ತಪ್ಪಿಸುವ ಭರದಲ್ಲಿ ರಸ್ತೆಗೆ ಉರುಳಿ ಗಾಯ ಮಾಡಿಕೊಂಡ ದ್ವಿಚಕ್ರ ವಾಹನ ಸವಾರರ ಅಳಲು ಕೇಳುವವರೇ ಇಲ್ಲದಂತಾಗಿದೆ.

ರಸ್ತೆ ದುರಸ್ತಿಗೊಳಿಸುವಂತೆ, ಸಂಸದರು ಹಾಗೂ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳಿಗೆ ಸ್ಥಳೀಯರು ಹಲವು ಬಾರಿ ಮನವಿ ಮಾಡಿದ್ದಾರೆ. ಹೀಗಿದ್ದರೂ ಸಮಸ್ಯೆಗೆ ಮುಕ್ತಿ ದೊರೆತಿಲ್ಲ.

ಚುರುಕು ಪಡೆಯದ ಕಾಮಗಾರಿ



ನದೀಮ್ ಪಾಷಾ

‘2018ರಲ್ಲಿ ಎನ್‌ಎಚ್‌ಎಐ ಇಲಾಖೆಯು ಸದ್ಭವ್ ಹೆಸರಿನ ಕಂಪನಿಗೆ 80 ಕಿ.ಮೀ.ವರೆಗಿನ ರಸ್ತೆ ಕಾಮಗಾರಿಯ ಟೆಂಡರ್ ನೀಡಿತ್ತು. ಮೊದಲ ವರ್ಷ ಕಾಮಗಾರಿ ವೇಗವಾಗಿ ನಡೆದಿತ್ತು. ಬಳಿಕ ಅದು ಮಂದಗತಿ ಪಡೆಯಿತು. ಮೂರು ವರ್ಷಗಳು ಕಳೆದರೂ ಕಾಮಗಾರಿ ಮುಗಿದಿಲ್ಲ’ ಎಂದು ಪೀಸ್‌ಫುಲ್ ಇಂಡಿಯಾ ಟ್ರಸ್ಟ್‌ನ ಕಾರ್ಯದರ್ಶಿ ನದೀಮ್ ಪಾಷಾ ಹೇಳಿದರು.

‘ಆದಷ್ಟು ಬೇಗ ಕಾಮಗಾರಿ ಪೂರ್ಣಗೊಳಿಸುವಂತೆ ಎನ್‌ಎಚ್‌ಎಐಗೆ ಹಲವು ಸಲ ಮನವಿ ಸಲ್ಲಿಸಿದ್ದೇವೆ. ಸಂಸದ ಸದಾನಂದ ಗೌಡ ಅವರಿಗೂ ಮನವಿ ಮಾಡಿದ್ದೇವೆ. ಅವರು ರಸ್ತೆ ದುರಸ್ತಿಗೆ ಜನವರಿವರೆಗೂ ಕಾಯಬೇಕು ಎಂದು ಹೇಳುತ್ತಾರೆ. ಅಷ್ಟರಲ್ಲಾಗಲೆ ಇನ್ನೂ 150 ಜನರು ಪ್ರಾಣ ಕಳೆದುಕೊಳ್ಳಬೇಕಾಗುತ್ತದೆ. ಪ್ರತಿ ನಿತ್ಯ ಜನ ಗೋಳಾಡುತ್ತಿದ್ದಾರೆ. ಆಯತಪ್ಪಿ ಬಿದ್ದು ತಲೆ ಹಾಗೂ ಕೈಕಾಲುಗಳಿಗೆ ಗಾಯ ಮಾಡಿಕೊಳ್ಳುವುದು ಸಾಮಾನ್ಯವಾಗಿಬಿಟ್ಟಿದೆ. ರಸ್ತೆಯಲ್ಲಿ ಸಾಗುವ ದ್ವಿಚಕ್ರ ವಾಹನ ಸವಾರರು ಜೊತೆಯಲ್ಲೇ ಜೀವವಿಮೆ ಹಿಡಿದು ಸಾಗಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ’ ಎಂದು ಬೇಸರ ವ್ಯಕ್ತಪಡಿಸಿದರು.

ರಸ್ತೆ ಬದಿ ಸೂಚನಾ ಫಲಕ ಹಾಕಿ ಪ್ರತಿಭಟನೆ

ಪೀಸ್‌ಫುಲ್ ಇಂಡಿಯಾ ಟ್ರಸ್ಟ್‌ನ ಸದಸ್ಯರು ರಸ್ತೆ ಅವ್ಯವಸ್ಥೆ ಕುರಿತ ಸೂಚನಾ ಫಲಕಗಳನ್ನು ರಸ್ತೆ ಬದಿ ಹಾಕುವ ಮೂಲಕ ಹೆದ್ದಾರಿ ಪ್ರಾಧಿಕಾರದ ನಿರ್ಲಕ್ಷ್ಯವನ್ನು ಖಂಡಿಸಿದ್ದಾರೆ.

‘ಎಚ್ಚರವಿರಲಿ ವಾಹನ ಸವಾರರೇ’...ಈ ಕನಕಪುರ ರಸ್ತೆ (ಎನ್‌.ಎಚ್‌.209) ತುಂಬಾ ಹದಗೆಟ್ಟಿದೆ. ನಿಧಾನವಾಗಿ ಚಲಿಸಿ. ಎನ್‌.ಎಚ್‌.ಎ.ಐ. ಇಲಾಖೆಯವರೆ ಆದಷ್ಟು ಬೇಗ ರಸ್ತೆ ಕಾಮಗಾರಿ ಪೂರ್ಣಗೊಳಿಸಿ’ ಎಂಬ ಬರಹವುಳ್ಳ ಪೋಸ್ಟರ್‌ಗಳು ಪ್ರಯಾಣಿಕರ ಗಮನ ಸೆಳೆಯುತ್ತಿದ್ದು, ಸಾಮಾಜಿಕ ಜಾಲತಾಣಗಳಲ್ಲೂ ಹರಿದಾಡುತ್ತಿವೆ.

ರಸ್ತೆಯಲ್ಲಿ ನಿತ್ಯವೂ ಅಪಘಾತಗಳು ನಡೆಯುತ್ತಲೇ ಇವೆ. ಹೀಗಾಗಿ ಮಕ್ಕಳು ಶಾಲೆಗಳಿಗೆ ಹೋಗಲು ಭಯಪಡುತ್ತಿದ್ದಾರೆ. ಅಧಿಕಾರಿಗಳು ಎಚ್ಚೆತ್ತುಕೊಳ್ಳಲಿ.

ಸುಧೀರ್, ಸ್ಥಳೀಯ

ಮಳೆ ಬಂದರೆ ಕೆಸರು ಗದ್ದೆಯಂತಾಗುವ ರಸ್ತೆಯಲ್ಲಿ ವಾಹನ ಚಲಾಯಿಸುವುದು ಕಷ್ಟ. ವಾಹನಗಳಿಗೂ ಹಾನಿಯಾಗುತ್ತಿದೆ. ರಿಪೇರಿಗೆ ಸಾಕಷ್ಟು ಹಣ ಖರ್ಚಾಗುತ್ತದೆ

ರಾಮಚಂದ್ರ, ಉದಯಪುರ ನಿವಾಸಿ

ಈಗಾಗಲೇ ರಸ್ತೆ ದುರಸ್ತಿಗೆ ಸಂಬಂಧಪಟ್ಟವರಿಗೆ ಸೂಚಿಸಲಾಗಿದೆ. ಮುಂದಿನ ವಾರವೇ ಕೆಲಸ ಆರಂಭಿಸಲಾಗುತ್ತದೆ.

ಬಿ.ಟಿ.ಶ್ರೀಧರ

ಎನ್‌ಎಚ್‌ಎಐ ಯೋಜನಾ ನಿರ್ದೇಶಕ

‘ಹಲವೆಡೆ ರಸ್ತೆ ವಿಭಜಕಗಳೇ ಇಲ್ಲ’

ಹೆದ್ದಾರಿಯ ಬಹುತೇಕ ಭಾಗಗಳಲ್ಲಿ ರಸ್ತೆ ವಿಭಜಕಗಳು ಇಲ್ಲ. ಅಪಘಾತಗಳು ಸಂಭವಿಸುತ್ತಿರುವುದಕ್ಕೆ ಇದು ಕೂಡ ಮುಖ್ಯ ಕಾರಣ ಎಂದು ಸ್ಥಳೀಯರು ದೂರುತ್ತಾರೆ.

‘ವೇಗವಾಗಿ ಸಾಗಿಬರುವ ಕೆಲವರು ವಾಹನ ಹಿಂದಿಕ್ಕಲು ಪ್ರಯತ್ನಿಸುತ್ತಾರೆ. ಈ ವೇಳೆ ಮುಂಬದಿಯಿಂದ ಬರುವ ವಾಹನಗಳಿಗೆ ಡಿಕ್ಕಿ ಹೊಡೆದು ಅಸುನೀಗುತ್ತಾರೆ. ಹೆದ್ದಾರಿ ಪಕ್ಕದಲ್ಲಿರುವ ಹಳ್ಳಿಗಳಿಗೆ ಹೋಗುವವರು ಏಕಾಏಕಿ ಎಡ ಅಥವಾ ಬಲಕ್ಕೆ ತಿರುವು ಪಡೆಯುತ್ತಾರೆ. ಅದರಿಂದಲೂ ಅಪಘಾತಗಳು ಸಂಭವಿಸುತ್ತಿವೆ. ರಸ್ತೆ ವಿಭಜಕಗಳು ಇದ್ದರೆ ಅನಾಹುತಗಳನ್ನು ತಪ್ಪಿಸಬಹುದು’ ಎಂದು ಆಟೊ ಚಾಲಕ ರಾಮಚಂದ್ರ ಸಲಹೆ ನೀಡಿದರು.

ಹೊರ ವಲಯ ಒಳ ಬೇಗುದಿ

‘ನೈಸ್ ರಸ್ತೆಯಿಂದ ಹಾರೋಹಳ್ಳಿ ವರೆಗಿನ ಮಾರ್ಗದಲ್ಲಿ ಮಾರುದ್ದದ ಗುಂಡಿಗಳಿವೆ. ಹೀಗಾಗಿ ನಿತ್ಯ ಒಂದಿಲ್ಲೊಂದು ಅಪಘಾತಗಳು ನಡೆಯುತ್ತಲೇ ಇದ್ದು ತಮ್ಮದಲ್ಲದ ತಪ್ಪಿಗೆ ಹಲವರು ಪ್ರಾಣ ಕಳೆದು ಕೊಳ್ಳುತ್ತಿದ್ದಾರೆ. ಈ ರಸ್ತೆಯಲ್ಲಿ ಪ್ರತಿನಿತ್ಯ ನೂರಾರು ವಾಹನಗಳು ಸಂಚರಿಸುತ್ತವೆ. ಹಾಲು, ಆಹಾರ ಹಾಗೂ ಔಷಧ ಸಾಮಾಗ್ರಿಗಳನ್ನು ಕೊಂಡೊಯ್ಯುವ ವಾಹನಗಳೂ ಈ ಮಾರ್ಗದಲ್ಲೇ ಸಾಗಬೇಕಿದ್ದು, ಅವರು ನಿತ್ಯವೂ ಕಿರಿಕಿರಿ ಅನುಭವಿಸುವಂತಾಗಿದೆ’ ಎಂದು ಗಾಂಧಿನಗರ ನಿವಾಸಿ ಫಯಾಜ್ ಪಾಷಾ ದೂರಿದರು.



ಫಯಾಜ್ ಪಾಷಾ

‘ಈ ಭಾಗದಲ್ಲಿ ಸುಸಜ್ಜಿತವಾದ ಆಸ್ಪತ್ರೆ ಇಲ್ಲ. ಹೀಗಾಗಿ ಗಂಭೀರ ಆರೋಗ್ಯ ಸಮಸ್ಯೆ ಎದುರಾದರೆ ಅವರನ್ನು ಕನಕಪುರ ಇಲ್ಲವೇ ಬೆಂಗಳೂರಿನಲ್ಲಿರುವ ಆಸ್ಪತ್ರೆಗಳಿಗೆ ಕರೆದೊಯ್ಯುವುದು ಅನಿವಾರ್ಯ. ರಸ್ತೆ ಹದಗೆಟ್ಟಿರುವುದರಿಂದ ಬೆಳಿಗ್ಗೆ ಹಾಗೂ ಸಂಜೆಯ ಹೊತ್ತಿನಲ್ಲಿ ವಾಹನಗಳ ಸಂಚಾರ ಮಂದಗತಿಯಲ್ಲಿರುತ್ತದೆ. ದಟ್ಟಣೆಯಲ್ಲಿ ಕೆಲವೊಮ್ಮೆ ಆಂಬುಲೆನ್ಸ್‌ಗಳೂ ಸಿಲುಕಿಕೊಳ್ಳುತ್ತವೆ. ಸೂಕ್ತ ಸಮಯಕ್ಕೆ ಆಸ್ಪತ್ರೆಗೆ ಕೊಂಡೊಯ್ಯಲಾಗದೆ ರೋಗಿಗಳು ಸಾವಿಗೀಡಾದ ಹಲವು ನಿದರ್ಶನಗಳೂ ಇವೆ’ ಎಂದು ತಿಳಿಸಿದರು.

ಫ್ಲ್ಯಾಟ್‌ನಲ್ಲಿ ಕಳ್ಳತನ: ಬಂಧನ

ಬೆಂಗಳೂರು: ಅಪಾರ್ಟ್‌ಮೆಂಟ್ ಸಮುಚ್ಚಯವೊಂದರಲ್ಲಿ ಕೆಲಸಕ್ಕೆ ಸೇರಿ, ಅಲ್ಲಿಯ ಫ್ಲ್ಯಾಟ್‌ನಲ್ಲಿ ಕಳ್ಳತನ ಮಾಡಿದ್ದ ಆರೋಪದಡಿ ನೇಪಾಳದ ಐವರು ಪ್ರಜೆಗಳನ್ನು ಹೆಣ್ಣೂರು ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಕರಣ್ ಬಿಸ್ತಾ, ಹಿಕ್ಮತ್ ಶಾಹಿ, ಗೋರಕ್ ಕಾಲು, ಜೀವನ್ ಹಾಗೂ ರಾಜು ಬಂಧಿತರು. ಅವರಿಂದ ₹ 9.30 ಲಕ್ಷ ನಗದು ಹಾಗೂ ₹ 19 ಲಕ್ಷ ಮೌಲ್ಯದ ಚಿನ್ನಾಭರಣ, ಬೆಳ್ಳಿ ಸಾಮಗ್ರಿ ಜಪ್ತಿ ಮಾಡಲಾಗಿದೆ’ ಎಂದು ಪೂರ್ವ ವಿಭಾಗದ ಡಿಸಿಪಿ ಎಸ್‌.ಡಿ.ಶರಣಪ್ಪ ಹೇಳಿದರು.

‘ಕೋಕೊನೆಟ್ ಗ್ರೋ ಬಡಾವಣೆಯಲ್ಲಿರುವ ಎಸ್‌.ಕೆ. ರೆಸಿಡೆನ್ಸಿ ಅಪಾರ್ಟ್‌ಮೆಂಟ್ ಸಮುಚ್ಚಯದ ಫ್ಲ್ಯಾಟೊಂದರಲ್ಲಿ ಇತ್ತೀಚೆಗೆ ಕಳ್ಳತನವಾಗಿತ್ತು. ಈ ಬಗ್ಗೆ ಮಾಲೀಕರು ದೂರು ನೀಡಿದ್ದರು. ಕಳ್ಳತನದ ನಂತರ ಕೆಲ ಕೆಲಸಗಾರರು ನಾಪತ್ತೆಯಾಗಿದ್ದರಿಂದ, ಅವರ ಮೇಲೆ ಅನುಮಾನ ಬಂದಿತ್ತು. ಒಬ್ಬನನ್ನು ಪತ್ತೆ ಮಾಡಿ ವಶಕ್ಕೆ ಪಡೆದು ವಿಚಾರಿಸಿದಾಗ ತಪ್ಪೊಪ್ಪಿಕೊಂಡ. ಆತನ ಹೇಳಿಕೆಯನ್ವಯ ಉಳಿದವರನ್ನೂ ಬಂಧಿಸಲಾಯಿತು’ ಎಂದೂ ತಿಳಿಸಿದರು.

‘ನೇಪಾಳದ ಆರೋಪಿಗಳು ಕೆಲಸ ಹುಡುಕಿಕೊಂಡು ಬೆಂಗಳೂರಿಗೆ ಬಂದಿದ್ದರು. ಕೆಲಸಕ್ಕೆ ಸೇರಿ ಕಳ್ಳತನ ಮಾಡಿಕೊಂಡು ನೇಪಾಳಕ್ಕೆ ವಾಪಸು ಹೋಗಲು ಸಂಚು ರೂಪಿಸಿದ್ದರು. ಆರೋಪಿಯೊಬ್ಬ ಎಸ್‌.ಕೆ. ರೆಸಿಡೆನ್ಸಿ ಅಪಾರ್ಟ್‌ಮೆಂಟ್ ಸಮುಚ್ಚಯದಲ್ಲಿ ಕೆಲಸಕ್ಕೆ ಸೇರಿದ್ದ.’

‘ಯಾವ ಫ್ಲ್ಯಾಟ್‌ನಲ್ಲಿ ಯಾರೆಲ್ಲ ಇರುತ್ತಾರೆ, ಕಳ್ಳತನ ಮಾಡುವುದು ಹೇಗೆ ಇತ್ಯಾದಿ ಮಾಹಿತಿಯನ್ನು ಆರೋಪಿ ಕಲೆಹಾಕಿದ್ದ. ಇತರೆ ಆರೋಪಿಗಳ ಜೊತೆ ‘ಫೇಸ್‌ಬುಕ್ ಮೆಸೆಂಜರ್’ ಆ್ಯಪ್‌ನಲ್ಲಿ ಮಾಹಿತಿ ಹಂಚಿಕೊಳ್ಳುತ್ತಿದ್ದ. ಕಳ್ಳತನ ಕ್ಕೆಂದೇ ಕೆಲ ಆರೋಪಿಗಳನ್ನು ನೇಪಾಳದಿಂದ ನಗರಕ್ಕೆ ಕರೆಸಿಕೊಳ್ಳುತ್ತಿದ್ದ’ ಎಂದೂ ಹೇಳಿದರು.

‘ಫ್ಲ್ಯಾಟ್‌ನಲ್ಲಿದ್ದ ನಿವಾಸಿಗಳು ಕೆಲಸ ನಿಮಿತ್ತ ಹೊರಗಡೆ ಹೋಗಿದ್ದಾಗ ಕಳ್ಳತನ ಮಾಡಿಕೊಂಡು ಪರಾರಿಯಾಗಿದ್ದರು’ ಎಂದೂ ಶರಣಪ್ಪ ವಿವರಿಸಿದರು.

ಮೊಸಳೆ ಮರಿ ಮಾರಾಟ: ಆರೋಪಿ ಸೆರೆ

ಬೆಂಗಳೂರು: ಮೊಸಳೆ ಮರಿಯನ್ನು ತಂದು ಅಕ್ರಮವಾಗಿ ಮಾರಾಟ ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ಚನ್ನಮ್ಮನಕೆರೆ ಅಚ್ಚುಕಟ್ಟು ಪೊಲೀಸರು ಬಂಧಿಸಿದ್ದಾರೆ.

‘ಜಯನಗರ ಒಂದನೇ ಹಂತದ ಸೋಮೇಶ್ವರ ನಗರ ನಿವಾಸಿ ಅಬ್ದುಲ್ ಖಾಲಿದ್ (32) ಹಾಗೂ ಕನಕಪುರ ತಾಲ್ಲೂಕಿನ ಬೂದಿಗುಪ್ಪೆಯ ಬಿ.ಎಸ್. ಗಂಗಾಧರ್ (32) ಬಂಧಿತರು. ಅವರಿಂದ ಜೀವಂತ ಮೊಸಳೆ ಮರಿಯೊಂದನ್ನು ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ರಾಮನಗರ ಜಿಲ್ಲೆಯಲ್ಲಿ ಮೊಸಳೆ ಮರಿ ಹಿಡಿದಿದ್ದ ಆರೋಪಿಗಳು, ಅದನ್ನು ನೀರಿನ ಕ್ಯಾನ್‌ನಲ್ಲಿ ಇಟ್ಟುಕೊಂಡು ನಗರಕ್ಕೆ ಬಂದಿದ್ದರು. ಚೆನ್ನಮ್ಮನಕೆರೆ ಅಚ್ಚುಕಟ್ಟು ಬಳಿಯ ಈಶ್ವರಿ ಚಿತ್ರಮಂದಿರ ಬಳಿ ಆರೋಪಿಗಳು ಅನುಮಾನಾಸ್ಪದ ರೀತಿಯಲ್ಲಿ ಸುತ್ತಾಡುತ್ತಿದ್ದರು. ಅವರನ್ನು ವಶಕ್ಕೆ ಪಡೆದಾಗ, ಮೊಸಳೆ ಮರಿ ಪತ್ತೆಯಾಯಿತು’ ಎಂದರು.

‘ನಗರದ ಗ್ರಾಹಕರೊಬ್ಬರಿಗೆ ಮಾರಾಟ ಮಾಡಲು ಮೊಸಳೆ ಮರಿ ತಂದಿರುವುದಾಗಿ ಆರೋಪಿಗಳು ಹೇಳಿಕೆ ನೀಡಿದ್ದಾನೆ’ ಎಂದು ಹೇಳಿದರು.

ಗಾಯಕಿ ವಿಜಯಾ ಕಿಶೋರ್ ನಿಧನ



ಬಳ್ಳಾರಿ: ಹಿಂದೂಸ್ತಾನಿ ಸಂಗೀತದ ಗಾಯಕಿ ವಿಜಯಾ ಕಿಶೋರ್ (61) ಬುಧವಾರ ಬೆಳಿಗ್ಗೆ ನಗರದಲ್ಲಿ ನಿಧನರಾದರು. ನಗರದ ಖಾಸಗಿ ಆಸ್ಪತ್ರೆಯಲ್ಲಿ ಒಂದು ವಾರದ ಹಿಂದೆ ಅನಾರೋಗ್ಯದಿಂದಾಗಿ ದಾಖಲಾಗಿದ್ದರು. ಅವರಿಗೆ ಮಗ ಮತ್ತು ಮಗಳು ಇದ್ದಾರೆ.

ವಿಜಯಾ ಅವರ ಅಂತ್ಯಕ್ರಿಯೆ ಬುಧವಾರ ಸಂಜೆ ನಡೆಯಿತು. ಮೂಲತಃ ಮೈಸೂರಿನವರಾದ ವಿಜಯಾ ಕಿಶೋರ್, ಹಿರಿಯ ರಂಗ ಕಲಾವಿದರಾಗಿದ್ದ ಕೊಟ್ಟೂರಪ್ಪನವರ ಮೊಮ್ಮಗಳು. ಬಳ್ಳಾರಿ ಹಿರಿಯ ವೈದ್ಯೆ ಸುನಂದಮ್ಮ ಅವರ ಪುತ್ರನನ್ನು ವಿವಾಹವಾಗಿದ್ದರು. ಸಂಗೀತದ ಬಗೆಗಿನ ತುಡಿತ ಅವರನ್ನು ದಿವಂಗತ ಎ.ಚಂದ್ರಶೇಖರ ಗವಾಯಿ ಅವರ ಗರಡಿಗೆ ಕರೆತಂದಿತ್ತು.

ವಿಜಯಾ ಅವರು ಆಕಾಶವಾಣಿ ಹಾಗೂ ದೂರದರ್ಶನದಲ್ಲಿ ‘ಬಿ–ಹೈ’ ಶ್ರೇಣಿ ಗಾಯಕರೂ ಆಗಿದ್ದರು. ಮೈಸೂರು ದಸರಾ ಉತ್ಸವ, ಹಂಪಿ ಉತ್ಸವ, ಆನೆಗುಂದಿ ಉತ್ಸವ, ಪುರಂದರ ದಾಸರ ಆರಾಧನಾ ಕಾರ್ಯಕ್ರಮಗಳಲ್ಲಿ ಕಚೇರಿ ನಡೆಸಿ ಕೊಟ್ಟಿದ್ದರು.

‘ಸುಸ್ವರ ಸಂಗೀತ ವಿದ್ಯಾಲಯ’ ಸ್ಥಾಪಿಸಿ ಹಲವು ಶಿಷ್ಯರನ್ನು ತಯಾರು ಮಾಡಿದ್ದರು.

₹100 ಕೋಟಿ ಸಾಲದ ಆಮಿಷ ₹1.80 ಕೋಟಿ ವಂಚನೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ₹ 100 ಕೋಟಿ ಸಾಲ ಕೊಡಿಸುವ ಆಮಿಷವೊಡ್ಡಿ ಉದ್ಯಮಿಯೊಬ್ಬರಿಂದ ₹ 1.80 ಕೋಟಿ ಪಡೆದು ವಂಚಿಸಲಾಗಿದ್ದು, ಈ ಸಂಬಂಧ ಎಚ್‌ಎಸ್‌ಆರ್ ಲೇಔಟ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಉದ್ಯಮಿ ಮಂಥೆನಾ ತರುಣ್ ಗಾಂಧಿ ಎಂಬುವರು ತಮ್ಮ ಮಾವ ಕೃಷ್ಣಂ ರಾಜು ಪರವಾಗಿ ವಂಚನೆ ಬಗ್ಗೆ ದೂರು ನೀಡಿದ್ದಾರೆ. ಫ್ಯೂಚರ್ ಕ್ರೈಸ್ಟ್ ವೆಂಚರ್ಸ್ ಕಂಪನಿ ಮುಖ್ಯಸ್ಥ ಕಾರ್ತಿವೇಲನ್ ಹಾಗೂ ಇತರರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ. ನಾಲ್ವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಎಲೆಕ್ಟ್ರಾನಿಕ್ ಸಿಟಿ ಎರಡನೇ ಹಂತದ ನಿವಾಸಿ ಮಂಥೆನಾ ಅವರ ಮಾವ ಪಿ.ಕೃಷ್ಣಂ ರಾಜು ಅವರು ಹೈದರಾಬಾದ್‌ನಲ್ಲಿ ವಾಸವಿದ್ದಾರೆ. ಡಿ. 1ರಂದು ಕೃಷ್ಣಂ ರಾಜು ಅವರ ಕಚೇರಿಗೆ ಹೋಗಿದ್ದ ಆರೋಪಿಗಳು, ಬೆಂಗಳೂರಿನ ಎಚ್‌ಎಸ್‌ಆರ್ ಲೇಔಟ್‌ನಲ್ಲಿರುವ ಫ್ಯೂಚರ್ ಕ್ರೈಸ್ಟ್ ವೆಂಚರ್ಸ್ ಕಂಪನಿಯಿಂದ ₹ 100 ಕೋಟಿ ಸಾಲ ಕೊಡುವುದಾಗಿ ಹೇಳಿದ್ದರು.’

‘ಡಿ. 2ರಂದು ಬೆಂಗಳೂರಿಗೆ ಬಂದಿದ್ದ ಕೃಷ್ಣಂ ರಾಜು, ಆರೋಪಿಗಳ ಕಂಪನಿಗೆ ಭೇಟಿ ನೀಡಿದ್ದರು. ಕಂಪನಿ ಮುಖ್ಯಸ್ಥ ಎನ್ನಲಾದ ಕಾರ್ತಿವೇಲನ್, ‘ನಮ್ಮದು ಅಂತರರಾಷ್ಟ್ರೀಯ ಕಂಪನಿ. ವಿದೇಶಗಳ ಹಲವು ಉದ್ಯಮಿಗಳಿಗೆ ಕಡಿಮೆ ಬಡ್ಡಿದರದಲ್ಲಿ ಸಾಲ ನೀಡಲಾಗಿದೆ. ಸಾಲ ಪಡೆಯುವುದಕ್ಕೂ ಮುನ್ನ, 3 ತಿಂಗಳ ಬಡ್ಡಿಹಣವನ್ನು ಠೇವಣಿ ಇರಿಸಬೇಕು’ ಎಂಬುದಾಗಿ ಆರೋಪಿಗಳು ಹೇಳಿದರು. ಅದನ್ನು ನಂಬಿದ್ದ ಕೃಷ್ಣಂ ರಾಜು, ಹಂತ ಹಂತವಾಗಿ ₹ 1.80 ಕೋಟಿ ಹಣವನ್ನು ಆರೋಪಿಗಳು ಹೇಳಿದ ಬ್ಯಾಂಕ್ ಖಾತೆಗಳಿಗೆ ಜಮೆ ಮಾಡಿದ್ದರು’ ಎಂದೂ ಪೊಲೀಸ್ ಮೂಲಗಳು ವಿವರಿಸಿವೆ.

ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯ ಉದ್ಯಮಗಳಿಗೆ ಆಸ್ತಿ ತೆರಿಗೆ

ಬೆಂಗಳೂರು: ಕೆಐಎಡಿಬಿ ಮತ್ತು ಕೆಎಸ್‌ಎಸ್‌ಐಡಿಸಿ ಅಗತ್ಯ ಮೂಲ ಸೌಕರ್ಯಗಳೊಂದಿಗೆ ಅಭಿವೃದ್ಧಿಗೊಳಿಸಿ ಹಂಚಿಕೆ ಮಾಡುವ ಕೈಗಾರಿಕಾ ನಿವೇಶನಗಳಿಗೆ ಪ್ರತ್ಯೇಕ ಆಸ್ತಿ ತೆರಿಗೆ ವಿಧಿಸಲು ಅವಕಾಶ ಕಲ್ಪಿಸಲು ಈಗ ಇರುವ ಕಾಯ್ದೆಗೆ ತಿದ್ದುಪಡಿ ಮಾಡಲು ಗುರುವಾರ ನಡೆದ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ನಗರ ಸ್ಥಳೀಯ ಸಂಸ್ಥೆಗಳಲ್ಲಿನ ಕೈಗಾರಿಕೆಗಳಿಗೆ ಪ್ರತ್ಯೇಕ ಆಸ್ತಿ ತೆರಿಗೆ ದರವನ್ನು ನಿಗದಿ ಮಾಡಲು ಅನುಕೂಲವಾಗುವಂತೆ 1964ರ ಕರ್ನಾಟಕ ಪೌರಸಭೆಗಳ ಕಾಯ್ದೆಯ ಕಲಂ 94 ಮತ್ತು 1976ರ ಕರ್ನಾಟಕ ಮಹಾನಗರ ಪಾಲಿಕೆಗಳ ಕಾಯ್ದೆಯ ಕಲಂ 108ಕ್ಕೆ ತಿದ್ದುಪಡಿ ಮಾಡಲಾಗಿದೆ.ಇದರಿಂದಾಗಿ, ವಾಣಿಜ್ಯ ಕಟ್ಟಡಗಳ ಮೂಲ ದರ ಶೇ 0.5 ಕ್ಕಿಂತ ಕಡಿಮೆ ಇರುವಂತೆ, ಶೇ 3 ಕ್ಕಿಂತ ಹೆಚ್ಚಿಲ್ಲದಂತೆ ವಾಣಿಜ್ಯೇತರ ಕಟ್ಟಡಗಳಿಗೆ ಕಟ್ಟಡದ ಮೂಲ ದರ ಶೇ 0.02 ಕ್ಕಿಂತ ಕಡಿಮೆ ಇಲ್ಲದಂತೆ ಹಾಗೂ ಶೇ 1.5 ಕ್ಕಿಂತ ಹೆಚ್ಚಿಲ್ಲದಂತೆ ನಿಗದಿ ಮಾಡಲಾಗಿದೆ. ಖಾಲಿ ಭೂಮಿಗೆ ಮೂಲ ಬೆಲೆಯ ಶೇ 0.2 ಕ್ಕಿಂತ ಕಡಿಮೆ ಇಲ್ಲದಂತೆ ಹಾಗೂ ಶೇ 0.5 ಕ್ಕಿಂತ ಹೆಚ್ಚಿಲ್ಲದಂತೆ ನಗರ ಸ್ಥಳೀಯ ಸಂಸ್ಥೆಗಳ ಆಸ್ತಿ ತೆರಿಗೆಯನ್ನು ನಿಗದಿಪಡಿಸಲು ಅವಕಾಶ ನೀಡಲಾಗಿದೆ.

ಕೈಗಾರಿಕಾ ಆಸ್ತಿ ತೆರಿಗೆಯನ್ನು ವಾಣಿಜ್ಯ ಕಟ್ಟಡಗಳಿಗಿಂತ ಕಡಿಮೆ ವಿಧಿಸಿದರೆ ನಗರ ಸ್ಥಳೀಯ ಸಂಸ್ಥೆಗಳಿಗೆ ಹೊರೆಯಾದರೂ ಹೆಚ್ಚಿನ ಆಸ್ತಿ ತೆರಿಗೆ ಸಂಗ್ರಹವಾಗುವುದರಿಂದ ಆರ್ಥಿಕ ಸ್ಥಿತಿ ಸುಧಾರಿಸುವ ನಿರೀಕ್ಷೆಯಿದೆ.

ಎಂಬಿಬಿಎಸ್ ಸೀಟು ಆಮಿಷವೊಡ್ಡಿ ವಂಚನೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ನಗರದ ಪ್ರತಿಷ್ಠಿತ ಕಾಲೇಜೊಂದರಲ್ಲಿ ಎಂಬಿಬಿಎಸ್ ಸೀಟು ಕೊಡಿಸುವುದಾಗಿ ಹೇಳಿ ಹಣ ಪಡೆದು ವಂಚಿಸಲಾಗಿದ್ದು, ಈ ಬಗ್ಗೆ ದಕ್ಷಿಣ ವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಜೆ.ಪಿ.ನಗರದ ನಟರಾಜ್ ಬಡಾವಣೆಯ ನಿವಾಸಿಯೊಬ್ಬರು ದೂರು ನೀಡಿದ್ದಾರೆ. ಅಲ್ಲುರಿ ರಾಜು ಎಂಬಾತನ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸರು ಹೇಳಿದರು.

‘ದೂರುದಾರರು ತಮ್ಮ ತಂಗಿಯನ್ನು ಎಂಬಿಬಿಎಸ್ ವ್ಯಾಸಂಗಕ್ಕೆ ಸೇರಿಸಲು ಪ್ರಯತ್ನಿಸುತ್ತಿದ್ದರು. ಅದಕ್ಕಾಗಿ ಹಲವು ಕಾಲೇಜುಗಳಿಗೆ ಅರ್ಜಿ ಸಲ್ಲಿಸಿದ್ದರು. ಅಲ್ಲುರಿ ರಾಜು ಹೆಸರು ಹೇಳಿಕೊಂಡು ದೂರುದಾರರಿಗೆ ಕರೆ ಮಾಡಿದ್ದ ಆರೋಪಿ, ಸುಲಭವಾಗಿ ಎಂಬಿಬಿಎಸ್ ಸೀಟು ಕೊಡಿಸುವುದಾಗಿ ಹೇಳಿದ್ದ. ಅದಕ್ಕೆ ಹಣ ಖರ್ಚಾಗುವುದಾಗಿಯೂ ತಿಳಿಸಿದ್ದ.’

‘ಆರೋಪಿ ಮಾತು ನಂಬಿದ್ದ ದೂರುದಾರರು, ಹಂತ ಹಂತವಾಗಿ ₹ 2.37 ಲಕ್ಷ ನೀಡಿದ್ದರು. ಆದರೆ, ಆರೋಪಿ ಯಾವುದೇ ಸೀಟು ಕೊಡಿಸಿಲ್ಲ. ಹಣವನ್ನೂ ವಾಪಸು ನೀಡದೇ ನಾಪತ್ತೆಯಾಗಿದ್ದಾನೆ’ ಎಂದು ವಿವರಿಸಿದರು.

ಸಂಕ್ಷಿಪ್ತ ಸುದ್ದಿ

ತಲೆ ಮೇಲೆ ಇಟ್ಟಿಗೆ ಬಿದ್ದು ಸವಾರ ಸಾವು

ಬೆಂಗಳೂರು: ತಲೆ ಮೇಲೆ ಸಿಮೆಂಟ್ ಇಟ್ಟಿಗೆಗಳು ಬಿದ್ದು ದ್ವಿಚಕ್ರ ವಾಹನ ಸವಾರ ರಾಬರ್ಟ್ ಎಂಬುವರು ಮೃತಪಟ್ಟಿದ್ದು, ಈ ಬಗ್ಗೆ ಕಾಡುಗೊಂಡನಹಳ್ಳಿ (ಕೆ.ಜಿ.ಹಳ್ಳಿ) ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಸ್ಥಳೀಯ ಕುಶಾಲನಗರ ನಿವಾಸಿ ರಾಬರ್ಟ್, ದ್ವಿಚಕ್ರ ವಾಹನ ಚಲಾಯಿಸಿಕೊಂಡು ತೆರಳುತ್ತಿದ್ದಾಗ ಅವಘಡ ಸಂಭವಿಸಿದೆ. ಅವರ ಮೃತದೇಹವನ್ನು ಡಾ. ಅಂಬೇಡ್ಕರ್ ಆಸ್ಪತ್ರೆಯಲ್ಲಿ ಇರಿಸಲಾಗಿದೆ. ಮರಣೋತ್ತರ ಪರೀಕ್ಷೆ ನಡೆಸಿ, ಸಂಬಂಧಿಕರಿಗೆ ಮೃತದೇಹ ಹಸ್ತಾಂತರಿಸಲಾಗುವುದು’ ಎಂದು ಪೊಲೀಸರು ಹೇಳಿದರು.

‘ವಿನೋಬಾನಗರದ ಮೂರನೇ ಮುಖ್ಯರಸ್ತೆಯ ಬದಿಯಲ್ಲಿ ಬಹುಮಹಡಿ ಕಟ್ಟಡ ನಿರ್ಮಿಸಲಾಗುತ್ತಿದೆ. ಅದೇ ರಸ್ತೆಯಲ್ಲೇ ಗುರುವಾರ ಬೆಳಿಗ್ಗೆ 10.15ರ ಸುಮಾರಿಗೆ ರಾಬರ್ಟ್ ಅವರು ದ್ವಿಚಕ್ರ ವಾಹನ ಚಲಾಯಿಸಿಕೊಂಡು ಹೋಗುತ್ತಿದ್ದರು.’

‘ಕಟ್ಟಡದ ಮೂರನೇ ಮಹಡಿಯಲ್ಲಿದ್ದ ಮೂರ್ನಾಲ್ಕು ಸಿಮೆಂಟ್ ಇಟ್ಟಿಗೆಗಳು, ರಾಬರ್ಟ್ ಅವರ ಮೇಲೆ ಬಿದ್ದಿದ್ದವು. ಒಂದು ಇಟ್ಟಿಗೆ ತಲೆಗೆ ಬಿದ್ದಿದ್ದರಿಂದ, ಅವರು ಸ್ಥಳದಲ್ಲೇ ಪ್ರಜ್ಞೆ ತಪ್ಪಿ ಬಿದ್ದಿದ್ದರು. ಸಹಾಯಕ್ಕೆ ಬಂದಿದ್ದ ಸ್ಥಳೀಯರು, ಅಂಬೇಡ್ಕರ್ ಆಸ್ಪತ್ರೆಗೆ ಕರೆದೊಯ್ದಿದ್ದರು. ತಪಾಸಣೆ ನಡೆಸಿದ್ದ ವೈದ್ಯರು, ರಾಬರ್ಟ್ ಮೃತಪಟ್ಟಿರುವುದಾಗಿ ಹೇಳಿದರು’ ಎಂದೂ ಪೊಲೀಸರು ವಿವರಿಸಿದರು.

ಕಟ್ಟಡದ ಮಾಲೀಕನ ವಿರುದ್ಧ ಪ್ರಕರಣ: ‘ಸ್ಥಳೀಯ ನಿವಾಸಿ ಬಾಬು ಎಂಬುವರು ಕಟ್ಟಡ ನಿರ್ಮಿಸುತ್ತಿದ್ದರು. ಇಟ್ಟಿಗೆಗಳನ್ನು ಮೂರನೇ ಮಹಡಿಯಲ್ಲಿ ಅಡ್ಡಾದಿಡ್ಡಿಯಾಗಿ ಜೋಡಿಸಿಡಲಾಗಿತ್ತು. ಅದೇ ಇಟ್ಟಿಗೆಗಳು ರಾಬರ್ಟ್ ಮೈ ಮೇಲೆ ಬಿದ್ದಿದ್ದವು. ಮಾಲೀಕ ತಲೆಮರೆಸಿಕೊಂಡಿದ್ದಾನೆ’ ಎಂದು ಪೊಲೀಸರು ಹೇಳಿದರು.


ಸಿದ್ದು ಪಿ. ಅಲಗೂರು ವಿರುದ್ಧದ ಅರ್ಜಿ ವಜಾ

ಬೆಂಗಳೂರು: ‘ಬೆಳಗಾವಿಯ ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯದ ಕಂಪ್ಯೂಟರ್ ವಿಜ್ಞಾನ ವಿಭಾಗದ ಪ್ರಾಧ್ಯಾಪಕ ಪ್ರೊ. ಸಿದ್ದು ಪಿ. ಅಲಗೂರು ಅವರನ್ನು ಬಳ್ಳಾರಿಯ ಕೃಷ್ಣದೇವರಾಯ ವಿಶ್ವ ವಿದ್ಯಾಲಯಲದ ಕುಲಪತಿ ಹುದ್ದೆಗೆ ನೇಮಕ ಮಾಡಿ ಹೊರಡಿಸಿದ ಆದೇಶ ರದ್ದುಪಡಿಸಬೇಕು’ ಎಂದು ಕೋರಿದ್ದ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ಈ ಸಂಬಂಧ ಶಿಕ್ಷಣ ತಜ್ಞ ಡಾ. ಎಂ.ಆರ್. ನಿಂಬಾಳ್ಕರ್ ಪಿಐಎಲ್ ಸಲ್ಲಿಸಿದ್ದರು.

ಅನಧಿಕೃತ ಕಟ್ಟಡ–ಮುಲಾಜಿಲ್ಲದೆ ತೆರವುಗೊಳಿಸಿ: ಹೈಕೋರ್ಟ್

ಪ್ರಜಾವಾಣಿ ವಾರ್ತೆ



ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯ ಅನಧಿಕೃತ ಕಟ್ಟಡಗಳ ತೆರವು ಕುರಿತಂತೆ ಪಾಲಿಕೆಯನ್ನು ಮತ್ತೊಮ್ಮೆ ಕುಟುಕಿರುವ ಹೈಕೋರ್ಟ್, 'ನೀವು ಹೇಳುವುದೆಲ್ಲವನ್ನೂ ಕಾಗದದ ಮೇಲೆ ತೋರಿಸಿದರೆ ಒಪ್ಪಲು ಸಾಧ್ಯವಿಲ್ಲ. ವಾಸ್ತವದಲ್ಲಿ ಏನೆಲ್ಲಾ ಕ್ರಮ ಕೈಗೊಂಡಿದ್ದೀರಿ ಎಂಬುದನ್ನು ನಮಗೆ ಮನದಟ್ಟು ಮಾಡಬೇಕು' ಎಂದು ಹೇಳಿದೆ.

ಈ ಸಂಬಂಧ ಹೈಕೋರ್ಟ್ ಸ್ವಯಂಪ್ರೇರಿತವಾಗಿ ದಾಖಲಿಸಿಕೊಂಡಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಗುರುವಾರ ವಿಚಾರಣೆ ನಡೆಸಿದ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ, 'ಅನಧಿಕೃತ ಕಟ್ಟಡಗಳ ತೆರವು ಕುರಿತಂತೆ ಯಾವುದೇ ಪ್ರಭಾವಕ್ಕೆ ಒಳಗಾಗಬಾರದು' ಎಂದು ಎಚ್ಚರಿಸಿದೆ.

ವಿಚಾರಣೆ ವೇಳೆ ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ನ್ಯಾಯಪೀಠಕ್ಕೆ ಪ್ರಮಾಣಪತ್ರ ಸಲ್ಲಿಸಿದರು.

ಇದೇ ವೇಳೆ ಪಾಲಿಕೆ ಪರ ಹಿರಿಯ ವಕೀಲ ಡಿ.ಎನ್.ನಂಜುಂಡರೆಡ್ಡಿ ವಿವರಣೆ ನೀಡಿ, '2021ರ ನವೆಂಬರ್ 30ರವರೆಗೆ 1,31,745 ಅನಧಿಕೃತ ಕಟ್ಟಡಗಳ (ನಕ್ಷೆ ಅನುಮೋದನೆ ಪಡೆಯದ) ಸಮೀಕ್ಷೆ ನಡೆಸಲಾಗಿದೆ. 16,286 ಕಟ್ಟಡಗಳ ಮಾಲೀಕರಿಗೆ ದಾಖಲೆ ಸಲ್ಲಿಸಲು ಬಿಬಿಎಂಪಿ ಕಾಯ್ದೆಯ ಕಲಂ 313 ಪ್ರಕಾರ ನೋಟಿಸ್ ನೀಡಲಾಗಿದೆ. ಈವರೆಗೆ 1,712 ಕಟ್ಟಡಗಳ ಮಾಲೀಕರು ನೋಟಿಸ್‌ಗೆ ಉತ್ತರ ನೀಡಿದ್ದಾರೆ. ಉತ್ತರ ನೀಡದಿದ್ದರೆ ಮುಲಾಜಿಲ್ಲದೆ ಕಟ್ಟಡ ತೆರವುಗೊಳಿಸಲಾಗುವುದು. ಪಾಲಿಕೆ ಯಾವ ಪ್ರಭಾವಕ್ಕೂ ಬಗ್ಗುವುದಿಲ್ಲ. ಪ್ರಭಾವಿಗಳ ವಿರುದ್ಧವೂ ಕ್ರಮ ಕೈಗೊಳ್ಳಲಾಗುವುದು' ಎಂದು ಸ್ಪಷ್ಟಪಡಿಸಿದರು.

'2020ರ ಜನವರಿ 1ರಿಂದ 2021ರ ಜುಲೈ 30ವರೆಗೆ 8,496 ಕಟ್ಟಡಗಳ ನಿರ್ಮಾಣಕ್ಕೆ ನಕ್ಷೆ ಮಂಜೂರಾತಿ ನೀಡಲಾಗಿದೆ. ಅವುಗಳ ಪೈಕಿ 7,245 ಕಟ್ಟಡಗಳ ಸರ್ವೆ ಮಾಡಲಾಗಿದ್ದು, 6,341 ಕಟ್ಟಡಗಳು ನಿಯಮ ಉಲ್ಲಂಘಿಸಿರುವುದು ಕಂಡು ಬಂದಿದೆ. 2,656 ಕಟ್ಟಡಗಳಿಗೆ ನೋಟಿಸ್ ನೀಡಲಾಗಿದೆ, ಈವರೆಗೆ 733 ಮಾಲೀಕರು ನೋಟಿಸ್‌ಗೆ ಉತ್ತರ ನೀಡಿದ್ದಾರೆ. ಉಳಿದ ಪ್ರಕ್ರಿಯೆ ಪೂರ್ಣಗೊಳಿಸಲು ಕನಿಷ್ಠ ಮೂರು ತಿಂಗಳ ಕಾಲಾವಕಾಶ ಬೇಕು' ಎಂದು ಕೋರಿದರು.

ಇದನ್ನು ಮಾನ್ಯ ಮಾಡಿದ ನ್ಯಾಯಪೀಠ, ಸಮಗ್ರ ವರದಿ ಸಲ್ಲಿಸಲು ಸೂಚಿಸಿ ವಿಚಾರಣೆ ಮುಂದೂಡಿದೆ.

ನಾಮನಿರ್ದೇಶಿತ ಸದಸ್ಯರ ಮತ ಚಲಾವಣೆಗೆ ಹೈಕೋರ್ಟ್ ಅಸ್ತು

ನಗರ ಕ್ಷೇತ್ರ ಫಲಿತಾಂಶಕ್ಕೆ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆನೇಕಲ್, ಅತ್ತಿಬೆಲೆ ಮತ್ತು ಮಹದೇವಪುರ ಪುರಸಭೆಗೆ ನಾಮ ನಿರ್ದೇಶನಗೊಂಡಿರುವ 15 ಸದಸ್ಯರು, ಬೆಂಗಳೂರು ನಗರ ಕ್ಷೇತ್ರದ ವಿಧಾನ ಪರಿಷತ್ ಚುನಾವಣೆಯಲ್ಲಿ ಮತದಾನ ಮಾಡಲು ಹೈಕೋರ್ಟ್ ಅವಕಾಶ ನೀಡಿದೆ.

ಈ ಸಂಬಂಧ ಬೆಂಗಳೂರು ನಗರ ಕ್ಷೇತ್ರದ ವಿಧಾನ ಪರಿಷತ್ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿರುವ ಯೂಸುಫ್ ಷರೀಫ್ (ಕೆಜಿಎಫ್ ಬಾಬು) ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

'ಪ್ರತಿವಾದಿ 15 ಜನ ನಾಮ ನಿರ್ದೇಶಿತ ಸದಸ್ಯರು ತಮ್ಮ ಮತಗಳನ್ನು ಚಲಾಯಿಸಬಹುದು. ಆದರೆ, ಇವರ ಮತದಾನವನ್ನು ಮುಚ್ಚಿದ ಲಕೋಟೆಯಲ್ಲಿ ಹಾಕಿ ಪ್ರತ್ಯೇಕ ಮತಪೆಟ್ಟಿಗೆಯಲ್ಲಿ ಇರಿಸಬೇಕು ಮತ್ತು ಫಲಿತಾಂಶವನ್ನು ಪ್ರಕಟಿಸುವಂತಿಲ್ಲ' ಎಂದ ನ್ಯಾಯಪೀಠ ಅರ್ಜಿ ವಿಚಾರಣೆಯನ್ನು ಕಾಯ್ದಿರಿಸಿ ಮಧ್ಯಂತರ ಆದೇಶ ನೀಡಿದೆ.

ವಿಚಾರಣೆ ವೇಳೆ ಅರ್ಜಿದಾರರ ಪರ ಹಿರಿಯ ವಕೀಲ ಪ್ರೊ.ರವಿವರ್ಮ ಕುಮಾರ್, 'ನಾಮ ನಿರ್ದೇಶಿತ ಸದಸ್ಯರ ಹೆಸರನ್ನು ಪರಿಷತ್ ಚುನಾವಣೆಯ ಮತದಾರರ ಪಟ್ಟಿಯಲ್ಲಿ ಸೇರ್ಪಡೆ ಮಾಡಿರುವುದು ಸಂವಿಧಾನ ಬಾಹಿರವಾಗಿದೆ. ಅವರ ಹೆಸರುಗಳನ್ನು ಮತದಾರರ ಯಾದಿಯಿಂದ ಕೈಬಿಡುವಂತೆ ಚುನಾವಣಾ ಅಧಿಕಾರಿಗೆ ನಿರ್ದೇಶನ ನೀಡಬೇಕು' ಎಂದು ಕೋರಿದರು.


ಇದಕ್ಕೆ ಪ್ರತಿಯಾಗಿ ಜಿಲ್ಲಾ ಚುನಾವಣಾಧಿಕಾರಿ ಪರ ಹಾಜರಿದ್ದ ಹೆಚ್ಚುವರಿ ಅಡ್ವೊಕೇಟ್ ಜನರಲ್ ಧ್ಯಾನ್ ಚಿನ್ನಪ್ಪ, ಅರ್ಜಿದಾರರ ಮನವಿಯನ್ನು ಬಲವಾಗಿ ಆಕ್ಷೇಪಿಸಿದರು.

ಆಕ್ಷೇಪಣೆ ಏನು?: 'ನಾಮ ನಿರ್ದೇಶಿತ ಸದಸ್ಯರಿಗೆ ಮತದಾನ ಮಾಡಲು ಅವಕಾಶ ಕಲ್ಪಿಸಿರುವುದು ಕಾನೂನು ಬಾಹಿರ. ಇದು ಜನತಾ ಪ್ರತಿನಿಧಿ ಕಾಯ್ದೆ ಮತ್ತು ಸಂವಿಧಾನದ 243 (ಆರ್) (2) (ಎ)(ಐ) ವಿಧಿಗೆ ವಿರುದ್ಧವಾಗಿದೆ' ಎಂಬುದು ಅರ್ಜಿದಾರರ ಆಕ್ಷೇಪ.

ಅರ್ಜಿಯಲ್ಲಿ ಕೇಂದ್ರ ಚುನಾವಣಾ ಆಯುಕ್ತರು, ಬೆಂಗಳೂರು ನಗರ ಜಿಲ್ಲೆಯ ವಿಧಾನ ಪರಿಷತ್ ಚುನಾವಣಾಧಿಕಾರಿಯೂ ಸೇರಿದಂತೆ ಒಟ್ಟು 15 ನಾಮನಿರ್ದೇಶಿತ ಸದಸ್ಯರನ್ನು ಪ್ರತಿವಾದಿಗಳನ್ನಾಗಿ ಮಾಡಲಾಗಿದೆ.

ನಾಮ ನಿರ್ದೇಶಿತ ಸದಸ್ಯರು: ಎಂ.ಜನಾರ್ದನ, ಕೆ.ಮಂಜುನಾಥ, ಕೆ.ಸುಧಾ ಜಾಧವ್, ಆರ್.ಜಗದೀಶ್, ವಿ.ನಿತಿನ್, ಕೆ.ಪ್ರಭಾಕರ್, ಕೆ.ನಟರಾಜ್, ಎಂ.ವೆಂಕಟೇಶ ರೆಡ್ಡಿ, ನರಸಿಂಹ ಸ್ವಾಮಿ, ಎ.ಎಂ.ರಾಜಪ್ಪ, ರಘು, ಪ್ರಕಾಶ್, ಬಿ.ಆರ್. ಪ್ರಸನ್ನಕುಮಾರ್, ಬಿ.ಎಂ.ಪ್ರವೀಣ್ ಕುಮಾರ್ ಹಾಗೂ ಕೆ.ಎಸ್. ಪ್ರದೀಪ್. ಅರ್ಜಿದಾರರ ಪರ ಬಿ.ಎನ್.ಸುರೇಶ್ ಬಾಬು ವಕಾಲತ್ತು ವಹಿಸಿದ್ದಾರೆ.

ಆಣೆ ಪ್ರಮಾಣ: ಕ್ರಮಕ್ಕೆ ಬಿಕೆಸಿ ಆಗ್ರಹ



ಬಿ.ಕೆ ಚಂದ್ರಶೇಖರ್

ಬೆಂಗಳೂರು: ವಿಧಾನ ಪರಿಷತ್ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಗೆ ಮತ ಹಾಕುವಂತೆ ಆಣೆ ಪ್ರಮಾಣ ಮಾಡಿಸಿರುವ ಕ್ರಮವು ಸಂವಿಧಾನ ವಿರೋಧಿಯಾಗಿದೆ ಎಂದು ಕೆಪಿಸಿಸಿ ವಕ್ತಾರ ಪ್ರೊ.ಬಿ.ಕೆ. ಚಂದ್ರಶೇಖರ್ ಹೇಳಿದ್ದಾರೆ.

ರಾಜ್ಯ ಚುನಾವಣಾ ಆಯೋಗ ಅವಿಭಜಿತ ಕೋಲಾರ ಜಿಲ್ಲಾ ವಿಧಾನ ಪರಿಷತ್ ಕ್ಷೇತ್ರದ ಚುನಾವಣೆಯನ್ನು ತಡೆಹಿಡಿಯಬೇಕು. ಇಲ್ಲದಿದ್ದರೆ ತನ್ನ ಜವಾಬ್ದಾರಿಯಿಂದ ಆಯೋಗವು ನುಣುಚಿಕೊಂಡಂತಾಗುತ್ತದೆ ಎಂದು ಹೇಳಿದ್ದಾರೆ.

'ಆಣೆ ಪ್ರಮಾಣ ಮಾಡಿಸಿಕೊಳ್ಳುವ ಈ ಮಹಾನ್ ವ್ಯಕ್ತಿಗಳನ್ನು ಮೇಲ್ಮನೆಗೆ ಆಯ್ಕೆ ಮಾಡಿದರೆ ಸದನದ ಘನತೆ ಕಾಪಾಡಲು ಸಾಧ್ಯವೇ? ಇದರಿಂದ, ವಿಧಾನ ಪರಿಷತ್‌ನ ಮಾನ ಮರ್ಯಾದೆ ಹೋಗುತ್ತದೆ' ಎಂದೂ ಅವರು ಕಳವಳ ವ್ಯಕ್ತಪಡಿಸಿದ್ದಾರೆ. ಅವಿಭಜಿತ ಕೋಲಾರ ಜಿಲ್ಲಾ ವಿಧಾನ ಪರಿಷತ್ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಡಾ. ವೇಣುಗೋಪಾಲ್ ಅವರಿಗೆ ಮತ ನೀಡುವುದಾಗಿ ದೇವರ ಭಾವಚಿತ್ರಗಳ ಮೇಲೆ ಕೈಯಿಟ್ಟು ಮತದಾರರಿಂದ ಆಣೆ ಪ್ರಮಾಣ ಮಾಡಿಸಿದ್ದಾರೆ ಎನ್ನಲಾದ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ಸಿ.ಎಂ ಸ್ಥಾನಕ್ಕೆ ಕಾಂಗ್ರೆಸ್‌ನಲ್ಲಿ ಜಗಳ: ನಳಿನ್

ಮಂಗಳೂರು: 'ರಾಜ್ಯದಲ್ಲಿ ಮುಂದಿನ ಬಾರಿ ಬಿಜೆಪಿ 150 ಸ್ಥಾನ ಗೆದ್ದು ಅಧಿಕಾರ ಪಡೆಯುವುದು ನಿಶ್ಚಿತ. ಆದರೆ, ಕಾಂಗ್ರೆಸ್‌ನಲ್ಲಿ ಈಗಲೇ ಮುಖ್ಯಮಂತ್ರಿ ಸ್ಥಾನಕ್ಕೆ ಜಗಳ ಶುರುವಾಗಿದೆ. ನಾಲ್ಕು ಮಂದಿ ಮುಖ್ಯಮಂತ್ರಿಯಾಗುವ ಕನಸು ಕಾಣುತ್ತಿದ್ದಾರೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಹೇಳಿದರು.

'ಮುಂದಿನ ಚುನಾವಣೆಯಲ್ಲಿ ಸಿದ್ದರಾಮಯ್ಯ ಅವರನ್ನು ಡಿ.ಕೆ.ಶಿಯವರು ಮಲ್ಲಿಕಾರ್ಜುನ ಖರ್ಗೆ ಅವರನ್ನು ಡಾ. ಪರಮೇಶ್ವರ್ ಸೋಲಿಸಲಿದ್ದಾರೆ' ಎಂದರು.

'ಪರಿಷತ್ ಚುನಾವಣೆಯಲ್ಲಿ ಬಿಜೆಪಿ 15ಕ್ಕಿಂತ ಅಧಿಕ ಸ್ಥಾನ ಗೆಲ್ಲುವ ವಿಶ್ವಾಸವಿದೆ. ಯಾವುದೇ ಪಕ್ಷದ ಜತೆ ಒಳ ಒಪ್ಪಂದವಿಲ್ಲ. ಕಾಂಗ್ರೆಸ್ ಸೋಲಿನ ಭೀತಿಯಲ್ಲಿದೆ. ಒಳ ಒಪ್ಪಂದದ ರಾಜಕೀಯ ಮಾಡುತ್ತಿದೆ' ಎಂದರು.



ಬ್ಯಾಟರಾಯನಪುರ ವ್ಯಾಪ್ತಿಯ ರಾಮಚಂದ್ರಪುರದ ರಘುರಾಮ್ ಬಡಾವಣೆಯ ಓಂಶಕ್ತಿ ದೇವಸ್ಥಾನದಲ್ಲಿ ನೂತನವಾಗಿ ಪ್ರತಿಷ್ಠಾಪನೆಗೊಂಡ ದೇವಿಯ ಶಿಲಾವಿಗ್ರಹಕ್ಕೆ ಶಾಸಕ ಕೃಷ್ಣ ಬೈರೇಗೌಡ ಕುಂಭಾಭಿಷೇಕ ನೆರವೇರಿಸಿದರು. ಸ್ಥಳೀಯ ಮುಖಂಡ ಆರ್.ಎಂ.ಶ್ರೀನಿವಾಸ್ ಇದ್ದಾರೆ

₹515.16 ಕೋಟಿ ವಿದ್ಯುತ್ ಶುಲ್ಕ ಬಾಕಿ ಪಾವತಿಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೀದಿ ದೀಪಗಳ ಮತ್ತು ಕುಡಿಯುವ ನೀರಿನ ಸ್ಥಾವರಗಳ ವಿದ್ಯುತ್ ಶುಲ್ಕದ ಬಾಕಿ ಮೊತ್ತ ₹515.16 ಕೋಟಿ ಪಾವತಿಸುವಂತೆ ಬಿಬಿಎಂಪಿಗೆ ನಗರಾಭಿವೃದ್ಧಿ ಇಲಾಖೆ ಸೂಚನೆ ನೀಡಿದೆ.

ನಗರದಲ್ಲಿ 11,569 ಕುಡಿಯುವ ನೀರಿನ ಸ್ಥಾವರಗಳಿದ್ದು, ಅವುಗಳ ತಿಂಗಳ ವಿದ್ಯುತ್ ಶುಲ್ಕಕ್ಕೆ ಸಂಬಂಧಿಸಿ ₹402.36 ಕೋಟಿ ಅಸಲು ಮತ್ತು ₹91.08 ಕೋಟಿ ಬಡ್ಡಿ ಸೇರಿ ₹ 493.44 ಕೋಟಿ ವಿದ್ಯುತ್ ಶುಲ್ಕ ಬಾಕಿ ಇದೆ. ಇದರಲ್ಲಿ ಬಿಬಿಎಂಪಿಯಿಂದ ಜಲಮಂಡಳಿಗೆ ಜಲವಿದ್ಯುತ್ ಸ್ಥಾವರಗಳನ್ನು ವರ್ಗಾಯಿಸುವುದಕ್ಕೂ ಮುನ್ನ ₹204.59 ಕೋಟಿ ವಿದ್ಯುತ್ ಶುಲ್ಕ ಬಾಕಿ ಉಳಿಸಿಕೊಂಡಿತ್ತು. ಈ ಮೊತ್ತವನ್ನೂ ಬಿಬಿಎಂಪಿಯೇ ಪಾವತಿಸಬೇಕು ಎಂದು ಮುಖ್ಯ ಕಾರ್ಯದರ್ಶಿಯವರು 2020ರ ಜು17ರಂದು ನಡೆದಿದ್ದ ಸಭೆಯಲ್ಲಿ ಸೂಚಿಸಿದ್ದರು. 21,112 ಬೀದಿ ದೀಪ ಸ್ಥಾವರಗಳ ₹21.72 ಕೋಟಿ ಬಾಕಿ ಸೇರಿ ಒಟ್ಟು ₹ 515.16 ಕೋಟಿ ಶುಲ್ಕವನ್ನು ಬಿಬಿಎಂಪಿ ಬಾಕಿ ಉಳಿಸಿಕೊಂಡಿದೆ ಎಂದು ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅವರು ಬಿಬಿಎಂಪು ಮುಖ್ಯ ಆಯುಕ್ತರಿಗೆ ಬರೆದ ಪತ್ರದಲ್ಲಿ ವಿವರಿಸಿದ್ದಾರೆ

'ಬಿಬಿಎಂಪಿ ಮತ್ತು ಜಲಮಂಡಳಿಯ ರಾಜ್ಯ ಹಣಕಾಸು ಆಯೋಗದ (ಎಸ್‌ಎಫ್‌ಸಿ) ಅನುದಾನ ಮತ್ತು ಕೇಂದ್ರ ಹಣಕಾಸು ಆಯೋಗದ (ಸಿಎಫ್‌ಸಿ) ಅನುದಾನ ಅನುದಾನದಲ್ಲಿ ಶೇ 25ರಷ್ಟು ಕಡಿತ ಮಾಡಿಕೊಂಡು ಬೆಸ್ಕಾಂಗೆ ಬಿಡುಗಡೆ ಮಾಡುವಂತೆ ಕೋರಿದ್ದ ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆ ವಾಪಸ್ ಕಳುಹಿಸಿದೆ. ಆದ್ದರಿಂದ ಬಾಕಿ ಮೊತ್ತವನ್ನು ಕೂಡಲೇ ಪಾವತಿಸಬೇಕು' ಎಂದು ಸೂಚಿಸಿದ್ದಾರೆ.





ಬಸವೇಶ್ವರನಗರದ ಜಂಕ್ಷನ್ ಬಳಿ ನಿರ್ಮಿಸುತ್ತಿರುವ ಮೇಲ್ಸೇತುವೆ ಕಾಮಗಾರಿ ಸ್ಥಗಿತಗೊಂಡಿರುವುದು (ಎಡ ಚಿತ್ರ), 72ನೇ ಅಡ್ಡರಸ್ತೆ ಬಳಿ ಮೇಲ್ಸೇತುವೆ ನಿರ್ಮಾಣ ಕಾಮಗಾರಿ ನಡೆಯುತ್ತಿರುವುದು –ಪ್ರಜಾವಾಣಿ ಚಿತ್ರಗಳು/ಎಂ.ಎಸ್. ಮಂಜುನಾಥ್

ಪಶ್ಚಿಮ ಕಾರ್ಡ್ ರಸ್ತೆ: ಮೂರು ಬಾರಿ ಪರಿಷ್ಕರಣೆಯಾದ ಯೋಜನೆ; ಕುಂಟುತ್ತಾ ಸಾಗಿದೆ ಕೆಲಸ

5 ವರ್ಷಗಳ ಬಳಿಕವೂ ಪೂರ್ಣಗೊಳ್ಳದ ಕಾಮಗಾರಿ

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ಪಶ್ಚಿಮ ಕಾರ್ಡ್ ರಸ್ತೆಯಲ್ಲಿ ಮೇಲುಸೇತುವೆಗಳ ನಿರ್ಮಾಣ ಯೋಜನೆ ಪದೇ ಪದೇ ಬದಲಾಗುತ್ತಲೇ ಇದೆ. ಮುಂದಾಲೋಚನೆ ಇಲ್ಲದೆಯೇ ಕಾಮಗಾರಿ ಆರಂಭಿಸಿದ್ದರಿಂದ ವಾಹನ ಸವಾರರು ಐದು ವರ್ಷಗಳಿಂದ ಸಂಚಾರ ಕಿರಿಕಿರಿ ಎದುರಿಸುತ್ತಿದ್ದಾರೆ.

ದೀಪಾಂಜಲಿನಗರ ಮೆಟ್ರೊ ನಿಲ್ದಾಣದಿಂದ ಆರಂಭವಾಗಿ ವಿಜಯನಗರ, ಹೊಸಹಳ್ಳಿ, ಬಸವೇಶ್ವರನಗರ, ರಾಜಾಜಿನಗರ, 'ಇಸ್ಕಾನ್' ದೇವಸ್ಥಾನದ ಮುಂಭಾಗದಿಂದ ಹಾದು ಸ್ಯಾಂಡಲ್ ಸೋಪ್ ಫ್ಯಾಕ್ಟರಿ ತನಕ ಈ ರಸ್ತೆ ಇದೆ. ರಾಜಾಜಿನಗರದಿಂದ ಮಾಗಡಿ ರಸ್ತೆ ಟೋಲ್‌ಗೇಟ್ ಜಂಕ್ಷನ್ ತನಕ ನಿಲುಗಡೆ ರಹಿತ ಎತ್ತರಿಸಿದ (ಎಲಿವೇಟೆಡ್) ರಸ್ತೆ ನಿರ್ಮಿಸುವ ಯೋಜನೆಗೆ 2015ರಲ್ಲಿ ಅನುಮೋದನೆ ನೀಡಲಾಯಿತು. 2016ರಲ್ಲಿ ಕಾಮಗಾರಿ ಆರಂಭವಾಯಿತು.

ಮಂಜುನಾಥನಗರದ ಬಳಿ ಮೇಲುಸೇತುವೆ, ಶಿವನಗರ ಜಂಕ್ಷನ್ ವೃತ್ತದಲ್ಲಿ ಏಕಮುಖ ಮೇಲುಸೇತುವೆ ನಿರ್ಮಾಣ ಮಾಡಲು ಯೋಜನೆ ರೂಪಿಸಲಾಗಿತ್ತು. ಯೋಜನೆಯಲ್ಲಿ ಯಾವುದೇ ಬದಲಾವಣೆ ಆಗದಿದ್ದರಿಂದ ಮಂಜುನಾಥನಗರ ಮೇಲ್ಸೇತುವೆ ಕಾಮಗಾರಿ ಮೊದಲಿಗೆ ಪೂರ್ಣಗೊಂಡಿತು. ಶಿವನಗರದಲ್ಲಿ ಕೆಳ ಸೇತುವೆ ಬದಲಿಗೆ ಬಳಿ ಕೆಳಸೇತುವೆ ಹಾಗೂ ಬಸವೇಶ್ವರ ವೃತ್ತದಲ್ಲಿ ಏಕಮುಖ ಮೇಲುಸೇತುವೆ ನಿರ್ಮಾಣ ಮಾಡಲು ಯೋಜನೆ ರೂಪಿಸಲಾಗಿತ್ತು. ಯೋಜನೆಯಲ್ಲಿ ಯಾವುದೇ ಬದಲಾವಣೆ ಆಗದಿದ್ದರಿಂದ ಮಂಜುನಾಥನಗರ ಮೇಲ್ಸೇತುವೆ ಕಾಮಗಾರಿ ಮೊದಲಿಗೆ ಪೂರ್ಣಗೊಂಡಿತು.

ಮೇಲುಸೇತುವೆ ನಿರ್ಮಿಸಲು ಯೋಜನೆ ಬದಲಿಸಲಾಯಿತು. ಬಹುತೇಕ ಐದು ವರ್ಷಗಳಲ್ಲಿ ಕಾಮಗಾರಿ ಪೂರ್ಣಗೊಳಿಸಲಾಯಿತು.

ಇನ್ನೊಂದೆಡೆ ಬಸವೇಶ್ವರನಗರ ಮುಖ್ಯ ರಸ್ತೆಯಿಂದ ಕಾರ್ಡ್ ರಸ್ತೆಗೆ ಸಂಪರ್ಕ ಕಲ್ಪಿಸುವ ಜಂಕ್ಷನ್‌ನಲ್ಲಿ ಏಕಮುಖ ಮೇಲುಸೇತುವೆ ಕಾಮಗಾರಿ ಇನ್ನೂ ಪೂರ್ಣಗೊಂಡಿಲ್ಲ. ಐದು ವರ್ಷಗಳಿಂದ ಕಾಮಗಾರಿ ಕುಂಟುತ್ತಲೇ ಸಾಗಿದೆ. ಕಾಮಗಾರಿಗೆ ಆಗಿದ್ದ ಬಿಟ್ಟಿರುವ ಜಾಗದಲ್ಲಿ ಗಿಡಗಳು ಬೆಳೆದು ನಿಂತಿವೆ. ಇದರ ನಡುವೆ ಈಗ ಇನ್ನೊಂದು ಬದಿಗೂ ಮೇಲುಸೇತುವೆ ನಿರ್ಮಿಸಲು ಸರ್ಕಾರಕ್ಕೆ ಬಿಬಿಎಂಪಿ ಪ್ರಸ್ತಾವನೆ ಸಲ್ಲಿಸಿದೆ.

'5 ವರ್ಷಗಳಿಂದ ಒಂದು ಬದಿಯ ಮೇಲುಸೇತುವೆ ನಿರ್ಮಾಣವನ್ನು ಗುತ್ತಿಗೆದಾರರು ಪೂರ್ಣಗೊಳಿಸಿಲ್ಲ. ಇನ್ನೊಂದು ಬದಿಯ ಸೇತುವೆಗೆ ಅನುಮೋದನೆ ಪಡೆದು ಕಾಮಗಾರಿ ಪೂರ್ಣಗೊಳಿಸಲು ಇನ್ನೂ ಐದು ವರ್ಷ ಕಾಯಬೇಕಾಗಬಹುದು' ಎಂದು ಸ್ಥಳೀಯರು ಅಸಮಾಧಾನ ವ್ಯಕ್ತಪಡಿಸುತ್ತಾರೆ.

'ರಾಜಾಜಿನಗರ 72ನೇ ಅಡ್ಡರಸ್ತೆ ಮೇಲುಸೇತುವೆ ಕಾಮಗಾರಿಯನ್ನೂ ಈ ಯೋಜನೆ ಜೊತೆ ಸೇರ್ಪಡೆ ಮಾಡಿಕೊಳ್ಳಲಾಗಿದ್ದು, ಕಾಮಗಾರಿ ಕೂಡ ಆಮೆಗತಿಯಲ್ಲಿ ನಡೆಯುತ್ತಿದೆ. ಸ್ಥಳದಲ್ಲಿನ ಲಕ್ಷಣ ಗಮನಿಸಿದರೆ ಕಾಮಗಾರಿ ಬೇಗ ಮುಗಿಯುವ ಲಕ್ಷಣಗಳಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

'ಮಾಗಡಿ ರಸ್ತೆಯಲ್ಲಿ ಟೋಲ್‌ಗೇಟ್ ಜಂಕ್ಷನ್ ದಾಟದ ಕೂಡಲೇ ಕಾರ್ಡ್ ರಸ್ತೆಯಲ್ಲಿ ಸಂಚಾರಕ್ಕೆ ಅವಕಾಶ ಇಲ್ಲ. ಕಿರಿದಾದ ಸರ್ವೀಸ್ ರಸ್ತೆಯಲ್ಲೇ ಸಂಚರಿಸಬೇಕಾದ ಅನಿವಾರ್ಯತೆ ಇದೆ. ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು ಸೇರಿಕೊಂಡು ಜನರನ್ನು ಗೋಳಾಡಿಸುತ್ತಿದ್ದಾರೆ' ಎಂದು ಬಸವೇಶ್ವರನಗರ ಜನಾರ್ಧನ್ ಹೇಳಿದರು.

'ವಿಳಂಬಕ್ಕೆ ಹೊಣೆ ಯಾರು'

'ಸಂಚಾರ ಸಮಸ್ಯೆ ಬಗ್ಗೆ ಅಧ್ಯಯನ ನಡೆಸದ ಸಮಗ್ರ ಯೋಜನಾ ವರದಿ(ಡಿಪಿಆರ್) ರೂಪಿಸಿದ್ದರಿಂದ ಪದೇ ಪದೇ ಯೋಜನೆ ಬದಲಾಗಿದೆ' ಎನ್ನುತ್ತಾರೆ ತಜ್ಞರು. ಬಸವೇಶ್ವರನಗರ ಜಂಕ್ಷನ್‌ನಲ್ಲಿ ಒಂದು ಬದಿಯ ಮೇಲ್ಸೇತುವೆ ಕಾಮಗಾರಿ ಯಾವುದೇ ಅಡ್ಡಿ ಇರಲಿಲ್ಲ. ಆದರೂ, ಐದು ವರ್ಷಗಳಿಂದ ಕಾಮಗಾರಿ ಪೂರ್ಣಗೊಂಡಿಲ್ಲ. ಎರಡು ವರ್ಷದ ಗುರಿಯೊಂದಿಗೆ ಗುತ್ತಿಗೆದಾರರು ಕಾಮಗಾರಿ ಆರಂಭಿಸಿದ್ದಾರೆ. ವಿಳಂಬಕ್ಕೆ ಯಾರು ಹೊಣೆ ಎಂಬುದನ್ನು ತಿಳಿಸಲಿ' ಎಂದು ರಾಜಾಜಿನಗರದ ಪ್ರವೀಣ್ ಅಸಮಾಧಾನ ವ್ಯಕ್ತಪಡಿಸಿದರು.

'ಮುಂದಾಲೋಚನೆ ಇಲ್ಲದೆ ಅಧಿಕಾರಿಗಳು ರೂಪಿಸಿದ ಯೋಜನೆ, ತಮ್ಮ ಅನುಕೂಲಕ್ಕೆ ತಕ್ಕಂತೆ ಜನಪ್ರತಿನಿಧಿಗಳು ಕೈಗೊಳ್ಳುವ ನಿರ್ಧಾರ, ನಿಗದಿತ ಅವಧಿಯಲ್ಲಿ ಕಾಮಗಾರಿ ಮುಗಿಸದ ಗುತ್ತಿಗೆದಾರರ ಬೇಜವಾಬ್ದಾರಿಯಿಂದ ವಾಹನ ಸವಾರರು ತೊಂದರೆ ಅನುಭವಿಸಬೇಕಾಗಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ಜೂನ್ ವೇಳೆಗೆ ಕಾಮಗಾರಿ ಪೂರ್ಣ'

'ಸೇತುವೆಗಳನ್ನು ಒಂದಕ್ಕೊಂದು ಜೋಡಣೆ ಮಾಡಬೇಕಿರುವ ಕಾರಣ ಬಸವೇಶ್ವರನಗರ ಜಂಕ್ಷನ್ ಕಾಮಗಾರಿ ವಿಳಂಬವಾಗಿದೆ. ಮುಂದಿನ ಜೂನ್ ವೇಳೆಗೆ ಎಲ್ಲಾ ಕಾಮಗಾರಿಗಳೂ ಪೂರ್ಣಗೊಳ್ಳಲಿವೆ' ಎಂದು ಶಾಸಕ ಎಸ್. ಸುರೇಶ್‌ಕುಮಾರ್ ತಿಳಿಸಿದರು.

'ಮೂಲ ಯೋಜನೆಯ ಜೊತೆಗೆ 72ನೇ ಕ್ರಾಸ್‌ನಲ್ಲಿ ಮೇಲ್ಸೇತುವೆ, ಬಸವೇಶ್ವರನಗರ ಜಂಕ್ಷನ್‌ನಲ್ಲಿ ಮತ್ತೊಂದು ಮೇಲ್ಸೇತುವೆ ಹೊಸದಾಗಿ ಸೇರ್ಪಡೆಗೊಳಿಸಲಾಗಿದೆ. ಹಾಗಾಗಿ, ಕಾಮಗಾರಿ ವಿಳಂಬವಾಗಿದೆ. ಡಿಪಿಆರ್‌ನಲ್ಲೇ ಈ ಕಾಮಗಾರಿಗಳನ್ನು ಒಳಗೊಂಡಿದ್ದರೆ ಇಷ್ಟು ವಿಳಂಬ ಆಗುತ್ತಿರಲಿಲ್ಲ ಎಂಬುದು ಸತ್ಯ' ಎಂದರು.

ಅಂಕಿ–ಅಂಶ

8 ಕಿ.ಮೀ ಕಾರ್ಡ್ ರಸ್ತೆಯ ಉದ್ದ

2 ಕಾಮಗಾರಿ ಪೂರ್ಣಗೊಂಡ ಮೇಲ್ಸೇತುವೆಗಳು

2 ಕಾಮಗಾರಿ ಪೂರ್ಣಗೊಳ್ಳಬೇಕಿರುವ ಮೇಲ್ಸೇತುವೆಗಳು

₹169.4 ಕೋಟಿ ಯೋಜನೆಯ ಒಟ್ಟು ಮೊತ್ತ

ವರುಣ್ ಸಿಂಗ್ ಆರೋಗ್ಯ ವಿಚಾರಿಸಿದ ಬೊಮ್ಮಾಯಿ

ಬೆಂಗಳೂರು: ತಮಿಳುನಾಡಿನ ಕೂನೂರು ಬಳಿ ಬುಧವಾರ ಸಂಭವಿಸಿದ ಹೆಲಿಕಾಪ್ಟರ್ ಅಪಘಾತದಲ್ಲಿ ತೀವ್ರವಾಗಿ ಗಾಯಗೊಂಡು ಹೆಬ್ಬಾಳ ಚಿಕಿತ್ಸೆಗಾಗಿ ನಗರದ ಕಮಾಂಡೋ ಆಸ್ಪತ್ರೆಗೆ ಗುರುವಾರ ದಾಖಲಾಗಿರುವ ಕ್ಯಾಪ್ಟನ್ ವರುಣ್‌ಸಿಂಗ್ ಅವರ ಆರೋಗ್ಯವನ್ನು ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಮತ್ತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿಚಾರಿಸಿದರು.

ಈ ಅಪಘಾತದಲ್ಲಿ ರಕ್ಷಣಾಪಡೆಗಳ ಮುಖ್ಯಸ್ಥ ಬಿಪಿನ್ ರಾವತ್ ಸೇರಿ ಸೇನೆಯ ಹಿರಿಯ ಅಧಿಕಾರಿಗಳು ಮೃತಪಟ್ಟಿದ್ದಾರೆ. ಈ ಅಪಘಾತದಲ್ಲಿ ವರುಣ್‌ಸಿಂಗ್ ಮಾತ್ರ ಬದುಕುಳಿದಿದ್ದಾರೆ. ಆಸ್ಪತ್ರೆಗೆ ಭೇಟಿ ನೀಡಿದ ಗೆಹಲೋತ್ ಮತ್ತು ಬೊಮ್ಮಾಯಿ ಅವರು ವೈದ್ಯರ ಬಳಿ ವರುಣ್‌ಸಿಂಗ್ ಅವರ ಸ್ಥಿತಿಯನ್ನು ವಿಚಾರಿಸಿದರು ಎಂದು ಮೂಲಗಳು ಹೇಳಿವೆ.

ಹರ್ಜಿಂದರ್ ಸಿಂಗ್ ಕಾರ್ಕಳದ ಅಳಿಯ

ಪ್ರಜಾವಾಣಿ ವಾರ್ತೆ



ಹರ್ಜಿಂದರ್ ಸಿಂಗ್

ಉಡುಪಿ: ತಮಿಳುನಾಡಿನ ಕೂನೂರಿನಲ್ಲಿ ಸಂಭವಿಸಿದ ಸೇನಾ ಹೆಲಿಕಾಪ್ಟರ್ ದುರಂತದಲ್ಲಿ ಮೃತಪಟ್ಟ ಲೆಫ್ಟಿನೆಂಟ್ ಕರ್ನಲ್ ಹರ್ಜಿಂದರ್ ಸಿಂಗ್ ಅವರು ಉಡುಪಿ ಜಿಲ್ಲೆಯ ಕಾರ್ಕಳ ತಾಲ್ಲೂಕಿನ ಅಳಿಯ.

ಕಾರ್ಕಳದ ಡಿ.ಫಿಲಿಪ್ಸ್ ಮಿನೇಜಸ್ ಹಾಗೂ ಮೇರಿ ಮಿನೇಜಸ್ ಅವರ ಪುತ್ರಿ ಪ್ರಫುಲ್ಲಾ ಮಿನೇಜಸ್ ಅವರನ್ನು ಹರ್ಜಿಂದರ್ ಸಿಂಗ್ 15 ವರ್ಷಗಳ ಹಿಂದೆ ವಿವಾಹವಾಗಿದ್ದರು. ದೆಹಲಿಯಲ್ಲಿ ನೆಲೆಸಿದ್ದ ಹರ್ಜಿಂದರ್ ಸಿಂಗ್ ಹಾಗೂ ಪ್ರಫುಲ್ಲಾ ಮೂರ್ನಾಲ್ಕು ವರ್ಷಗಳ ಹಿಂದೆ ಕಾರ್ಕಳಕ್ಕೆ ಭೇಟಿ ನೀಡಿದ್ದರು ಎಂದು ಭಾವ ವಲೇರಿಯನ್ ಮಾಹಿತಿ ನೀಡಿದರು.

ಸೌಮ್ಯ ಸ್ವಭಾವದ ಹರ್ಜಿಂದರ್ ಸಿಂಗ್ ಎಲ್ಲರೊಟ್ಟಿಗೆ ಆತ್ಮೀಯವಾಗಿ ಬೆರೆಯುತ್ತಿದ್ದರು. ಬುಧವಾರ ಸಂಜೆ ಅವರು ಮೃತಪಟ್ಟ ಸುದ್ದಿ ಖಚಿತವಾಯಿತು. ಇಡೀ ಕುಟುಂಬ ದುಃಖದಲ್ಲಿ ಮುಳುಗಿದೆ ಎಂದು ವಲೇರಿಯನ್ ತಿಳಿಸಿದರು.

ತನಿಖೆಗೆ ಏರ್‌ಮಾರ್ಷಲ್ ನೇತೃತ್ವ

ಒಂದನೇ ಪುಟದಿಂದ

ದುರ್ಘಟನೆಯಲ್ಲಿ ಬದುಕುಳಿದ ಏಕೈಕ ವ್ಯಕ್ತಿ ಗ್ರೂಪ್ ಕ್ಯಾಪ್ಟನ್ ವರುಣ್ ಸಿಂಗ್ ಅವರ ಸ್ಥಿತಿ ಗಂಭೀರವಾಗಿದೆ. ಅವರು ಜೀವ ರಕ್ಷಕ ವ್ಯವಸ್ಥೆಯಲ್ಲಿ ಇದ್ದಾರೆ. ಪತನದ ಸ್ಥಳದಿಂದ ಅರು ಕಿ.ಮೀ. ದೂರದ ವೆಲ್ಲಿಂಗ್ಟನ್‌ನಲ್ಲಿ ಇರುವ ಸೇನಾ ಆಸ್ಪತ್ರೆಯಲ್ಲಿ ಅವರಿಗೆ ಚಿಕಿತ್ಸೆ ನೀಡಲಾಗುತ್ತಿತ್ತು. ಹೆಚ್ಚಿನ ಚಿಕಿತ್ಸೆಗಾಗಿ ಅವರನ್ನು ಬೆಂಗಳೂರು ಕಮಾಂಡ್ ಆಸ್ಪತ್ರೆಗೆ ಗುರುವಾರ ಸ್ಥಳಾಂತರಿಸಲಾಗಿದೆ.

ದೂರು ದಾಖಲು: ತಮಿಳುನಾಡು ಪೊಲೀಸರು ಹೆಲಿಕಾಪ್ಟರ್ ದುರಂತಕ್ಕೆ ಸಂಬಂಧಿಸಿ ದೂರು ದಾಖಲಿಸಿಕೊಂಡಿದ್ದಾರೆ. ತನಿಖೆಯನ್ನೂ ಆರಂಭಿಸಿದ್ದಾರೆ. ತನಿಖೆಗಾಗಿ ಡ್ರೋನ್‌ಗಳನ್ನೂ ಬಳಸಲಾಗುತ್ತಿದೆ.

ಗೌರವ ಅರ್ಪಣೆ

ಸೇನೆಯ ಅಲಂಕೃತ ವಾಹನಗಳಲ್ಲಿ ಮೃತ ದೇಹಗಳನ್ನು ವೆಲ್ಲಿಂಗ್ಟನ್‌ನಲ್ಲಿರುವ ಮದ್ರಾಸ್ ರೆಜಿಮೆಂಟ್ ಕೇಂದ್ರಕ್ಕೆ ಒಯ್ಯಲಾಯಿತು. ಅಲ್ಲಿ ಅಂತಿಮ ನಮನ ಸಲ್ಲಿಸಲಾಯಿತು.

ತೆಲಂಗಾಣ ರಾಜ್ಯಪಾಲೆ ತಮಿಳಿಸಾಯಿ ಸೌಂದರರಾಜನ್, ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್, ತಮಿಳುನಾಡಿನ ಕೆಲ ಸಚಿವರು, ಸೇನೆಯ ಹಿರಿಯ ಅಧಿಕಾರಿಗಳು, ಹಲವು ನಿವೃತ್ತ ಅಧಿಕಾರಿಗಳು ಹೂಗುಚ್ಛ ಇರಿಸಿ ಗೌರವ ಸಲ್ಲಿಸಿದರು. ಬಳಿಕ, ಮೃತ ದೇಹಗಳನ್ನು ರಸ್ತೆ ಮೂಲಕ ಕೊಯಮತ್ತೂರಿಗೆ ತರಲಾಯಿತು. ಅಲ್ಲಿಂದ, ವಾಯುಪಡೆಯ ವಿಶೇಷ ವಿಮಾನದಲ್ಲಿ ದೆಹಲಿಗೆ ಒಯ್ಯಲಾಯಿತು.

ಸಂಸತ್ತಿನ ಉಭಯ ಸದನಗಳಲ್ಲಿ ಮೌನ ಆಚರಿಸಿ, ಮೃತರಿಗೆ ಗೌರವ ಸಲ್ಲಿಸಲಾಗಿದೆ. ಲೋಕಸಭೆಯ ಸ್ಪೀಕರ್ ಓಂ ಬಿರ್ಲಾ ಅವರು ರಾವತ್ ಮತ್ತು ಇತರರ ಅಕಾಲಿಕ ಮರಣಕ್ಕೆ ದುಃಖ ವ್ಯಕ್ತಪಡಿಸಿದರು. ಕುಶಲ ಯೋಧ, ಅಸಾಮಾನ್ಯ ಕಾರ್ಯತಂತ್ರಗಾರ ಮತ್ತು ಅನುಭವಿ ನಾಯಕನನ್ನು ದೇಶವು ಕಳೆದುಕೊಂಡಿದೆ ಎಂದರು. ರಾಜ್ಯಸಭೆಯ ಉಪಸಭಾಪತಿ ಹರಿವಂಶ್ ಅವರು ರಾವತ್ ಅವರ ನಾಲ್ಕು ದಶಕಗಳ ಸಾಧನೆಯನ್ನು ಬಣ್ಣಿಸಿದರು.

ಹಲ್ಲೆ ಆರೋಪ: ಮಾಜಿ ಶಾಸಕ ಶಿವಶಂಕರ್ ವಿರುದ್ಧ ಪ್ರಕರಣ

ಪ್ರಜಾವಾಣಿ ವಾರ್ತೆ

ಹರಿಹರ: ಮಾಜಿ ಶಾಸಕ ಎಚ್.ಎಸ್. ಶಿವಶಂಕರ್ ವಿರುದ್ಧ ಹಲ್ಲೆ, ಜೀವ ಬೆದರಿಕೆ ಹಾಕಿದ ಆರೋಪ ಸಂಬಂಧ ಇಲ್ಲಿನ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ತಾಲ್ಲೂಕಿನ ದೀಟೂರು ಗ್ರಾಮದ ನಿರಂಜನ್ ಕುಮಾರ್ ಅವರು ಗುರುವಾರ ಮಾಜಿ ಶಾಸಕರ ವಿರುದ್ಧ ದೂರು ದಾಖಲಿಸಿದ್ದಾರೆ.

'ರಾಜನಹಳ್ಳಿ ವಾಲ್ಮೀಕಿ ಮಠದ ಸಮುದಾಯ ಭವನದಲ್ಲಿ ಬುಧವಾರ ನಡೆದ ಮದುವೆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದೆ. ಆಗ ನನ್ನ ಮೇಲೆ ಏಕಾಏಕಿ ಮುಗಿಬಿದ್ದ ಎಚ್.ಎಸ್. ಶಿವಶಂಕರ್ ಎಳೆದಾಡಿ, ಕೈಯಿಂದ ಕಿವಿ ಮತ್ತು ಎದೆಗೆ ಹೊಡೆದು, ನಿನ್ನನ್ನು ನೋಡಿಕೊಳ್ಳುತ್ತೇನೆ ಎಂದು ಜೀವ ಬೆದರಿಕೆ ಹಾಕಿದರು' ಎಂದು ನಿರಂಜನ್ ದೂರಿನಲ್ಲಿ ತಿಳಿಸಿದ್ದಾರೆ.

'ಲೈಂಗಿಕ ಆಟಿಕೆ' ವಿಲೇವಾರಿ: ಕೋರ್ಟ್ ಮೊರೆ

ವಿದೇಶಿ ಜಾಲತಾಣಗಳಲ್ಲಿ ಖರೀದಿ • ನಿಷೇಧವಿದ್ದರೂ ಬರುತ್ತಿರುವ ಪಾರ್ಸೆಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂತರರಾಷ್ಟ್ರೀಯ ಅಂಚೆ ಮೂಲಕ ಬರುವ 'ಲೈಂಗಿಕ ಆಟಿಕೆ' ಪಾರ್ಸೆಲ್‌ಗಳನ್ನು ಕಸ್ಟಮ್ಸ್ ಅಧಿಕಾರಿಗಳು ಜಪ್ತಿ ಮಾಡುತ್ತಿದ್ದು, ಅವುಗಳನ್ನೆಲ್ಲ ಗೋದಾಮಿನಲ್ಲಿ ಸಂಗ್ರಹಿಸಿಡುತ್ತಿದ್ದಾರೆ. ದಿನ ಕಳೆದಂತೆ ಆಟಿಕೆಗಳ ರಾಶಿ ಹೆಚ್ಚಾಗುತ್ತಿದ್ದು, ಅವುಗಳ ವಿಲೇವಾರಿಗೆ ಅನುಮತಿ ನೀಡುವಂತೆ ನ್ಯಾಯಾಲಯವನ್ನು ಅಧಿಕಾರಿಗಳು ಕೋರಿದ್ದಾರೆ.

ಬೆಂಗಳೂರು, ಮೈಸೂರು ಹಾಗೂ ರಾಜ್ಯದ ಹಲವು ನಗರಗಳ ಕೆಲವರು, ವಿದೇಶದ ಇ– ಕಾಮರ್ಸ್ ಜಾಲತಾಣಗಳಲ್ಲಿ ಆಟಿಕೆಗಳನ್ನು ಖರೀದಿಸುತ್ತಿದ್ದಾರೆ. ಅಂಥ ಆಟಿಕೆಗಳನ್ನು ಪಾರ್ಸೆಲ್ ಮೂಲಕ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಕಳುಹಿಸಲಾಗುತ್ತಿದೆ.

ಆದರೆ, ಕಸ್ಟಮ್ಸ್ ಕಾಯ್ದೆಯ ಸೆಕ್ಷನ್ 11 (2ಯು) ಅಡಿ 'ಲೈಂಗಿಕ ಆಟಿಕೆ' ಸಾಗಣೆ ಹಾಗೂ ಮಾರಾಟ ನಿರ್ಬಂಧಿಸಲಾಗಿದೆ. ಹೀಗಾಗಿ, ಕಸ್ಟಮ್ಸ್ ಅಧಿಕಾರಿಗಳು ಲೈಂಗಿಕ ಆಟಿಕೆಗಳ ಪಾರ್ಸೆಗಳನ್ನು ಜಪ್ತಿ ಮಾಡಿ ಗೋದಾಮಿನಲ್ಲಿರಿಸುತ್ತಿದ್ದಾರೆ.

'ಕೊರೊನಾ ಲಾಕ್‌ಡೌನ್ ನಂತರ ಲೈಂಗಿಕ ಆಟಿಕೆ ಖರೀದಿ ಹೆಚ್ಚಾಗಿದೆ. ಮಾನವನ ಅಂಗಾಂಗಗಳನ್ನು ಹೋಲುವ ರೀತಿಯಲ್ಲಿರುವ ಲೈಂಗಿಕ ಆಟಿಕೆಗಳು, ವಿದೇಶದ ಇ–ಕಾಮರ್ಸ್ ಜಾಲತಾಣಗಳಲ್ಲಿ ಮಾರಾಟಕ್ಕಿವೆ. ರಾಜ್ಯದ ಹಲವರು ಆಟಿಕೆಗಳನ್ನು ಖರೀದಿಸಿ, ತಮ್ಮ ವಿಳಾಸಕ್ಕೆ ತರಿಸಿಕೊಳ್ಳುತ್ತಿದ್ದಾರೆ' ಎಂದು ಕಸ್ಟಮ್ಸ್ ಮೂಲಗಳು ಹೇಳಿವೆ.

'ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬರುವ ಪಾರ್ಸೆಲ್‌ಗಳನ್ನು ಚಾಮರಾಜಪೇಟೆಯಲ್ಲಿರುವ ಅಂತರರಾಷ್ಟ್ರೀಯ ಅಂಚೆ ಕಚೇರಿಗೆ ಕಳುಹಿಸಲಾಗುತ್ತದೆ. ಅಲ್ಲಿಯೇ ಪ್ರತಿಯೊಂದು ಪಾರ್ಸೆಲ್‌ಗಳ ಪರಿಶೀಲನೆ ನಡೆಸಲಾಗುತ್ತದೆ. ಆಯುಧ, ಶಸ್ತ್ರಾಸ್ತ್ರ, ಚಿನ್ನ, ಮಾದಕ ವಸ್ತು, ಮದ್ಯ, ಲೈಂಗಿಕ ಆಟಿಕೆ ಹಾಗೂ ಇತರೆ ನಿಷೇಧಿತ ವಸ್ತುಗಳು ಕಂಡುಬಂದರೆ ಪಾರ್ಸೆಲ್ ಜಪ್ತಿ ಮಾಡಲಾಗುತ್ತಿದೆ' ಎಂದೂ ತಿಳಿಸಿವೆ.

'ಮೂರು ವರ್ಷಗಳ ಅವಧಿಯಲ್ಲಿ ಸಾವಿರಾರು ಸಂಖ್ಯೆಯ ಲೈಂಗಿಕ ಆಟಿಕೆ ಪಾರ್ಸೆಲ್‌ಗಳನ್ನು ಜಪ್ತಿ ಮಾಡಲಾಗಿದೆ. ಗೋದಾಮಿನಲ್ಲಿ ಲೈಂಗಿಕ ಆಟಿಕೆ ಪಾರ್ಸೆಲ್ ಹೆಚ್ಚುತ್ತಿದ್ದು, ಇತರೆ ವಸ್ತುಗಳನ್ನು ಇರಿಸಲು ಜಾಗದ ಅಭಾವ ಉಂಟಾಗಿದೆ. ಹೀಗಾಗಿ, ಆಟಿಕೆಗಳ ಪಾರ್ಸೆಲ್‌ಗಳನ್ನು ವಿಲೇವಾರಿ ಮಾಡಲು ನ್ಯಾಯಾಲಯವನ್ನು ಕೋರಲಾಗಿದೆ. ನ್ಯಾಯಾಲಯದ ನಿರ್ದೇಶನದಂತೆ ಮುಂದುವರಿಯಲಾಗುವುದು' ಎಂದೂ ಹೇಳಿವೆ.

ಸಾವಿರಾರು ರೂಪಾಯಿ ಪಾವತಿ: ಜಾಲತಾಣದವರಿಗೆ ಮುಂಗಡವಾಗಿ ಹಣ ಪಾವತಿಸಿ ಬಹುತೇಕರು 'ಲೈಂಗಿಕ ಆಟಿಕೆ' ಖರೀದಿಸುತ್ತಿದ್ದಾರೆ. ಅಂಥ ಆಟಿಕೆಗಳ ಪಾರ್ಸೆಲ್ ನಗರಕ್ಕೆ ಬರುತ್ತಿದ್ದಂತೆ ಜಪ್ತಿ ಮಾಡಲಾಗುತ್ತಿದ್ದು, ಇದರಿಂದ ಜನ ಹಣ ಕಳೆದುಕೊಳ್ಳುತ್ತಿದ್ದಾರೆ.

ಬನಶಂಕರಿ ನಿವಾಸಿಯೊಬ್ಬರು, 'ಇ–ಕಾಮರ್ಸ್ ಜಾಲತಾಣದ ಮೂಲಕ ಲೈಂಗಿಕ ಆಟಿಕೆ ಖರೀದಿಸಿದ್ದೆ. ಪಾರ್ಸೆಲ್ ತೆಗೆದುಕೊಂಡು ಬರಲು ಅಂತರರಾಷ್ಟ್ರೀಯ ಅಂಚೆ ಕಚೇರಿಗೆ ಹೋಗಿದ್ದೆ. ಪಾರ್ಸೆಲ್‌ನ್ನು ಕಸ್ಟಮ್ಸ್ ಅಧಿಕಾರಿಗಳು ಜಪ್ತಿ ಮಾಡಿರುವುದಾಗಿ ಅಂಚೆ ಕಚೇರಿ ಸಿಬ್ಬಂದಿ ಹೇಳಿದರು' ಎಂದರು.

ವಿವಿಧೆಡೆ ವಿದ್ಯುತ್ ವ್ಯತ್ಯಯ ಇಂದು

ಬೆಂಗಳೂರು: ವಿದ್ಯುತ್ ಕಾಮಗಾರಿ ಕೈಗೊಂಡಿರುವುದರಿಂದ ಇದೇ 10ರಂದು ಬೆಳಿಗ್ಗೆ 10ರಿಂದ ಮಧ್ಯಾಹ್ನ 4ರವರೆಗೆ ನಗರದ ವಿವಿಧೆಡೆ ವಿದ್ಯುತ್ ವ್ಯತ್ಯಯವಾಗಲಿದೆ.

ಸ್ಥಳಗಳು: ಯಲಹಂಕ ಪ್ರದೇಶದ ಕೆಎಂಎಫ್, ಶೇಷಾದ್ರಿಪುರ ಕಾಲೇಜು ರಸ್ತೆ, ಸೋಮೇಶ್ವರ ನಗರ, ಜಿಕೆವಿಕೆ



ಬೆಳ್ಳಿ ರಥೋತ್ಸವ ಬಸವನಗುಡಿಯ ಸಜ್ಜನರಾವ್ ವೃತ್ತದಲ್ಲಿರುವ ಇತಿಹಾಸ ಪ್ರಸಿದ್ಧ ಸುಬ್ರಹ್ಮಣ್ಯಸ್ವಾಮಿಯ ಬೆಳ್ಳಿ ರಥೋತ್ಸವ ಗುರುವಾರ ವಿಜೃಂಭಣೆಯಿಂದ ನೆರವೇರಿತು -ಪ್ರಜಾವಾಣಿ ಚಿತ್ರ

ಪಂಚಮಸಾಲಿ ಸಮಾಜದ ರಾಜ್ಯ ಕಾರ್ಯಕಾರಿಣಿ: ಮೂರು ನಿರ್ಣಯ ಅಂಗೀಕಾರ

'ಸುಭಾಷ್ ಅಡಿ ಸಮಿತಿ ರದ್ದುಗೊಳಿಸಿ'

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿಗೆ ಸಂಬಂಧಿಸಿದಂತೆ ಶಾಶ್ವತ ಹಿಂದುಳಿದ ವರ್ಗಗಳ ಆಯೋಗ ನೀಡುವ ವರದಿಯೇ ಅಂತಿಮ ಆಗುವುದರಿಂದ ನಿವೃತ್ತ ನ್ಯಾಯಮೂರ್ತಿ ಸುಭಾಷ್ ಅಡಿ ನೇತೃತ್ವದ ಸಮಿತಿಯನ್ನು ರದ್ದುಗೊಳಿಸಬೇಕು ಎಂದು ಸರ್ಕಾರಕ್ಕೆ ಒತ್ತಾಯಿಸಲು ಗುರುವಾರ ಇಲ್ಲಿ ನಡೆದ ಪಂಚಮಸಾಲಿ ಸಮಾಜದ ರಾಜ್ಯ ಕಾರ್ಯಕಾರಿಣಿಯಲ್ಲಿ ತೀರ್ಮಾನ ಕೈಗೊಳ್ಳಲಾಯಿತು.

ಡಿಸೆಂಬರ್ 15ರಂದು ವಿಧಾನ ಮಂಡಲದ ಅಧಿವೇಶನ ನಡೆಯುವ ಬೆಳಗಾವಿ ನಗರದಲ್ಲಿ ಸಮಾಜದ ಹಾಲಿ, ಮಾಜಿ ಜನಪ್ರತಿನಿಧಿಗಳನ್ನು ಕರೆದು ಮೀಸಲಾತಿಗೆ ಸಂಬಂಧಿಸಿದಂತೆ ಚರ್ಚಿಸುವ ಸಭೆಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಆಹ್ವಾನಿಸಲು ನಿರ್ಧರಿಸಲಾಯಿತು.

ಸಮಾಜದ ಮೀಸಲಾತಿ ಬೇಡಿಕೆ ಈಡೇರಿಕೆಗೆ ಜನವರಿ 1ರವರೆಗೆ ಕಾಲಾವಕಾಶ ಕೇಳಿದ್ದು, ಅದನ್ನು ಈಡೇರಿಸುವ ನಿಟ್ಟಿನಲ್ಲಿ ಏನು ಮಾಡಲಾಗಿದೆ ಎಂಬುದರ ಬಗ್ಗೆ ಅವರಿಂದ ಸ್ಪಷ್ಟೀಕರಣ ಪಡೆಯಲು ತೀರ್ಮಾನಿಸಲಾಯಿತು.

ಸಮಾಜಕ್ಕೆ 2ಎ ಮೀಸಲಾತಿ ಬೇಡಿಕೆ ಈಡೇರಿಕೆಗಾಗಿ ಬೆಂಗಳೂರಿಗೆ ಆರಂಭಿಸಿದ ಪಾದಯಾತ್ರೆಗೆ ಒಂದು ವರ್ಷ ಆಗುವ ಹಿನ್ನೆಲೆಯಲ್ಲಿ, 'ಮೀಸಲಾತಿ ಹೋರಾಟ ಆರಂಭವಾಗಿ ಒಂದು ವರ್ಷ, ಪಂಚಮಸಾಲಿಗಳ ಆಕ್ರೋಶ' ಹೆಸರಿನಲ್ಲಿ ಜನವರಿ 14ರಂದು ಕೂಡಲಸಂಗಮದಲ್ಲಿ ಸಮಾವೇಶ ನಡೆಸುವುದು. ಸರ್ಕಾರ ಅಷ್ಟರೊಳಗೆ ಅಂತಿಮ ತೀರ್ಮಾನ ಕೈಗೊಳ್ಳದಿದ್ದರೆ ಮುಂದಿನ ಹೋರಾಟದ ರೂಪುರೇಷೆಗಳನ್ನು ಅಲ್ಲಿಯೇ ತೀರ್ಮಾನಿಸುವುದು ಎಂಬ ನಿರ್ಣಯಗಳನ್ನು ಸಭೆಯಲ್ಲಿ ಕೈಗೊಳ್ಳಲಾಯಿತು.

ಕೂಡಲಸಂಗಮ ಲಿಂಗಾಯತ ಪಂಚಮಸಾಲಿ ಪೀಠದ ಬಸವ ಜಯಮೃತ್ಯುಂಜಯ ಸ್ವಾಮೀಜಿ, ಪಂಚಮಸಾಲಿ ಸಮಾಜದ ರಾಷ್ಟ್ರೀಯ ಅಧ್ಯಕ್ಷ ವಿಜಯಾನಂದ ಕಾಶಪ್ಪನವರ, ಶಾಸಕರಾದ ಅರವಿಂದ ಬೆಲ್ಲದ, ಬಸನಗೌಡ ಪಾಟೀಲ ಯತ್ನಾಳ, ಎಚ್.ಎಸ್.ಶಿವಶಂಕರ, ವಿವಿಧ ವಿಭಾಗಗಳ ಪದಾಧಿಕಾರಿಗಳು ಭಾಗವಹಿಸಿದ್ದರು.



ಬಾಗಲಕೋಟೆಯಲ್ಲಿ ಗುರುವಾರ ರಾತ್ರಿ ನಡೆದ ಪಂಚಮಸಾಲಿ ಸಮಾಜದ ರಾಜ್ಯ ಕಾರ್ಯಕಾರಿಣಿಯಲ್ಲಿ ಕೂಡಲಸಂಗಮ ಪೀಠದ ಬಸವ ಜಯಮೃತ್ಯುಂಜಯ ಸ್ವಾಮೀಜಿ ಮಾತನಾಡಿದರು

ಪಂಚಮಸಾಲಿ ಮಠಾಧೀಶರ ಒಕ್ಕೂಟ: ಯತ್ನಾಳ ಕಿಡಿ

ಬಾಗಲಕೋಟೆ: 'ಪ್ರಧಾನಿ ನರೇಂದ್ರ ಮೋದಿ ವಿರುದ್ಧ ದೇಶದ ಎಲ್ಲ 24 ಪಕ್ಷಗಳು ಸೇರಿ ಹೋರಾಟ ಮಾಡಿದಂತೆ ಕೂಡಲಸಂಗಮ ಲಿಂಗಾಯತ ಪಂಚಮಸಾಲಿಮಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ವಿರುದ್ಧ ಸಮುದಾಯದ ಮಠಾಧೀಶರು ಒಕ್ಕೂಟ ಮಾಡಿಕೊಂಡು ಮುಗಿಬಿದ್ದಿದ್ದಾರೆ' ಎಂದು ವಿಜಯಪುರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಲೇವಡಿ ಮಾಡಿದರು.

ಸುದ್ದಿಗಾರರೊಂದಿಗೆ ಗುರುವಾರ ಮಾತನಾಡಿದ ಅವರು, 'ಪಂಚಮಸಾಲಿ ಸಮುದಾಯಕ್ಕೆ 2ಎ ಮೀಸಲಾತಿಗೆ ಹೋರಾಟ ನಡೆಸುತ್ತಿರುವ ಬಸವ ಜಯಮೃತ್ಯುಂಜಯ ಸ್ವಾಮೀಜಿ ಜನಪ್ರಿಯತೆ ಬಗ್ಗೆ ಭಯಬಂದು ಎಲ್ಲರೂ ಕೂಡಿ ಒಕ್ಕೂಟ ಮಾಡಿಕೊಂಡಿದ್ದಾರೆ. ಇದು ನರೇಂದ್ರ ಮೋದಿ ವಿರುದ್ಧ ಕಾಂಗ್ರೆಸ್, ಕಮ್ಯುನಿಸ್ಟರು, ಜನತಾದಳದವರು ಒಂದಾದಂತೆ. ಆದರೆ ಶಿಷ್ಟಶಕ್ತಿಯ ವಿರುದ್ಧ ನಡೆದ ಯಾವುದೇ ಹೋರಾಟ ಯಶಸ್ವಿಯಾಗಿಲ್ಲ' ಎಂದು ಮಾರ್ಮಿಕವಾಗಿ ಹೇಳಿದರು.

'ಸ್ವಾಮೀಜಿಗಳ ಒಕ್ಕೂಟ ಯಾವುದಕ್ಕೆ ಬೇಕು. ಅವರಲ್ಲಿ ಯಾರು ಮೀಸಲಾತಿಗಾಗಿ ನಡೆದ ಪಾದಯಾತ್ರೆಯಲ್ಲಿ ಭಾಗವಹಿಸಿದ್ದಾರೆ. ಬದಲಿಗೆ ಮಠಕ್ಕೆ ಅನುದಾನ ಕೇಳಲು, ಧ್ವನಿ ಸುರುಳಿ, ಲಾಂಛನ ಬಿಡುಗಡೆ ಮಾಡಿಸಲು ಮುಖ್ಯಮಂತ್ರಿ ಬಳಿ ಹೋಗುತ್ತಾರೆ. ಐಷಾರಾಮಿ ಜೀವನಕ್ಕಾಗಿ ಮುಖ್ಯಮಂತ್ರಿ ಬಳಿ ಹೋಗುವ ನಿಮ್ಮ ಲಾಂಛನ ತೆಗೆದುಕೊಂಡು ಬೆಂಕಿ ಹಚ್ಚುವುದಾ?' ಎಂದು ವಾಗ್ದಾಳಿ ನಡೆಸಿದರು.

ಉನ್ನತ ಶಿಕ್ಷಣ ಸಚಿವ ಸಿ.ಎನ್.ಅಶ್ವತ್ಥನಾರಾಯಣ

₹12 ಕೋಟಿ ವೆಚ್ಚದಲ್ಲಿ ನಾಲ್ಕು ಪಥಗಳ ರಸ್ತೆ ಅಭಿವೃದ್ಧಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಯಶವಂತಪುರ ವೃತ್ತದ ಬಳಿ ಇರುವ ರೈಲ್ವೆ ಸೇತುವೆಯನ್ನು ₹12 ಕೋಟಿ ವೆಚ್ಚದಲ್ಲಿ ನಾಲ್ಕು ಪಥಗಳ ರಸ್ತೆಯನ್ನಾಗಿ ಅಭಿವೃದ್ಧಿಪಡಿಸಲಾಗುವುದು' ಎಂದು ಉನ್ನತ ಶಿಕ್ಷಣ ಸಚಿವ ಸಿ.ಎನ್. ಅಶ್ವತ್ಥನಾರಾಯಣ ತಿಳಿಸಿದರು.



ಮಲ್ಲೇಶ್ವರ ವಿಧಾನಸಭಾ ಕ್ಷೇತ್ರದಲ್ಲಿ ಬಿಬಿಎಂಪಿಯ ರಸ್ತೆ ಮೂಲಸೌಕರ್ಯ, ರಾಜಕಾಲುವೆ ಮತ್ತು ಕೆರೆಗಳ ವಿಭಾಗಗಳಿಂದ ಕೈಗೊಂಡಿರುವ ವಿವಿಧ ಕಾಮಗಾರಿಗಳ ಪರಿಶೀಲನಾ ಸಭೆಯನ್ನು ಗುರುವಾರ ನಡೆಸಿದರು.

'ಈ ಸೇತುವೆಯ ಮರುನಿರ್ಮಾಣವು ಜನವರಿಯಲ್ಲಿ ಆರಂಭಗೊಂಡು ಅಕ್ಟೋಬರ್‌ನಲ್ಲಿ ಪೂರ್ಣಗೊಳ್ಳಲಿದೆ. ಇದರೊಂದಿಗೆ ಮಲ್ಲೇಶ್ವರ ಬಡಾವಣೆಯಲ್ಲಿರುವ ನಿರ್ಮಲಾ ಕಾನ್ವೆಂಟ್ ಬಳಿಯೂ ಒಂದು ರೈಲ್ವೆ ಸೇತುವೆ ನಿರ್ಮಿಸಲಾಗುವುದು' ಎಂದು ಹೇಳಿದರು.

'ಮಲ್ಲೇಶ್ವರ 18ನೇ ಅಡ್ಡರಸ್ತೆಯಿಂದ ಮಿಲ್ಕ್ ಕಾಲೊನಿ ಸಂಪರ್ಕಕ್ಕೆ ರೈಲ್ವೆ ಕೆಳಸೇತುವೆ, ಮೈಸೂರು ಲ್ಯಾಂಪ್ಸ್ ಕಾರ್ಖಾನೆ ಪಕ್ಕದಿಂದ ಬ್ರಿಗೇಡ್ ಅಪಾರ್ಟ್‌ಮೆಂಟ್ ಸಮುಚ್ಚಯದ ನಡುವೆ ವಾಹನಗಳ ಸುಗಮ ಸಂಚಾರಕ್ಕಾಗಿ ರೈಲ್ವೆ ಕೆಳಸೇತುವೆ ಹಾಗೂ ಟೆಂಡರ್‌ಶ್ಯೂರ್ ಯೋಜನೆಯಡಿ ಸಂಪಿಗೆ ರಸ್ತೆಯನ್ನು ಅಭಿವೃದ್ಧಿಪಡಿಸಲಾಗುವುದು' ಎಂದರು.

'ಭಾರತೀಯ ವಿಜ್ಞಾನ ಮಂದಿರದ ಎದುರು ಮೇಖ್ರಿ ವೃತ್ತದ ಕಡೆಗೆ ಹೋಗುವ ರಸ್ತೆ ಕಿರಿದಾಗಿರುವುರಿಂದ ಸುಗಮ ಸಂಚಾರಕ್ಕೆ ಅಡ್ಡಿಯಾಗಿದೆ. ಈ ರಸ್ತೆ ವಿಸ್ತರಣೆಗೆ ವಿಜ್ಞಾನ ಮಂದಿರದ ಸ್ವಲ್ಪ ಭೂಮಿಯ ಅಗತ್ಯವಿದೆ. ಈ ಬಗ್ಗೆ ಸಂಸ್ಥೆಯ ಮುಖ್ಯಸ್ಥರೊಂದಿಗೆ ಚರ್ಚಿಸಲು ಮುಖ್ಯ ಕಾರ್ಯದರ್ಶಿಗಳಿಗೆ ಜವಾಬ್ದಾರಿ ವಹಿಸಲಾಗಿದೆ' ಎಂದೂ ಹೇಳಿದರು.

ಸಭೆಯಲ್ಲಿ ಬಿಬಿಎಂಪಿ ಪಶ್ಚಿಮ ವಲಯ ಆಯುಕ್ತ ದೀಪಕ್, ಬಿಬಿಎಂಪಿಯ ಮುಖ್ಯ ಎಂಜಿನಿಯರ್ ಪ್ರಹ್ಲಾದ್ ಹಾಗೂ ಅಧಿಕಾರಿಗಳು ಭಾಗವಹಿಸಿದ್ದರು.

'ರಾಜ್ಯದೊಂದಿಗೆ ಸಹಭಾಗಿತ್ವಕ್ಕೆ ಫಿನ್ಲೆಂಡ್ ಉತ್ಸುಕ'

ಬೆಂಗಳೂರು: ಕೃತಕ ಬುದ್ಧಿಮತ್ತೆ, ಇಂಧನ ಮತ್ತು ಶೈಕ್ಷಣಿಕ ಕಾರ್ಯಕ್ರಮಗಳಲ್ಲಿ ಕರ್ನಾಟಕ ಸರ್ಕಾರದ ಜತೆ ಸಹಭಾಗಿತ್ವ ವಹಿಸಲು ಫಿನ್ಲೆಂಡ್ ಉತ್ಸುಕವಾಗಿದೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ತಿಳಿಸಿದರು.

ಕರ್ನಾಟಕ– ಫಿನ್ಲೆಂಡ್ ನಾವೀನ್ಯತಾ ಕಾರಿಡಾರ್ ಒಡಂಬಡಿಕೆ ಕುರಿತು ಭಾರತದಲ್ಲಿನ ಫಿನ್ಲೆಂಡ್ ರಾಯಭಾರಿ ರಿತಾ ಕೌಕು ರಾಂಡ್ ಅವರೊಂದಿಗೆ ಗುರುವಾರ ಸಭೆ ನಡೆಸಿದ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, 'ವಾಣಿಜ್ಯ ವಹಿವಾಟು ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಸಹಭಾಗಿತ್ವ ಹೊಂದಲು ಫಿನ್ಲೆಂಡ್ ಸಿದ್ಧವಿರುವುದಾಗಿ ಅಲ್ಲಿನ ರಾಯಭಾರಿ ತಿಳಿಸಿದ್ದಾರೆ' ಎಂದರು.

ರಾಜ್ಯದಲ್ಲಿನ ನವೋದ್ಯಮಗಳ ಕಾರ್ಯನಿರ್ವಹಣೆ ಕುರಿತು ಆ ರಾಷ್ಟ್ರ ಹೆಚ್ಚು ಆಸಕ್ತಿ ತೋರಿದೆ. ರಾಜ್ಯದಲ್ಲಿ ಪೂರ್ವ ಪ್ರಾಥಮಿಕ ಶಾಲೆಗಳನ್ನು ಆರಂಭಿಸಲು ಫಿನ್ಲೆಂಡ್‌ಗೆ ಅನುಮತಿ ನೀಡುವ ವಿಚಾರದಲ್ಲಿ ರಾಜ್ಯ ಸರ್ಕಾರ ಮುಕ್ತ ಮನಸ್ಸು ಹೊಂದಿದೆ. ಶಿಕ್ಷಕರ ತರಬೇತಿಗಾಗಿ ಆ ದೇಶದೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲಾಗುವುದು ಎಂದು ಹೇಳಿದರು.

ಫಿನ್ಲೆಂಡ್ ನಿಯೋಗದಲ್ಲಿ 'ಬಿಜಿನೆಸ್ ಫಿನ್ಲೆಂಡ್'ನ ಭಾರತೀಯ ನಿರ್ದೇಶಕ ಡಾ.ಜುಕ್ಕಾ ಹೋಲಪಾ, ದೂತವಾಸದ ಕಾನ್ಸುಲರ್‌ಗಳಾದ ಜುಕ್ಕಾ ಇಲೊಮಕಿ, ಡಾ.ಮಿಕಾ ಟಿರೋನೆನ್, ಫಿನ್ಲೆಂಡ್ ಚೇಂಬರ್ ಆಫ್ ಕಾಮರ್ಸ್ ಇನ್ ಇಂಡಿಯಾದ ಪ್ರತಿನಿಧಿ ಸುರೇಶ್ ಕುಮಾರ್ ಉಪಸ್ಥಿತರಿದ್ದರು.

ನಗರದಲ್ಲಿ ಇಂದು

'ನರಗಳು ಮತ್ತು ಮಾನಸಿಕ ಆರೋಗ್ಯ– ಕೋವಿಡ್ ಪಿಡುಗು ಭಾರತದ ನಗರಗಳಲ್ಲಿ ಅನಾವರಣಗೊಳಿಸಿದ ಮಾನಸಿಕ ಸಂದಿಗ್ಧತೆ' ವಿಚಾರ ಸಂಕಿರಣ: ಅತಿಥಿಗಳು–ಆರೋಗ್ಯ ಇಲಾಖೆ ಹೆಚ್ಚುವರಿ ಕಾರ್ಯದರ್ಶಿ ರಾಕೇಶ್ ಸರ್ವಾಲ್, ನಿಮ್ಹಾನ್ಸ್ ನಿರ್ದೇಶಕಿ ಪ್ರತಿಮಾ ಮೂರ್ತಿ, ಕುಲಸಚಿವ ಬಿ.ಎಸ್. ಶಂಕರನಾರಾಯಣ, ಆಯೋಜನೆ– ನಿಮ್ಹಾನ್ಸ್‌ನ ಎಪಿಡಮಿಯಾಲಜಿ ವಿಭಾಗ, ಸ್ಥಳ–ಸಮ್ಮೇಳನ ಸಭಾಂಗಣ, ರಾಷ್ಟ್ರೀಯ ಮಾನಸಿಕ ಆರೋಗ್ಯ ಹಾಗೂ ನರವಿಜ್ಞಾನ ಸಂಸ್ಥೆ (ನಿಮ್ಹಾನ್ಸ್), ಬೆಳಿಗ್ಗೆ 9.30

ಎ.ಜಿ.ರತ್ನಾ ಕಾಳೇಗೌಡ ಅವರ 'ಮಡಿಲಕೆಂಡ' ಹಾಗೂ ವಿ.ಟಿ. ರಾಮಕೃಷ್ಣಯ್ಯ ಅವರ 'ಕಾಡು ಕುಸುಮ' ಪುಸ್ತಕಗಳ ಬಿಡುಗಡೆ: ಎಸ್. ವಿ.ಮಹಲಿಂಗೇಶ್ವರ ಹಾಗೂ ಬೈರಮಂಗಲ ರಾಮೇಗೌಡ, ಅಧ್ಯಕ್ಷತೆ–ಡಿ.ಎಸ್. ವೀರಯ್ಯ, ಅತಿಥಿಗಳು–ಮೀರಾಸಾಬಿಹಳ್ಳಿ ಶಿವಣ್ಣ, ಚಿತ್ತಯ್ಯ ಪೂಜಾರ್, ಆಯೋಜನೆ–ರತ್ನ ದೀಪ ಪ್ರಕಾಶನ, ಸ್ಥಳ–ಪ್ರೆಸ್‌ಕ್ಲಬ್, ಬೆಳಿಗ್ಗೆ 10.30

ಕೋವಿಡ್‌ನಿಂದ ಕರ್ನಾಟಕದ ಮಕ್ಕಳ ಪರಿಸ್ಥಿತಿಯ ಅಧ್ಯಯನ ಹಾಗೂ ಮಕ್ಕಳ ಕುರಿತು ವಿವಿಧ ಅಧ್ಯಯನಗಳ ವರದಿ ಬಿಡುಗಡೆ: ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಎಚ್. ಸಿ.ರಾಘವೇಂದ್ರ, ಯುನಿಸೆಫ್‌ನ ಪ್ರಸೂನ್ ಸೇನ್ ಮತ್ತು ಮೀಟೆಲ್ ರಸ್ದಿಯಾ, ಮಕ್ಕಳ ರಕ್ಷಣಾ ನಿರ್ದೇಶನಾಲಯದ ನಿರ್ದೇಶಕಿ ಪಲ್ಲವಿ ಅಕುರಾತಿ, ಆಯೋಜನೆ– ಕರ್ನಾಟಕ ಮಕ್ಕಳ ಹಕ್ಕುಗಳ ನಿಗಾ ಕೇಂದ್ರ (ಕೆಸಿಆರ್‌ಒ), ಸ್ಥಳ–ವಿಜಯಾ ರೆಸಿಡೆನ್ಸಿ, ಸಪ್ನ ಬುಕ್‌ಹೌಸ್ ಎದುರು, ಗಾಂಧಿನಗರ, ಬೆಳಿಗ್ಗೆ 11


ಎಸ್.ಜಿ.ರಾಧಾ ಮತ್ತು ಹೇಮಂತ್ ವಾಮನಶಂಕರ್ ಅವರಿಂದ ಚಿತ್ರಕಲಾ ಪ್ರದರ್ಶನ: ಸ್ಥಳ–ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಬೆಳಿಗ್ಗೆ 10.30ರಿಂದ ಸಂಜೆ 6 (ಡಿ.15ರವರೆಗೆ ಪ್ರದರ್ಶನ ಇರಲಿದೆ)

ಕನ್ನಡ ರಾಜ್ಯೋತ್ಸವ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ: ಉದ್ಘಾಟನೆ–ಎನ್. ಮಂಜುಳಾ, ಅಧ್ಯಕ್ಷತೆ–ಜಿ.ಆರ್. ಚಂದ್ರಶೇಖರಯ್ಯ, ಅತಿಥಿಗಳು– ಮಹೇಶ್ ಕರಜಗಿ, ಸಿದ್ಧಲಿಂಗಪ್ಪ ತೇಲಿ, ಎಲ್.ಎನ್.ಮುಕುಂದರಾಜ್, ಟಿ.ಆರ್.ರಾಮಕೃಷ್ಣಯ್ಯ, ಟಿ.ಎಂ. ಶಿವಪ್ರಕಾಶ್, ಆಯೋಜನೆ–ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ (ಕೆಪಿಟಿಸಿಎಲ್) ಕನ್ನಡ ಸಂಘ, ಸ್ಥಳ– ಕೆಪಿಟಿಸಿಎಲ್ ಸಭಾಂಗಣ, ಕಾವೇರಿ ಭವನ, ಮಧ್ಯಾಹ್ನ 3.30

ಎಸ್.ನಿಜಲಿಂಗಪ್ಪ ಅವರ ಹುಟ್ಟುಹಬ್ಬ: ಉದ್ಘಾಟನೆ–ಗೊ.ರು. ಚನ್ನಬಸಪ್ಪ, ಪುಷ್ಪನಮನ–ಎಸ್. ಮಹಾದೇವಯ್ಯ, ಅಧ್ಯಕ್ಷತೆ–ಮಲೆಯೂರು ಗುರುಸ್ವಾಮಿ, ಅತಿಥಿಗಳು–ಯು.ಬಿ. ವೆಂಕಟೇಶ್, ಎಂ.ಪಿ. ನಾಡಗೌಡ, ಸಿಂ. ರಾ.ಹೊನ್ನಲಿಂಗಯ್ಯ, ಕೆ.ಎಸ್. ನಾಗರಾಜ್, ಕೆ.ವಿ. ನಾಗರಾಜಮೂರ್ತಿ, ಆಯೋಜನೆ– ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಬಸವ ಅಂತರರಾಷ್ಟ್ರೀಯ ಪ್ರತಿಷ್ಠಾನ, ಸ್ಥಳ– ಮಹಿಳಾ ವಿಶ್ರಾಂತಿ ಕೊಠಡಿ, ರವೀಂದ್ರ ಕಲಾಕ್ಷೇತ್ರ, ಸಂಜೆ 4



ಮಂಡ್ಯ ರಮೇಶ್



ಗೊ.ರು. ಚನ್ನಬಸಪ್ಪ

ರಂಗ ಚಾವಡಿ: ಅತಿಥಿಗಳು–ಮಂಡ್ಯ ರಮೇಶ್, ಗುಬ್ಬಿಗೂಡು ರಮೇಶ, ಆಯೋಜನೆ–ಕರ್ನಾಟಕ ನಾಟಕ ಅಕಾಡೆಮಿ, ಸ್ಥಳ–ನಯನ ಸಭಾಂಗಣ, ಕನ್ನಡ ಭವನ, ಸಂಜೆ 5

ಬೆಂಗಳೂರು ಗಾಯನ ಸಮಾಜದ ಸಂಗೀತ ಸಮ್ಮೇಳನ: ಬೆಳಿಗ್ಗೆ 10ಕ್ಕೆ 'ವಿವಿಧ ಕಲಾ ಪ್ರಕಾರಗಳಲ್ಲಿ ಶಾಸ್ತ್ರೀಯ ಸಂಗೀತದ ಹೊಳಹುಗಳು' ಗೋಷ್ಠಿ, ಸಂಜೆ 4.15ಕ್ಕೆ ಉದಯೋನ್ಮುಖ ಕಲಾವಿದರಿಂದ ಸಂಗೀತ ಕಚೇರಿ–ಕಿರಣ್ ಜೋಸ್ಯರ್, ಆಯೋಜನೆ ಮತ್ತು ಸ್ಥಳ– ಬೆಂಗಳೂರು ಗಾಯನ ಸಮಾಜ, ಕೆ.ಆರ್. ರಸ್ತೆ.

'ಬಾಪೂ' ಬಹುಮಾಧ್ಯಮ ರಂಗಪ್ರಸ್ತುತಿ: ರಚನೆ ಮತ್ತು ನಿರ್ದೇಶನ–ಎನ್.ಎಸ್. ಶಂಕರ್, ಪ್ರದರ್ಶನ ಉದ್ಘಾಟನೆ–ಸಾಹಿತಿ ಚಂದ್ರಶೇಖರ ಕಂಬಾರ, ಅಧ್ಯಕ್ಷತೆ– ವೂಡೇ ಪಿ.ಕೃಷ್ಣ, ಆಯೋಜನೆ–ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಸ್ಥಳ–ಎಡಿಎ ರಂಗಮಂದಿರ, ಜೆ.ಸಿ.ರಸ್ತೆ, ಸಂಜೆ 6

‘ಹೈಕಮಾಂಡ್ ಸೂಚಿಸಿದ ಕಡೆ ಸ್ಪರ್ಧೆ’

ಬೆಂಗಳೂರು: ‘ನಾನೀಗ ಬಾದಾಮಿ ಕ್ಷೇತ್ರದ ಶಾಸಕ. ಹಲವು ಕ್ಷೇತ್ರಗಳ ಜನರು ಆಹ್ವಾನ ನೀಡಿದ್ದಾರೆ. ಕಾಂಗ್ರೆಸ್ ಹೈಕಮಾಂಡ್ ಎಲ್ಲಿ ಸೂಚಿಸುವುದೋ ಅಲ್ಲಿ ಸ್ಪರ್ಧೆ ಮಾಡುತ್ತೇನೆ’ ಎಂದು ವಿಧಾನ ಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ನಗರದ ಚಾಮರಾಜಪೇಟೆಯಲ್ಲಿ ಗುರುವಾರ ಮಹದೇಶ್ವರ ಸಭಾಭವನ ಉದ್ಘಾಟನೆ ಮಾಡಿದ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಕೋಲಾರ, ಕೊಪ್ಪಳ, ಚಾಮರಾಜಪೇಟೆ, ಚಿಕ್ಕನಾಯಕನಹಳ್ಳಿ, ಅರಕಲಗೂಡು, ಹುಣಸೂರು ಕ್ಷೇತ್ರಗಳಿಂದ ನನಗೆ ಆಹ್ವಾನವಿದೆ. ಎಲ್ಲ ಕಡೆ ಸ್ಪರ್ಧಿಸಲು ಆಗುವುದಿಲ್ಲ. ಸ್ಪರ್ಧೆಯನ್ನು ಹೈಕಮಾಂಡ್ ನಿರ್ಧರಿಸುತ್ತದೆ’ ಎಂದರು.

ಪಹಣಿಗಾಗಿ ಅರ್ಜಿ ಸಲ್ಲಿಸುವ ಅವಧಿ ಮುಂದುವರಿಕೆಗೆ ಸಂಪುಟ ಸಭೆ ಒಪ್ಪಿಗೆ

ಇನಾಂ ಜಮೀನು: ಮತ್ತೊಂದು ವರ್ಷ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು : ರಾಜ್ಯ ವಿವಿಧೆಡೆ ಇನಾಂ ಜಮೀನು ಸಾಗುವಳಿ ಮಾಡುತ್ತಿರುವ ರೈತರು ಪಹಣಿಗಾಗಿ ಅರ್ಜಿ ಸಲ್ಲಿಸುವ ಅವಧಿಯನ್ನು ಇನ್ನೂ ಒಂದು ವರ್ಷ ಮುಂದುವರಿಸಲು ಗುರುವಾರ ನಡೆದ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ಇದಕ್ಕಾಗಿ ಮುಂಬರುವ ವಿಧಾನಮಂಡಲದ ಅಧಿವೇಶನದಲ್ಲಿ ತಿದ್ದುಪಡಿ ಮಸೂದೆಯನ್ನು ಮಂಡಿಸಲು ಸರ್ಕಾರ ನಿರ್ಧರಿಸಿದೆ.

ಸಚಿವ ಸಂಪುಟ ಸಭೆಯಲ್ಲಿ ಈ ಬಗ್ಗೆ ಪ್ರಸ್ತಾಪಿಸಿದ ಕಂದಾಯ ಸಚಿವ ಆರ್. ಅಶೋಕ ಅವರು, ಭೂಮಿಯ ಹಕ್ಕನ್ನು ರೈತರಿಗೆ ನೀಡುವುದರಿಂದ ಅವರು ಬ್ಯಾಂಕ್‌ಗಳಿಂದ ಸಾಲ ಪಡೆಯಲು, ಸರ್ಕಾರಿ ಉದ್ದೇಶಕ್ಕೆ ಭೂಸ್ವಾಧೀನ ಮಾಡಿಕೊಂಡಾಗ ಪರಿಹಾರ ಪಡೆದುಕೊಳ್ಳಲು ಅನುಕೂಲವಾಗುತ್ತದೆ. ಕೆಲವರು ಇಂತಹ ಭೂಮಿಗಳ ನಕಲಿ ದಾಖಲೆ ಸೃಷ್ಟಿಸಿ ಅಕ್ರಮ ನಡೆಸುತ್ತಿದ್ದಾರೆ ಎಂದು ವಿವರಿಸಿದರು ಎಂದು ಮೂಲಗಳು ಹೇಳಿವೆ.

ರಾಜ್ಯದ ಲಕ್ಷಾಂತರ ಎಕರೆ ಇನಾಂ ಭೂಮಿಯನ್ನು ಕಳೆದ 50–60 ವರ್ಷಗಳಿಂದ ರೈತರು ಉಳುಮೆ ಮಾಡುತ್ತಿದ್ದಾರೆ. ಬಳ್ಳಾರಿ ಜಿಲ್ಲೆಯೊಂದರಲ್ಲೇ 30 ಸಾವಿರ ಎಕರೆ ಇನಾಂ ಭೂಮಿಯಿದೆ. ರಾಜ್ಯದಲ್ಲಿ ಒಟ್ಟು 1 ಲಕ್ಷ ಎಕರೆಗೂ ಹೆಚ್ಚು ಇನಾಂ ಭೂಮಿ ಇದೆ. ಇದರ ಬಗ್ಗೆ ಸರಿಯಾದ ಮಾಹಿತಿ ಇಲ್ಲದೇ ಬಹಳಷ್ಟು ರೈತರು ಪಹಣಿ ಪಡೆದುಕೊಳ್ಳಲು ಸಾಧ್ಯವಾಗಿಲ್ಲದೇ ಇರುವುದು ಸಭೆಯಲ್ಲಿ ಚರ್ಚೆಗೆ ಬಂದಿತು. ಅರ್ಜಿ ಸಲ್ಲಿಕೆಗೆ ಮತ್ತೊಂದು ಬಾರಿ ಅವಕಾಶ ನೀಡುವುದರಿಂದ ಹಲವು ಸಮಸ್ಯೆಗಳನ್ನು ಬಗೆಹರಿಸಲು ಸಾಧ್ಯವಿದೆ ಎಂಬ ಕಾರಣಕ್ಕೆ ತಿದ್ದುಪಡಿ ಮಸೂದೆ ಮಂಡಿಸಲು ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನಿಸಲಾಯಿತು ಎಂದು ಮೂಲಗಳು ವಿವರಿಸಿವೆ.

ಸರ್ಕಾರಿ ಭೂಮಾಪಕರಿಗೆ ಅವಕಾಶ: ಜಮೀನು ಗುರುತಿಸಲು ಅಗತ್ಯವಿರುವ ವಿವರಣೆ, ಭೂಸಮೀಕ್ಷೆ ನಕ್ಷೆ ಅಥವಾ ಭೂಮಾಪನ ನಕ್ಷೆಯನ್ನು ಸರ್ಕಾರಿ ಭೂಮಾಪಕರೂ ನೀಡಲು ಅವಕಾಶ ಒದಗಿಸಲಿದ್ದು, ಇದಕ್ಕಾಗಿ ಕರ್ನಾಟಕ ಭೂ ಕಂದಾಯ(ತಿದ್ದುಪಡಿ) ಮಸೂದೆ2021 ಕ್ಕೂ ಸಂಪುಟ ಸಭೆ ಒಪ್ಪಿಗೆ ನೀಡಿತು. ಬೆಳಗಾವಿ ವಿಧಾನಮಂಡಲ ಅಧಿವೇಶನದಲ್ಲಿ ಇದನ್ನು ಮಂಡಿಸಲಾಗುವುದು.

ಸದ್ಯದ ವ್ಯವಸ್ಥೆಯಲ್ಲಿ ಪರವಾನಗಿ ಪಡೆದ ಭೂಮಾಪಕರು ಮಾತ್ರ 11 ಇ ಅಡಿ ಸ್ಕೆಚ್ ನೀಡಬಹುದಾಗಿತ್ತು. ಕಾಯ್ದೆಗೆ ತಿದ್ದುಪಡಿ ಮೂಲಕ ಸರ್ಕಾರಿ ಭೂಮಾಪಕರಿಗೂ ಈ ಅವಕಾಶ ನೀಡಲಾಗಿದೆ.

ಸಂಪುಟ ಸಭೆಯ ನಿರ್ಣಯಗಳು

- 2022–23 ನೇ ಶೈಕ್ಷಣಿಕ ಸಾಲಿಗೆ ವಿದ್ಯಾವಿಕಾಸ ಯೋಜನೆಯಡಿ ಪ್ರೋತ್ಸಾಹದಾಯಕ ಕಾರ್ಯಕ್ರಮದಡಿ ಸರ್ಕಾರಿ ಮತ್ತು ಅನುದಾನಿತ ಶಾಲೆಗಳ ವಿದ್ಯಾರ್ಥಿಗಳಿಗೆ ಒಟ್ಟು ₹152.87 ಕೋಟಿ ವೆಚ್ಚದಲ್ಲಿ ಉಚಿತ ಪಠ್ಯ ಪುಸ್ತಕಗಳು ಮತ್ತು ಇತರ ಕಲಿಕಾ ಸಾಮಗ್ರಿಗಳನ್ನು ವಿತರಿಸಲು ಅನುಮೋದನೆ.
- ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ (ತಿದ್ದುಪಡಿ)ಮಸೂದೆಗೆ 2021ಕ್ಕೆ ಅನುಮೋದನೆ, ಕರ್ನಾಟಕ ರಾಜ್ಯ ಆಯುಷ್ ವಿಶ್ವವಿದ್ಯಾಲಯ ಮಸೂದೆ 2021 ಕ್ಕೆ ತಿದ್ದುಪಡಿ

ಸುದ್ದಿ 2 ನಿಮಿಷ

ಮೊಟ್ಟೆ ತಿನ್ನುವವರಿಂದ ಮಠಗಳು ಕಾಣಿಕೆ ಸ್ವೀಕರಿಸದಿರಲು ಆಗ್ರಹ

ಮೈಸೂರು: ‘ಶಾಲೆಗಳಲ್ಲಿ ಮಕ್ಕಳಿಗೆ ಮೊಟ್ಟೆ ನೀಡುವುದನ್ನು ವಿರೋಧಿಸುವ ಮಠಾಧೀಶರು, ಮೊಟ್ಟೆ ತಿನ್ನುವ ಭಕ್ತರಿಂದ ಕಾಣಿಕೆಗಳನ್ನು ಕಡ್ಡಾಯವಾಗಿ ಸ್ವೀಕರಿಸಬಾರದು’ ಎಂದು ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಅಧ್ಯಕ್ಷ ಕೆ.ಎಸ್.ಶಿವರಾಮು ಆಗ್ರಹಿಸಿದರು.

‘ಮೊಟ್ಟೆ ಸೇವಿಸುವವರು ಕಾಣಿಕೆ ನೀಡಬಾರದು ಎಂದು ಮಠಗಳಲ್ಲಿ ಮೊದಲು ಫಲಕ ಅಳವಡಿಸಬೇಕು. ಮೊಟ್ಟೆ ಸೇವಿಸುವವರು ಹಾಗೂ ಮಾರುವವರ ಕಾಣಿಕೆಗಳನ್ನು ಪಡೆಯುವ ಮಠಗಳು, ಶಾಲಾ ಮಕ್ಕಳಿಗೆ ಮೊಟ್ಟೆ ನೀಡುವುದನ್ನು ವಿರೋಧಿಸುವುದು ಸರಿಯಲ್ಲ. ಅಂಥ ಸ್ವಾಮೀಜಿಗಳು ಮಠಾಧೀಶರಾಗಲು ನಾಲಾಯಕ್’ ಎಂದು ನಗರದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಹರಿಹಾಯ್ದರು.

‘ಮೊಟ್ಟೆ ನೀಡುವುದನ್ನು ವಿರೋಧಿಸಿ ಕೆಲವು ಮಠಾಧೀಶರು ಸಮಾವೇಶ ಮಾಡಲು ಹೊರಟಿರುವುದು ನಾಚಿಕೆಗೇಡಿನ ಸಂಗತಿ. ಈ ರೀತಿ ರಾಜಕಾರಣ ಮಾಡುತ್ತಿರುವ ಮಠಾಧೀಶರು ಮೊದಲು ತಮ್ಮ ಕಾವಿ ಕಳಚಿ ನಂತರ ರಾಜಕಾರಣ ಮಾಡಲಿ’ ಎಂದು ಸವಾಲೆಸೆದರು.



ಚಂಪಾಷಷ್ಠಿ ರಥೋತ್ಸವ

ಕುಕ್ಕೆ ಸುಬ್ರಹ್ಮಣ್ಯ ದೇವರ ಚಂಪಾಷಷ್ಠಿ ಮಹಾರಥೋತ್ಸವ ಗುರುವಾರ ಬೆಳಿಗ್ಗೆ ಸಂಭ್ರಮದಿಂದ ನಡೆಯಿತು. ಉತ್ಸವಕ್ಕೆ ಸಾಕ್ಷಿಯಾದ ಸಾವಿರಾರು ಭಕ್ತರು ಕಾಳುಮೆಣಸು, ಏಲಕ್ಕಿ, ಸಾಸಿವೆ ಧಾನ್ಯಗಳನ್ನು ರಥಕ್ಕೆ ಎಸೆದು ಭಕ್ತಿ ಸಮರ್ಪಿಸಿದರು.

ಪ್ರಜಾವಾಣಿ ಚಿತ್ರ: ಲೋಕೇಶ್ ಬಿ.ಎನ್., ಸುಬ್ರಹ್ಮಣ್ಯ

ಪರಿಷತ್ ಚುನಾವಣೆ: ಇಂದು ಮತದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ 20 ಸ್ಥಳೀಯ ಸಂಸ್ಥೆಗಳಿಂದ ವಿಧಾನಪರಿಷತ್ತಿನ 25 ಕ್ಷೇತ್ರಗಳಿಗೆ ಶುಕ್ರವಾರ (ಡಿ.10) ಮತದಾನ ನಡೆಯಲಿದ್ದು, ಮತದಾರರನ್ನು ಒಲಿಸಿಕೊಳ್ಳಲು ಅಭ್ಯರ್ಥಿಗಳು ಗುರುವಾರ ಸಂಜೆಯವರೆಗೆ ಕೊನೇ ಕ್ಷಣದ ಪ್ರಯತ್ನ ನಡೆಸಿದರು.

ವಿಧಾನ ಪರಿಷತ್ ಸಭಾನಾಯಕ ಹಾಗೂ ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ, ವಿಧಾನಪರಿಷತ್ ಉಪಸಭಾಪತಿ ಎಂ.ಕೆ.ಪ್ರಾಣೇಶ್, ಸರ್ಕಾರದ ಮುಖ್ಯ ಸಚೇತಕ ಮಹಾಂತೇಶ ಕವಟಗಿಮಠ ಸೇರಿ ಒಟ್ಟು 90 ಅಭ್ಯರ್ಥಿಗಳ ಭವಿಷ್ಯ ನಿರ್ಧಾರವಾಗಲಿದೆ. ರಾಜಕೀಯ ಪಕ್ಷದ ಅಧಿಕೃತ ಅಭ್ಯರ್ಥಿಗಳ ಪೈಕಿ ಚಿಕ್ಕಮಗಳೂರು ಸ್ಥಳೀಯ ಸಂಸ್ಥೆ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಗಾಯತ್ರಿ ಶಾಂತೇಗೌಡ ಕಣದಲ್ಲಿರುವ ಏಕೈಕ ಮಹಿಳೆ.

ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷಗಳು ಎಲ್ಲ ಕ್ಷೇತ್ರಗಳಲ್ಲೂ ಸ್ಪರ್ಧಿಸಿದ್ದರೆ, ಜೆಡಿಎಸ್ 6 ಕ್ಷೇತ್ರಗಳಲ್ಲಿ ಮಾತ್ರ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದೆ. ಬಹುತೇಕ ಕ್ಷೇತ್ರಗಳಲ್ಲಿ ಜಿದ್ದಾಜಿದ್ದಿನ ಸೆಣಸಾಟ ನಡೆದಿದೆ. ಅಭ್ಯರ್ಥಿಗಳು ತಮ್ಮ ಶಕ್ತಿಗೆ ಅನುಸಾರವಾಗಿ ಮತದಾರರನ್ನು ಸೆಳೆಯಲು ಆಮಿಷಗಳನ್ನು ಒಡ್ಡಿರುವ ಆರೋಪಗಳು ಕೇಳಿ ಬಂದಿವೆ.

ಬಿಜೆಪಿ 12ಕ್ಕೂ ಹೆಚ್ಚು ಸ್ಥಾನಗಳನ್ನು ಗೆದ್ದರೆ ಮಾತ್ರ ವಿಧಾನಪರಿಷತ್ತಿನಲ್ಲಿ ಬಹುಮತ ಪಡೆಯಲು ಸಾಧ್ಯ. ಕಳೆದ ಬಾರಿ 7 ಸ್ಥಾನಗಳನ್ನು ಗೆದ್ದಿತ್ತು. ಕಾಂಗ್ರೆಸ್ ಹೆಚ್ಚಿನ ಸ್ಥಾನಗಳನ್ನು ಗೆಲ್ಲಲು ತುರುಸಿನ ಪೈಪೋಟಿ ನಡೆಸಿದೆ. ಚುನಾವಣೆ ನಡೆಯುವ ನಗರ ಸ್ಥಳೀಯ ಸಂಸ್ಥೆಗಳು ಮತ್ತು ಗ್ರಾಮೀಣ ಪ್ರದೇಶ ಕೇಂದ್ರಗಳ ಸುತ್ತಮುತ್ತಲಿನ 200 ಮೀಟರ್ ವ್ಯಾಪ್ತಿಯಲ್ಲಿ ನಿಷೇಧಾಜ್ಞೆ ಜಾರಿಗೊಳಿಸಿದ್ದು, ಮದ್ಯ ಮಾರಾಟವನ್ನು ನಿಷೇಧಿಸಲಾಗಿದೆ. ಪೊಲೀಸರು ಬಿಗಿ ಬಂದೋಬಸ್ತ್ ಮಾಡಿದ್ದಾರೆ.

ಡಿಸೆಂಬರ್ 14ರಂದು ಮತ ಎಣಿಕೆ ನಡೆಯಲಿದೆ.

ಅಂಕಿ-ಅಂಶಗಳು

98,846 ಒಟ್ಟು ಮತದಾರರು

51,474 ಮಹಿಳಾ ಮತದಾರರು

47,368 ಪುರುಷ ಮತದಾರರು

3 ಇತರರು

ಬೆಳಿಗ್ಗೆ **8** ರಿಂದ ಸಂಜೆ **4** ಮತದಾನದ ಸಮಯ

6,073 ಒಟ್ಟು ಮತಗಟ್ಟೆಗಳು

*ಮತದಾರರು ಯಾರು: ಶಾಸಕರು, ಸಂಸದರು, ಸ್ಥಳೀಯ ಸಂಸ್ಥೆಗಳು ಮತ್ತು ಗ್ರಾಮಪಂಚಾಯಿತಿ ಸದಸ್ಯರು

ಕಾನೂನು ವಿ.ವಿ.ಗೆ ವಿದ್ಯಾರ್ಥಿಗಳ ಮುತ್ತಿಗೆ



ಹುಬ್ಬಳ್ಳಿ: ಪ್ರಸ್ತುತ ಶೈಕ್ಷಣಿಕ ವರ್ಷದ 3 ಮತ್ತು 5ನೇ ಸೆಮಿಸ್ಟರ್ ಕಾನೂನು ತರಗತಿಗಳನ್ನು ಕೂಡಲೇ ಆರಂಭಿಸಬೇಕು ಹಾಗೂ ಭೌತಿಕ ಪರೀಕ್ಷೆ ಬದಲು ಅಸೈನ್ಮೆಂಟ್ ಮಾದರಿಯಲ್ಲಿ ಪರೀಕ್ಷೆ ನಡೆಸಬೇಕು ಎಂದು ಆಗ್ರಹಿಸಿ, ಇಲ್ಲಿನ ನವನಗರದ ಕಾನೂನು ವಿಶ್ವವಿದ್ಯಾಲಯದ ಬಳಿ ಪ್ರತಿಭಟನೆ ನಡೆಸುತ್ತಿರುವ ವಿದ್ಯಾರ್ಥಿಗಳು ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ನೇತೃತ್ವದಲ್ಲಿ ಗುರುವಾರ ವಿ.ವಿ.ಗೆ ಮುತ್ತಿಗೆ ಹಾಕಿದರು.

ಎನ್‌ಎಸ್‌ಯುಐ ನೇತೃತ್ವದಲ್ಲಿ ವಿದ್ಯಾರ್ಥಿಗಳು ನಾಲ್ಕು ದಿನಗಳಿಂದ ಪ್ರತಿಭಟನೆ ನಡೆಸುತ್ತಿದ್ದರು. ವಿದ್ಯಾರ್ಥಿಗಳ ಬೇಡಿಕೆಗೆ ಎಬಿವಿಪಿ ದನಿಗೂಡಿಸಿ, ಗುರುವಾರ ಕಾನೂನು ವಿ.ವಿ ಚಲೋ ಹಮ್ಮಿಕೊಂಡಿದ್ದರಿಂದ ಪ್ರತಿಭಟನೆ ತೀವ್ರಗೊಂಡಿತು. ವಿ.ವಿ ಪ್ರವೇಶ ದ್ವಾರದ ಬಳಿ ಜಮಾಯಿಸಿದ ವಿದ್ಯಾರ್ಥಿಗಳು ಬ್ಯಾರಿಕೇಡ್‌ಗಳನ್ನು ಸರಿಸಿ ಒಳಗೆ ನುಗ್ಗಿದರು. ಈ ವೇಳೆ ಪೊಲೀಸರು ಹಾಗೂ ವಿದ್ಯಾರ್ಥಿಗಳ ನಡುವೆ ತಳ್ಳಾಟ ಮತ್ತು ಮಾತಿನ ಚಕಮಕಿ ನಡೆಯಿತು.

ಎರಡು ದಿನದೊಳಗೆ ನಿರ್ಧಾರ: ಬಳಿಕ ವಿದ್ಯಾರ್ಥಿಗಳೊಂದಿಗೆ ಮಾತನಾಡಿದ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಪಿ.ಈಶ್ವರ ಭಟ್, ‘ಹೈಕೋರ್ಟ್ ನಿರ್ದೇಶನ ಮತ್ತು ಬಾರ್ ಕೌನ್ಸಿಲ್ ಮಾರ್ಗಸೂಚಿಯಂತೆ ಇದೇ 15ರಂದು ಭೌತಿಕವಾಗಿ ಪರೀಕ್ಷೆಯ ದಿನಾಂಕ ಘೋಷಿಸಲಾಗಿದೆ. ಅಧಿಸೂಚನೆಯಂತೆ ಪರೀಕ್ಷೆ ನಡೆಸದಿದ್ದರೆ, ನ್ಯಾಯಾಂಗ ನಿಂದನೆಯಾಗುತ್ತದೆ’ ಎಂದು ಹೇಳಿದರು.

ಮಾಜಿ ಸಚಿವ ಎಸ್.ಆರ್.ಮೋರೆ ನಿಧನ



ಧಾರವಾಡ: ಕಾಂಗ್ರೆಸ್ ಮುಖಂಡ, ಮಾಜಿ ಸಚಿವ ಎಸ್.ಆರ್.ಮೋರೆ (84) ಅವರು ಇಲ್ಲಿನ ಎಸ್‌ಡಿಎಂ ಆಸ್ಪತ್ರೆಯಲ್ಲಿ ಗುರುವಾರ ನಿಧನರಾದರು.

ಅವರಿಗೆ ಮೂವರು ಪುತ್ರಿಯರು ಇದ್ದಾರೆ. ಹುಬ್ಬಳ್ಳಿ– ಧಾರವಾಡ ಪಶ್ಚಿಮ ಕ್ಷೇತ್ರದಿಂದ ಸತತ ನಾಲ್ಕು ಬಾರಿ ಶಾಸಕರಾಗಿ ವಿಧಾನಸಭೆಗೆ ಆಯ್ಕೆಯಾಗಿದ್ದರು. ಎಸ್.ಬಂಗಾರಪ್ಪ ಅವರು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಸಹಕಾರ ಸಚಿವರಾಗಿ ಹಾಗೂ ಧರ್ಮಸಿಂಗ್ ಅವರ ನೇತೃತ್ವದ ಸರ್ಕಾರದಲ್ಲಿ ಪೌರಾಡಳಿತ ಸಚಿವರಾಗಿದ್ದರು.

ಈ ಭಾಗದಲ್ಲಿ ಆಶ್ರಯ ಮನೆಗಳ ವಿತರಣೆ ಹಾಗೂ ಹುಬ್ಬಳ್ಳಿ– ಧಾರವಾಡ ಜನರಿಗೆ ಕುಡಿಯುವ ನೀರು ಪೂರೈಕೆಗೆ ಸಾಕಷ್ಟು ಶ್ರಮಿಸಿದ್ದರು.

ಕೆಲವು ದಿನಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದ ಮೋರೆ ಅವರನ್ನು ಬುಧವಾರ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಗುರುವಾರ ಜನ್ಮದಿನ ಆಚರಿಸಿಕೊಳ್ಳಬೇಕಿದ್ದ ಅವರು ನಿಧನರಾಗಿದ್ದಾರೆ.

ಮೋರೆ ಅವರ ನಿವಾಸದಲ್ಲಿ ಪಾರ್ಥಿವ ಶರೀರದ ಅಂತಿಮ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿತ್ತು. ಪಿ.ಬಿ. ರಸ್ತೆಗೆ ಹೊಂದಿಕೊಂಡಿರುವ ಮೋರೆ ಫಾರ್ಮ್ ಹೌಸ್‌ನಲ್ಲಿ ಗುರುವಾರ ಸಂಜೆ ಅಂತ್ಯಕ್ರಿಯೆ ನೆರವೇರಿತು.

ರೈತರಿಗೆ ₹681.90 ಕೋಟಿ ಪರಿಹಾರ ವಿತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಳೆದ ಮೂರು ತಿಂಗಳಲ್ಲಿ ಒಟ್ಟು 10.62 ಲಕ್ಷ ರೈತರಿಗೆ ₹681.90 ಕೋಟಿ ಪರಿಹಾರವನ್ನು ಅವರ ಖಾತೆಗೆ ಪಾವತಿ ಮಾಡಲಾಗಿದೆ ಎಂದು ಕಂದಾಯ ಸಚಿವ ಆರ್.ಅಶೋಕ ಹೇಳಿದರು.

ಬೆಳೆ ನಷ್ಟ ಪರಿಹಾರವನ್ನು ಕೋರಿ ಇನ್ನೂ ಅರ್ಜಿಗಳು ಸಲ್ಲಿಕೆಯಾಗುತ್ತಿವೆ ಎಂದು ಅವರು ಸುದ್ದಿಗಾರರಿಗೆ ಗುರುವಾರ ತಿಳಿಸಿದರು.

ತಂತ್ರಾಂಶದ ಮೂಲಕ ಮಾಹಿತಿ ಸಲ್ಲಿಸಿದ ಎರಡು– ಮೂರು ದಿನಗಳಲ್ಲೇ ರೈತರಿಗೆ ಹಣ ಪಾವತಿ ಮಾಡುವ ವ್ಯವಸ್ಥೆ ಇಡೀ ದೇಶದಲ್ಲಿ ಕರ್ನಾಟಕವೇ ಮೊದಲು. ಅತ್ಯಂತ ಕಡಿಮೆ ಸಮಯದಲ್ಲಿ ಹೆಚ್ಚು ರೈತರಿಗೆ ಪರಿಹಾರವನ್ನು ವಿತರಿಸಲಾಗಿದೆ. ಇದೊಂದು ದಾಖಲೆ ಎಂದು ಅವರು ಹೇಳಿದರು.

ಹಿಂದೆ ಅರ್ಜಿ ಸಲ್ಲಿಸಿದ ಬಳಿಕ ಪರಿಹಾರ ಪಡೆಯಲು ಆರು ತಿಂಗಳಿಂದ ವರ್ಷ ಬೇಕಾಗುತ್ತಿತ್ತು. ಬುಧವಾರದವರೆಗೆ ಒಟ್ಟು 10,62,237 ರೈತರಿಗೆ ಪರಿಹಾರ ವಿತರಿಸಲಾಗಿದೆ. ಕಳೆದ 21 ದಿನಗಳಲ್ಲಿ ₹551 ಕೋಟಿ ಹಣ ಬಿಡುಗಡೆ ಮಾಡಲಾಗಿದೆ ಎಂದು ಅಶೋಕ ವಿವರಿಸಿದರು.

₹1,281 ಕೋಟಿಗೆ ಮನವಿ: ಮಳೆ ಮತ್ತು ಪ್ರವಾಹದಿಂದ ಉಂಟಾದ ಹಾನಿಗೆ ಎನ್‌ಡಿಆರ್‌ಎಫ್ ಅಡಿ ₹1,281 ಕೋಟಿ ಪರಿಹಾರ ನೀಡುವಂತೆ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆ. ದೆಹಲಿಯಿಂದ ಅಧಿಕಾರಿಗಳ ತಂಡ ಬಂದು ನಷ್ಟದ ಅಂದಾಜು ಮಾಡಬೇಕಾಗಿದೆ. ಮಳೆ ಮತ್ತು ಪ್ರವಾಹದಿಂದ ಉಂಟಾಗಿರುವ ಹಾನಿಯ ಬಗ್ಗೆ ವಿಡಿಯೋಗಳನ್ನು ಮಾಡಿಡಲಾಗಿದೆ. ಅಧಿಕಾರಿಗಳಿಗೆ ಅದನ್ನು ತೋರಿಸಿ ಬಳಿಕ ಸ್ಥಳ ಪರಿಶೀಲನೆಗೆ ಕರೆದೊಯ್ಯಲಾಗುವುದು ಎಂದು ತಿಳಿಸಿದರು.


ಕೋವಿಡ್ ಪರಿಹಾರಕ್ಕೆ ಜಾಗೃತಿ

ಕೋವಿಡ್‌ನಿಂದ ಮೃತಪಟ್ಟಿರುವ ಬಿಪಿಎಲ್ ಕುಟುಂಬಗಳಿಂದ ₹1 ಲಕ್ಷ ಪರಿಹಾರ ಪಡೆಯಲು ಹೆಚ್ಚಿನ ಅರ್ಜಿಗಳು ಬಂದಿಲ್ಲ. ಅರ್ಹರು ಅರ್ಜಿ ಸಲ್ಲಿಸುವಂತೆ ಮಾಡಲು ಜಾಗೃತಿ ಮೂಡಿಸಲು ಉದ್ದೇಶಿಸಲಾಗಿದೆ ಎಂದು ಸಚಿವ ಅಶೋಕ ಹೇಳಿದರು.

ಇಲ್ಲಿವರೆಗೆ ಒಟ್ಟು 15,990 ಅರ್ಜಿಗಳು ಬಂದಿವೆ. ಬಿಪಿಎಲ್ ಕುಟುಂಬದ ಸದಸ್ಯರಲ್ಲಿ ಯಾರೇ ಮೃತಪಟ್ಟಿದ್ದರೂ ಪರಿಹಾರ ನೀಡಲಾಗುವುದು. ಈ ಹಿಂದೆ ದುಡಿಯುವ ಸದಸ್ಯರಾಗಿರಬೇಕು ಎಂಬುದಾಗಿ ಇದ್ದ ನಿಬಂಧನೆ ತೆಗೆದು ಹಾಕಲಾಗಿದೆ. ಈ ಬಗ್ಗೆ ಜಿಲ್ಲಾಧಿಕಾರಿಗಳು, ಕಂದಾಯ ಇಲಾಖೆ ಇನ್‌ಸ್ಪೆಕ್ಟರ್‌ಗಳ ಮೂಲಕ ಜಾಗೃತಿ ಮೂಡಿಸಲಾಗುವುದು ಎಂದು ತಿಳಿಸಿದರು.

‘ಹಾಸ್ಟೆಲ್ ನಿಗಾಕ್ಕೆ ಜಂಟಿ ತಂಡ’

ಬೆಂಗಳೂರು: ವಸತಿ ಶಾಲೆಗಳು, ಹಾಸ್ಟೆಲ್‌ಗಳಲ್ಲಿ ಕೋವಿಡ್ ನಿಯಂತ್ರಣ ಮಾರ್ಗಸೂಚಿ ಅನುಷ್ಠಾನ ಕುರಿತು ನಿಗಾ ವಹಿಸಲು ತಾಲ್ಲೂಕು ಮಟ್ಟದಲ್ಲಿ ಶಿಕ್ಷಣ ಹಾಗೂ ಆರೋಗ್ಯ ಇಲಾಖೆ ಅಧಿಕಾರಿಗಳ ಜಂಟಿ ಸಮಿತಿ ರಚಿಸಲಾಗುವುದು ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ತಿಳಿಸಿದರು.



ಬಿ.ಸಿ. ನಾಗೇಶ್

ಸುದ್ದಿಗಾರರ ಜತೆ ಗುರುವಾರ ಮಾತನಾಡಿದ ಅವರು, ‘ಈಗ ಯಾವುದೇ ಶಾಲೆಗಳಲ್ಲಿ ಕೋವಿಡ್ ಸೋಂಕು ಕಂಡುಬಂದಿಲ್ಲ. ವಸತಿ ಶಾಲೆ ಮತ್ತು ಹಾಸ್ಟೆಲ್‌ಗಳಲ್ಲಿ ಮಾತ್ರ ಸೋಂಕಿನ ಪ್ರಕರಣಗಳು ಪತ್ತೆಯಾಗಿವೆ. ಆದ್ದರಿಂದ ಈ ಎರಡೂ ಸಂಸ್ಥೆಗಳ ಮೇಲೆ ಹೆಚ್ಚಿನ ನಿಗಾ ಇರಿಸಲು ಜಂಟಿ ತಂಡಗಳ ರಚನೆಗೆ ಸೂಚನೆ ನೀಡಲಾಗಿದೆ’ ಎಂದರು.

ವಸತಿ ಶಾಲೆ ಮತ್ತು ಹಾಸ್ಟೆಲ್‌ಗಳಲ್ಲಿ ಊಟ ಮಾಡುವಾಗ ಅಂತರ ಕಾಯ್ದುಕೊಳ್ಳಲು ಸೂಚಿಸಲಾಗಿದೆ. ವಿದ್ಯಾರ್ಥಿಗಳು ತೀರಾ ಹತ್ತಿರದಲ್ಲಿ ಮಲಗದಂತೆ ಎಚ್ಚರಿಕೆ ವಹಿಸಲು ಸೂಚನೆ ನೀಡಲಾಗಿದೆ. ಆದರೆ, ಯಾವುದೇ ಪ್ರತ್ಯೇಕ ಮಾರ್ಗಸೂಚಿ ಹೊರಡಿಸಿಲ್ಲ ಎಂದು ತಿಳಿಸಿದರು.

ಎರಡು ದಿನಗಳಲ್ಲಿ ಒಂದರಿಂದ ಹತ್ತನೇ ತಗರತಿ ವಿದ್ಯಾರ್ಥಿಗಳಲ್ಲಿ ಎಲ್ಲಿಯೂ ಕೋವಿಡ್ ಸೋಂಕು ಕಂಡುಬಂದಿಲ್ಲ. ಪದವಿಪೂರ್ವ ಕಾಲೇಜಿನಲ್ಲಿ ಮಾತ್ರ ಪ್ರಕರಣಗಳು ಪತ್ತೆಯಾಗಿವೆ. ಈಗಾಗಲೇ ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಸೇರಿ 172 ಮಂದಿಯಲ್ಲಿ ಕೋವಿಡ್ ಪತ್ತೆಯಾಗಿತ್ತು. 100 ಮಂದಿ ಗುಣಮುಖರಾಗಿದ್ದಾರೆ ಎಂದರು.

ಶಾಲೆಗಳನ್ನು ಮುಚ್ಚುವ ಪ್ರಸ್ತಾವವೇ ಇಲ್ಲ. ಹೊಸ ಮಾರ್ಗಸೂಚಿಯನ್ನೂ ನೀಡುವುದಿಲ್ಲ. ಈಗ ಇರುವ ಮಾರ್ಗಸೂಚಿಯೇ ಮುಂದುವರಿಯಲಿದೆ ಎಂದು ಸಚಿವರು ತಿಳಿಸಿದರು.

ಕಡ್ಡಾಯ ಇಲ್ಲ: ಶಾಲಾ ವಿದ್ಯಾರ್ಥಿಗಳ ಪೋಷಕರು ಎರಡು ಡೋಸ್ ಲಸಿಕೆ ಪಡೆದಿರುವುದನ್ನು ಕಡ್ಡಾಯಗೊಳಿಸಿಲ್ಲ. ಆ ರೀತಿ ಕಾನೂನಿನಲ್ಲಿ ಅವಕಾಶವಿಲ್ಲ. ಎರಡು ಡೋಸ್ ಲಸಿಕೆ ಪಡೆಯುವಂತೆ ಎಲ್ಲರಿಗೂ ಮನವೊಲಿಕೆ ಮಾಡಲಾಗುವುದು ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ನಿಧನ ವಾರ್ತೆ


ಪ್ರೊ. ಬಸಪ್ಪ ಕಲಿವಾಳ



ಧಾರವಾಡ: ಚನ್ನಬಸವೇಶ್ವರ ನಗರದ ನಿವಾಸಿ, ದಾವಣಗೆರೆ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ. ಬಸಪ್ಪ ಬಸವಣ್ಣೆಪ್ಪ ಕಲಿವಾಳ (66) ಗುರುವಾರ ಸಂಜೆ ಎಸ್‌ಡಿಎಂ ಆಸ್ಪತ್ರೆಯಲ್ಲಿ ನಿಧನರಾದರು. ಮೂತ್ರಪಿಂಡ ಸಮಸ್ಯೆಯಿಂದ ಬಳಲುತ್ತಿದ್ದರು. ಅವರಿಗೆ ಪತ್ನಿ, ಪುತ್ರ, ಪುತ್ರಿ ಇದ್ದಾರೆ.

ಇದೇ 10ರಂದು ಬೆಳಿಗ್ಗೆ 6 ರಿಂದ ಮಧ್ಯಾಹ್ನ 12 ರವರೆಗೆ ಅವರ ಮನೆಯಲ್ಲಿ ಸಾರ್ವಜನಿಕ ದರ್ಶನಕ್ಕೆ ಇಡಲಾಗುವುದು. ಶಿಗ್ಗಾವಿ ತಾಲ್ಲೂಕಿನ ನಾರಾಯಣಪುರದಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಮೂಲಗಳು ತಿಳಿಸಿವೆ.

ಡಾ.ಈಶ್ವರ ಮಂಟೂರ



ಬಾಗಲಕೋಟೆ: ಜಮಖಂಡಿ ತಾಲ್ಲೂಕಿನ ಹುನ್ನೂರು–ಮಧುರಖಂಡಿಯ ಬಸವಜ್ಞಾನ ಗುರುಕುಲದ ಮುಖ್ಯಸ್ಥರಾದ ಡಾ.ಈಶ್ವರ ಮಂಟೂರ (49) ಗುರುವಾರ ಮಧ್ಯಾಹ್ನ ಹೃದಯಾಘಾತದಿಂದ ಲಿಂಗೈಕ್ಯರಾದರು. ಅವರಿಗೆ ಇಬ್ಬರು ಪತ್ನಿಯರು, ಇಬ್ಬರು ಪುತ್ರರು ಇದ್ದಾರೆ.

ಈಶ್ವರ ಮಂಟೂರ ಬಸವ ತತ್ವ ಪ್ರಚಾರಕರಾಗಿ, ಕವಿಯಾಗಿ, ಚಿಂತಕರಾಗಿ, ಪ್ರವಚನಕಾರರಾಗಿ, ಸಾಹಿತಿಗಳಾಗಿ ಗುರುತಿಸಿಕೊಂಡಿದ್ದರು. ‘ಪ್ರಜಾವಾಣಿ’ಯಲ್ಲಿ ‘ವಚನಾಮೃತ’ ಅಂಕಣಕಾರರಾಗಿದ್ದರು.

ಬಸವಜ್ಞಾನ ಗುರುಕುಲದಲ್ಲಿ ಶುಕ್ರವಾರ (ಡಿ.10ರಂದು) ಬೆಳಿಗ್ಗೆ 11 ಗಂಟೆಗೆ ಅಂತ್ಯಸಂಸ್ಕಾರ ನಡೆಯಲಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	124.80	6,560	6,333
ಹಾರಂಗಿ	2,859	2,855.16	60	975
ಕಬಿನಿ	2,284	2,283.73	1,250	700
ಹೇಮಾವತಿ	2,922	2,913.58	1,333	2,780
ಲಿಂಗನಮಕ್ಕಿ	1,819	1,811.45	2,550	-
ಸೂಪಾ (ಮೀ)	564	554.39	209	2,776
ಮಾಣಿ	594.36	586.31	-	-
ತುಂಗಭದ್ರಾ	1,633	1,632.99	5,457	5,037
ಮಲಪ್ರಭಾ	2,079.50	2,077.35	719	719
ಘಟಪ್ರಭಾ	2,175	2,166.16	374	374
ಭದ್ರಾ	186	186	1,748	1,748
ಆಲಮಟ್ಟಿ (ಮೀ)	519.60	519.27	10,954	1174
ನಾರಾಯಣಪುರ (ಮೀ)	492.25	492.07	7440	7,501

* ನೆಲಮಟ್ಟದಿಂದ

64 ವರ್ಷಗಳ ನಂತರ ಮೈದುಂಬಿ ಹರಿದ ವೇದಾವತಿ

ವಾಣಿವಿಲಾಸಕ್ಕೆ ದಾಖಲೆಯ ನೀರು

ಪ್ರಜಾವಾಣಿ ವಾರ್ತೆ

ಹಿರಿಯೂರು: ವೇದಾವತಿ ನದಿ 64 ವರ್ಷಗಳ ನಂತರ ಮೈದುಂಬಿ ಹರಿದ ಪರಿಣಾಮ ತಾಲ್ಲೂಕಿನ ವಾಣಿವಿಲಾಸ ಜಲಾಶಯದ ನೀರಿನ ಮಟ್ಟ 125 ಅಡಿ ತಲುಪಿದೆ.

ಭದ್ರಾ ಮೇಲ್ದಂಡೆ ಯೋಜನೆ ಹಾಗೂ ವರುಣನ ಕೃಪೆಯಿಂದಲೂ ಜಲಾಶಯದ ನೀರಿನಮಟ್ಟ ಗುರುವಾರ 125 ಅಡಿ ದಾಟಿದೆ. ಇನ್ನು ಅರ್ಧ ಅಡಿ ನೀರು ಬಂದರೆ 1932ರಲ್ಲಿ ದಾಖಲಾಗಿದ್ದ 125.50 ಅಡಿ ನೀರಿನ ದಾಖಲೆಯನ್ನು ಸರಿಗಟ್ಟಲಿದೆ. ಜಲಾಶಯದ ಭರ್ತಿಗೆ ಕೇವಲ 5 ಅಡಿ ನೀರು ಬೇಕಿದ್ದು, ಕೋಡಿ ಬೀಳುವ ಕ್ಷಣವನ್ನು ಕಣ್ತುಂಬಿಕೊಳ್ಳಲು ಲಕ್ಷಾಂತರ ಜನರು ತುದಿಗಾಲಲ್ಲಿ ಕಾಯುತ್ತಿದ್ದಾರೆ.

ಚಿಕ್ಕಮಗಳೂರು ಜಿಲ್ಲೆಯ ಮುಳ್ಳಯ್ಯನಗಿರಿಯಲ್ಲಿ ಜನಿಸಿರುವ ವೇದಾ ನದಿಗೆ ಸಖರಾಯಪಟ್ಟಣದ ಸಮೀಪದಲ್ಲಿ ಕೆರೆ ನಿರ್ಮಿಸಲಾಗಿದೆ. ಆವತಿ ನದಿಗೆ ಮದಗದಕೆರೆ ನಿರ್ಮಿಸಲಾಗಿದೆ. ಈ ಎರಡೂ ಕೆರೆಗಳು ಕೋಡಿಬಿದ್ದ ನಂತರ ಕಡೂರು ತಾಲ್ಲೂಕಿನ ದೇವನೂರಿನ ಸಮೀಪ ಸಂಗಮವಾಗಿ ‘ವೇದಾವತಿ’ಯಾಗಿ ಹರಿದುಬರುತ್ತದೆ. ನದಿಗೆ ಅಡ್ಡಲಾಗಿ ಹಿರಿಯೂರು ತಾಲ್ಲೂಕಿನ ಮಾರಿಕಣಿವೆ ಸಮೀಪ ಅಣೆಕಟ್ಟೆ ನಿರ್ಮಾಣ ಮಾಡಲಾಗಿದೆ. ಬಯಲುಸೀಮೆಯ ಜನರ ನೀರಿನ ಬೇಗೆಯನ್ನು ನೀಗಿಸಲು ಮೈಸೂರಿನ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ತಮ್ಮ ತಾಯಿ ಕೆಂಪನಂಜಮ್ಮಣ್ಣಿ ಹೆಸರಿನಲ್ಲಿ ಕಟ್ಟಿಸಿರುವ ವಾಣಿವಿಲಾಸ ಜಲಾಶಯದಿಂದ ನೀರು ಕೋಡಿ ಬೀಳುವ ಹಾದಿಯಲ್ಲಿದೆ.



ಹಿರಿಯೂರು ತಾಲ್ಲೂಕಿನ ವಾಣಿವಿಲಾಸ ಜಲಾಶಯ ಗುರುವಾರ 125 ಅಡಿ ತಲುಪಿದ ಸಂದರ್ಭದಲ್ಲಿ ಕಂಡು ಬಂದ ದೃಶ್ಯ.

ನಾಲ್ಕು ವೈದ್ಯಕೀಯ ವಿಜ್ಞಾನ ಸಂಸ್ಥೆಗಳಿಗೆ ಅನುಮತಿ ನೀಡದ ಎನ್‌ಎಂಸಿ

ರಾಜ್ಯಕ್ಕೆ ಕೈತಪ್ಪಿತು 600 ವೈದ್ಯಕೀಯ ಸೀಟು

• ರಾಜೇಶ್ ರೈ ಚಟ್ಲ

ಬೆಂಗಳೂರು: ಈ ಶೈಕ್ಷಣಿಕ ಸಾಲಿನಲ್ಲಿ (2021-22) ನಾಲ್ಕು ಜಿಲ್ಲೆಗಳಲ್ಲಿ ಹೊಸದಾಗಿ ಆರಂಭಿಸಿರುವ ವೈದ್ಯಕೀಯ ವಿಜ್ಞಾನ ಸಂಸ್ಥೆಗಳಲ್ಲಿ ವೈದ್ಯಕೀಯ ಕೋರ್ಸ್‌ನ (ಎಂಬಿಬಿಎಸ್) ಪ್ರವೇಶಾತಿಗೆ ರಾಷ್ಟ್ರೀಯ ವೈದ್ಯಕೀಯ ಆಯೋಗ (ಎನ್‌ಎಂಸಿ) ಅನುಮತಿ ನೀಡಿಲ್ಲ. ಹೀಗಾಗಿ, ಈ ವರ್ಷ ರಾಜ್ಯಕ್ಕೆ ಒಟ್ಟು 600 ವೈದ್ಯಕೀಯ ಸೀಟುಗಳು ಕೈತಪ್ಪಿವೆ.

ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ. ಸುಧಾಕರ್ ತವರು ಜಿಲ್ಲೆಯಾದ ಚಿಕ್ಕಬಳ್ಳಾಪುರ ವೈದ್ಯಕೀಯ ವಿಜ್ಞಾನ ಸಂಸ್ಥೆ ಹಾಗೂ ಚಿಕ್ಕಮಗಳೂರು, ಯಾದಗಿರಿ ಮತ್ತು ಹಾವೇರಿ ಜಿಲ್ಲೆ ವೈದ್ಯಕೀಯ ವಿಜ್ಞಾನ ಸಂಸ್ಥೆಗಳಲ್ಲಿ ಕಟ್ಟಡ, ಮೂಲ ಸೌಕರ್ಯಗಳು, ಬೋಧಕ, ಬೋಧಕೇತರ ಸಿಬ್ಬಂದಿ ಕೊರತೆಯ ಕಾರಣ ನೀಡಿ ಸೀಟು ಮಂಜೂರಾತಿಗೆ ಎನ್‌ಎಂಸಿ ನಿರಾಕರಿಸಿದೆ.

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಅಡಿಯಲ್ಲಿ ಈ ವೈದ್ಯಕೀಯ ಕಾಲೇಜುಗಳನ್ನು ರಾಜ್ಯ ಸರ್ಕಾರ ಆರಂಭಿಸಿದೆ. ಈ ನಾಲ್ಕೂ ವೈದ್ಯಕೀಯ ವಿಜ್ಞಾನ ಸಂಸ್ಥೆಗಳಲ್ಲಿ ತಲಾ 150 ಸೀಟುಗಳಿವೆ.

ಆಯೋಗದ ಪರಿಶೀಲನಾ ತಂಡ (ಮೆಡಿಕಲ್ ಅಸೆಸ್ಮೆಂಟ್ ಆ್ಯಂಡ್ ರೇಟಿಂಗ್ ಬೋರ್ಡ್) ಈ ಜಿಲ್ಲೆಗಳ ವೈದ್ಯಕೀಯ ವಿಜ್ಞಾನ ಸಂಸ್ಥೆಗಳಿಗೆ ಭೇಟಿ ನೀಡಿ ಇದೇ ಸೆ. 29ರಂದು ವರದಿ ಸಲ್ಲಿಸಿತ್ತು. ಆ ವರದಿಯ ಆಧಾರದಲ್ಲಿ ಆಯೋಗ ಈ ಕ್ರಮ ತೆಗೆದುಕೊಂಡಿದೆ.

ಪ್ರಸಕ್ತ ಸಾಲಿನಲ್ಲಿ ಎಂಬಿಬಿಎಸ್ ಕೋರ್ಸ್‌ಗೆ ದಾಖಲಾತಿ ಅನುಮತಿ ನಿರಾಕರಿಸಿರುವ ಮಾಹಿತಿಯನ್ನು ಈಗಾಗಲೇ ಈ ನಾಲ್ಕೂ ವೈದ್ಯಕೀಯ ವಿಜ್ಞಾನ ಸಂಸ್ಥೆಗಳ ಡೀನ್‌ಗಳಿಗೆ ಎನ್‌ಎಂಸಿ ನೀಡಿದೆ. ಅಲ್ಲದೆ, ಕೊರತೆಗಳ ಪಟ್ಟಿಯನ್ನೂ ನೀಡಿದೆ.

ರಾಷ್ಟ್ರೀಯ ವೈದ್ಯಕೀಯ ಆಯೋಗ (ಈ ಹಿಂದೆ ಭಾರತೀಯ ವೈದ್ಯಕೀಯ ಮಂಡಳಿ ಆಗಿತ್ತು) ರೂಪಿಸಿರುವ 19 ಮಾನದಂಡಗಳನ್ನು ಪೂರೈಸಿದರೆ ಮಾತ್ರ ಯಾವುದೇ ವೈದ್ಯಕೀಯ ಕಾಲೇಜಿನಲ್ಲಿ ಎಂಬಿಬಿಎಸ್ ಕೋರ್ಸ್‌ಗೆ ಅನುಮತಿ ಸಿಗುತ್ತದೆ. ಆಯೋಗದ ಪರಿಶೀಲನಾ ತಂಡವು ಪ್ರತಿ ವರ್ಷ ಅನುಮತಿ ನೀಡುವುದಕ್ಕೂ ಮೊದಲು ಕಾಲೇಜುಗಳಿಗೆ ಭೇಟಿ ನೀಡಿ ಮೂಲಸೌಕರ್ಯ, ಗ್ರಂಥಾಲಯ ಸೌಲಭ್ಯ, ಬೋಧಕ ಸಿಬ್ಬಂದಿ ಸೇರಿದಂತೆ ಎಲ್ಲ ಸೌಕರ್ಯಗಳನ್ನು ಕೂಲಂಕಷವಾಗಿ ಪರಿಶೀಲನೆ ನಡೆಸುತ್ತದೆ.

ಈ ನಾಲ್ಕು ವೈದ್ಯಕೀಯ ವಿಜ್ಞಾನ ಸಂಸ್ಥೆಗಳಲ್ಲಿ ಮೂಲಸೌಕರ್ಯಗಳಾದ ಪ್ರಯೋಗಾಲಯ, ಪರೀಕ್ಷಾ ಕೊಠಡಿ, ಗ್ರಂಥಾಲಯ, ವಿದ್ಯಾರ್ಥಿ ನಿಲಯ, ಸಿಬ್ಬಂದಿ ನಿವಾಸಗಳು ನಿರ್ಮಾಣ ಹಂತದಲ್ಲಿದೆ. ಗ್ರಂಥಾಲಯ ಪುಸ್ತಕಗಳು, ಪತ್ರಿಕೆಗಳು, ಪ್ರಯೋಗಾಲಯಕ್ಕೆ ಅಗತ್ಯವಾದ ಸಾಮಗ್ರಿಗಳು, ಪೀಠೋಪಕರಣಗಳು ಇಲ್ಲ ಎಂದು ವರದಿಯಲ್ಲಿದೆ.

‘ಕೊರತೆಗಳನ್ನು ತುಂಬಲು ಮೂರು ವಾರಗಳ ಕಾಲಾವಕಾಶವನ್ನು ಎನ್‌ಎಂಸಿ ನೀಡಿದೆ. ಆದರೆ, ಅಷ್ಟೊ ಕೊರತೆಗಳನ್ನು ಕೆಲವೇ ದಿನಗಳಲ್ಲಿ ಭರ್ತಿ ಮಾಡುವುದು ಸುಲಭವಲ್ಲ. ಆದರೂ ಈ ನಿಟ್ಟಿನಲ್ಲಿ ಪ್ರಯತ್ನಗಳು ನಡೆದಿವೆ’ ಎಂದು ವೈದ್ಯಕೀಯ ಶಿಕ್ಷಣ ಇಲಾಖೆಯ ಮೂಲಗಳು ತಿಳಿಸಿವೆ.

ಈ ಬಗ್ಗೆ ಪ್ರತಿಕ್ರಿಯೆಗೆ ವೈದ್ಯಕೀಯ ಶಿಕ್ಷಣ ಸಚಿವರನ್ನು ಸಂಪರ್ಕಿಸಲು ಯತ್ನಿಸಿದರೂ ಅವರು ಸಂಪರ್ಕಕ್ಕೆ ಸಿಗಲಿಲ್ಲ.

ಪ್ರಜಾವಾಣಿ ವಿಶೇಷ

ಎರಡನೇ ಬಾರಿಯೂ ತಿರಸ್ಕರಿಸಿದ ಎನ್‌ಎಂಸಿ

ಸೆ. 21ರಂದು ಸಲ್ಲಿಸಿದ್ದ ವರದಿಯಲ್ಲಿ ಉಲ್ಲೇಖಿಸಿದ್ದ ಕೊರತೆಗಳನ್ನು ಸರಿಪಡಿಸಿದ್ದು, ಮರು ಪರಿಶೀಲಿಸುವಂತೆ ಎನ್‌ಎಂಸಿಗೆ ಚಿಕ್ಕಮಗಳೂರು ವೈದ್ಯಕೀಯ ವಿಜ್ಞಾನ ಸಂಸ್ಥೆ ಮನವಿ ಮಾಡಿತ್ತು. ಆ ಮನವಿಯಂತೆ, ಒದಗಿಸಿದ ಸೌಲಭ್ಯಗಳ ಬಗ್ಗೆ ಅ. 18ರಂದು ಸಂಸ್ಥೆಯ ಮುಖ್ಯಸ್ಥರ ಜೊತೆ ಸಂವಾದ ನಡೆಸಿದ ಎನ್‌ಎಂಸಿ ತಂಡ, ವರ್ಚುವಲ್ ವಿಚಾರಣೆ ಮತ್ತು ನೇರ ವಿಡಿಯೊ ಮೂಲಕ ಪರಿಶೀಲನೆ ನಡೆಸಿತ್ತು.

ಅದರೆ, ಇದರಿಂದ ತೃಪ್ತರಾಗದ ಎನ್‌ಎಂಸಿ ಅ. 25ರಂದು ಮತ್ತೆ ಪತ್ರ ಬರೆದು, 'ಕಾಲೇಜು ಕಟ್ಟಡ ಕಟ್ಟಲಾಗಿದೆ. ಆದರೆ, ಇನ್ನೂ ಪೀಠೋಪಕರಣಗಳು ಮತ್ತು ಇತರ ಉಪಕರಣಗಳನ್ನು ಒದಗಿಸಿಲ್ಲ. ಬೋಧಕ ಸಿಬ್ಬಂದಿ ನೇಮಕಾತಿ ಪ್ರಕ್ರಿಯೆ ಪ್ರಗತಿಯಲ್ಲಿದೆ. ಇಂಥ ಸ್ಥಿತಿಯಲ್ಲಿ ಪ್ರಸಕ್ತ ಸಾಲಿಗೆ ಎಂಬಿಬಿಎಸ್ ಪ್ರವೇಶಾತಿಗೆ ಮಂಜೂರಾತಿ ಕೊಡಲು ಸಾಧ್ಯ ಇಲ್ಲ. ಅಲ್ಲದೆ, ಈ ಬಗ್ಗೆ ಮತ್ತೊಮ್ಮೆ ಪತ್ರ ವ್ಯವಹಾರಕ್ಕೂ ಅವಕಾಶ ಇಲ್ಲ' ಎಂದು ಸ್ಪಷ್ಟಪಡಿಸಿದೆ.

ಹಾವೇರಿ ವೈದ್ಯಕೀಯ ವಿಜ್ಞಾನ ಸಂಸ್ಥೆಯ ಕಟ್ಟಡವನ್ನು ಸರ್ಕಾರಿ ಎಂಜಿನಿಯರಿಂಗ್ ಕಾಲೇಜಿನಿಂದ ಲೀಸ್ ಆಧಾರದಲ್ಲಿ ಬಾಡಿಗೆಗೆ ಪಡೆಯಲಾಗಿದೆ. ಬೋಧಕ ಸಿಬ್ಬಂದಿಗೆ ಕ್ವಾಟರ್ಸ್ ಇಲ್ಲ. ಪ್ರಯೋಗಾಲಯ, ಗ್ರಂಥಾಲಯವೂ ಇಲ್ಲ. ಉಪಕರಣಗಳು, ಪುಸ್ತಕಗಳ ಖರೀದಿಯೂ ಆಗಿಲ್ಲ. ಎಲ್ಲ ಕಟ್ಟಡಗಳಿಗೆ ಪೀಠೋಪಕರಣಗಳನ್ನು ಇನ್ನೂ ಒದಗಿಸಿಲ್ಲ. ಆಸ್ಪತ್ರೆ ಕಾರ್ಯಾಚರಿಸುತ್ತಿದ್ದರೂ 18 ಹಾಸಿಗೆಗಳ ಕೊರತೆ ಇದೆ. ಅಲ್ಲದೆ, ತುರ್ತು ವಾರ್ಡ್, ಇತರ ಸೌಲಭ್ಯಗಳ ಕೊರತೆಯೂ ಇದೆ. ಚಿಕ್ಕಬಳ್ಳಾಪುರ ಮತ್ತು ಯಾದಗಿರಿ ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲೂ ಇದೇ ರೀತಿಯ ಕೊರತೆಗಳಿವೆ ಎಂದು ಎನ್‌ಎಂಸಿಯ ವರದಿಯಲ್ಲಿದೆ.

ಯಾವ ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿ ಎಷ್ಟು ಕೊರತೆ? (ಶೇಕಡಾ)

ವಿಷಯ	ಚಿಕ್ಕಬಳ್ಳಾಪುರ	ಚಿಕ್ಕಮಗಳೂರು	ಹಾವೇರಿ	ಯಾದಗಿರಿ
ಬೋಧಕರು	70	83.33	98	100
ಸ್ಥಾನಿಕ ವೈದ್ಯರು/ ಟ್ಯೂಟರ್	32.5	79.06	100	100
ನರ್ಸಿಂಗ್, ಅರೆ ವೈದ್ಯಕೀಯ ಸಿಬ್ಬಂದಿ	ಕೊರತೆ ಇದೆ	-	-	ನರ್ಸಿಂಗ್75, ಅರೆವೈದ್ಯಕೀಯ 83

ಎಸ್ಸೆಸ್ಸೆಲ್ಸಿ: ಈ ಬಾರಿ ಬಹು ಆಯ್ಕೆ ಪ್ರಶ್ನೆ ಇಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈ ಬಾರಿಯ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಬಹು ಆಯ್ಕೆ ಪ್ರಶ್ನೆಗಳನ್ನು ಕೈಬಿಡಲು ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ ನಿರ್ಧರಿಸಿದೆ.

ಕೋವಿಡ್–19 ಕಾರಣಕ್ಕೆ 2021ನೇ ಸಾಲಿನ ಪರೀಕ್ಷೆಯಲ್ಲಿ ಈ ವ್ಯವಸ್ಥೆ ಜಾರಿಗೊಳಿಸಲಾಗಿತ್ತು.

’ಶಿಕ್ಷಕರು ಮತ್ತು ತಜ್ಞರ ಅಭಿಪ್ರಾಯಗಳನ್ನು ಪಡೆದು ಬಹು ಆಯ್ಕೆ ಪ್ರಶ್ನೆಗಳನ್ನು ಕೈಬಿಡಲಾಗಿದೆ. ವಿದ್ಯಾರ್ಥಿಗಳ ಹಿತಾಸಕ್ತಿಯಿಂದಲೇ ಈ ನಿರ್ಧಾರ ಕೈಗೊಳ್ಳಲಾಗಿದೆ. ವಿವರವಾಗಿ ಉತ್ತರ ಬರೆಯುವ ಪದ್ಧತಿಯಿಂದ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ’ ಎಂದು ಅಧಿಕಾರಿಯೊಬ್ಬರು ಅಭಿಪ್ರಾಯಪಟ್ಟಿದ್ದಾರೆ.

ಪ್ರಥಮ ಭಾಷೆ ಹೊರತುಪಡಿಸಿ ಉಳಿದ ವಿಷಯಗಳಿಗೆ 100 ಅಂಕಗಳನ್ನು ನಿಗದಿಪಡಿಸಲಾಗಿದೆ. ಇದರಲ್ಲಿ 20 ಅಂಕಗಳಿಗೆ ಆಂತರಿಕ ಪರೀಕ್ಷೆ ನಡೆಸಲಾಗುತ್ತದೆ. ಪ್ರಥಮ ಭಾಷೆಗೆ ಮಾತ್ರ 125 ಅಂಕಗಳನ್ನು ನಿಗದಿಪಡಿಸಲಾಗಿದೆ.

‘ಮಕ್ಕಳಲ್ಲಿ ಬರವಣಿಗೆ ಕೌಶಲ ಮತ್ತು ಜ್ಞಾನಮಟ್ಟ ಬೆಳೆಯುವುದು ಮುಖ್ಯ. ಬಹು ಆಯ್ಕೆ ಪ್ರಶ್ನೆಗಳಿಂದ ವಿದ್ಯಾರ್ಥಿಗಳು ಬರೆಯುವುದನ್ನು ಮರೆಯುತ್ತಾರೆ. ವಿದ್ಯಾರ್ಥಿಗಳು ವಿಷಯದ ವಿಶ್ಲೇಷಣೆ ನಡೆಸಿ ಬರೆಯುವುದು ಮುಖ್ಯವಾಗಬೇಕು’ ಎಂದು ಕರ್ನಾಟಕ ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ಅಧ್ಯಕ್ಷ ಎಚ್.ಕೆ. ಮಂಜುನಾಥ್ ಅಭಿಪ್ರಾಯಪಟ್ಟಿದ್ದಾರೆ.

ಶಾಲೆಗಳಲ್ಲಿ ಪ್ಲಾಸ್ಟಿಕ್ ಬಳಕೆ ನಿಷೇಧ

ಬೆಂಗಳೂರು: ರಾಜ್ಯದ ಎಲ್ಲ ಶಾಲೆಗಳಲ್ಲಿ ಪ್ಲಾಸ್ಟಿಕ್ ಬಳಕೆಯನ್ನು ನಿಷೇಧಿಸಿ ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರು ಸುತ್ತೋಲೆ ಹೊರಡಿಸಿದ್ದಾರೆ.

‘ಶೈಕ್ಷಣಿಕ ಸಂಸ್ಥೆಗಳ ಸಭೆ ಮತ್ತು ಸಮಾರಂಭಗಳಲ್ಲಿ ಪ್ಲಾಸ್ಟಿಕ್ ಕ್ಯಾರಿಬ್ಯಾಗ್, ಭಿತ್ತಿಪತ್ರ, ತೋರಣ, ಬಾವುಟ, ಫ್ಲೆಕ್ಸ್, ತಟ್ಟೆ, ಲೋಟ, ಚಮಚ, ಥರ್ಮಕೋಲ್ ಹಾಗೂ ಪ್ಲಾಸ್ಟಿಕ್ ಬೀಡ್ಸ್‌ಗಳಿಂದ ತಯಾರಾದ ವಸ್ತುಗಳ ಬಳಕೆಯನ್ನು ಕಡ್ಡಾಯವಾಗಿ ನಿಷೇಧಿಸಲಾಗಿದೆ’ ಎಂದು ಸುತ್ತೋಲೆಯಲ್ಲಿ ಉಲ್ಲೇಖಿಸಲಾಗಿದೆ.

ಎಲ್ಲ ಜಿಲ್ಲೆಗಳ ಉಪನಿರ್ದೇಶಕರು ಈ ಆದೇಶವನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಅಗತ್ಯ ಕ್ರಮಕೈಗೊಳ್ಳಬೇಕು ಎಂದು ಸೂಚಿಸಿದ್ದಾರೆ.

24 ವಿದ್ಯಾರ್ಥಿಗಳಿಗೆ ಕೋವಿಡ್

ಭದ್ರಾವತಿ: ಇಲ್ಲಿಯ ನಿರ್ಮಲ ಆಸ್ಪತ್ರೆಯ ನರ್ಸಿಂಗ್ ಕಾಲೇಜಿನ 24 ವಿದ್ಯಾರ್ಥಿಗಳಿಗೆ ಕೋವಿಡ್ ಇರುವುದು ದೃಢಪಟ್ಟಿದೆ. ಗುರುವಾರ ಆಸ್ಪತ್ರೆ ಹಾಗೂ ಕಾಲೇಜು ಆವರಣವನ್ನು ಸೀಲ್‌ಡೌನ್ ಮಾಡಲಾಗಿದೆ.

ಶಿವಮೊಗ್ಗದ ಆಸ್ಪತ್ರೆಯಲ್ಲಿ ನರ್ಸಿಂಗ್ ಪರೀಕ್ಷೆ ನಡೆಯುತ್ತಿದ್ದು, ನ. 30ರಿಂದ ಡಿ.7ರವರೆಗೆ ನಿರ್ಮಲ ಆಸ್ಪತ್ರೆಯ ನರ್ಸಿಂಗ್ ಕಾಲೇಜಿನ 176 ವಿದ್ಯಾರ್ಥಿಗಳು ಪರೀಕ್ಷೆ ಬರೆದು ಬಂದಿದ್ದರು. ಮಂಗಳವಾರ ಸಂಜೆ ಈ ವಿದ್ಯಾರ್ಥಿಗಳನ್ನು ತಪಾಸಣೆ ಮಾಡಿದಾಗ ಅವರಲ್ಲಿ 24 ಮಂದಿಯಲ್ಲಿ ಸೋಂಕು ದೃಢಪಟ್ಟಿದೆ.

ವಿವಾದರಹಿತವಾಗಿ, ಗಡುವು ಮೀರದೆ ಹೊಸ ನೇಮಕ: ಸರ್ಕಾರದ ನಿರೀಕ್ಷೆ

ಸಿಡಿಎಸ್ ಹುದ್ದೆಗೆ ಜ. ನರವಣೆ?

ಪ್ರಜಾವಾಣಿ ವಾರ್ತೆ



ಅಪಘಾತದಲ್ಲಿ ಮೃತಪಟ್ಟ ಜನರಲ್ ಬಿಪಿನ್ ರಾವತ್ ಅವರ ಮೃತದೇಹವನ್ನು ದೆಹಲಿಯ ಪಾಲಂ ವಾಯುನೆಲೆಗೆ ಗುರುವಾರ ತರಲಾಯಿತು



ಜನರಲ್ ಬಿಪಿನ್ ರಾವತ್ ಅವರ ಪುತ್ರಿಯರು ದೆಹಲಿಯ ಪಾಲಂ ವಾಯುನೆಲೆಗೆ ಬಂದರು–ಪಿಟಿಐ ಚಿತ್ರಗಳು

ನವದೆಹಲಿ: ಸೇನಾ ಪಡೆಗಳ ಮುಖ್ಯಸ್ಥ (ಸಿಡಿಎಸ್) ಹುದ್ದೆಗೆ ನೇಮಕ ಪ್ರಕ್ರಿಯೆಯನ್ನು ಸರ್ಕಾರವು ತಕ್ಷಣವೇ ಆರಂಭಿಸಲಿದೆ. ಭೂಸೇನೆಯ ಮುಖ್ಯಸ್ಥ ಜನರಲ್ ಎಂ.ಎಂ. ನರವಣೆ ಅವರೇ ಈ ಹುದ್ದೆಗೆ ಏರುವ ಸಾಧ್ಯತೆ ಹೆಚ್ಚು ಎನ್ನಲಾಗಿದೆ. ಸಿಡಿಎಸ್ ಆಗಿದ್ದ ಜ. ಬಿಪಿನ್ ರಾವತ್ ಅವರು ಹೆಲಿಕಾಪ್ಟರ್ ಪತನದಲ್ಲಿ ಮೃತರಾದ ಕಾರಣ ಹುದ್ದೆ ಖಾಲಿ ಆಗಿದೆ.

ನರವಣೆ ಅವರು ಐದು ತಿಂಗಳಲ್ಲಿ ನಿವೃತ್ತರಾಗಲಿದ್ದಾರೆ. ಹಾಗಾಗಿ, ಸಿಡಿಎಸ್ ಆಗಿ ಅವರನ್ನೇ ನೇಮಿಸುವುದು ಉತ್ತಮ ಎಂದು ಸೇನೆಯ ಹಲವು ನಿವೃತ್ತ ಅಧಿಕಾರಿಗಳು ಹೇಳಿದ್ದಾರೆ.

ಭೂಸೇನೆ, ನೌಕಾಪಡೆ ಮತ್ತು ವಾಯುಪಡೆಯ ಹಿರಿಯ ಕಮಾಂಡರ್‌ಗಳಿರುವ ಸಮಿತಿಯನ್ನು ಸರ್ಕಾರ ರಚಿಸಲಿದೆ. ಈ ಸಮಿತಿಯು ಮೂರು ದಿನಗಳಲ್ಲಿ ತನ್ನ ಶಿಫಾರಸುಗಳನ್ನು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರಿಗೆ ಸಲ್ಲಿಸಲಿದೆ. ರಾಜನಾಥ್ ಅವರ ಅನುಮೋದನೆ ಬಳಿಕ, ಸಚಿವ ಸಂಪುಟದ ನೇಮಕಾತಿ ಸಮಿತಿಯು ಅಂತಿಮ ನಿರ್ಧಾರ ಕೈಗೊಳ್ಳಲಿದೆ.

ಮೂರು ಭದ್ರತಾ ಪಡೆಗಳ ನಡುವೆ ಸಮನ್ವಯ ಸಾಧಿಸುವುದು ಸೇರಿದಂತೆ ಜನರಲ್ ಬಿಪಿನ್ ರಾವತ್ ಅವರು ಪೂರ್ಣಗೊಳಿಸದೇ ಬಾಕಿ ಉಳಿಸಿರುವ ಕೆಲಸಗಳನ್ನು ಹೊಸದಾಗಿ ನೇಮಕವಾಗಲಿರುವ ಸೇನಾಪಡೆಗಳ ಮುಖ್ಯಸ್ಥ (ಸಿಡಿಎಸ್) ಮುಂದುವರಿಸಬೇಕಿದೆ.

ಪ್ರಸ್ತಾವಿತ ಸೇನಾ ಸುಧಾರಣೆ, ಎಲ್ಲರನ್ನೂ ಜತೆಗೆ ತೆಗೆದುಕೊಂಡು ಹೋಗುವ ಪ್ರಕ್ರಿಯೆ ಹಾಗೂ ಯಾವುದೇ ವಿವಾದಕ್ಕೆ ಅವಕಾಶ ಮಾಡಿಕೊಡದಂತೆ ನೂತನ ಸಿಡಿಎಸ್ ಕೆಲಸ ಮಾಡಬೇಕು ಎಂಬುದು ಸರ್ಕಾರದ ಬಯಕೆಯಾಗಿದೆ.

ಸೇನೆ, ವಾಯುಪಡೆ ಮತ್ತು ನೌಕಾಪಡೆಯ ಮುಖ್ಯಸ್ಥರ ಜೊತೆ ಜನರಲ್ ರಾವತ್ ಅವರು ಕೆಲವ ವಾರಗಳ ಹಿಂದೆ ಸಭೆ ನಡೆಸಿದ್ದರು. ಮೂರು ಪಡೆಗಳಲ್ಲಿ ಆಗಬೇಕಿರುವ ಸುಧಾರಣಾ ಕ್ರಮಗಳನ್ನು ಅಧ್ಯಯನ ಮಾಡಿ ವರದಿ ಸಲ್ಲಿಸುವುದಕ್ಕೆ ಇದ್ದ ಗಡುವನ್ನು 2022ರ ಸೆಪ್ಟೆಂಬರ್‌ನಿಂದ 2022ರ ಏಪ್ರಿಲ್‌ಗೆ ಇಳಿಸಿದ್ದರು.

ಎರಡರಿಂದ ಮೂರು ವರ್ಷಗಳಲ್ಲಿ ಈ ಎಲ್ಲ ಪ್ರಕ್ರಿಯೆಗಳು ಕಾರ್ಯರೂಪಕ್ಕೆ ಬರಲಿವೆ ಎಂದು ರಕ್ಷಣಾ ಸಚಿವಾಲಯ ನಿರೀಕ್ಷೆ ಇಟ್ಟುಕೊಂಡಿದೆ. ಜನರಲ್ ರಾವತ್ ಅವರ ನಿಧನ ಸೇನಾಪಡೆಗಳಲ್ಲಿ ದೊಡ್ಡ ನಿರ್ವಾತವನ್ನು ಸೃಷ್ಟಿಸಿದೆ. ಆದರೆ ಅವರ ಸ್ಥಾನಕ್ಕೆ ಬದಲಿ ಆಯ್ಕೆ ಮಾಡುವ ಮೂಲಕ, ರಾವತ್ ಅವರು ಪ್ರಸ್ತಾಪಿಸಿದ್ದ ಸೇನಾ ಸುಧಾರಣಾ ಪ್ರಕ್ರಿಯೆಯ ಕಾವು ಆರದಂತೆ ನೋಡಿಕೊಳ್ಳಲು ಸರ್ಕಾರ ನಿರ್ಧರಿಸಿದೆ.

ಸೇನಾಪಡೆಗಳ ಮೂಲ ಸಂರಚನೆಯಲ್ಲಿ ಬದಲಾವಣೆ ಮಾಡುವ ಕುರಿತು ಇತ್ತೀಚೆಗೆ ಭಿನ್ನಾಭಿಪ್ರಾಯ ವ್ಯಕ್ತವಾಗಿತ್ತು. ವಾಯುಪಡೆಯು ಸೇನಾಪಡೆಗೆ ವಾಯುಬಲ ತುಂಬುವ ಘಟಕವಾಗಿ ಕೆಲಸ ಮಾಡಲಿದೆ ಎಂದು ರಾವತ್ ಹೇಳಿದ್ದರು. ಇದಕ್ಕೆ ಸಾರ್ವಜನಿಕವಾಗಿ ಆಕ್ಷೇಪ ವ್ಯಕ್ತಪಡಿಸಿದ್ದ ಏರ್ ಚೀಫ್ ಮಾರ್ಷಲ್ ಆರ್.ಕೆ.ಎಸ್. ಬಧೌರಿಯಾ, ವಾಯುಪಡೆ ಪಾತ್ರ ನಿರ್ಣಾಯಕ ಎಂದು ಪ್ರತಿಪಾದಿಸಿದ್ದರು.

ಪ್ರಸ್ತಾವಿತ ಸೇನಾ ಸುಧಾರಣೆ ಹೇಗಿದೆ?

17 ಸ್ವತಂತ್ರ ಕಮಾಂಡ್‌ಗಳನ್ನು ಐದು ಕಮಾಂಡ್‌ಗಳಾಗಿ ಪುನರ್‌ರೂಪಿಸುವ ವಿಚಾರವು ಪ್ರಸ್ತಾವಿತ ಸೇನಾ ಸುಧಾರಣೆಯಲ್ಲಿದೆ. ವಾಯುಪಡೆ ನೇತೃತ್ವದಲ್ಲಿ ಏರ್ ಡಿಫೆನ್ಸ್ ಕಮಾಂಡ್, ನೌಕಾಪಡೆ ನೇತೃತ್ವದಲ್ಲಿ ಮೆರಿಟೈಮ್ ಕಮಾಂಡ್ ಹಾಗೂ ಸೇನೆ ನೇತೃತ್ವದಲ್ಲಿ ಮೂರು ಭೂಸೇನಾ ಕಮಾಂಡ್‌ಗಳು ಕೆಲಸ ಮಾಡಲಿವೆ.

ಸೇನೆ ನೇತೃತ್ವದ ಪೂರ್ವ ಕಮಾಂಡ್ ಹಾಗೂ ಉತ್ತರ ಕಮಾಂಡ್‌ಗಳಿಗೆ ವಿವಾದಿತ ಭಾರತ–ಚೀನಾ ಗಡಿಯಲ್ಲಿ ಉಂಟಾಗುವ ಯಾವುದೇ ಬೆದರಿಕೆಯನ್ನು ನಿವಾರಿಸುವ ಜವಾಬ್ದಾರಿ ನೀಡಲಾಗಿದೆ. ಮತ್ತೊಂದು ಘಟಕವಾದ ಪಶ್ಚಿಮ ಕಮಾಂಡ್‌ಗೆ ಭಾರತ–ಪಾಕ್ ಗಡಿಯ ಹೊಣೆ ನೀಡುವ ಪ್ರಸ್ತಾವವಿದೆ.



ಲಖ್ವಿಂದರ್ ಸಿಂಗ್ ಲಿದ್ದರ್ ಅವರ ಸಂಬಂಧಿಯೊಬ್ಬರು ಕಣ್ಣೀರು ಹಾಕಿದರು

ಬಡ್ತಿಗೆ ಕಾದಿದ್ದ ಬ್ರಿಗೇಡಿಯರ್ ಲಿದ್ದರ್

ನವದೆಹಲಿ (ಪಿಟಿಐ): ತಮಿಳುನಾಡಿನಲ್ಲಿ ಸಂಭವಿಸಿದ ಹೆಲಿಕಾಪ್ಟರ್ ದುರಂತದಲ್ಲಿ ಮಡಿದ ಸೇನಾ ಸಿಬ್ಬಂದಿಯಲ್ಲಿ ಒಬ್ಬರಾದ ಬ್ರಿಗೇಡಿಯರ್ ಲಖ್ವಿಂದರ್ ಸಿಂಗ್ ಲಿದ್ದರ್ ಸದ್ಯದಲ್ಲೇ ಮೇಜರ್ ಜನರಲ್ ಆಗಿ ಅವರು ಬಡ್ತಿ ಪಡೆಯಲಿದ್ದರು ಎನ್ನಲಾಗಿದೆ.

ಸೇನಾಪಡೆಗಳ ಮುಖ್ಯಸ್ಥ ಜನರಲ್ ಬಿಪಿನ್ ರಾವತ್ ಅವರಿಗೆ ರಕ್ಷಣಾ ಸಹಾಯಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಅವರು, ಮೂರೂ ಸೇನೆಗಳ ನಡುವಿನ ಸಮನ್ವಯ ಸುಧಾರಣಾ ಯೋಜನೆಗಳ ಸಾಕಷ್ಟು ಕೆಲಸ ಮಾಡಿದ್ದರು. ಜಮ್ಮು ಮತ್ತು ಕಾಶ್ಮೀರದಲ್ಲಿ ನಡೆಸಲಾಗಿದ್ದ ಭಯೋತ್ಪಾದನೆ ನಿಗ್ರಹ ಕಾರ್ಯಾಚರಣೆಗಳಲ್ಲಿ ಪ್ರಮುಖ ಪಾತ್ರವಹಿಸಿದ್ದರು. ಜೊತೆಗೆ, ಭಾರತ–ಚೀನಾ ಗಡಿಯಲ್ಲಿ ಸೇನಾ ತುಕಡಿ ಮುನ್ನಡೆಸಿದ್ದರು.

1990ರಲ್ಲಿ ಅವರು ಜಮ್ಮು ಮತ್ತು ಕಾಶ್ಮೀರ ರೈಫಲ್ಸ್‌ಗೆ ನಿಯೋಜನೆಗೊಂಡಿದ್ದರು. ಬಳಿಕ ಅವರು ಸೇನಾ ತುಕಡಿಯನ್ನು ಮುನ್ನಡೆಸಿದ್ದರು. ಕಝಕಿಸ್ತಾನದ ರಾಯಭಾರ ಕಚೇರಿಯಲ್ಲಿಯೂ ಲಿದ್ದರ್ ಸೇವೆ ಸಲ್ಲಿಸಿದ್ದರು.

ತಮ್ಮ ಸೇವೆಗಾಗಿ 'ಸೇನಾ ಪದಕ' ಮತ್ತು 'ವಿಶಿಷ್ಟ ಸೇವಾ ಪದಕ'ಗಳನ್ನು ಲಿದ್ದರ್ ಪಡೆದಿದ್ದಾರೆ.

ಬ್ರಿಗೇಡಿಯರ್ ಲಿದ್ದರ್ ಕುರಿತು ಕೇಂದ್ರದ ಮಾಜಿ ಸಚಿವ, ನಿವೃತ್ತ ಯೋಧ ರಾಜ್ಯವರ್ಧನ್ ರಾಥೋಡ್ ಟ್ವೀಟ್ ಮಾಡಿದ್ದಾರೆ. 'ಎನ್‌ಡಿಎಯಲ್ಲಿ ನಾವು ಒಟ್ಟಿಗೆ ತರಬೇತಿ ಪಡೆದೆವು. ಕಾಶ್ಮೀರದಲ್ಲಿ ಭಯೋತ್ಪಾದಕರ ವಿರುದ್ಧ ಒಟ್ಟಿಗೆ ಹೋರಾಡಿದೆವು. ಲಿದ್ದರ್ ನಿಧನದಿಂದ ಒಬ್ಬ ಅಪ್ರತಿಮ ಮತ್ತು ಧೈರ್ಯಶಾಲಿ ಅಧಿಕಾರಿಯನ್ನು ಭಾರತ ಕಳೆದುಕೊಂಡಿದೆ. ನಾನು ಒಬ್ಬ ಸ್ನೇಹಿತನನ್ನು ಕಳೆದುಕೊಂಡಿದ್ದೇನೆ' ಎಂದು ಹೇಳಿದ್ದಾರೆ.

ಲಿದ್ದರ್ ಹರಿಯಾಣದ ಪಂಚ್‌ಕುಲದವರು. ಪತ್ನಿ ಮತ್ತು ಮಗಳನ್ನು ಅಗಲಿದ್ದಾರೆ.

ಮೃತದೇಹ ಸುಟ್ಟು ಕರಕಲು; ಪತ್ತೆಯಾಗದ ಉಳಿದವರ ಗುರುತು

ರಾವತ್ ಸೇರಿ ಮೂವರ ಗುರುತು ಪತ್ತೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಎಂಐ 17ವಿ5 ಹೆಲಿಕಾಪ್ಟರ್ ಅಪಘಾತದಲ್ಲಿ ಮೃತಪಟ್ಟ ಮೂರು ಸೇನಾ ಪಡೆಗಳ ಮುಖ್ಯಸ್ಥ (ಸಿಡಿಎಸ್) ಬಿಪಿನ್ ರಾವತ್ ಸೇರಿದಂತೆ ಮೂವರ ಗುರುತನ್ನು ಪತ್ತೆ ಮಾಡಲಷ್ಟೇ ಸಾಧ್ಯವಾಗಿದೆ. ಉಳಿದವರ ಮೃತದೇಹಗಳು ಬೆಂಕಿಯಲ್ಲಿ ಸುಟ್ಟು ಕರಕಲಾಗಿರುವುದರಿಂದ ಗುರುತಿಸಲು ಸಾಧ್ಯವಾಗಿಲ್ಲ.

ರಾವತ್, ಅವರ ಪತ್ನಿ ಮಧುಲಿಕಾ ಮತ್ತು ಬ್ರಿಗೇಡಿಯರ್ ಎಲ್.ಎಸ್. ಲಿದ್ದರ್ ಅವರ ಗುರುತು ಪತ್ತೆಹಚ್ಚಲಾಗಿದ್ದು, ಈ ಮೂವರ ಮೃತದೇಹಗಳನ್ನು ಅಂತ್ಯಕ್ರಿಯೆಗಾಗಿ ಸಂಬಂಧಿಕರಿಗೆ ಹಸ್ತಾಂತರ ಮಾಡಲಾಗುತ್ತದೆ. ಉಳಿದವರ ಮೃತದೇಹಗಳನ್ನು ದೆಹಲಿಯ ಸೇನಾನೆಲೆ ಆಸ್ಪತ್ರೆಯ ಶವಾಗಾರದಲ್ಲಿ ಇರಿಸಿ, ಗುರುತು ಪತ್ತೆಯಾದ ಬಳಿಕ ಸಂಬಂಧಿಕರಿಗೆ ನೀಡಲಾಗುವುದು.

ಉಳಿದವರ ಗುರುತು ಪತ್ತೆ ಹಚ್ಚಲು ಡಿಎನ್‌ಎ ಪರೀಕ್ಷೆ ಹಾಗೂ ಹತ್ತಿರದ ಸಂಬಂಧಿಕರಿಂದ ಪಡೆದ ರಕ್ತದ ಮಾದರಿ ಜೊತೆ ಹೋಲಿಸಲಾಗುತ್ತದೆ. ಹೀಗಾಗಿ ಮೃತರ ಸಂಬಂಧಿಕರನ್ನು ದೆಹಲಿಗೆ ಕರೆಸಿಕೊಳ್ಳಲಾಗುತ್ತಿದೆ. ವೈಜ್ಞಾನಿಕ ವಿಧಾನದಲ್ಲಿ ಗುರುತು ಪತ್ತೆಗೆ ಸಂಬಂಧಿಕರ ನೆರವು ಪಡೆದುಕೊಳ್ಳಲು ನಿರ್ಧರಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸಾಕ್ಷ್ಯ ಸಂಗ್ರಹಕ್ಕೆ ಡ್ರೋನ್ ಬಳಕೆ

ಚೆನ್ನೈ: ಎಂಐ 17ವಿ5 ಹೆಲಿಕಾಪ್ಟರ್ ಅಪಘಾತ ಪ್ರಕರಣದಲ್ಲಿ ಇನ್ನಷ್ಟು ಸಾಕ್ಷ್ಯಗಳನ್ನು ಸಂಗ್ರಹಿಸುವ ಸಲುವಾಗಿ, ತಮಿಳುನಾಡು ಪೊಲೀಸರು ಘಟನಾ ಸ್ಥಳಕ್ಕೆ ಗುರುವಾರ ಕೆಲವು ಡ್ರೋನ್‌ಗಳನ್ನು ಕಳುಹಿಸಿದ್ದರು.

ತೀವ್ರ ಮಂಜು ಮುಸುಕಿದ್ದರಿಂದ ಸ್ಪಷ್ಟವಾಗಿ ಏನೂ ಕಾಣಸದೇ ಇದ್ದುದು ಸಮಸ್ಯೆಯಾಯಿತೇ ಎಂಬುದರ ಬಗ್ಗೆ ಸುಳಿವು ನೀಡುವ ಯಾವುದಾದರೂ ನಿರ್ಣಾಯಕ ಸಾಕ್ಷ್ಯಗಳು ಸಿಗಬಹುದು ಎಂಬ ನಿರೀಕ್ಷೆಯಿಂದ ಡ್ರೋನ್‌ಗಳನ್ನು ಹಾರಿಬಿಡಲಾಗಿತ್ತು ಎಂದು ಮೂಲಗಳು ತಿಳಿಸಿವೆ. ಶೋಧ ನಡೆಸುವ ಪ್ರದೇಶದ ವ್ಯಾಪ್ತಿಯನ್ನು ಗುರುವಾರ ಇನ್ನಷ್ಟು ವಿಸ್ತರಿಸಿದ ಪೊಲೀಸರು, ಘಟನೆಯ ಬಗ್ಗೆ ಮಾಹಿತಿ ನೀಡಿದವರೂ ಸೇರಿದಂತೆ ಗ್ರಾಮಸ್ಥರ ವಿಚಾರಣೆ ನಡೆಸಿದರು. ನೀಲಗಿರಿ ಜಿಲ್ಲಾ ಪೊಲೀಸರು ಎಫ್‌ಐಆರ್ ದಾಖಲಿಸಿ ವಿಚಾರಣೆ ನಡೆಸುತ್ತಿದ್ದಾರೆ. ರಾಜ್ಯ ಸರ್ಕಾರವು ಎಡಿಪಿಎಸ್ ಮುತ್ತುಮಾಣಿಕಂ ಅವರನ್ನು ತನಿಖಾಧಿಕಾರಿಯಾಗಿ ನೇಮಕ ಮಾಡಿದೆ.

ಕೊನೆ ಕ್ಷಣದ ವಿಡಿಯೊ ವೈರಲ್

ಚೆನ್ನೈ: ಕೂನೂರು ಸಮೀಪದ ನಂಜಪ್ಪಂಚತಿರಂ ಗ್ರಾಮದ ಅರಣ್ಯದಲ್ಲಿ ಬುಧವಾರ ಸೇನಾ ಹೆಲಿಕಾಪ್ಟರ್ ಪತನವಾಗುವುದಕ್ಕೂ ಕೆಲವು ಕ್ಷಣ ಮೊದಲು ಚಿತ್ರೀಕರಿಸಿದ್ದು ಎನ್ನಲಾದ ವಿಡಿಯೊವೊಂದು ವೈರಲ್ ಆಗಿದೆ.

ದಟ್ಟ ಮಂಜು ಮುಸುಕಿದ ವಾತಾವರಣವನ್ನು ಪ್ರವೇಶಿಸುವ ಹೆಲಿಕಾಪ್ಟರ್, ಇದ್ದಕ್ಕಿದ್ದಂತೆ ಆಗಸದಲ್ಲಿ ಕಣ್ಮರೆಯಾಗುವ ದೃಶ್ಯ ಈ ವಿಡಿಯೊದಲ್ಲಿದೆ. ವಿಡಿಯೊದಲ್ಲಿ ಕಾಣಿಸಿರುವ ಕೆಲವು ಪ್ರವಾಸಿಗರು ನಡೆಸಿದ ಸಂಭಾಷಣೆಯೂ ಇದರಲ್ಲಿ ದಾಖಲಾಗಿದೆ. ಹೆಲಿಕಾಪ್ಟರ್ ಕಣ್ಣಿಗೆ ಕಾಣಿಸದಾದ ತಕ್ಷಣ, 'ಅದು ಕೆಳಗೆ ಬಿತ್ತೇ' ಎಂದು ಒಬ್ಬರು ಪ್ರಶ್ನಿಸುತ್ತಾರೆ. ಮತ್ತೊಬ್ಬರು 'ಹೌದು' ಎಂದು ಉತ್ತರಿಸುತ್ತಾರೆ. ಈ ವಿಡಿಯೊ ಬಗ್ಗೆ ವಾಯುಪಡೆ ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ಊಟಿ–ಮೆಟ್ಟುಪಾಳ್ಯಂ ಸಂಪರ್ಕಿಸುವ ರೈಲು ಹಳಿಗಳ ಮೇಲೆ ನಡೆದುಹೋಗುತ್ತಿದ್ದ ಪ್ರವಾಸಿಗರ ಗುಂಪು ಈ ವಿಡಿಯೊವನ್ನು ಚಿತ್ರೀಕರಿಸಿದೆ. ನಂಜಪ್ಪಂಚತಿರಂ ಗ್ರಾಮಸ್ಥರು ಮೊದಲು ಘಟನಾ ಸ್ಥಳವನ್ನು ತಲುಪಿ, ಪೊಲೀಸರು ಹಾಗೂ ಅಗ್ನಿಶಾಮಕ ಸಿಬ್ಬಂದಿಗೆ ವಿಷಯ ಮುಟ್ಟಿಸಿ ಪರಿಹಾರ ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದರು.

ಗೌರವ ಸಲ್ಲಿಸಲು ಅವಕಾಶ ನಕಾರ: ವಿಪಕ್ಷ ಆಕ್ರೋಶ

ನವದೆಹಲಿ (ಪಿಟಿಐ): ಬಿಪಿನ್ ರಾವತ್ ಮತ್ತು ಇತರ ಸೇನಾ ಸಿಬ್ಬಂದಿಗೆ ಸಂಸತ್ತಿನ ಒಳಗೆ ಅಂತಿಮ ಗೌರವ ಸಲ್ಲಿಸಲು ಧರಣಿ ನಿರತ ವಿರೋಧ ಪಕ್ಷದ ಸದಸ್ಯರಿಗೆ ಸರ್ಕಾರ ಅನುವು ಮಾಡಲಿಲ್ಲ. ಸರ್ಕಾರದ ಈ ನಡೆಯನ್ನು ವಿರೋಧ ಪಕ್ಷಗಳು ಖಂಡಿಸಿವೆ.

ರಾಜ್ಯಸಭೆಯ 12 ಸದಸ್ಯರನ್ನು ಅಮಾನತು ಮಾಡಿರುವುದನ್ನು ವಿರೋಧಿಸಿ ಧರಣಿ ನಡೆಸುತ್ತಿರುವ ವಿರೋಧ ಪಕ್ಷಗಳ ನಾಯಕರು, ರಾವತ್ ನಿಧನದ ಕಾರಣಕ್ಕೆ ಗುರುವಾರ ಧರಣಿಯನ್ನು ಹಿಂಪಡೆದಿದ್ದರು. ವಿಪಕ್ಷಗಳು ಮನವಿ ಮಾಡಿಕೊಂಡಿದ್ದರ ಹೊರತಾಗಿಯೂ ಅವರಿಗೆ ಅವಕಾಶ ನೀಡಲಾಗಿಲ್ಲ ಎನ್ನಲಾಗಿದೆ.

ಸರ್ಕಾರದ ನಡೆಯನ್ನು ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಖಂಡಿಸಿದ್ದಾರೆ. 'ತಮಿಳುನಾಡಿನಲ್ಲಿ ನಡೆದ ದುರಂತ ಹಿನ್ನೆಲೆಯಲ್ಲಿ ನಾವು ನಮ್ಮ ಧರಣಿಯನ್ನು ರದ್ದುಪಡಿಸಿದ್ದೆವು. ಸಂಸತ್ತಿನ ಒಳಗೆ ಬಂದು ಮೃತರಿಗೆ ಗೌರವ ಸೂಚಿಸಲು ಅವಕಾಶ ನೀಡಬೇಕು ಎಂದು ಸರ್ಕಾರವನ್ನು ಕೇಳಿಕೊಂಡೆವು. ಆದರೆ ನಮ್ಮ ಮನವಿಯನ್ನು ತಿರಸ್ಕರಿಸಲಾಯಿತು. ಸರ್ಕಾರದ ಈ ನಡವಳಿಕೆಯನ್ನು ನಾವು ಖಂಡಿಸುತ್ತೇವೆ. ಇಲ್ಲಿ ಯಾವ ರೀತಿಯ ಪ್ರಜಾಪ್ರಭುತ್ವ ಇದೆ. ಸೇನೆಯ ಅತ್ಯುನ್ನತ ಅಧಿಕಾರಿಗೆ ಗೌರವ ಸೂಚಿಸಲು ನಾಯಕರಿಗೆ ಅವಕಾಶ ನೀಡದಿರುವಾಗ ಸಂಸತ್ತನ್ನು ಹೇಗೆ ನಡೆಸುತ್ತಾರೆ' ಎಂದು ಹೇಳಿದ್ದಾರೆ.

'ಸಂಸತ್ತು ಇರುವುದು ಕೇವಲ ಅವರ ಬಳಕೆಗಾಗಿ, ವಿರೋಧ ಪಕ್ಷಗಳಿಗಾಗಿ ಅಲ್ಲ ಎಂದು ಸರ್ಕಾರ ತಿಳಿದಂತಿದೆ. ಇದು ನೋವಿನ ಸಂಗತಿ' ಎಂದು ಡಿಎಂಕೆ ಸಂಸದ ಟಿ.ಕೆ. ಇಳಂಗೋವನ್ ಹೇಳಿದ್ದಾರೆ.

'ಸರ್ಕಾರ ದೊಡ್ಡ ತಪ್ಪನ್ನು ಮಾಡಿದೆ. ಇಂಥ ವಿಷಯಗಳಲ್ಲಿ ರಾಜಕೀಯ ಮಾಡಬೇಡಿ' ಎಂದು ಆರ್‌ಜೆಡಿಯ ಸಂಸದ ಮನೋಜ್ ಝಾ ಹೇಳಿದ್ದಾರೆ.



ಅಮಾನತುಗೊಂಡ ಸಂಸದರು ಸಂಸತ್ ಆವರಣದಲ್ಲಿರುವ ಗಾಂಧಿ ಪ್ರತಿಮೆ ಎದುರು ಭಿತ್ತಪತ್ರ ಹಿಡಿದು ಜನರಲ್ ರಾವತ್ ಅವರಿಗೆ ಮೌನಾಚರಣೆ ಮೂಲಕ ಶ್ರದ್ಧಾಂಜಲಿ ಸಲ್ಲಿಸಿದರು–ಪಿಟಿಐ ಚಿತ್ರ

ಗಣ್ಯರ ಕಂಬನಿ

ವಾಷಿಂಗ್ಟನ್/ಕಠ್ಮಂಡು/ಜೆರುಸಲೇಂ: ಭಾರತೀಯ ವಾಯುಪಡೆಯ ಹೆಲಿಕಾಪ್ಟರ್ ಪತನ ದುರಂತದಲ್ಲಿ ಸೇನಾ ಪಡೆಗಳ ಮುಖ್ಯಸ್ಥ ಜನರಲ್ ಬಿಪಿನ್ ರಾವತ್ ಮೃತಪಟ್ಟಿದ್ದಕ್ಕೆ ಅಮೆರಿಕದ ವಿದೇಶಾಂಗ ಕಾರ್ಯದರ್ಶಿ, ನೇಪಾಳದ ಪ್ರಧಾನಿ, ಇಸ್ರೇಲ್ ಪ್ರಧಾನಿ ಸೇರಿದಂತೆ ವಿಶ್ವದ ವಿವಿಧ ದೇಶಗಳ ಗಣ್ಯರು ಕಂಬನಿ ಮಿಡಿದಿದ್ದಾರೆ.

'ಭಾರತದ ರಕ್ಷಣಾ ಪಡೆಗಳ ಮೊದಲ ಮುಖ್ಯಸ್ಥರಾದ ರಾವತ್ ಅವರು ಅಸಾಧಾರಣ ನಾಯಕರಾಗಿದ್ದರು. ಅಮೆರಿಕದ– ಭಾರತದ ರಕ್ಷಣಾ ಸಂಬಂಧಗಳನ್ನು ಬಲಪಡಿಸಲು ಮತ್ತು ದ್ವಿಪಕ್ಷೀಯ ಕಾರ್ಯತಂತ್ರದ ಪಾಲುದಾರಿಕೆಯನ್ನು ಗಟ್ಟಿಗೊಳಿಸಲು ಸಹಾಯ ಮಾಡಿದ್ದರು' ಎಂದು ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಆಂಟನಿ ಬ್ಲಿಂಕನ್ ಬಣ್ಣಿಸಿದ್ದಾರೆ.

ಸಂಘ ಪರಿವಾರದ ಸಂಘಟನೆಗಳಿಂದ ಕಾಯ್ದೆಗೆ ಒತ್ತಡ • ತುಳಸಿ ಮುನಿರಾಜು ಅವರಿಂದ ಖಾಸಗಿ ಮಸೂದೆ

ಮತಾಂತರ ಮಸೂದೆ: ಪರ–ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಮತಾಂತರ ತಡೆಯುವ ಉದ್ದೇಶದಿಂದ ಕಾಯ್ದೆಯೊಂದನ್ನು ಜಾರಿಗೆ ತರಲು ಬಿಜೆಪಿ ನೇತೃತ್ವದ ರಾಜ್ಯ ಸರ್ಕಾರ ತಯಾರಿ ನಡೆಸಿದ್ದು, ಇದಕ್ಕೆ ಪೂರಕವಾದ ಮಸೂದೆಯನ್ನು ಬೆಳಗಾವಿಯಲ್ಲಿ ನಡೆಯಲಿರುವ ವಿಧಾನಮಂಡಲದ ಅಧಿವೇಶನದಲ್ಲಿ ಮಂಡಿಸುವ ಸಾಧ್ಯತೆ ಇದೆ. ಉದ್ದೇಶಿತ ಮಸೂದೆಯನ್ನು ವಿರೋಧಿಸಿ ಕ್ರೈಸ್ತ ಸಮುದಾಯದವರು ರಾಜ್ಯದಾದ್ಯಂತ ಹೋರಾಟಕ್ಕೆ ಮುಂದಾಗಿದ್ದಾರೆ.

ಬಿಜೆಪಿ, ವಿಶ್ವ ಹಿಂದೂ ಪರಿಷತ್, ಬಜರಂಗದಳ, ಹಿಂದೂ ಜಾಗರಣಾ ವೇದಿಕೆ, ವಿವಿಧ ಮಠಾಧೀಶರು ಮತಾಂತರನಿಷೇಧಕಾಯ್ದೆಯನ್ನುಜಾರಿಗೆತರಲೇ ಬೇಕು ಎಂದು ಪಟ್ಟು ಹಿಡಿದಿದ್ದಾರೆ. ಈ ಮಧ್ಯೆ ವಿಧಾನಪರಿಷತ್‌ನ ಬಿಜೆಪಿ ಸದಸ್ಯ ತುಳಸಿ ಮುನಿರಾಜುಗೌಡ ಅವರು 'ಮತಾಂತರನಿಷೇಧದಪ್ರಸ್ತಾಪಿಸುವಖಾಸಗಿ ಮಸೂದೆ' ಮಂಡಿಸುವುದಾಗಿ ಹೇಳಿದ್ದಾರೆ. 'ನನ್ನ ತಾಯಿಯನ್ನು ಕ್ರೈಸ್ತ ಮಿಷನರಿಗಳು ಮತಾಂತರ ಮಾಡಿದ್ದಾರೆ' ಎಂದು ದೂರಿ ಶಾಸಕ ಗೂಳಿಹಟ್ಟಿ ಶೇಖರ್ ವಿಧಾನಸಭೆ ಅಧಿವೇಶನದಲ್ಲಿ ಕಣ್ಣೀರು ಹಾಕಿದ್ದರು. ಮತಾಂತರ ನಿಷೇಧಕ್ಕೆ ಕಠಿಣ ಕಾಯ್ದೆ ತರಬೇಕು ಎಂದು ಒತ್ತಾಯಿಸಿದ್ದರು.

'ಕ್ರೈಸ್ತ ಮಿಷನರಿಗಳು ಅದರಲ್ಲೂ ಇವಾಂಜಿಲಿಕಲ್ ಗುಂಪುಗಳು ಆಮಿಷಗಳನ್ನು ಒಡ್ಡಿ, ದಬ್ಬಾಳಿಕೆಯ ಮೂಲಕ ಹಿಂದುಳಿದವರು, ಪರಿಶಿಷ್ಟ ಜಾತಿ ಮತ್ತು ಬುಡಕಟ್ಟು ಜನರನ್ನು ಭಾರೀ ಪ್ರಮಾಣದಲ್ಲಿ ಮತಾಂತರ ಮಾಡುತ್ತಿವೆ. ಧರ್ಮದ ಆಧಾರದಲ್ಲಿ ದೇಶದಲ್ಲಿ ತಮ್ಮ ಧರ್ಮದ ಜನರ ಸಂಖ್ಯೆ ಹೆಚ್ಚಿಸಿಕೊಳ್ಳುವ ಪ್ರಯತ್ನ ನಡೆದಿದೆ. ಇದಕ್ಕೆ ಕಡಿವಾಣ ಹಾಕಲು ಕಾಯ್ದೆ ಅಗತ್ಯವಿದೆ. ಆದ್ದರಿಂದ ಖಾಸಗಿ ಮಸೂದೆಯನ್ನು ಮಂಡಿಸುತ್ತೇನೆ' ಎಂದು ತುಳಸಿ ಮುನಿರಾಜುಗೌಡ ಹೇಳಿದ್ದಾರೆ.

'ಮತಾಂತರ ನಿಷೇಧ ಮಸೂದೆ ಹೆಸರಿನಲ್ಲಿ ಕ್ರೈಸ್ತ ಧರ್ಮೀಯರನ್ನು ನಿಯಂತ್ರಿಸುವ ಪ್ರಯತ್ನ ಆರಂಭವಾಗಿದೆ. ಕ್ರೈಸ್ತ ಮಿಷನರಿಗಳು ನಡೆಸುತ್ತಿರುವ ಶಾಲೆ, ಆಸ್ಪತ್ರೆಗಳಲ್ಲಿ ಮತಾಂತರ ನಡೆಯುತ್ತಿರುವುದಕ್ಕೆ ಸಾಕ್ಷ್ಯ ನೀಡಿದರೆ ಅಂತಹ ಸಂಸ್ಥೆಗಳನ್ನೇ ಮುಚ್ಚಲು ಸಿದ್ಧ' ಎಂದು ಬೆಂಗಳೂರು ಆರ್ಚ್ ಬಿಷಪ್ ಪೀಟರ್ ಮಚಾದೊ, ಹಿಂದೂ ಸಂಘಟನೆಗಳಿಗೆ ಬಹಿರಂಗ ಸವಾಲು ಹಾಕಿದ್ದಾರೆ.





1. ಬೇಲೂರಿನ ಬಿಕ್ಕೋಡು ರಸ್ತೆಯ ಚರ್ಚ್ ನಲ್ಲಿ ಮತಾಂತರ ನಡೆಯುತ್ತಿದೆ ಎಂದು ಆರೋಪಿಸಿ ವಿಶ್ವಹಿಂದೂ ಪರಿಷತ್, ಭಜರಂಗ ದಳ ಕಾರ್ಯಕರ್ತರು ಜಮಾಯಿಸಿರುವುದು. 2. ಕಲಬುರಗಿ ಜಿಲ್ಲಾಧಿಕಾರಿ ಕಚೇರಿ ಎದುರು ಮಾನವಹಕ್ಕುಗಳಿಗಾಗಿ ಅಖಿಲ ಕರ್ನಾಟಕ ಕ್ರೈಸ್ತ ಒಕ್ಕೂಟ ವತಿಯಿಂದ ಸರ್ಕಾರ ಜಾರಿಗೆ ತರಲಿರುವ ಮತಾಂತರ ನಿಷೇಧ ಕಾಯ್ದೆ ವಿರೋಧಿಸಿ ಪ್ರತಿಭಟನೆ ನಡೆಸಿದರು. (ಸಂಗ್ರಹ ಚಿತ್ರಗಳು)

'ಕ್ರಿಸ್ತನ ನಂಬಿದರೆ ಮಾಟ–ಮಂತ್ರ ತಟ್ಟದು'

ಚಿತ್ರದುರ್ಗ: 'ಜಗಳ ಮಾಡಿಕೊಂಡವರ ವಿರುದ್ಧ ಮಾಟ ಮಂತ್ರ ಮಾಡಿಸುವ ಹುಚ್ಚಾಟ ನಮ್ಮಲ್ಲಿ ಹೆಚ್ಚು. ಇದು ಇಡೀ ಕುಟುಂಬವನ್ನು ಸಂಕಷ್ಟಕ್ಕೆ ತಳ್ಳಿತು. ಏಸು ಕ್ರಿಸ್ತನಿಗೆ ನಂಬಿದರೆ ಮಾಟ–ಮಂತ್ರ ತಾಗುವುದಿಲ್ಲವೆಂಬುದು ಗೊತ್ತಾಯಿತು. ಕಷ್ಟದಿಂದ ಪಾರಾಗಲು ಚರ್ಚ್‌ಗೆ ಹೋದೆವು. ಈಗ ನೆಮ್ಮದಿ ಸಿಕ್ಕಿದೆ...'

ಹೊಸದುರ್ಗ ತಾಲ್ಲೂಕಿನ ದೇವಪುರ ಭೋವಿಹಟ್ಟಿಯ ವೆಂಕಟೇಶ್ ಕ್ರೈಸ್ತ ಧರ್ಮದ ಮತಾಂತರಕ್ಕೆ ನೀಡುವ ವಿವರಣೆ ಇದು. ಎಂಟು ತಿಂಗಳ ಹಿಂದಿನಿಂದ ಪಟ್ಟಣದ ಕಲ್ವರಿ ಬೇತೇಲ್ ಚರ್ಚ್‌ಗೆ ಹೋಗುತ್ತಿದ್ದಾರೆ. ಆದರೂ ಇವರ ಮನೆಯಲ್ಲಿ ಕ್ರೈಸ್ತ ಧರ್ಮದ ಯಾವುದೇ ಕುರುಹು ಲಭ್ಯವಾಗುವುದಿಲ್ಲ.

140 ಮನೆ, 750 ಜನಸಂಖ್ಯೆ ಹೊಂದಿರುವ ಈ ಹಟ್ಟಿಯಲ್ಲಿ ಭೋವಿ ಜನಾಂಗದವರಷ್ಟೇ ಇದ್ದಾರೆ. 12 ಕುಟುಂಬಗಳು ಕ್ರೈಸ್ತ ಧರ್ಮದ ಪಾಲನೆ ಮಾಡುತ್ತಿವೆ. ಮತಾಂತರಕ್ಕೆ ಗ್ರಾಮಸ್ಥರ ವಿರೋಧವಿದೆ. ಆದರೆ, ಅದು ಬಹಿರಂಗವಾಗಿ ವ್ಯಕ್ತವಾಗಿದ್ದು ವಿರಳ.

'ಅನಾರೋಗ್ಯ ಕಾಣಿಸಿಕೊಂಡಾಗ ದೇವರಿಗೆ ನಡೆದುಕೊಳ್ಳುವುದು ಗ್ರಾಮಸ್ಥರ ರೂಢಿ. ಹಿಂದೂ ದೇವರನ್ನು ಆರಾಧನೆ ಮಾಡಿದರೆ ಗುಣಮುಖರಾಗಲು ಸಾಧ್ಯವಿದೆ. ಸಂಕಷ್ಟಕ್ಕೆ ಸಿಲುಕಿದವರ ಮನಸ್ಸು ತಿರುಗಿಸುವ ಪ್ರಯತ್ನವನ್ನು ಫಾಸ್ಟರ್‌ಗಳು ಮಾಡುತ್ತಿದ್ದಾರೆ. ಇಂಥವರು ಚರ್ಚ್ ಪ್ರಾರ್ಥನೆಯಲ್ಲಿ ಪಾಲ್ಗೊಳ್ಳಲು ಆರಂಭಿಸುತ್ತಿದ್ದಾರೆ' ಎಂಬುದು ಭೋವಿಹಟ್ಟಿಯ ರಮೇಶ್ ಅವರ ಆಕ್ಷೇಪ.

'ಹಟ್ಟಿಯಲ್ಲಿ ಎಲ್ಲರೂ ಒಗ್ಗೂಡಿ ಹಬ್ಬ ಮಾಡುವ ಪದ್ಧತಿ ಊರಲ್ಲಿತ್ತು. ಆದರೆ, ಚರ್ಚ್‌ಗೆ ಹೋಗುವ ಕುಟುಂಬಗಳು ಹಬ್ಬದಲ್ಲಿ ಪಾಲ್ಗೊಳ್ಳುವುದಿಲ್ಲ. ಸಹೋದರರ ಮನೆಯಲ್ಲೇ ಹಬ್ಬದ ಊಟ ಮಾಡುವುದಿಲ್ಲ. ಕುಟುಂಬದ ಜತೆಗೆ ಒಡನಾಟ ಕಡಿಮೆ ಮಾಡಿಕೊಂಡಿದ್ದಾರೆ' ಎನ್ನುತ್ತಾರೆ ಅವರು.

'ಮತಾಂತರಗೊಂಡ ಕುಟುಂಬಗಳು ಹಿಂದೂಗಳ ಜತೆ ವೈವಾಹಿಕ ಸಂಬಂಧ ಬೆಳೆಸುತ್ತಿಲ್ಲ. ಬೆಂಗಳೂರಿನಲ್ಲಿ ನಡೆದ ಜಾತಿ ಸಂಘಟನೆಯ ಸಭೆಯಲ್ಲಿ ಈ ವಿಚಾರ ಚರ್ಚೆಗೆ ಬಂದಿತು. ಜಾತಿಯಿಂದ ಎಲ್ಲರನ್ನೂ ಕಿತ್ತುಹಾಕುವುದಾಗಿ ಸಮುದಾಯದ ಮುಖಂಡರು ಎಚ್ಚರಿಕೆ ನೀಡಿದರು. ಹಿಂದೂ ಧರ್ಮಕ್ಕೆ ಮರಳುವಂತೆ ಮನವಿ ಮಾಡಿಕೊಂಡರೂ ಸ್ಪಂದಿಸುತ್ತಿಲ್ಲ' ಎಂದು ರಾಮಕೃಷ್ಣ ವಿವರಣೆ ನೀಡಿದರು.

ಮತಾಂತರ: ದೂರು–ಪ್ರತಿದೂರು

ಯಾದಗಿರಿ/ ರಾಯಚೂರು: ಯಾದಗಿರಿ ತಾಲ್ಲೂಕಿನ ನೀಲಹಳ್ಳಿ ಗ್ರಾಮದಲ್ಲಿ ಸೆಪ್ಟೆಂಬರ್ 26 ರಂದು ಕ್ರೈಸ್ತ ಪಾದ್ರಿಗಳು ಮತಾಂತರ ಮಾಡಲು ಯತ್ನಿಸುತ್ತಿದ್ದಾರೆ ಎಂದು ಆರೋಪಿಸಿ ನಾಲ್ವರ ವಿರುದ್ಧ ಸೈದಾಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.ಇದಾದ ನಂತರ ಕ್ರೈಸ್ತರು ಪ್ರತಿ ದೂರು ನೀಡಲು ತೆರಳಿದಾಗ ಹಿಂದೂ ಸಮುದಾಯವರು ಪೊಲೀಸ್ ಠಾಣೆ ಬಳಿ ಪ್ರತಿಭಟನೆ ಮಾಡಿ ಪ್ರತಿದೂರು ಪಡೆಯಬಾರದು ಎಂದು ಆಗ್ರಹಿಸಿದ್ದರು. ಪ್ರತಿ ದೂರು ದಾಖಲಾಗಿಲ್ಲ. ಇದಾದ ಕೆಲ ದಿನಗಳ ನಂತರ ಮತಾಂತರ ವಿರೋಧಿಸಿ ಸೈದಾಪುರ ಬಂದ್ ಮಾಡಲಾಗಿತ್ತು. ಯಾದಗಿರಿ ನಗರದಲ್ಲಿ ಕ್ರೈಸ್ತರು ಬೃಹತ್ ಪ್ರತಿಭಟನೆ ಮಾಡಿದ್ದರು. 'ರಾಯಚೂರು ಅಷ್ಟೇ ಅಲ್ಲ, ಎಲ್ಲಿಯೂ ಮತಾಂತರ ಎನ್ನುವುದೇ ಇಲ್ಲ. ಸ್ವ–ಇಚ್ಛೆಯಿಂದ ಧರ್ಮಗಳನ್ನು ಆಚರಿಸುವ ಸಂವಿಧಾನ ಬದ್ಧ ಹಕ್ಕು ಎಲ್ಲರಿಗೂ ಇದೆ' ಎನ್ನುತ್ತಾರೆ ರಾಯಚೂರು ಮೆಥೋಡಿಸ್ಟ್ ಚರ್ಚ್‌ನ ರೆವರಂಡ್ ಎ. ಸಿಮಿಯನ್.

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

https://bit.ly/3GK7YGv

'ದೂರುಗಳಿವೆ: ಪುರಾವೆಯಿಲ್ಲ'

ಬೆಳಗಾವಿ: ಹಿಂದೂ ಧರ್ಮದಿಂದ ಕ್ರೈಸ್ತ ಧರ್ಮಕ್ಕೆ ಮತಾಂತರ ಮಾಡಲಾಗುತ್ತಿದೆ ಎಂದು ಹಿಂದೂ ಸಂಘಟನೆಗಳು ಆರೋಪಿಸುತ್ತಿವೆ. ಆದರೆ, ಮತಾಂತರ ನಡೆಸುತ್ತಿರುವುದಕ್ಕೆ ಯಾವುದೇ ಪುರಾವೆ ಇಲ್ಲ.

'ಸಾಮೂಹಿಕ ಪ್ರಾರ್ಥನೆ, ದೇವರ ಆರಾಧನೆ ನೆಪದಲ್ಲಿ ಮತಾಂತರಕ್ಕೆ ಪುಸಲಾಯಿಸಲಾಗುತ್ತಿದೆ' ಎಂದು ಆರೋಪಿಸಿ ನಗರದ ಮರಾಠಾ ಕಾಲೊನಿಯ ಕಟ್ಟಡವೊಂದರ ಮೇಲೆ ಶ್ರೀರಾಮ ಸೇನೆ ಕಾರ್ಯಕರ್ತರು ನ.7ರಂದು ದಾಳಿ ನಡೆಸಿದ್ದರು.

'ಹಿಂದೂಗಳನ್ನು ಮತಾಂತಗೊಳಿಸುವ ಪ್ರಯತ್ನ ನಡೆಸುತ್ತಲೇ ಇದ್ದಾರೆ. ಮತಾಂತರ ತಡೆಯಲು, ಇತರ ಧರ್ಮಗಳನ್ನು ದೂಷಿಸುವವರ ವಿರುದ್ಧ ಕಠಿಣ ಕ್ರಮಕ್ಕಾಗಿ ಸರ್ಕಾರ ಪ್ರಬಲ ಕಾನೂನು ಜಾರಿಗೊಳಿಸಬೇಕು' ಎಂದು ಶ್ರೀರಾಮ ಸೇನಾ ಹಿಂದೂಸ್ತಾನ ಅಧ್ಯಕ್ಷ ರಮಾಕಾಂತ ಕೊಂಡೂಸ್ಕರ ಒತ್ತಾಯಿಸಿದ್ದಾರೆ.

ಕರಾವಳಿಯಲ್ಲಿ ಆಗಾಗ್ಗೆ ಘರ್ಷಣೆ

ಮಂಗಳೂರು: ಕರಾವಳಿ ಜಿಲ್ಲೆಗಳಲ್ಲಿ ಮತಾಂತರ ನಿಷೇಧ ಕಾಯ್ದೆ ಜಾರಿಗೆ ಸಂಬಂಧಿಸಿದಂತೆ ಪರ–ವಿರೋಧ ಚರ್ಚೆಗಳು ಸಹ ಜೋರಾಗಿವೆ. ವಿಶ್ವ ಹಿಂದೂ ಪರಿಷತ್, ಬಜರಂಗದಳ, ಹಿಂದೂ ಜಾಗರಣಾ ವೇದಿಕೆ ಸೇರಿದಂತೆ ಹಿಂದೂ ಪರ ಸಂಘಟನೆಗಳು ಮತಾಂತರ ನಿಷೇಧ ಕಾಯ್ದೆ ಜಾರಿ ಆಗಲೇಬೇಕು ಎನ್ನುವ ಒತ್ತಾಯ ಮಾಡುತ್ತಿವೆ. ಕ್ರೈಸ್ತ ಸಂಘಟನೆಗಳು, ಎಸ್‌ಡಿಪಿಐ ಸೇರಿದಂತೆ ಹಲವು ಸಂಘಟನೆಗಳು ಕಾಯ್ದೆ ಜಾರಿಗೆ ವಿರೋಧ ವ್ಯಕ್ತಪಡಿಸಿವೆ.

ಕೆಲ ದಿನಗಳ ಹಿಂದೆ ಧರ್ಮಸ್ಥಳಕ್ಕೆ ಭೇಟಿ ನೀಡಿದ್ದ ವಿಶ್ವ ಹಿಂದೂ ಪರಿಷತ್ ಕೇಂದ್ರೀಯ ಕಾರ್ಯಾಧ್ಯಕ್ಷ ಅಲೋಕ್ ಕುಮಾರ್, 'ದೇಶದಲ್ಲಿ ಅನುಸೂಚಿತ ಜಾತಿಗಳ ಮೇಲೆ ಮತಾಂತರ ಪಿಡುಗು ವ್ಯಾಪಿಸಿದೆ. ಜೊತೆಗೆ ಲವ್ ಜಿಹಾದ್, ಬೆದರಿಕೆ ಭಯದ ವಾತಾವರಣ ಸೃಷ್ಟಿಸಿ, ಮತಾಂತರ ಮಾಡಲಾಗುತ್ತಿದೆ. ಇದನ್ನು ತಡೆಗಟ್ಟಲು ವಿಶ್ವ ಹಿಂದೂ ಪರಿಷತ್ ಚಿಂತನೆ ನಡೆಸಿದೆ' ಎಂದು ಹೇಳಿದ್ದರು.

ರಾಯಚೂರು ನಗರ ಭಾಗದಲ್ಲಿ ಮತಾಂತರ ಮೊದಲು ಬಹಳ ಜೋರಾಗಿತ್ತು. ಈಗ ಗ್ರಾಮೀಣ ಭಾಗಕ್ಕೆ ವ್ಯಾಪಿಸಿದೆ. ಜಿಲ್ಲೆಯಲ್ಲಿ ಬಲವಂತದ ಮತಾಂತರವೇ ನಡೆಯುತ್ತಿದೆ

ವಿಜಯಕುಮಾರ್ ಹೂಗಾರ, ವಿಶ್ವಹಿಂದೂ ಪರಿಷತ್ ರಾಯಚೂರು ಜಿಲ್ಲಾ ಘಟಕದ ಕಾರ್ಯದರ್ಶಿ

ಮತಾಂತರ ನಿಷೇಧ ಕಾಯ್ದೆ ಜಾರಿ ಬಗ್ಗೆ ಕ್ರೈಸ್ತರಲ್ಲಿ ಆಕ್ರೋಶ ವಿದೆ. ನಾವೆಲ್ಲ ಬೇರೆ ದೇಶದಿಂದ ಬಂದಿಲ್ಲ. ನಮ್ಮ ಹಕ್ಕನ್ನು ಕಸಿದುಕೊಳ್ಳುವುದಕ್ಕೆ ಯಾರಿಗೂ ಅಧಿಕಾರವಿಲ್ಲ

ರೆವರಂಡ್ ಎ. ಸಿಮಿಯನ್,ಮೆಥೋಡಿಸ್ಟ್ ಚರ್ಚ್, ರಾಯಚೂರು

ಬಲವಂತದ ಮತಾಂತರ ನಡೆಯುತ್ತದೆ ಎನ್ನುವುದು ಸುಳ್ಳು. ಶಾಂತಿ ಕದಡುವುದು ಮತ್ತು ದ್ವೇಷದ ಭಾವನೆ ಬಿತ್ತಲು ಇಂಥ ಆರೋಪಗಳು ಕಾರಣವಾಗುತ್ತವೆ

ಸ್ಟ್ಯಾನಿ ಲೋಬೊ, ಮಂಗಳೂರು ಧರ್ಮಪ್ರಾಂತ್ಯದ ಕಥೋಲಿಕ್ ಸಭೆಯ ಅಧ್ಯಕ್ಷ



'ಮತಾಂತರ ನಿಷೇಧ ಮಸೂದೆಗೆ ಕಾಂಗ್ರೆಸ್ ವಿರೋಧ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರವು ಒಂದು ಧರ್ಮದವರನ್ನು ಗುರಿಯಾಗಿಟ್ಟುಕೊಂಡು ಮತಾಂತರ ನಿಷೇಧ ಕಾಯ್ದೆ ತರಲು ಹೊರಟಿದೆ. ದುರುದ್ದೇಶಪೂರಿತವಾದ ಈ ಮಸೂದೆಯನ್ನು ಕಾಂಗ್ರೆಸ್ ವಿರೋಧಿಸಲಿದೆ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜತೆ ಗುರುವಾರ ಮಾತನಾಡಿ, 'ಈಗಾಗಲೇ ಜಾರಿಯಲ್ಲಿರುವ ಕಾಯ್ದೆಗೆ ದುರುದ್ದೇಶದಿಂದ ತಿದ್ದುಪಡಿ ತರಲು ಬಿಜೆಪಿ ಸರ್ಕಾರ ಮುಂದಾಗಿದೆ. ಒಂದು ಸಮುದಾಯವನ್ನು ಗುರಿಯಾಗಿಟ್ಟುಕೊಂಡು ದ್ವೇಷದ ರಾಜಕಾರಣ ಮಾಡುತ್ತಿದೆ' ಎಂದರು.

ಸಂವಿಧಾನದಲ್ಲಿ ಎಲ್ಲ ಧರ್ಮ, ಸಮುದಾಯಗಳಿಗೂ ಸಮಾನ ಗೌರವವಿದೆ. ಭಾರತ ಜಾತ್ಯತೀತ ರಾಷ್ಟ್ರ. ಈ ಕಾರಣಕ್ಕಾಗಿ ಜಗತ್ತಿನಲ್ಲಿ ಭಾರತಕ್ಕೆ ಗೌರವವಿದೆ. ಚರ್ಚ್ ಮೇಲೆ ದಾಳಿ ಮಾಡುವುದು, ಅನ್ಯ ಧರ್ಮೀಯರ ಭಾವನೆಗಳಿಗೆ ಧಕ್ಕೆ ತರುವುದು ಸರಿಯಲ್ಲ. ಬಿಜೆಪಿ ಸರ್ಕಾರ ಅಂತಹ ದುಸ್ಸಾಹಸಕ್ಕೆ ಕೈ ಹಾಕಬಾರದು. ಹಾಗೆ ಮಾಡಿದರೆ ರಾಜ್ಯದ ಗೌರವಕ್ಕೆ ಕುಂದುಂಟಾಗುತ್ತದೆ ಮತ್ತು ಕಾನೂನು ಸುವ್ಯವಸ್ಥೆಯೂ ಹದಗೆಡುತ್ತದೆ ಎಂದರು.



ಶಿವಕುಮಾರ್

ಕ್ರೈಸ್ತ ಧರ್ಮೀಯರು ಶಿಕ್ಷಣ, ಆರೋಗ್ಯ ಮತ್ತಿತರ ಕ್ಷೇತ್ರಗಳಲ್ಲಿ ಸಮಾಜ ಸೇವೆ ಮಾಡುತ್ತಾ ಬಂದಿದ್ದಾರೆ. ಅವರ ಮನಸ್ಸಿಗೆ ನೋವು ಮಾಡುವುದು ಸರಿಯಲ್ಲ ಎಂದರು.

ಜೈಲಿನಿಂದ ಸುಧಾ ಭಾರದ್ವಾಜ್ ಬಿಡುಗಡೆ


ಮುಂಬೈ: ಎಲ್ಗಾರ್ ಪರಿಷತ್–ಮಾವೊವಾದಿ ಸಂಪರ್ಕ ಪ್ರಕರಣದ ಆರೋಪಿ, ವಕೀಲೆ ಹಾಗೂ ಸಾಮಾಜಿಕ ಕಾರ್ಯಕರ್ತೆ ಸುಧಾ ಭಾರದ್ವಾಜ್ ಅವರು ಜಾಮೀನಿನ ಮೇಲೆ ಗುರುವಾರ ಬಿಡುಗಡೆಯಾದರು. ಮೂರು ವರ್ಷಗಳಿಂದ ಅವರು ಜೈಲಿನಲ್ಲಿದ್ದರು.

ಕೇಂದ್ರ ಸರ್ಕಾರವನ್ನು ಉರುಳಿಸುವ ಕ್ರಿಮಿನಲ್ ಪಿತೂರಿಯ ಆರೋಪ ಹೊತ್ತಿರುವ ಸುಧಾ ಭಾರದ್ವಾಜ್ ಅವರಿಗೆ ಡಿ. 1 ರಂದು ಬಾಂಬೆ ಹೈಕೋರ್ಟ್ ಜಾಮೀನು ಮಂಜೂರು ಮಾಡಿತ್ತು. ಆರೋಪಿ ಬಿಡುಗಡೆಗೆ ಸಂಬಂಧಿಸಿದಂತೆ ವಿಧಿಸಬೇಕಾದ ಷರತ್ತುಗಳ ಬಗ್ಗೆ ನಿರ್ಧರಿಸಲು ವಿಶೇಷ ಎನ್‌ಐಎ ನ್ಯಾಯಾಲಯಕ್ಕೆ ಹೈಕೋರ್ಟ್ ನಿರ್ದೇಶನ ನೀಡಿತ್ತು.

ಎನ್‌ಐಎ ವಿಶೇಷ ನ್ಯಾಯಾಲಯವು ಸುಧಾ ಅವರನ್ನು ₹50,000ಗಳ ಬಾಂಡ್‌ನಲ್ಲಿ ಜಾಮೀನಿನ ಮೇಲೆ ಬಿಡುಗಡೆ ಮಾಡುವಂತೆ ಬುಧವಾರ ಸೂಚಿಸಿತ್ತು. ಈ ವಿಧಿವಿಧಾನಗಳನ್ನು ಪೂರ್ಣಗೊಳಿಸಿದ ಬಳಿಕ ಅವರು ಗುರುವಾರ ಮಧ್ಯಾಹ್ನ ಭಾಯ್ಖಳಾ ಮಹಿಳಾ ಜೈಲಿನಿಂದ ಹೊರನಡೆದರು. ಪ್ರಕರಣಕ್ಕೆ ಸಂಬಂಧಿಸಿದಂತೆ ಪುಣೆ ಪೊಲೀಸರು ಅವರನ್ನು 2018 ಆ.27 ರಂದು ಬಂಧಿಸಿದ್ದರು.



ಸಾಮಾಜಿಕ ಕಾರ್ಯಕರ್ತೆ ಸುಧಾ ಭಾರದ್ವಾಜ್





ಪುನೀತ್ ರಾಜ್‌ಕುಮಾರ್ ಜತೆಗೆ ಅಮೋಘವರ್ಷ

ಅಪ್ಪು ಜತೆ ಅಮೋಘ ಗಂಧದಗುಡಿ

ಡಾ.ರಾಜ್‌ಕುಮಾರ್ ಹಾಗೂ ವಿಷ್ಣುವರ್ಧನ್ ನಟನೆಯ 'ಗಂಧದಗುಡಿ'ಯ 50ರ ಹೊಸ್ತಿಲಿನಲ್ಲಿ, ನಟ ದಿವಂಗತ ಪುನೀತ್ ರಾಜ್‌ಕುಮಾರ್ 'ಗಂಧದಗುಡಿ' ಜನ್ಮತಾಳಿದೆ. ಕರುನಾಡಿನ ವನ್ಯಲೋಕದಲ್ಲಿ ಹಲವು ಸಂದೇಶಗಳನ್ನು ನೀಡುತ್ತಾ ಅಪ್ಪು ತೆರೆ ಮೇಲೆ ಜೀವಿಸಿದ್ದಾರೆ. ಪಿಆರ್‌ಕೆ ಪ್ರೊಡಕ್ಷನ್ಸ್‌ನಡಿ ಈ ಚಿತ್ರ 2022ರಲ್ಲಿ ತೆರೆ ಕಾಣಲಿದೆ. ಅಪ್ಪು ಜತೆಗೆ ಈ ಪಯಣದಲ್ಲಿ ಹೆಜ್ಜೆ ಇಟ್ಟ ಅಮೋಘವರ್ಷ 'ಸಿನಿಮಾ ಪುರವಣಿ' ಜೊತೆಗೆ ನೆನಪುಗಳ ಬುತ್ತಿ ಬಿಚ್ಚಿಟ್ಟದ್ದಾರೆ.

ಅಭಿಲಾಷ್ ಪಿ.ಎಸ್.

'ಗಂಧದಗುಡಿ'ಯನ್ನು 'ಮ್ಯಾನ್ ವಿದ್ ವೈಲ್ಡ್' ಎನ್ನಬಹುದೇ?

ನೀವು ಹೇಳಿದ್ದು ಸರಿ ಇದೆ. ಭಾರತದಲ್ಲಿ ನಾವು ಪರಿಸರ, ವನ್ಯಲೋಕದ ವಿರುದ್ಧ ಎಂದೂ ಹೋಗಿಲ್ಲ. ಹಾಗಾಗಿ ಇದು ಮ್ಯಾನ್ ವರ್ಸಸ್ ವೈಲ್ಡ್ ಅಲ್ಲ. ಪರಿಸರದ ಮೇಲಿರುವ ಗೌರವ, ಹೊಂದಾಣಿಕೆಯೇ ಭಾರತದಲ್ಲಿ ಅಭಯಾರಣ್ಯ, ವನ್ಯಲೋಕ ಇನ್ನೂ ಉಳಿದಿರುವುದಕ್ಕೆ ಕಾರಣ. ಇದನ್ನು ನಾವು ಮುಂದೆಯೂ ಮರೆಯಬಾರದು.

- **'ಗಂಧದಗುಡಿ'ಗೆ ಪ್ರವೇಶಿಸಿದ ಕ್ಷಣ ಹಾಗೂ ಈ ಶೀರ್ಷಿಕೆ ಆಯ್ಕೆ ಮಾಡಿದ ಕಾರಣ?**

ಪುನೀತ್ ರಾಜ್‌ಕುಮಾರ್ (ಅಪ್ಪು) ಅವರನ್ನು ಸುಮಾರು ಒಂದೂವರೆ ವರ್ಷ ಹಿಂದೆ ಭೇಟಿಯಾಗಿ ಮಾತುಕತೆ ನಡೆಸಿದಾಗ ಒಂದು ಹೊಸ ಬಗೆಯ ಪ್ರಯೋಗ ಮಾಡೋಣ. ನಾನು ನಾನಾಗಿಯೇ ಇರಬೇಕು, ಅಂತಹ ಭಿನ್ನವಾದ ಸಿನಿಮಾ ಮಾಡೋಣ ಎಂದು ತಮ್ಮ ಅಭಿಲಾಷೆ ಮುಂದಿಟ್ಟಿದ್ದರು.

ನಮ್ಮ ಕ್ಷೇತ್ರ ವನ್ಯಲೋಕ, ಕಾಡು. ಇದನ್ನೇ ಇಟ್ಟುಕೊಂಡು ಸಿನಿಮಾ ಮಾಡೋಣ ಎಂದು ಸಣ್ಣದಾಗಿ ಬಿತ್ತಿದ ಈ ಬೀಜ, ಮಾತುಕತೆ ಬಳಿಕ ಚಿಗುರೊಡೆದು 'ಗಂಧದಗುಡಿ'ಯಾಗಿ ಬೆಳೆಯುತ್ತಾ ಹೋಯಿತು. ಸುಮಾರು 50 ವರ್ಷಗಳ ಹಿಂದೆ ಬಂದಿದ್ದ ರಾಜ್‌ಕುಮಾರ್ ಅವರ 'ಗಂಧದಗುಡಿ' ಸಿನಿಮಾದ ದೊಡ್ಡ ಫ್ಯಾನ್ ನಾನು. ನಾವು ಈಗ ಪರಿಸರ, ಕಾಡು ಉಳಿಸಿ ಎಂದು ಮಾತನಾಡುತ್ತಿದ್ದೇವೆ, ಎಚ್ಚೆತ್ತುಕೊಳ್ಳುತ್ತಿದ್ದೇವೆ. ಆದರೆ ಐದು ದಶಕದ ಹಿಂದೆಯೇ ಕಾಡನ್ನು ಉಳಿಸಬೇಕು ಎಂದು ಅಣ್ಣಾವ್ರು ಹೇಳಿದ್ದರು. ಅಣ್ಣಾವ್ರು, ಗಂಧದಗುಡಿ ಸಿನಿಮಾ ಹಾಗೂ ನಮ್ಮ ರಾಜ್ಯಕ್ಕೆ ಒಂದು ಕೊಡುಗೆಯಾಗಿ, ಇದಕ್ಕೇನು ಶೀರ್ಷಿಕೆ ಇಡೋಣ ಎಂಬ ಪ್ರಶ್ನೆ ಮೂಡಿದಾಗ ಇಟ್ಟ ಹೆಸರೇ 'ಗಂಧದಗುಡಿ'.

ಗಂಧದಗುಡಿ ಸಿನಿಮಾವನ್ನು ಮರೆಯಬಾರದು. ಅದೊಂದು ಕನ್ನಡದ ಗೋಲ್ಡನ್ ಸಿನಿಮಾ. ಆ ಚಿತ್ರ ನಮಗೆಲ್ಲರಿಗೂ ಪ್ರೇರಣೆ. ಅಪ್ಪಾಜಿ ಅವರ ಗಂಧದಗುಡಿಯನ್ನು ಜನರು ಮರೆಯಬಾರದು ಎನ್ನುವ ಆಸೆಯನ್ನೂ ಪುನೀತ್ ಅವರು ಹೊಂದಿದ್ದರು.

- **'ಸ್ಟಾರಿಂಗ್ ಪುನೀತ್ ರಾಜ್‌ಕುಮಾರ್ ಆ್ಯಂಡ್ ಅಮೋಘವರ್ಷ' ಎಂದಷ್ಟೇ ಇದೆ. ಇದಕ್ಕೆ ಕಾರಣ?**

ಈಗೇನು ಟೀಸರ್ ಅನ್ನು ನೀವು ನೋಡಿದ್ದೀರಿ, ಅದನ್ನು ನಾವು ಅಪ್ಪು ಅವರಿಗೆ ಕಳುಹಿಸಿಕೊಟ್ಟಿದ್ದೆವು. ಇದನ್ನು ನೋಡಿ 'ನನ್ನದೊಂದು ಸಣ್ಣ ಮನವಿ ಇದೆ, ಪವರ್‌ಸ್ಟಾರ್ ಎನ್ನುವುದನ್ನು ತೆಗೆದುಬಿಡಿ' ಎಂದರು. 'ಗಂಧದಗುಡಿಯಲ್ಲಿ ಒಬ್ಬ ಸ್ಟಾರ್, ಸೆಲೆಬ್ರಿಟಿ ಆಗಿರದೆ, ನಾನು ನಾನಾಗಿಯೇ ಇರುತ್ತೇನೆ' ಎಂದಿದ್ದರು. ಅವರು ಒಂದು ದಿನವೂ ಮೇಕ್‌ಅಪ್ ಹಚ್ಚಲಿಲ್ಲ. ನನಗೆ ಒಬ್ಬ ಸ್ಟಾರ್ ಜೊತೆ ಕೆಲಸ ಮಾಡುತ್ತಿದ್ದೇನೆ ಎಂದು ಅನಿಸಲೇ ಇಲ್ಲ. ಈ ಕಾರಣದಿಂದಲೇ ನಾವು ಇಷ್ಟು ಚಿತ್ರೀಕರಿಸಲು, ಒಂದು ವರ್ಷ ಜೊತೆಯಲ್ಲಿ ಕಾರ್ಯನಿರ್ವಹಿಸಲು ಸಾಧ್ಯವಾಯಿತು. ದೃಶ್ಯಗಳು ಅಷ್ಟೊಂದು ನೈಜವಾಗಿ ಬರಲು ಅಪ್ಪು ಅವರ ಸ್ವಭಾವವೇ ಕಾರಣ.

- **ನೈಜ ಘಟನೆಯನ್ನು ಆಧರಿಸಿ ಎಂದಿದೆ. ಹಾಗಿದ್ದರೆ ಇದು ಯಾವ ಮಾದರಿ ಸಿನಿಮಾ?**

ಇದೊಂದು ಹೊಸ ರೀತಿಯ ಅನುಭವಾತ್ಮಕ ಸಿನಿಮಾ. 'ಇದೇನು ಸಿನಿಮಾನಾ ಅಥವಾ ಸಾಕ್ಷ್ಯಚಿತ್ರವೇ' ಎಂದು ಎಲ್ಲರೂ ಕೇಳುತ್ತಿದ್ದಾರೆ. ಇದನ್ನು ಸಾಕ್ಷ್ಯಚಿತ್ರ ಎಂದು ಹೇಳಲು ಸಾಧ್ಯವಿಲ್ಲ. ಏಕೆಂದರೆ ಇದರ ಚಿತ್ರೀಕರಣ ಬಹಳ ಭಿನ್ನವಾಗಿದೆ. ಇದು ಚಿತ್ರಮಂದಿರಗಳಲ್ಲಿ ಬರಲಿರುವ ಪೂರ್ಣ ಪ್ರಮಾಣದ ಸಿನಿಮಾ. ಇದನ್ನು ಹೊಸ ವಿಭಾಗಕ್ಕೆ ಸೇರಿಸಬಹುದು. ಇಲ್ಲಿ ಪ್ರೇಕ್ಷಕರು ನೋಡುವುದೆಲ್ಲವೂ ನಿಜವೇ. ಇಲ್ಲಿ ಹಾಡಿದೆ, ಕಥೆ ಇದೆ. ಕಾಲ್ಪನಿಕವಲ್ಲ. ಭಾರತದಲ್ಲೇ ಈ ರೀತಿ ಪ್ರಯೋಗ ಮೊದಲು ನಡೆದಂತಿಲ್ಲ. ಸಿನಿಮಾ ಎಂದರೆ ಪ್ರೇಕ್ಷಕರು ಒಂದು ರೀತಿ ನೋಡುತ್ತಾರೆ, ಸಾಕ್ಷ್ಯಚಿತ್ರ ಎಂದರೆ ಅವರ ಕಲ್ಪನೆ ಬೇರೆ ರೀತಿ ಇರುತ್ತದೆ. ಹೀಗಾಗಿ ಈ ಹೊಸ ಪ್ರಯತ್ನವನ್ನು, ಪ್ರೇಕ್ಷಕರೇ ಚಿತ್ರಮಂದಿರದಲ್ಲಿ ಅನುಭವಿಸಿ ಹೇಳಬೇಕು.

- **ಗಂಧದಗುಡಿ ಕ್ಲೈಮ್ಯಾಕ್ಸ್‌ನಲ್ಲಿ ಬರುವ ರಾಜ್‌ಕುಮಾರ್ ಅವರ ಡೈಲಾಗ್ ಬಳಸಿಕೊಳ್ಳಲು ಕಾರಣ?**

ಇದನ್ನು ಅಪ್ಪು ಸರ್ ಹಾಗೂ ನಾನು ಒಬ್ಬರೂ ಒಟ್ಟಿಗೆ ನಿರ್ಧರಿಸಿದೆವು. ಅಪ್ಪು ಅವರಿಗೂ ಆ ಸಿನಿಮಾ ಎಂದರೆ ತುಂಬಾ ಇಷ್ಟ. ಆ ಸಿನಿಮಾ ಬಗ್ಗೆ ಸಿಕ್ಕಾಪಟ್ಟೆ ಮಾತನಾಡುತ್ತಿದ್ದರು. ನಮಗೆಲ್ಲ ಪ್ರೇರಣೆಯಾದ 'ಗಂಧದಗುಡಿ' ಚಿತ್ರದ ಒಂದು ಅಂಶವನ್ನು ಟೀಸರ್‌ನಲ್ಲಿ ಬಳಸಿಕೊಳ್ಳಬೇಕು ಎಂದಾಗ, ಕ್ಲೈಮ್ಯಾಕ್ಸ್‌ನಲ್ಲಿ ಅಣ್ಣಾವ್ರ ಮಾತು ಅತಿ ಸೂಕ್ತ ಎನಿಸಿತು. ಎಲ್ಲ ಜನರ ಮನಸ್ಸಿಗೆ ತುಂಬಾ ಹತ್ತಿರವಾದ ಹಾಗೂ ನೆನಪಿನಲ್ಲಿ ಉಳಿಯುವ ಮಾತದು. ಇಡೀ ದೃಶ್ಯವನ್ನು ನಾವು ಬಳಸಿಕೊಳ್ಳಲು ನಿರ್ಧರಿಸಿದ್ದೆವು. ಅದೇ ರೀತಿ ಬಳಸಿಕೊಂಡೆವು. ಆದರೆ ಅಣ್ಣಾವ್ರ ಆ ಧ್ವನಿಯಲ್ಲೇ ನಮ್ಮ ಈ ಇಡೀ ಗಂಧದಗುಡಿಯ ಸಂದೇಶವಿದ್ದ ಕಾರಣ, ಮೂಲ ದೃಶ್ಯವನ್ನು ಬಳಸಿಕೊಳ್ಳದೇ ಅದನ್ನು ಪ್ರೇಕ್ಷಕರ ಕಲ್ಪನೆಗೆ ಬಿಟ್ಟೆವು.

- **ಅಪ್ಪು ಅವರ ಜೊತೆ ಕಳೆದ ಕ್ಷಣಗಳು ಹೇಗಿದ್ದವು?**

ಇದು ನನ್ನ ಪುಣ್ಯ. ಅಪ್ಪು ಅವರ ಸ್ಮಾರಕ ನೋಡಲು ನೂರಾರು ಕಿ.ಮೀ ದೂರದಿಂದ ಸಾವಿರಾರು ಜನರು ಇಂದೂ ಬರುತ್ತಿದ್ದಾರೆ. ಹೀಗಿರುವಾಗ ಅವರ ಜೊತೆಗೇ ಒಂದು ವರ್ಷ ಕಳೆದಿದ್ದೆ ಎಂದರೆ ನನಗೆ ಈಗಲೂ ನಂಬಲು ಸಾಧ್ಯವಾಗುತ್ತಿಲ್ಲ. ಎಲ್ಲವೂ ಇನ್ನೂ ಕನಸಿನಂತೆಯೇ ಇದೆ. ಪ್ರತಿ ಕ್ಷಣವನ್ನೂ ಅನುಭವಿಸುತ್ತಾ, ಸಂತಸಪಡುತ್ತಾ ಅವರು ನಮ್ಮ ಜೊತೆ ಚಿತ್ರೀಕರಣದಲ್ಲಿ ಸಮಯ ಕಳೆದಿದ್ದರು. ಅವರಿಲ್ಲ ಎಂದಾಗ ಬೇಸರವಾಗುತ್ತದೆ. ಆದರೆ ಇವೆಲ್ಲವನ್ನೂ ಅವರು ನೋಡುತ್ತಿದ್ದಾರೆ.

ನಾವು ಯಾವಾಗಲೂ ಕ್ಯಾಮೆರಾ ಹಿಂದೆ ಇದ್ದವರು. ಅಪ್ಪು ಅವರ ಜೊತೆ ತೆರೆಯ ಮೇಲೆ ಕಾಣಿಸಿಕೊಳ್ಳಬೇಕು ಎನ್ನುವಾಗ ಆದ ಹೆಮ್ಮೆಗಿಂತ ಭಯ ಜಾಸ್ತಿ. ಆದರೆ ಅಪ್ಪು ಸರ್ ಈ ಭಯವನ್ನು ದೂರ ಮಾಡಿದ್ದರು. ನಮ್ಮೆಲ್ಲರ ಜೊತೆ ಅವರ ಹೊಂದಾಣಿಕೆ ಆ ರೀತಿ ಇತ್ತು. ಕ್ಯಾಮೆರಾ ಮುಂದೆ ಇರುವುದು ಅವರ ಕೋಟೆ. ಹೀಗಾಗಿ ನಮ್ಮನ್ನು ಪ್ರೋತ್ಸಾಹಿಸುತ್ತಿದ್ದರು. ಹಲವು ದಿನ ಅವರ ಜೊತೆ ಕಳೆದ ಬಳಿಕ, ಚಿತ್ರೀಕರಣ ನಡೆಸುತ್ತಿದ್ದೇವೆ ಎಂದು ಅನಿಸಲೇ ಇಲ್ಲ. ಒಬ್ಬರು ಮಾರ್ಗದರ್ಶಿ, ಸ್ನೇಹಿತನ ಜೊತೆ ಕರ್ನಾಟಕ ಸುತ್ತಿದ ಅನುಭವ. ಇಷ್ಟು ದೊಡ್ಡ ಪ್ರಾಜೆಕ್ಟ್ ಮಾಡುತ್ತಿದ್ದೇವೆ, ಎಂದು ಅನಿಸಲೇ ಇಲ್ಲ.

- **ಪುನೀತ್ ಅವರ ಸಾಹಸ, ಧೈರ್ಯವನ್ನು ಅಮೋಘವರ್ಷ ಕಂಡಿದ್ದರೇ?**

ಕೆಲವರು ದೈಹಿಕವಾಗಿ ಬಹಳ ಸಮರ್ಥರಾಗಿರುತ್ತಾರೆ. ಕೆಲವರು ಚೆನ್ನಾಗಿ ಓಡುತ್ತಾರೆ. ಹೀಗೆ ಒಬ್ಬೊಬ್ಬ ಸ್ಟಾರ್ಸ್‌ಗೆ ಒಂದೊಂದು ಕಲೆ ತಿಳಿದಿರುತ್ತದೆ. ಆದರೆ ಅಪ್ಪು ಅವರು ಎಲ್ಲವನ್ನೂ ಮಾಡುತ್ತಿದ್ದರು. ಅವರ ಬ್ಯಾಕ್‌ಫ್ಲಿಪ್ ನೋಡಿ ನಾನು ಆಶ್ಚರ್ಯಪಟ್ಟಿದ್ದೆ. ನನಗೂ ಹೇಳಿಕೊಡಿ ಎಂದು ಕೇಳಿಕೊಂಡಿದ್ದೆ. 'ಇದರಲ್ಲೇನಿದೆ ದೊಡ್ಡ ವಿಷ್ಯಾ' ಎಂದು ಮಾಡಿ ತೋರಿಸೋರು.

- **ಅಪ್ಪು ಕನಸು ಅಶ್ವಿನಿ ಪುನೀತ್ ರಾಜ್‌ಕುಮಾರ್ ಅವರ ಮೂಲಕ ನನಸಾಗುತ್ತಿದೆ ಅಲ್ಲವೇ?**

ಮೊದಲ ದಿನದಿಂದಲೂ ಅಶ್ವಿನಿ ಅವರೂ ಈ ಪ್ರೊಜೆಕ್ಟ್ ಬಗ್ಗೆ ಬಹಳ ಆಸಕ್ತಿ ಹೊಂದಿದ್ದರು. ಪಿಆರ್‌ಕೆ ಬ್ಯಾನರ್‌ನಲ್ಲಿ ಅಪ್ಪು ಅವರು ಕಾಣಿಸಿಕೊಳ್ಳುತ್ತಿರುವ ಮೊದಲ ಸಿನಿಮಾ ಇದಾಗಿದೆ. ಮೊದಲು ಎರಡು ಸ್ತಂಭಗಳಿದ್ದವು, ಇದೀಗ ಒಂದು ಸ್ತಂಭ ಇದೆ. ಈ ಬೆಂಬಲ ಇರುವುದಕ್ಕೇ ನಾವೇನೋ ಮಾಡಲು ಸಾಧ್ಯವಾಗುತ್ತಿದೆ. ಅಪ್ಪು ಅವರ ಕನಸುಗಳನ್ನು ನೆರವೇರಿಸುವುದೇ ನಮ್ಮ ಕರ್ತವ್ಯ. ಸದ್ಯಕ್ಕೆ ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿದ್ದು, 2022ರಲ್ಲಿ ಇದು ತೆರೆಕಾಣಲಿದೆ.

ಅಪ್ಪು ಬಾಯಲ್ಲಿ, ಕಣ್ಣಲ್ಲೇ ನಾವು ಈ ಸಿನಿಮಾ ನೋಡೋಣ. ಇದರಲ್ಲಿ ತುಂಬಾ ಕಥೆಗಳು, ವಿಸ್ಮಯಗಳು, ಭಾವನಾತ್ಮಕ ದೃಶ್ಯಗಳು ಎಲ್ಲವೂ ಇದೆ.



ರಚಿತಾ ರಾಮ್

'ಗರಡಿ'ಯಲ್ಲಿ ರಚಿತಾ ರಾಮ್


ಸ್ಯಾಂಡಲ್‌ವುಡ್ ಡಿಂಪಲ್ ಕ್ವೀನ್ ರಚಿತಾ ರಾಮ್ ಸದ್ಯಕ್ಕೆ ಸಾಲು ಸಾಲು ಚಿತ್ರಗಳಲ್ಲಿ ನಟಿಸುತ್ತಿದ್ದಾರೆ. ಲೆಕ್ಕ ಹಾಕಿದರೆ ಹತ್ತಕ್ಕೂ ಹೆಚ್ಚು ಸಿನಿಮಾಗಳು ರಚಿತಾ ಕೈಯಲ್ಲಿವೆ. ಇಷ್ಟೊಂದು ಸಿನಿಮಾ ಬ್ಯಾಂಕ್ ಚಂದನವನದ ಬೇರೊಬ್ಬ ನಟಿಯ ಬಳಿ ಇಲ್ಲ.

'ಏಕ್ ಲವ್ ಯಾ', 'ಲವ್ ಯೂ ರಚ್ಚು', 'ಮಾನ್ಸೂನ್ ರಾಗ', 'ಲವ್ ಮಿ ಆರ್ ಹೇಟ್ ಮಿ', 'ಶಬರಿ' ಹೀಗೆ ಸಿನಿಮಾ ಪಟ್ಟಿ ಬೆಳೆಯುತ್ತಿದೆ. ಕಳೆದ ತಿಂಗಳಷ್ಟೇ ಚಾಲೆಂಜಿಂಗ್ ಸ್ಟಾರ್ ದರ್ಶನ್ ನಟನೆಯ 'ಕ್ರಾಂತಿ' ಸಿನಿಮಾಗೆ ಪ್ರವೇಶಿಸಿದ್ದ ರಚಿತಾ ರಾಮ್, ಇದೀಗ ಯೋಗರಾಜ್ ಭಟ್ ಅವರ ಹೊಸ ಸಿನಿಮಾ 'ಗರಡಿ'ಗೆ ಹೆಜ್ಜೆ ಇಟ್ಟಿದ್ದಾರೆ. 'ಗಾಳಿಪಟ-2' ಸಿದ್ಧಪಡಿಸಿ ಹಾರಿಬಿಡಲು ಕಾಯುತ್ತಿರುವ ಯೋಗರಾಜ್ ಭಟ್, 'ಗರಡಿ' ಸಿನಿಮಾ ಕೈಗೆತ್ತಿಕೊಂಡಿದ್ದಾರೆ.

ಸೌಮ್ಯ ಫಿಲಂಸ್ ಬ್ಯಾನರ್‌ನ ಅಡಿಯಲ್ಲಿ ತಯಾರಾಗುತ್ತಿರುವ ಈ ಚಿತ್ರಕ್ಕೆ ಕೃಷಿ ಸಚಿವ, ನಟ ಬಿ.ಸಿ. ಪಾಟೀಲ ಅವರ ಪತ್ನಿ ವನಜಾ ಪಾಟೀಲ ಹಾಗೂ ಪುತ್ರಿ ಸೃಷ್ಟಿ ಪಾಟೀಲ ಬಂಡವಾಳ ಹೂಡಲಿದ್ದಾರೆ. ಚಿತ್ರದಲ್ಲಿ ನಾಯಕನಾಗಿ ನಟ ಯಶಸ್ ಸೂರ್ಯ ನಟಿಸುತ್ತಿದ್ದು, ಇವರಿಗೆ ಜೋಡಿಯಾಗಿ ರಚಿತಾ ಬಣ್ಣಹಚ್ಚಲಿದ್ದಾರೆ. ಬಿ.ಸಿ ಪಾಟೀಲ ಬಹಳ ದಿನಗಳ ನಂತರ ಒಂದು ಪ್ರಮುಖ ಪಾತ್ರಕ್ಕಾಗಿ ಈ ಸಿನಿಮಾದ ಮೂಲಕ ಮತ್ತೆ ಬಣ್ಣ ಹಚ್ಚಲಿದ್ದಾರೆ. ಚಿತ್ರದಲ್ಲಿ ನಟ ದರ್ಶನ್ ಅತಿಥಿ ಪಾತ್ರದಲ್ಲಿ ಕಾಣಿಸಿಕೊಳ್ಳುವ ಸಾಧ್ಯತೆ ಇದೆ.

ಈ ಆ್ಯಕ್ಷನ್ ಡ್ರಾಮಾ ಸಿನಿಮಾಗೆ, ವಿ. ಹರಿಕೃಷ್ಣ ಸಂಗೀತ ನೀಡುತ್ತಿದ್ದು, ಜಯಂತ ಕಾಯ್ಕಿಣಿ ಹಾಗೂ ಯೋಗರಾಜ್ ಭಟ್ ಸಾಹಿತ್ಯ ರಚಿಸಲಿದ್ದಾರೆ. ಚಿತ್ರಕ್ಕೆ ನಿರಂಜನ್ ಬಾಬು ಛಾಯಾಗ್ರಹಣವಿದ್ದು, ಭಟ್ರ ಜೊತೆಗೂಡಿ 'ಡ್ರಾಮಾ' ಚಿತ್ರದ ಚಿತ್ರಕಥೆ ರಚಿಸಿದ್ದ ವಿಕಾಸ್ ಈ ಚಿತ್ರದ ಮೂಲಕ ಮತ್ತೊಮ್ಮೆ ಅವರ ಜೊತೆ ಕೈಜೋಡಿಸಿದ್ದಾರೆ.

ಚಿತ್ರಮಂದಿರಕ್ಕೆ 'ರಾಜೇಂದ್ರ ಪೊನ್ನಪ್ಪ' ಪ್ರವೇಶ



ರವಿಚಂದ್ರನ್

ಇಂದು ತೆರೆಗೆ

'ದೃಶ್ಯ'ದ ನಾಯಕ 'ರಾಜೇಂದ್ರ ಪೊನ್ನಪ್ಪ' ಕ್ರೇಜಿಸ್ಟಾರ್ ವಿ. ರವಿಚಂದ್ರನ್ ದೃಶ್ಯ – 2ನ ಮೂಲಕ ಡಿ. 10ರಂದು ಮತ್ತೆ ಚಿತ್ರಮಂದಿರಕ್ಕೆ ಬರುತ್ತಿದ್ದಾರೆ.

ಚಿತ್ರಕ್ಕೆ ಪಿ.ವಾಸು ಅವರ ನಿರ್ದೇಶನವಿದೆ. ಹಿರಿಯ ನಟ ಅನಂತನಾಗ್, ನವ್ಯ ನಾಯರ್, ಪ್ರಭು ಶಿವಾಜಿ, ಸಾಧುಕೋಕಿಲ, ನೀತು ರೈ, ಪ್ರಮೋದ್ ಶೆಟ್ಟಿ, ಅಶೋಕ್, ಶಿವರಾಂ, ಉನ್ನತಿ, ಕೃಷ್ಣ ಯಟನ್ರ್, ನಾರಾಯಣ್ ಸ್ವಾಮಿ, ಲಾಸ್ಯ ನಾಗರಾಜ್, ಯತಿರಾಜ್ ತಾರಾಬಳಗದಲ್ಲಿದ್ದಾರೆ. ಚಿತ್ರಕ್ಕೆ ಪ್ರಾದೇಶಿಕ ಸೆನ್ಸಾರ್ ಮಂಡಳಿ ಯು/ಎ ಪ್ರಮಾಣಪತ್ರ ನೀಡಿದೆ.

ಇ4 ಎಂಟರ್‌ಟೈನ್‌ಮೆಂಟ್ ಲಾಂಛನದಲ್ಲಿ ಈ ಚಿತ್ರ ನಿರ್ಮಾಣವಾಗಿದೆ. ಈ ಚಿತ್ರ ಝೀ ಸ್ಟುಡಿಯೊ ಮೂಲಕ ಬಿಡುಗಡೆಯಾಗುತ್ತಿದೆ. ಸಿ.ವಿ.ಸಾರಥಿ ಕಾರ್ಯಕಾರಿ ನಿರ್ಮಾಪಕ. ಚಿತ್ರಕ್ಕೆ ಜೀತು ಜೋಸೆಫ್ ಕಥೆ ಬರೆದಿದ್ದಾರೆ. ಜಿ.ಎಸ್.ವಿ ಸೀತಾರಾಂ ಛಾಯಾಗ್ರಹಣ, ಸುರೇಶ್ ಅರಸ್ ಸಂಕಲನ, ರವಿ ಸಂತೆಹುಕ್ಲು ಅವರ ಕಲಾ ನಿರ್ದೇಶನವಿದೆ.



❦ ಸುಭಾಷಿತ ❦
ಎಷ್ಟು ಗಟ್ಟಿ ಮನುಷ್ಯನೇ ಆಗಿರಲಿ ಹೊಗಳಿಕೆಗೆ ಕಿವಿಗೊಟ್ಟನೆಂದರೆ ಬಲೆಗೆ ಬೀಳುತ್ತಾನೆ.
-ಶಿವರಾಮ ಕಾರಂತ

ದಿಗ್ಭ್ರಮೆ ಮೂಡಿಸಿದ ದುರಂತ ಅವಘಡಕ್ಕೆ ಕಾರಣ ಪತ್ತೆಯಾಗಲಿ

ಭಾರತದ ಸೇನಾ ಪಡೆಗಳ ಮುಖ್ಯಸ್ಥರಾಗಿದ್ದ (ಸಿಡಿಎಸ್) ಜನರಲ್ ಬಿಪಿನ್ ರಾವತ್ ಅವರು ತಮಿಳುನಾಡಿನ ಕೂನೂರು ಬಳಿ ಸಂಭವಿಸಿದ ಹೆಲಿಕಾಪ್ಟರ್ ದುರಂತದಲ್ಲಿ ದುರ್ಮರಣಕ್ಕೀಡಾದ ಘಟನೆ ಇಡೀ ದೇಶವನ್ನು ದಿಗ್ಭ್ರಮೆಯಲ್ಲಿ ಮುಳುಗಿಸಿದೆ. ಆ ಹೆಲಿಕಾಪ್ಟರ್‌ನಲ್ಲಿ ಪ್ರಯಾಣ ಮಾಡುತ್ತಿದ್ದವರಲ್ಲಿ ಸಿಡಿಎಸ್, ಅವರ ಪತ್ನಿ ಹಾಗೂ ಹಿರಿಯ ಸೇನಾ ಅಧಿಕಾರಿಗಳೂ ಸೇರಿ ಒಟ್ಟು 13 ಜನ ಜೀವ ಕಳೆದುಕೊಂಡಿದ್ದಾರೆ. ಒಬ್ಬರಷ್ಟೇ ಬದುಕಿ ಉಳಿದಿದ್ದಾರೆ. ದೇಶದ ರಕ್ಷಣಾ ವ್ಯವಸ್ಥೆಯಲ್ಲಿ ಹಲವು ಸುಧಾರಣಾ ಕ್ರಮಗಳನ್ನು ಜಾರಿಗೆ ತರುವಲ್ಲಿ ಮಹತ್ವದ ಪಾತ್ರ ವಹಿಸಿದ ಸೇನಾ ನಾಯಕರಾಗಿದ್ದರು ರಾವತ್. ಜಮ್ಮು-ಕಾಶ್ಮೀರ ಒಳಗೊಂಡಂತೆ ದೇಶದ ಹಲವು ಸೂಕ್ಷ್ಮ ಗಡಿಪ್ರದೇಶಗಳಲ್ಲಿ ಕರ್ತವ್ಯ ನಿರ್ವಹಿಸಿದ್ದ ಅವರು, ಸಮರತಂತ್ರದ ವ್ಯಾಪಕ ಅನುಭವವನ್ನೂ ಹೊಂದಿದ್ದರು. ಅವರ ಅಕಾಲಿಕ ಸಾವು ಸೇನಾ ಪಡೆಗಳ ಪಾಲಿಗೆ ಬಲುದೊಡ್ಡ ನಷ್ಟ ಎನ್ನುವುದರಲ್ಲಿ ಎರಡನೇ ಅಭಿಪ್ರಾಯವಿಲ್ಲ. ಹೊರ ಜಗತ್ತನ್ನು ಮನಸ್ಸಿನಿಂದ ದೂರವಿಟ್ಟು ಸೇನಾ ಬ್ಯಾರಕ್‌ಗಳಲ್ಲಿ ಕಳೆದುಹೋಗುವ ಸಾಂಪ್ರದಾಯಿಕ ಸೈನಿಕ ಅವರಾಗಿರಲಿಲ್ಲ. ಸೇನೆಯಲ್ಲಿ ಅತ್ಯುನ್ನತ ಹುದ್ದೆಯಲ್ಲಿದ್ದರೂ ದೇಶದ ಹಲವು ಬೆಳವಣಿಗೆಗಳಿಗೆ ಸಂಬಂಧಿಸಿದಂತೆ ತಮ್ಮ ಅಭಿಪ್ರಾಯವನ್ನು ಮುಕ್ತವಾಗಿ ಹಂಚಿಕೊಳ್ಳುವಲ್ಲಿ ಯಾವ ಹಿಂಜರಿಕೆಯನ್ನೂ ಅವರು ತೋರಿದವರಲ್ಲ. ಈ ಕಾರಣದಿಂದಾಗಿ ಅವರು ಟೀಕೆಯನ್ನೂ ಎದುರಿಸಿದ್ದಿದೆ. ಆದರೆ, ಇದು ಅವರ ಅಕಾಲಿಕ ಸಾವಿನ ಸಂದರ್ಭ. ಅಂತಹ ವಿವಾದಗಳ ಕುರಿತು ಚರ್ಚಿಸುವ ಸನ್ನಿವೇಶವಂತೂ ಅಲ್ಲವೇ ಅಲ್ಲ. ಸೇನಾ ಪಡೆಗಳ ಕಾರ್ಯವಿಧಾನದಲ್ಲಿ ಹೊಸತನ ತರಲು ಪ್ರಯತ್ನ ಮಾಡಿದಂತಹ ಜನರಲ್ ಅವರು. ಕೆಲವೊಂದು ನಿರ್ಧಾರಗಳನ್ನು ಕ್ಷಣಮಾತ್ರದಲ್ಲಿ ತೆಗೆದುಕೊಳ್ಳಬಲ್ಲ ಛಾತಿ ಹೊಂದಿದ್ದರು ಎಂದೂ ಅವರನ್ನು ಹತ್ತಿರದಿಂದ ಬಲ್ಲವರು ಹೇಳುತ್ತಾರೆ. ಮೂರೂ ಸೇನಾ ಪಡೆಗಳ ಏಕೀಕೃತ ಕಮಾಂಡ್ ವ್ಯವಸ್ಥೆ ರೂಪುಗೊಳ್ಳಲು ಅತ್ಯಂತ ಉತ್ಸಾಹದಿಂದ ಕೆಲಸ ಮಾಡಿದರು. ಚೀನಾದೊಂದಿಗೆ ಗಡಿಯಲ್ಲಿ ಮುಖಾಮುಖಿಯಾಗುವ ಪ್ರಸಂಗಗಳು ಮೇಲಿಂದ ಮೇಲೆ ಎದುರಾದರೂ ಸೇನಾ ಪಡೆಗಳಲ್ಲಿ ಸುಧಾರಣಾ ಕ್ರಮಗಳು ವೇಗ ಕಳೆದುಕೊಳ್ಳದಂತೆ ಎಚ್ಚರಿಕೆಯನ್ನೂ ಅವರು ವಹಿಸಿದ್ದರು. ಈಗ, ಈ ಸೇನಾ ನಾಯಕನ ಅಗಲಿಕೆಯಿಂದ ಅಂತಹ ಕ್ರಮಗಳು ಕುಂಠಿತಗೊಳ್ಳದಂತೆ, ದಾರಿ ತಪ್ಪದಂತೆ ನೋಡಿಕೊಳ್ಳುವ ಗುರುತರ ಹೊಣೆ ಸರ್ಕಾರದ ಮೇಲಿದೆ.



ಸೇನಾ ಪಡೆಗಳ ಕಾರ್ಯವಿಧಾನದಲ್ಲಿ ಹೊಸತನ ತರಲು ರಾವತ್ ಅವರು ನಡೆಸಿದ್ದ ಪ್ರಯತ್ನಗಳು ಕುಂಠಿತಗೊಳ್ಳದಂತೆ ನೋಡಿಕೊಳ್ಳುವ ಗುರುತರ ಹೊಣೆ ಸರ್ಕಾರದ ಮೇಲಿದೆ

ಸಿಡಿಎಸ್ ಮತ್ತು ಅವರ ತಂಡ ಪ್ರಯಾಣ ಮಾಡುತ್ತಿದ್ದುದು ಹೆಚ್ಚು 'ಸುರಕ್ಷಿತ' ಎಂದು ಜಗತ್ತಿನಲ್ಲಿಯೇ ಹೆಸರಾದ ರಷ್ಯಾ ನಿರ್ಮಿತ 'ಎಂಐ-17 ವಿ5' ಹೆಲಿಕಾಪ್ಟರ್‌ನಲ್ಲಿ. ಆದರೂ ದುರಂತ ಸಂಭವಿಸಿದೆ. ಈ ದುರ್ಘಟನೆಯು ರಾಷ್ಟ್ರೀಯ ಭದ್ರತೆಯ ಕುರಿತಂತೆಯೂ ಕೆಲವು ಪ್ರಶ್ನೆಗಳು ಏಳುವಂತೆ ಮಾಡಿದೆ. ದಟ್ಟಮಂಜು ಆವರಿಸಿದ್ದ ಕಾರಣ ಮುಂದಿದ್ದ ಏನೂ ಕಾಣದಂತಾಗಿ ಹೆಲಿಕಾಪ್ಟರ್ ಮರಕ್ಕೆ ಅಪ್ಪಳಿಸಿ, ದುರಂತ ಸಂಭವಿಸಿತು ಎಂದು ಪ್ರಾಥಮಿಕ ವರದಿಗಳು ಹೇಳುತ್ತಿವೆ. ಪ್ರತಿಕೂಲ ಸನ್ನಿವೇಶದಲ್ಲಿ ವಾಯು ಸಂಚಾರವನ್ನು ಆಯ್ದುಕೊಂಡಿದ್ದೇಕೆ ಎಂಬ ಪ್ರಶ್ನೆ ಕೂಡ ಬೆನ್ನಹಿಂದೆಯೇ ಕೇಳಿಬಂದಿದೆ. ಏರ್ ಮಾರ್ಷಲ್ ನೇತೃತ್ವದ ವಾಯುಪಡೆ ತಂಡದ ತನಿಖೆಯಿಂದ ಇಂತಹ ಪ್ರಶ್ನೆಗಳಿಗೆ ಉತ್ತರಗಳು ಸಿಗುವ ಆಶಾವಾದವಿದೆ. ಘಟನಾ ಸ್ಥಳದಲ್ಲಿ ಸಿಕ್ಕಿರುವ ಬ್ಲ್ಯಾಕ್ ಬಾಕ್ಸ್‌ನಿಂದಲೂ ಕೆಲವು ಸುಳಿವುಗಳು ಸಿಗುವ ನಿರೀಕ್ಷೆ ಇದೆ. 'ಎಂಐ-17 ವಿ5' ಹೆಲಿಕಾಪ್ಟರ್‌ಗಳು ಸುರಕ್ಷತೆಗೆ ಹೆಸರಾಗಿದ್ದರೂ ಅವುಗಳು ಕೂಡ ಕೆಲವು ಅಪಘಾತಗಳನ್ನು ಕಂಡಿರುವುದು ಸುಳ್ಳಲ್ಲ. ಅರುಣಾಚಲ ಪ್ರದೇಶದಲ್ಲಿ ಭಾರತೀಯ ವಾಯುಪಡೆಗೆ ಸೇರಿದ ಎಂಐ-17 ಹೆಲಿಕಾಪ್ಟರ್ ಇತ್ತೀಚೆಗೆ ಪತನಗೊಂಡಿತ್ತು. ಆದರೆ, ಆಗ ಯಾವುದೇ ಸಾವು ಸಂಭವಿಸಿರಲಿಲ್ಲ. 2015ರಲ್ಲಿ ರಾವತ್ ಅವರು ಪ್ರಯಾಣಿಸುತ್ತಿದ್ದ 'ಚೀತಾ' ಹೆಲಿಕಾಪ್ಟರ್ ಕೂಡ ಪತನಗೊಂಡಿತ್ತು. ಆಗ ಅವರು ಪ್ರಾಣಾಪಾಯದಿಂದ ಪಾರಾಗಿದ್ದರು. ಆದರೆ, ಈ ಸಲ ಅವರಿಗೆ ಅಂತಹ ಅದೃಷ್ಟ ಒಲಿಯಲಿಲ್ಲ. ಆಂಧ್ರಪ್ರದೇಶದ ಮುಖ್ಯಮಂತ್ರಿಯಾಗಿದ್ದ ವೈ.ಎಸ್. ರಾಜಶೇಖರ ರೆಡ್ಡಿ, ಅರುಣಾಚಲಪ್ರದೇಶದ ಮುಖ್ಯಮಂತ್ರಿಯಾಗಿದ್ದ ದೋರ್ಜಿ ಖಂಡು ಅವರೂ ಹೆಲಿಕಾಪ್ಟರ್ ದುರಂತಗಳಲ್ಲೇ ಸಾವನ್ನಪ್ಪಿದ ಕಹಿ ನೆನಪುಗಳು ಈಗಲೂ ಕಾಡುತ್ತಿವೆ. ಕೂನೂರು ಘಟನೆಯಂತೂ ದೇಶದ ಅಂತಃಕರಣವನ್ನೇ ಕಲಕಿದೆ. ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಘಟನೆಗೆ ಸಂಬಂಧಿಸಿದಂತೆ ಸಂಸತ್ತಿನ ಉಭಯ ಸದನಗಳಲ್ಲಿ ಹೇಳಿಕೆಯನ್ನೇನೋ ನೀಡಿದ್ದಾರೆ. ಅವರ ಹೇಳಿಕೆಯು ಅವಘಡದ ಬಗ್ಗೆ ಹೊಸ ಬೆಳಕನ್ನೇನೂ ಚೆಲ್ಲಿಲ್ಲ. ಏರ್ ಮಾರ್ಷಲ್ ನೇತೃತ್ವದ ತನಿಖಾ ತಂಡ ನೀಡಲಿರುವ ವರದಿಯ ಮೇಲೆಯೇ ಎಲ್ಲರ ಕಣ್ಣು ನೆಟ್ಟಿದೆ. ರಾವತ್ ಅವರ ದುರ್ಮರಣದಿಂದಾಗಿ ಹೊಸ ಸಿಡಿಎಸ್ ನೇಮಕದ ತುರ್ತು ಕೂಡ ಎದುರಾಗಿದೆ.

ದಿನದ ಟ್ವೀಟ್




ಕೊನೆಗೊಳ್ಳಲಿದೆ ಸಂಕಷ್ಟ

ರೈತರು ಕೊನೆಗೂ ಪ್ರತಿಭಟನೆಯನ್ನು ಹಿಂದಕ್ಕೆ ಪಡೆದಿದ್ದಾರೆ. ದೆಹಲಿಯ ಗಡಿಗಳು ನಾಳೆಯೊಳಗೆ ತೆರವಾಗುವ ಸಾಧ್ಯತೆ ಇದೆ. ಪ್ರತಿಭಟನಾ ಸ್ಥಳಗಳಲ್ಲಿ ಒಂದು ವರ್ಷಕ್ಕೂ ಹೆಚ್ಚು ಕಾಲದಿಂದ ಬಂದ್ ಆಗಿದ್ದ ರಸ್ತೆಗಳಿಂದ ಜನಸಾಮಾನ್ಯರು ಅನುಭವಿಸಿದ ಸಂಕಷ್ಟ ಕೊನೆಗೊಳ್ಳಲಿದೆ.

ಆದಿತ್ಯ ರಾಜ್ ಕೌಲ್, ಪತ್ರಕರ್ತ

ಕಿಡಿನುಡಿ

ಆಹಾರದ ವಿಷಯದಲ್ಲಿ ಎಲ್ಲರಿಗೂ ಸ್ವಾತಂತ್ರ್ಯ ಇದೆ. ಸರ್ಕಾರವು ಮೊಟ್ಟೆ ಕೊಡುವ ಬದಲು ನೇರವಾಗಿ ಹಣ ನೀಡಿದರೆ, ಯಾರಿಗೆ ಏನು ಬೇಕೋ ಅದನ್ನು ಖರೀದಿಸಿ ತಿನ್ನುತ್ತಾರೆ. ಶಿಕ್ಷಣ ನೀಡಲು ಇರುವ ಶಾಲೆಗಳಲ್ಲಿ ಮಕ್ಕಳ ಜೀವನಶೈಲಿ ಬದಲಿಸುವ ಕೆಲಸಕ್ಕೆ ಕೈಹಾಕಬಾರದು. ಮಕ್ಕಳಲ್ಲಿ ಮತಭೇದ ಸೃಷ್ಟಿಸಬಾರದು.



ವಿಶ್ವಪ್ರಸನ್ನತೀರ್ಥ ಸ್ವಾಮೀಜಿ, ಪೇಜಾವರ ಮಠಾಧೀಶ

25 ವರ್ಷಗಳ ಹಿಂದೆ

ಮಂಗಳವಾರ, 10-12-1996

• ಮೊಯಿಲಿ ಸೇರಿ 6 ಜನ ಆರೋಪಿಗಳ ಸೇರ್ಪಡೆ

ನವದೆಹಲಿ, ಡಿ. 9 (ಯುಎನ್‌ಐ)- ಜಾರ್ಖಂಡ್ ಮುಕ್ತಿ ಮೋರ್ಚಾ ಸಂಸತ್ ಸದಸ್ಯರ ಖರೀದಿ ಪ್ರಕರಣದ ತನಿಖೆ ಮಹತ್ತರ ತಿರುವು ಪಡೆದುಕೊಂಡಿದ್ದು, ಸಿಬಿಐ ಇಂದು ಕರ್ನಾಟಕದ ಮಾಜಿ ಮುಖ್ಯಮಂತ್ರಿ ವೀರಪ್ಪ ಮೊಯಿಲಿ ಸಹಿತ ಆರು ಜನರ ಮೇಲೆ ಹೆಚ್ಚುವರಿ ಆರೋಪಪಟ್ಟಿ ಸಲ್ಲಿಸಿ, ಅವರಿಗೆ ಸಮನ್ಸ್ ಕಳಿಸುವಂತೆ ಕೋರ್ಟ್‌ಗೆ ಸಲಹೆ ಮಾಡಿದೆ.

ರಾಜ್ಯಸಭೆಯ ಮಾಜಿ ಸದಸ್ಯ ಮತ್ತು ಪಿ.ವಿ.ನರಸಿಂಹರಾವ್ ಅವರ ಸಂಬಂಧಿ ವಿ.ರಾಜೇಶ್ವರ ರಾವ್, ಕರ್ನಾಟಕದ ಮಾಜಿ ಸಚಿವ ಎಚ್.ಎಂ.ರೇವಣ್ಣ ಮತ್ತು ಶಾಸಕ ರಾಮಲಿಂಗಾರೆಡ್ಡಿ ಹಾಗೂ ಮದ್ಯ ಕಂಪನಿಗಳ ಇಬ್ಬರು ನಿರ್ದೇಶಕರಾದ ಡಿ.ಕೆ.ಆದಿಕೇಶವಲು ಮತ್ತು ಎಂ.ತಿಮ್ಮೇಗೌಡ ಅವರು ಸಿಬಿಐ ಪಟ್ಟಿಯಲ್ಲಿರುವ ಇನ್ನಿತರ ಆಪಾದಿತರು.

• ಜಯಾ ಮನೆಯಲ್ಲಿ 40 ಕೆ.ಜಿ ಚಿನ್ನ ಅರ್ಧ ಟನ್ ಬೆಳ್ಳಿ ಪತ್ತೆ

ಚೆನ್ನೈ, ಡಿ. 9 (ಪಿಟಿಐ, ಯುಎನ್‌ಐ)- ಬಹುಕೋಟಿ ಬಣ್ಣದ ಟಿ.ವಿ ಹಗರಣದ ಆರೋಪಿ, ತಮಿಳುನಾಡಿನ ಮಾಜಿ ಮುಖ್ಯಮಂತ್ರಿ ಜೆ. ಜಯಲಲಿತಾ ಅವರ ನಿವಾಸಗಳಿಂದ 40 ಕೆ.ಜಿ ಚಿನ್ನ ಹಾಗೂ ಅರ್ಧ ಟನ್ ಬೆಳ್ಳಿ ಸೇರಿ 58 ಕೋಟಿ ರೂಪಾಯಿ ಮೌಲ್ಯದ ಆಸ್ತಿಪಾಸ್ತಿಯನ್ನು ಕಳೆದ ಎರಡು ದಿನಗಳಲ್ಲಿ ಜಾಗೃತ ದಳ ನಿರ್ದೇಶನಾಲಯದ ಅಧಿಕಾರಿಗಳು ಮತ್ತು ಭ್ರಷ್ಟಾಚಾರ ವಿರೋಧಿ ದಳದ ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ. ಇದನ್ನು ನಗರದ ನ್ಯಾಯಾಲಯಕ್ಕೆ ಇಂದು ಅವರು ತಿಳಿಸಿದರು.

ಜಾಮೀನಿನ ಮೇಲೆ ಬಿಡುಗಡೆ ಕೋರಿ ಜಯಾ ಅವರು ಸಲ್ಲಿಸಿದ್ದ ಅರ್ಜಿ ವಿಚಾರಣೆಯ ಸಂದರ್ಭದಲ್ಲಿ ಸೆಷನ್ಸ್ ನ್ಯಾಯಾಲಯದಲ್ಲಿ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಎನ್. ನಟರಾಜ್ ಈ ವಿಷಯ ಬಹಿರಂಗಪಡಿಸಿದರು.

50 ವರ್ಷಗಳ ಹಿಂದೆ

ಶುಕ್ರವಾರ, 10-12-1971

• ಢಾಕಾ ಹೆಬ್ಬಾಗಿಲಿನತ್ತ ಭಾರತದ ಸೇನೆ

ನವದೆಹಲಿ, ಡಿ. 9- ಬಾಂಗ್ಲಾದೇಶದ ಆಯಕಟ್ಟಿನ ರೇವು ಪಟ್ಟಣವಾದ ಚಾಂದ್‌ಪುರ, ಆಶುಗಂಜ್ ಪಟ್ಟಣಗಳನ್ನು ಇಂದು ವಶಪಡಿಸಿಕೊಂಡು, ಢಾಕಾ ಹೆಬ್ಬಾಗಿಲಿನತ್ತ ಭಾರತೀಯ ಪಡೆಗಳು ಧಾವಿಸುತ್ತಿವೆ. ಪೂರ್ವ ವಿಭಾಗದ ರಣರಂಗದಲ್ಲೂ ವಶವಾಗಿರುವ ಮತ್ತೊಂದು ಪ್ರಮುಖ ಪಟ್ಟಣವೆಂದರೆ ಚೌದಂಗಾ.

ಭೈರವ್ ಮತ್ತು ಯಮುನಾ ನದಿಗಳಲ್ಲಿ ಪಾಕ್ ಸೈನಿಕರು ಮತ್ತು ಮದ್ದುಗುಂಡುಗಳನ್ನು ಹೊತ್ತಿದ್ದ ಎಲ್ಲ ಬಗೆಯ ನೂರು ನೌಕೆಗಳ ಸಮೂಹದ ಜಲಸಮಾಧಿ ಮಾಡಿ ನಮ್ಮ ವಿಮಾನ ಪಡೆಗಳು ಶತ್ರುವನ್ನು ತಲ್ಲಣಗೊಳಿಸಿವೆ.

• ವಿಮಾನ ಅಪಘಾತ: 14 ಸಾವು?

ಮದ್ರಾಸ್, ಡಿ. 9- ತಿರುವನಂತಪುರದಿಂದ ಮದ್ರಾಸಿಗೆ ಹೊರಟಿದ್ದ ಇಂಡಿಯನ್ ಏರ್‌ಲೈನ್ಸ್ ಸಂಸ್ಥೆಯ ಎಚ್.ಎಸ್- 748 ವಿಮಾನ ಇಂದು ಮಧ್ಯಾಹ್ನ ಮದುರೆಗೆ 100 ಕಿ.ಮೀ ದೂರದ ಕುಂಬಂ ಬಳಿ ಅಪಘಾತಕ್ಕೀಡಾಗಿ ಸುಮಾರು 14 ಮಂದಿ ಪ್ರಯಾಣಿಕರು ಮೃತಪಟ್ಟಿರಬಹುದೆಂದು ಶಂಕಿಸಲಾಗಿದೆ. ಈ ವಿಮಾನದಲ್ಲಿ 31 ಮಂದಿ ಇದ್ದರು.

ಹದ ತಪ್ಪಿದ ಕೃಷಿಭೂಮಿ ಪರಿಸ್ಥಿತಿ: ಆಹಾರ ಹಾಗೂ ಆರೋಗ್ಯ ಸುರಕ್ಷತೆಗೆ ಸಂಕಷ್ಟ!

ಇಳೆಗೆ ಸುಖವಿರದೆ ಬೆಳೆ ಬಂದೀತೇ?



ವಿಶ್ಲೇಷಣೆ

ಡಾ. ಕೇಶವ ಎಚ್. ಕೊರ್ಸೆ

ಮಲೆನಾಡಿನಂಚಿನ ಮುಂಡಗೋಡು ಸೀಮೆಯಲ್ಲಿ, ಸುಗ್ಗಿಯ ಈ ಕಾಲದ ತಿರುಗಾಟಗಳು ನೀಡುವ ಅನುಭವವೇ ಅಮೂಲ್ಯ. ವಿವಾದಾತ್ಮಕ ಕೃಷಿ ಕಾನೂನುಗಳನ್ನು ಹಿಂದಕ್ಕೆ ಪಡೆದ ಕೇಂದ್ರ ಸರ್ಕಾರದ ಇತ್ತೀಚಿನ ನಿರ್ಧಾರವೇನೂ ಅಲ್ಲಿನ ರೈತರ ಮೊಗದಲ್ಲಿ ಸಂತಸ ಚಿಮ್ಮಿಸಿದಂತಿಲ್ಲ. ಇಷ್ಟಕ್ಕೂ, ಬೆಳೆದ ಬೆಳೆ ಕೈಗೆ ಬಂದ ನಂತರವಷ್ಟೇ ಮಾರುಕಟ್ಟೆ ಯೋಚನೆಯಲ್ಲವೇ?

ಧೋ ಎಂದು ಅಕಾಲಿಕವಾಗಿ ಸುರಿಯುತ್ತಿರುವ ಮಳೆಯು ಅವರ ಭತ್ತ, ಜೋಳ, ಮೆಣಸು ಫಸಲನ್ನು ತೋಯಿಸುತ್ತಿದೆ. ಕಾಡುಪ್ರಾಣಿಗಳು, ಕ್ರಿಮಿ-ಕೀಟಗಳು ಹಾಗೂ ಹತ್ತಾರು ರೋಗಗಳ ಸಾಧ್ಯತೆಗಳಿಂದ ಪಾರಾಗಿ, ಇನ್ನೇನು ಬೆಳೆ ಕೈಗೆ ಬಂತು ಎನ್ನುವಾಗ, ಚಳಿಗಾಲದಲ್ಲೂ ಈ ಭಾರಿಮಳೆ! ಹವಾಮಾನ ಬದಲಾವಣೆಗೆ ರೈತರು ತುತ್ತಾಗುತ್ತಿರುವುದಕ್ಕೆ ಕಣ್ಣೆದುರ ಸಾಕ್ಷಿಯಿದು. ನಾಡಿನ ರೈತರೆಲ್ಲ ಎದುರಿಸುತ್ತಿರುವ ದುರಂತದ ವಿದ್ಯಮಾನವಿದು.

ಕೃಷಿಕ್ಷೇತ್ರದ ಆರೋಗ್ಯ ದಿನದಿಂದ ದಿನಕ್ಕೆ ಬಿಗಡಾಯಿಸುತ್ತಿದೆ. ನುರಿತ ಕೂಲಿಕಾರರ ಕೊರತೆ, ಒಮ್ಮೆ ನೆರೆಯಾದರೆ ಇನ್ನೊಮ್ಮೆ ಬರ, ಕುಸಿಯುತ್ತಿರುವ ಮಣ್ಣಿನಸಾರ, ಏರುತ್ತಿರುವ ಕೃಷಿಯ ಒಳಸುರಿಗಳು ಹಾಗೂ ಸಾಗಣೆ ವೆಚ್ಚ, ಯುವಕರ ನಗರಮುಖಿ ಚಲನೆ- ಇವೆಲ್ಲವೂ, ಸಮಾಜದ ಬೆನ್ನೆಲುಬಾದ ರೈತ ಸಮುದಾಯದ ಆತ್ಮಬಲ ಕುಗ್ಗಿಸುತ್ತಿವೆ. ಇವನ್ನು ಸಮಗ್ರವಾಗಿ ಗ್ರಹಿಸಿ ಸೂಕ್ತ ಪರಿಹಾರ ಹುಡುಕಬೇಕಿದ್ದ ಸರ್ಕಾರಗಳು ಅಧಿಕಾರ ರಾಜಕಾರಣದ ಪ್ರಹಸನಗಳಲ್ಲಿ ಮುಳುಗೇಳುತ್ತಿವೆ. ಕೃಷಿ ಹಾಗೂ ತೋಟಗಾರಿಕಾ ಇಲಾಖೆಗಳಾದರೋ ದಿಕ್ಕು ದೆಸೆಯಿಲ್ಲದ ಯೋಜನೆಗಳಿಗೆ ಫಲಾನುಭವಿಗಳನ್ನು ಹುಡುಕಿ ಸಹಾಯಧನ ಹಂಚುವುದಕ್ಕೆ ಸೀಮಿತವಾಗುತ್ತಿವೆ. ಕೃಷಿ ವಿಶ್ವವಿದ್ಯಾಲಯಗಳು, ಸಂಶೋಧನಾ ಕೇಂದ್ರಗಳು ಹಾಗೂ ಕೃಷಿ ವಿಜ್ಞಾನ ಕೇಂದ್ರಗಳ ಬಹುಪಾಲು ಯೋಜನೆಗಳಿಗೆ ಸರ್ಕಾರಿ ಅನುದಾನ ಬಳಸುವುದಷ್ಟೇ ಮುಖ್ಯವಾಗಿ, ರೈತಹಿತ ಕಣ್ಮರೆಯಾಗುತ್ತಿದೆ!

ಕೃಷಿಕ್ಷೇತ್ರ ಇನ್ನೇನು ಬಿಕ್ಕಟ್ಟು ಎದುರಿಸಬೇಕು? ಜಾಗತಿಕ ಹವಾಮಾನ ಬದಲಾವಣೆಯ ಜೊತೆಗೆ, ಸ್ಥಳೀಯವಾದ ಕೃಷಿಕ್ಷೇತ್ರ ನಿರ್ವಹಣೆಯಲ್ಲಿನ ಅರಾಜಕತೆಯಿಂದಾಗಿ ಉದ್ಭವವಾಗಿರುವ ಸನ್ನಿವೇಶವಿದು. ಕೃಷಿಕ್ಷೇತ್ರ ಹಳಿತಪ್ಪಲು ಕಾರಣವಾದ ಎರಡು ಪ್ರಮುಖ ಅಂಶಗಳನ್ನು ಇಲ್ಲಿ ಚರ್ಚಿಸೋಣ.

ಮೊದಲಿನದು, ನೂರಾರು ಬಗೆಯ ಕೃತಕ ರಾಸಾಯನಿಕಗಳ ಒಳಸುರಿಗಳನ್ನು ಎಲ್ಲೆಮೀರಿ ಬಳಸುತ್ತಿರುವ ಅಪಾಯಕಾರಿ ಬೆಳವಣಿಗೆ. ಫಸಲನ್ನು ರೋಗದಿಂದ ರಕ್ಷಿಸುವ ಒಂದು ಉಪಾಯವಾಗಿ 'ಹಸಿರು ಕ್ರಾಂತಿ'ಯು ತಂದ ಈ ತಂತ್ರಜ್ಞಾನವು ಇದೀಗ ಕೃಷಿಯ ಮುಖ್ಯವಾಹಿನಿಯಾಗಿಬಿಟ್ಟಿದೆ! ವಿಷಕಾರಿ ಕೃತಕ ರಾಸಾಯನಿಕ ಸಂಯುಕ್ತಗಳ ಥರಾವರಿ ಕ್ರಿಮಿನಾಶಕ, ಕಳೆನಾಶಕ ಹಾಗೂ ಬೆಳವಣಿಗೆ ವರ್ಧಕಗಳು ಹೊಲ, ತೋಟಗಳನ್ನು ತೋಯಿಸುತ್ತಿವೆ. ಅವನ್ನು ಬಳಸಬೇಕಾದ ಬೆಳೆ, ಪ್ರಮಾಣ, ಕಾಲ ಹಾಗೂ ಆಚರಿಸಲೇಬೇಕಾದ ವಿಧಿ-ನಿಷೇಧಗಳ ಕುರಿತು ರೈತರಿಗೆ ಕನಿಷ್ಠ ಮಾರ್ಗದರ್ಶನ ನೀಡುವ ಉಸ್ತುವಾರಿ ವ್ಯವಸ್ಥೆಯು (Stewardship) ಇನ್ನೂ ರೂಪುಗೊಂಡಿಲ್ಲ. ಇದನ್ನು ನಿಯಂತ್ರಿಸುವ ಸಾಂವಿಧಾನಿಕ ಜವಾಬ್ದಾರಿಯಿರುವ ಕೃಷಿ ಇಲಾಖೆಗೆ ಇದು ಆದ್ಯತೆಯ ವಿಷಯವೂ ಅಲ್ಲ; ಆ ಕ್ಷಮತೆಯೂ ಅಲ್ಲಿಲ್ಲ!

ಸರ್ಕಾರ ಈಗಾಗಲೇ ಸಂಪೂರ್ಣವಾಗಿ ನಿಷೇಧಿಸಿರುವ ಹದಿನೇಳಕ್ಕೂ ಮಿಕ್ಕಿ ವಿಷಕಾರಿ ಕ್ರಿಮಿನಾಶಕಗಳ ಉತ್ಪಾದನೆ, ಮುಕ್ತ ಮಾರಾಟ ಹಾಗೂ ವ್ಯಾಪಕ ಬಳಕೆಯು ಇನ್ನೂ ಸಾಗಿರುವುದೇ ಇದಕ್ಕೆ ಸಾಕ್ಷಿ. ಹಲವಾರು ದೇಶಗಳಲ್ಲಿ ಈಗಾಗಲೇ ನಿಷೇಧವಾಗಿರುವ ಕ್ಯಾನ್ಸರ್‌ಕಾರಕ 'ಗ್ಲೈಫೋಸೇಟ್' ಕಳೆನಾಶಕವು ಇಲ್ಲಿ ಬಳಕೆಯಾಗುತ್ತಿರುವ ಪ್ರಮಾಣವು ಭಯ ಮೂಡಿಸುತ್ತದೆ. ಕರಾವಳಿ ಹಾಗೂ ಮಲೆನಾಡಿನಲ್ಲಿ ಕಳೆದ ದಶಕಗಳಲ್ಲಿ ಘಟಿಸಿದ ಎಂಡೊಸಲ್ಫಾನ್ ದುರಂತದ ಅರಿವಿನ ನಂತರವೂ ಸರ್ಕಾರದ ಈ ನಿರ್ಲಕ್ಷ್ಯ ಸರಿಯೇ?

ಈ ಪರಿಯ ವಿಷದ ನಿರಂತರ ಬಳಕೆಯಿಂದಾಗಿ ಹೊಲದ ಮಣ್ಣಿನಸಾರದಲ್ಲಿ ಅಪಾಯಕಾರಿ ಬದಲಾವಣೆಗಳಾಗುತ್ತಿವೆ. ಹೊಲದಲ್ಲಿ ಹರಿದ ನೀರಿನೊಂದಿಗೆ ಅವು ಹೊಳೆ-ಕೆರೆಗಳನ್ನೂ ವಿಷಮಯವಾಗಿಸುತ್ತಿವೆ. ಅಲ್ಲಿ ಬದುಕುವ ಮೀನು, ಏಡಿಗಳ ದೇಹದಲ್ಲಿ ಅವು ಶೇಖರವಾಗುತ್ತಿವೆ. ಈ ಜಲಮೂಲಗಳ ನೀರು ಹಾಗೂ ಜಲೋತ್ಪನ್ನಗಳನ್ನು ಸೇವಿಸುವ ಹಳ್ಳಿಗರ ಆರೋಗ್ಯದಲ್ಲಿ ಎಷ್ಟೆಲ್ಲ ಅಧ್ವಾನಗಳು ಆಗುತ್ತಿರುವುದನ್ನು ಹಳ್ಳಿಗಳ ಆರೋಗ್ಯ ಸಮೀಕ್ಷೆಗಳು ತೆರೆದಿಡುತ್ತಿವೆ. ದೇಹದಲ್ಲಿ ಈ ವಿಷಕಾರಿ ರಾಸಾಯನಿಕಗಳ ಪ್ರಮಾಣ ಏರಿದಂತೆಲ್ಲ, ಹಾರ್ಮೋನು ವ್ಯವಸ್ಥೆ ಗಾಸಿಗೊಂಡು, ರಕ್ತದೊತ್ತಡ, ಮಧುಮೇಹ, ನಪುಂಸಕತ್ವ, ಹುಟ್ಟಿದ ಶಿಶುವಿನಲ್ಲೇ ಅಂಗವೈಕಲ್ಯ, ಕ್ಯಾನ್ಸರ್ ತರಹದ ಗಂಭೀರ ಕಾಯಿಲೆಗಳು ಹೆಚ್ಚುತ್ತಿವೆ. ಕ್ರಿಮಿನಾಶಕದ ಇನಿತು ಅಂಶವಿದ್ದರೂ ಆಹಾರೋತ್ಪನ್ನಗಳು ರಫ್ತು ಮಾರುಕಟ್ಟೆಯಲ್ಲಿ ತಿರಸ್ಕೃತವಾಗುತ್ತವೆ. ಆದರೆ, ಆ ತೆರನ ಪರೀಕ್ಷೆಯ ವ್ಯವಸ್ಥೆಯೇ ಇರದ ಆಂತರಿಕ ಮಾರುಕಟ್ಟೆಯಲ್ಲಿ ಅವು ಸಲೀಸಾಗಿ ಮಾರಾಟವಾಗುತ್ತವೆ. ಅವನ್ನೇ ಸೇವಿಸುವ ಸಾರ್ವಜನಿಕರ ಆರೋಗ್ಯ ಅಪಾಯಕ್ಕೀಡಾಗದೆ ಇನ್ನೇನು? ಅರವತ್ತು- ಎಪ್ಪತ್ತರ ದಶಕದಲ್ಲಿ ಆಹಾರ ಭದ್ರತೆ ಸಾಧಿಸಿತು ಎನ್ನಲಾಗುವ ಈ 'ಹಸಿರುಕ್ರಾಂತಿ ತಂತ್ರಜ್ಞಾನ'ವು ಇಂದಿನ ಸಾರ್ವಜನಿಕ ಆರೋಗ್ಯ ಸುರಕ್ಷತೆಯನ್ನೇ ಕಸಿಯುತ್ತಿರುವುದು ಮಾತ್ರ ಸತ್ಯ!



ಗಮನಿಸಲೇಬೇಕಾದ ಎರಡನೇ ಅಂಶವೆಂದರೆ, ಬೇಸಾಯದಲ್ಲಿ ಪಾಲಿಸಬೇಕಾದ ಕನಿಷ್ಠ ಭೂಬಳಕೆ ನೀತಿಯೂ ಇರದಿರುವುದು. ಕರಾವಳಿ, ಮಲೆನಾಡು ಹಾಗೂ ಒಳನಾಡಿನ ಬಯಲುಸೀಮೆ- ಈ ಮೂರು ಮುಖ್ಯ ಭೂಪರಿಸರಗಳಲ್ಲಿ, ಹತ್ತು ವಿಭಿನ್ನ 'ಕೃಷಿ- ಹವಾಮಾನ ಪ್ರದೇಶ'ಗಳನ್ನು ಕೃಷಿವಿಜ್ಞಾನ ಗುರುತಿಸಿದೆ. ಈ ಪ್ರದೇಶಗಳ ಮಣ್ಣಿನ ರಚನೆ, ಫಲವತ್ತತೆ, ತೇವಾಂಶ, ಮಳೆ ಪ್ರಮಾಣ, ವಾತಾವರಣ- ಇವನ್ನೆಲ್ಲ ಆಧರಿಸಿ, ಅಲ್ಲಿಗೆ ಸೂಕ್ತವಾದ ಬೆಳೆ ಬೆಳೆಯುವ ವಿವೇಕ ಪಾರಂಪರಿಕ ರೈತರಲ್ಲಿತ್ತು. ಹೀಗಾಗಿ, ಕರಾವಳಿಯ ಭತ್ತ ಹಾಗೂ ತೋಟಗಾರಿಕೆ, ಮಲೆನಾಡಿನ ಸಾಂಬಾರುವೃಕ್ಷ ಕೃಷಿ, ಬಯಲುನಾಡಿನಲ್ಲಿ ಆಹಾರಧಾನ್ಯಗಳ ಬೇಸಾಯ ಕ್ರಮಗಳಲ್ಲಿ ಒಂದು ಸಮತೋಲನ ವಿಕಸಿತವಾಗಿತ್ತು.

ಉದಾರೀಕರಣದ ನಂತರ ಎಲ್ಲವೂ ಏರುಪೇರಾಗತೊಡಗಿತು. ನೀರಾವರಿ ಕಾಲುವೆಗಳಲ್ಲಿ ನೀರು ಸಾಗಿದಂತೆಲ್ಲ, ಒಣಭೂಮಿ ಕೃಷಿ ಹಾಗೂ ಹಿಂಗಾರಿನ ಬೇಳೆಕಾಳು, ಸಿರಿಧಾನ್ಯಗಳ ಬೇಸಾಯ ಹಿಂದೆ ಸರಿಯತೊಡಗಿತು. ಕಬ್ಬು ಹಾಗೂ ಹಿಂಗಾರಿನಲ್ಲೂ ಭತ್ತ ಬೆಳೆಯುವ ಹೊಸ ಉಪಕ್ರಮ ಹೆಚ್ಚಾಗತೊಡಗಿತು. ಕೆರೆ, ಹೊಳೆಗಳ ನೀರು ಸಾಲದಾಗಿ, ಗುಡ್ಡದಲ್ಲೂ ಆರ್ಥಿಕ ಬೆಳೆ ಬೆಳೆಯುವ 'ನವಕೃಷಿ' ಆರಂಭವಾಯಿತು. ಸಾವಿರಾರು ಅಡಿ ಕೊಳವೆಬಾವಿಯಿಂದ ನೀರನ್ನೆತ್ತಿ, ಯಂತ್ರಗಳನ್ನು ಬಳಸಿ, ಒಮ್ಮೆಲೆ ವಿಶಾಲವಾದ ಅಡಿಕೆ, ಕಾಫಿ, ರಬ್ಬರ್ ತೋಟಗಳನ್ನು ನಿರ್ಮಿಸುವ ಚಿತ್ರಗಳನ್ನು ಈಗ ಎಲ್ಲೆಲ್ಲೂ ನೋಡಬಹುದು.

ಇತ್ತೀಚಿನ ದಾಖಲೆಗಳ ಪ್ರಕಾರ, ರಾಜ್ಯದ 140 ತಾಲ್ಲೂಕುಗಳಲ್ಲಿ ಆಹಾರ ಬೆಳೆಯೇನೂ ಅಲ್ಲದ ಹಾಗೂ ಅಪಾರ ನೀರು ಬೇಡುವ ಅಡಿಕೆ ತೋಟಗಳು ತಲೆಯೆತ್ತಿವೆ! ಮಲೆನಾಡಿನ ಗೋಮಾಳ ಹಾಗೂ ಗ್ರಾಮದಂಚಿನ ಕಾಡಿನ ಸಾಮೂಹಿಕ ಭೂಮಿಗಳು ಈ ಕೃಷಿ ವಿಸ್ತರಣೆಗೆ ಬಲಿಯಾಗುತ್ತಿವೆ. ಒಮ್ಮೆಲೆ ಕಾಡು ಕತ್ತರಿಸಿ ಶುಂಠಿ ಬೆಳೆಸುವ ಹಾಗೂ ರಬ್ಬರ್ ಅಥವಾ ಅಕೇಶಿಯಾದ ಏಕಪ್ರಭೇದ ನೆಡುತೋಪು ನಿರ್ಮಿಸುವ ಸಂದರ್ಭಗಳು ಹೆಚ್ಚುತ್ತಿವೆ. ಮೇವು, ತರಗೆಲೆ, ಜೇನು, ಹಣ್ಣುಹಂಪಲು, ಉರುವಲು ಅಥವಾ ಇನ್ನಾವ ಪಾರಿಸರಿಕ ಸೇವೆಗಳನ್ನೂ ನೀಡದ ಈ ಬಗೆಯ 'ಕೃಷಿ ಉದ್ಯಮಗಳು' ಭೂಪರಿಸರದ ಸಮತೋಲನವನ್ನೇ ದೂಳೀಪಟ ಮಾಡುತ್ತಿರುವ ಸಂಗತಿಗೆ ಸರ್ಕಾರ ಕುರುಡಾಗಿದೆಯಲ್ಲ! ನೆಲ-ಜಲ ಬಳಸುವಾಗ ಕನಿಷ್ಠ ಶಿಸ್ತನ್ನೂ ತೋರದ ಭೂಬಳಕೆ ಕ್ರಮಗಳಿಂದಾಗಿ ಕೃಷಿಭೂಮಿಯ ಆರೋಗ್ಯ ಹದಗೆಡುತ್ತಿದ್ದು, ಆಹಾರಬೆಳೆಗಳ ಇಳುವರಿ ಕುಸಿಯುತ್ತಿದೆ. ರೈತ ಸಮುದಾಯಗಳಲ್ಲಿ ಆರ್ಥಿಕ ಅಸಮಾನತೆಗೂ ಇದು ಕಾರಣವಾಗುತ್ತಿದ್ದು, ಭವಿಷ್ಯದಲ್ಲಿ ಹೊಸದೊಂದು ಬಗೆಯ ಸಾಮಾಜಿಕ ಸಂಘರ್ಷಕ್ಕೆ ಸಹ ಕಾರಣವಾದೀತು.

ಹಸಿರುಕ್ರಾಂತಿ ಹಾಗೂ ಉದಾರೀಕರಣದ ಈವರೆಗಿನ ಒಟ್ಟೂ ಪರಿಣಾಮಗಳಿಂದಾಗಿ ನಾಡಿನ ಕೃಷಿಕ್ಷೇತ್ರವೇ ಹಳಿ ತಪ್ಪುತ್ತಿರುವುದನ್ನು, ಮುಂಡಗೋಡು ಸ್ಥಳಾಧ್ಯಯನ ಕನ್ನಡಿಯು ಢಾಳಾಗಿ ತೋರಿಸುತ್ತಿದೆ. ಈ ಸಂಕೀರ್ಣ ಪರಿಸ್ಥಿತಿಯಿಂದ ಪಾರಾಗಲು ದಾರಿ ತೋರುವ ಹೊಸ ವೈಚಾರಿಕ ಕ್ರಾಂತಿಯೊಂದಕ್ಕೆ ರೈತಲೋಕ ಕಾದು ಕುಳಿತಂತಿದೆ!

ಲೇಖಕ: ನಿರ್ದೇಶಕ, ಸಂರಕ್ಷಣಾ ಜೀವಶಾಸ್ತ್ರ ಮತ್ತು ಸುಸ್ಥಿರ ಅಭಿವೃದ್ಧಿ ಅಧ್ಯಯನ ಕೇಂದ್ರ, ಶಿರಸಿ

ಚುರುಮುರಿ



ಚಿನ್ನದ ಪರಿಷತ್ತು!

• ಬಿ.ಎನ್.ಮಲ್ಲೇಶ್

'ಗುರೂ ಪೇಪರ್ ನೋಡಿದ್ಯಾ? ಶಿವಮೊಗ್ಗದಾಗೆ ಹಾವು ಸಾಯಿಸಿದ್ದಕ್ಕೆ ಮೂವರ ಮೇಲೆ ಕೇಸ್ ಹಾಕ್ಯಾರಂತೆ. ಅದೇ ಹಾವು ಕಚ್ಚಿ ಮನುಷ್ಯ ಸತ್ತಿದ್ರೆ? ಯಾರ ಮೇಲೆ ಕೇಸ್ ಹಾಕ್ತಿದ್ರು?'

ತೆಪರೇಸಿ ಪ್ರಶ್ನೆಗೆ ನಕ್ಕ ದುಬ್ಬೀರ, 'ಲೇ ತೆಪರ, ಹಾವುಗಳಿಗೆ ತೊಂದ್ರೆ ಆದ್ರೆ ಮಾತ್ರ ಅವು ಕಚ್ಚೋದು. ಸುಮ್‌ಸುಮ್ನೆ ಕಚ್ಚೋಕೆ ಅವೇನ್ ಪರಿಷತ್ ಎಲೆಕ್ಷನ್‌ಗೆ ನಿಂತಾವೇನ್ಲೆ?' ಎಂದ.

'ಓ... ಗೊತ್ತಾತು ಬಿಡಪ, ನೀ ಎಲ್ಲಿಂದ ಎಲ್ಲಿಗೋ ಹಾವು ಬಿಡ್ತಿಯಲ್ಲೋ ಮಾರಾಯ...' ತೆಪರೇಸಿಗೂ ನಗು ಬಂತು.

'ಹ್ಞಂ ಮತ್ತೆ, ಯಾವದಾರ ಎಲೆಕ್ಷನ್ ಬಂದ್ರೆ ಆತು, ನಮ್ಮ ಲೀಡರ್‌ಗಳು ಹಾವುಗಳ ತರ ಬುಸುಗುಡೋದೇನು, ನಾಯಿಗಳ ತರ ಕಚ್ಚಾಡೋದೇನು... ನೀನೇ ನೋಡೀಯಲ್ಲ...'

'ನೋಡೀನ್ ಬಿಡಪ, ಆಮೇಲೆ ವಿಧಾನ ಪರಿಷತ್ ಎಲೆಕ್ಷನ್ ಏನಾತು? ನಮ್ ಗುಡ್ಡೆ ಹೆಂಡ್ತಿ ಪಂಚಾತಿ ಮೆಂಬರ್ ಇದ್ದು...'

'ಅಯ್ಯೋ ಅದೊಂದ್ ದೊಡ್ಡ ಕತಿ. ಅದ್ಯಾರೋ ಅಭ್ಯರ್ಥಿ ಗುಡ್ಡೆ ಹೆಂಡ್ತಿಗೆ ಚಿನ್ನದ ನಾಣ್ಯ ಕೊಟ್ಟದ್ನಂತೆ ವೋಟು ಹಾಕೋಕೆ. ಅದು ಹಿತ್ತಾಳೆದು ಅಂತ ಆಮೇಲೆ ಗೊತ್ತಾತಂತೆ...'

'ಅಲೆ ಇವ್ನ, ಮತ್ತೆ ಗುಡ್ಡೆ ಹೆಂಡ್ತಿ ವೋಟು ಹಾಕ್ತಳೋ ಇಲ್ವೋ?'

'ಅದು ಗೊತ್ತಿಲ್ಲಪ್ಪ. ಆದ್ರೆ ಎಂಥ ಮೋಸ ಆತಲ್ಲ ಅಂತ ಗುಡ್ಡೆನೂ ಅವನ ಹೆಂಡ್ತಿನೂ ಪೇಚಾಡಿದ್ರಂತೆ...'

'ಹೌದಾ? ಮುಂದೆ?'

'ಗುಡ್ಡೆ ಹೆಂಡ್ತಿ ಇದ್ದಕ್ಕಿದ್ದಂತೆ ತನ್ನ ಮೂಗುತಿ ಬಿಚ್ಚಿ ಗುಡ್ಡೆ ಕೈಗೆ ಕೊಟ್ಟು, ಇದೂ ಬಂಗಾರದ್ದು ಹೌದೋ ಅಲ್ಲೋ ಚೆಕ್ ಮಾಡಿಸ್ಕಂಡ್ ಬನ್ನಿ ಅಂದ್ಲಂತೆ'.

'ಮೂಗುತಿನಾ? ಯಾಕೆ?'

'ಅದು ಸಾಹಿತ್ಯ ಪರಿಷತ್ ಎಲೆಕ್ಷನ್‌ನಲ್ಲಿ ಯಾರೋ ಅಭ್ಯರ್ಥಿ ಕೊಟ್ಟಿದ್ದಂತೆ!'

ಸಂಗತ

'ಶುದ್ಧ' ಎಂದರೆ ಏನು?

ಭಾಷೆಯ ಮಟ್ಟಿಗೆ 'ಶುದ್ಧ' ಎನ್ನುವ ಶಾಸ್ತ್ರೀಯವಾದ ವ್ಯಾಖ್ಯೆಯೇ ಇಲ್ಲ

• ಪ್ರೊ. ಎಂ.ಅಬ್ದುಲ್ ರೆಹಮಾನ್ ಪಾಷ

ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯ ಘಟಕದ ನೂತನ ಅಧ್ಯಕ್ಷ ಮಹೇಶ ಜೋಶಿ ಅವರು ಕಾರ್ಯಕ್ರಮವೊಂದರಲ್ಲಿ, 'ರಾಜಧಾನಿ ಬೆಂಗಳೂರಿನಲ್ಲಿ 'ಅ'ಕಾರ ಮತ್ತು 'ಹ'ಕಾರ ವ್ಯತ್ಯಾಸ ತಿಳಿದ ಕನ್ನಡಿಗರು, ಶುದ್ಧ ಕನ್ನಡ ಗೊತ್ತಿರುವವರ ಸಂಖ್ಯೆ ಬಹಳ ಕಡಿಮೆ... ಶುದ್ಧ ಮತ್ತು ಸ್ಪಷ್ಟ ಕನ್ನಡವನ್ನು ನಾವು ಉಳಿಸಿಕೊಳ್ಳಬೇಕು. ಇಡೀ ಜಗತ್ತಿನಲ್ಲಿ ಸಂಸ್ಕೃತ ಮತ್ತು ಕನ್ನಡ ಮಾತ್ರ ಅತ್ಯಂತ ಶುದ್ಧ ಎಂಬ ಕೀರ್ತಿಗೆ ಪಾತ್ರವಾಗಿವೆ...' ಎಂದು ಅಭಿಪ್ರಾಯಪಟ್ಟಿದ್ದಾರೆ. ಭಾಷೆಯ ಕುರಿತು ಹಲವರು ಹಲವು ರೀತಿಯಲ್ಲಿ ಹೇಳುತ್ತಲೇ ಇರುತ್ತಾರೆ. ಆದರೆ ಕಸಾಪದಂಥ ಪ್ರಾತಿನಿಧಿಕ ಸಂಸ್ಥೆಯ ಮುಖ್ಯಸ್ಥರು ಹೇಳಿರುವುದನ್ನು ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ. ಆದ್ದರಿಂದ ಈ ಚರ್ಚೆ.

ಭಾಷೆಯ ಮಟ್ಟಿಗೆ 'ಶುದ್ಧ' ಎಂದರೇನು? ಹಾಗೆಂದು ಒಂದು ಶಾಸ್ತ್ರೀಯವಾದ ವ್ಯಾಖ್ಯೆ ಇಲ್ಲ. ರೂಪಿಸಿಕೊಳ್ಳಬೇಕು ಎನ್ನುವುದಾದರೆ, 'ಹೊರಗಿನ ಭಾಷೆಯ ಯಾವುದೇ ಪ್ರಭಾವವಿಲ್ಲದೆ, ಕೇವಲ ಮೂಲ ಪದ, ವ್ಯಾಕರಣವನ್ನು ಮಾತ್ರ ಬಳಸುವ, ಉಳಿದ ಭಾಷೆಯ ಪದಗಳನ್ನು ಸ್ವೀಕರಿಸದೇ ಇರುವ ಭಾಷೆ' ಎಂದು ಬೇಕಾದರೆ ಹೇಳಬಹುದು. ಆದರೆ, ಈ ತರಹದ ಒಂದು ಜೀವಂತ ಭಾಷೆ ಜಗತ್ತಿನಲ್ಲಿ ಯಾವುದೂ ಇಲ್ಲ.


ಈಗ, 'ಶುದ್ಧ ಕನ್ನಡ' ಎನ್ನುವ ಪದವನ್ನೇ ತೆಗೆದುಕೊಳ್ಳಿ. 'ಶುದ್ಧ' ಎನ್ನುವುದೇ ಕನ್ನಡ ಪದವಲ್ಲ, ಅದು ಸಂಸ್ಕೃತ ಪದ. ಹೀಗಿರುವಾಗ ಅದು 'ಶುದ್ಧ' ಕನ್ನಡ ಹೇಗಾಯಿತು? ಸಂಸ್ಕೃತ ಪದಗಳು, ಪದಪುಂಜ, ನುಡಿಗಟ್ಟು ಮತ್ತು ವ್ಯಾಕರಣವನ್ನು ಕನ್ನಡಕ್ಕೆ ಎರವಲು ಪಡೆಯುವುದು ಸರಿಯೆಂದಾದರೆ, ಬೇರೆ ಭಾಷೆಯ ಪದಗಳನ್ನು ಯಾವ ಆಧಾರದ ಮೇಲೆ ಪ್ರತ್ಯೇಕಿಸುವುದು? ಕಾಲಾಂತರದಲ್ಲಿ ಕನ್ನಡ ಭಾಷೆಯು ತನ್ನನ್ನಾಡುವ ಜನಸಮುದಾಯಕ್ಕೆ ಪ್ರಯೋಜನಕಾರಿಯಾಗುವ ದಿಸೆಯಲ್ಲಿ ಸಂಸ್ಕೃತವಲ್ಲದೇ ಸೋದರ ಭಾಷೆಗಳಿಂದಲ್ಲದೇ ಮರಾಠಿ, ಹಿಂದಿ, ಉರ್ದು, ಪರ್ಶಿಯನ್, ಪೋರ್ಚುಗೀಸ್, ಲ್ಯಾಟಿನ್, ಗ್ರೀಕ್, ಇಂಗ್ಲಿಷ್ ಇತ್ಯಾದಿ ಮೂಲಗಳಿಂದ ಪದ ಮತ್ತು ಪದಪ್ರಯೋಗದ ಭಂಡಾರವನ್ನೇ ಬಳಸಿಕೊಂಡಿದೆ. ಅವೆಲ್ಲವನ್ನೂ ವಿವಿಧ ಪೌಷ್ಟಿಕಾಂಶಗಳ ರೀತಿಯಲ್ಲಿ ಅರಗಿಸಿಕೊಂಡೇ ಕನ್ನಡ ಇವತ್ತಿನ ಸಂವಹನದ ಅಗತ್ಯಗಳಿಗೆ ಅನುಗುಣವಾಗಿ ಸಶಕ್ತವಾಗಿ ಬೆಳೆದಿದೆ.

ಹಿಂದೊಮ್ಮೆ ನಾವು ಕಸಾಪದ 'ಕನ್ನಡ ರತ್ನಕೋಶ'ದಲ್ಲಿನ, ಸಂಸ್ಕೃತವೂ ಸೇರಿದ ಹಾಗೆ ಎಲ್ಲ 'ಕನ್ನಡೇತರ' ಪದಗಳನ್ನು ಕೈಬಿಟ್ಟು ಎಣಿಸಿ ನೋಡಿದೆವು. ಆಗ ಅದರಲ್ಲಿದ್ದವುಗಳಲ್ಲಿ ಮೂಲ ಕನ್ನಡ ಪದಗಳು ಶೇ 20ರಷ್ಟೂ ಉಳಿಯಲಿಲ್ಲ.

ಯಾವುದೇ ಸಕ್ರಿಯ ಸಮುದಾಯದ ಪ್ರಚಲಿತ ಆಡುಭಾಷೆಯಾಗಿ ಬಳಕೆಯಲ್ಲಿರುವ ಭಾಷೆಯನ್ನು ನಾವು 'ಜೀವಂತ ಭಾಷೆ' ಎನ್ನುತ್ತೇವೆ. ಗ್ರೀಕ್, ಲ್ಯಾಟಿನ್, ಸಂಸ್ಕೃತ ಭಾಷೆಗಳು ಇವತ್ತಿಗೆ ಇಂಥ ಜೀವಂತ ಭಾಷೆಗಳಲ್ಲ. ಜೀವಂತ ಭಾಷೆಯು ಹರಿಯುವ ನದಿಯಿದ್ದಂತೆ. ಅದು ಹರಿಯುವ ಹಾದಿಗುಂಟ ಹೊಸದನ್ನು ಸೇರಿಸಿಕೊಳ್ಳುತ್ತಾ ಬೆಳೆಯುತ್ತದೆ. ಕೆಲವೊಮ್ಮೆ ಕಸಕಡ್ಡಿ ಕಲ್ಮಶಗಳೂ ಸೇರಿಕೊಳ್ಳುತ್ತವೆ. ಆದರೆ, ಬೇಡವಾದದ್ದನ್ನು ತೊಡೆದುಹಾಕುವ, ಬೇಕಾದ್ದನ್ನು ಮಾತ್ರ ಇಟ್ಟುಕೊಂಡು ಮುಂದುವರಿಯುವ ನೈಜ ಗುಣ ನದಿಗೆ ಇರುತ್ತದೆ. ಜೀವಂತ ಭಾಷೆಯೂ ಹಾಗೆಯೇ.

ಸಮುದಾಯದ ದೈನಂದಿನ ಬದುಕಿನೊಂದಿಗೆ ಕೈಜೋಡಿಸಿ ಸಾಗುವ ಭಾಷೆ ಆಯಾ ಕಾಲದ ಸಂವಹನದ ಅಗತ್ಯಗಳಿಗೆ ತಕ್ಕ ಹಾಗೆ ಬದಲಾಗುತ್ತಾ ಆ ಮೂಲಕ ಬೆಳೆಯುತ್ತಾ ಹೋಗುತ್ತದೆ.

ಇನ್ನು ಸ್ಪಷ್ಟ ಉಚ್ಚಾರಣೆಯ ಸಮಸ್ಯೆ! ಸ್ವಾರಸ್ಯಕರ ಸಂಗತಿಯೆಂದರೆ, ಹಳೆ ಮೈಸೂರು ಪ್ರಾಂತ್ಯದ, ವಿಶಿಷ್ಟವಾಗಿ ಗ್ರಾಮೀಣ ಹಿನ್ನೆಲೆಯಿಂದ ಬಂದ ಮಾತೃಭಾಷೀ ಕನ್ನಡಿಗರಲ್ಲಿ, ಮಹಾಪ್ರಾಣ ಧ್ವನಿಗಳನ್ನು ಉಚ್ಚರಿಸದೇ ಇರುವ, ಕೆಲವೊಮ್ಮೆ ಅಲ್ಪಪ್ರಾಣದ ಬದಲಿಗೆ ಮಹಾಪ್ರಾಣವನ್ನು ಉಚ್ಚರಿಸುವ, ಸ, ಶ ಮತ್ತು



ಷ ಧ್ವನಿಗಳನ್ನು ಪ್ರತ್ಯೇಕವಾಗಿ ಉಚ್ಚರಿಸದೇ ಇರುವ, 'ತ್ಸ'ವನ್ನು 'ಸ್ತ' ಎಂದು ಉಚ್ಚರಿಸುವ (ರಾಜ್ಯೋಸ್ತವ) ಅಭ್ಯಾಸವಾಗಿರುತ್ತದೆ. ಇದಕ್ಕೆ ಮೂಲ ಕಾರಣ ಈ ಪ್ರಾಂತ್ಯದ ಒಟ್ಟಾರೆ ಆಡುಭಾಷೆಯಲ್ಲಿ ಮಹಾಪ್ರಾಣಗಳ ಬಳಕೆ ಇಲ್ಲದಿರುವುದಾಗಿದೆ. ಹಾಗೆಂದು, ಈ ಪ್ರದೇಶದ ಹಲವಾರು ವಿದ್ವಾಂಸರು, ಸಾಹಿತಿಗಳು, ವಿಜ್ಞಾನಿಗಳು, ಪ್ರಾಧ್ಯಾಪಕರನ್ನೂ ಒಳಗೊಂಡ ಹಾಗೆ ಇವರಿಗೆ ಶುದ್ಧ ಕನ್ನಡ ಬರುವುದಿಲ್ಲ ಎಂದು ತೀರ್ಪು ನೀಡುವುದು ಸಮಂಜಸವಲ್ಲ. ಅವರದು ಉಚ್ಚಾರ ದೋಷವಲ್ಲ. ಉಚ್ಚಾರ 'ಭಿನ್ನತೆ', ಅಷ್ಟೆ.

ಅಲ್ಲದಿದ್ದರೂ ಪ್ರತಿಯೊಬ್ಬ ವ್ಯಕ್ತಿಯಲ್ಲಿಯೂ, ಅವರು ಬಳಸುವ ಪ್ರತೀ ಭಾಷೆಯಲ್ಲಿಯೂ 'ಡಿಗ್ಲಾಸಿಯಾ' ಎನ್ನುವ ಒಂದು ಸ್ಥಿತಿ ಇರುತ್ತದೆ: ಒಂದೇ ಭಾಷೆಯನ್ನು ಅನೌಪಚಾರಿಕ ಆಡುಮಾತಿನ ಮತ್ತು ಔಪಚಾರಿಕ ಭಾಷಣ, ಬರಹದ ಸನ್ನಿವೇಶಗಳಲ್ಲಿ ಎರಡು ವಿಭಿನ್ನ ಸ್ತರಗಳಲ್ಲಿ ಬಳಸುವ ಒಂದು ಅಭ್ಯಾಸ ಇರುತ್ತದೆ, ಇದು ನೈಜ.

ಆದ್ದರಿಂದ ನಾವು ಭಾಷೆಯ ಶುದ್ಧತೆಯ ಬಗ್ಗೆ ಜಾಸ್ತಿ ತಲೆಕೆಡಿಸಿಕೊಳ್ಳದೆ, ಕನ್ನಡ ಭಾಷಿಕರ ಆಧುನಿಕ ಅಗತ್ಯಗಳನ್ನು ಸಮರ್ಥವಾಗಿ ನಿರ್ವಹಿಸುವ ರೀತಿಯಲ್ಲಿ ಕನ್ನಡವನ್ನು ಸಶಕ್ತಗೊಳಿಸುವತ್ತ ಮತ್ತು ಎಲ್ಲರಲ್ಲಿಯೂ ಕನ್ನಡವನ್ನು ತಮ್ಮ ತಮ್ಮ ಕ್ಷೇತ್ರದಲ್ಲಿ ಮಾತಿನಲ್ಲಿ, ಬರಹದಲ್ಲಿ, ಒಟ್ಟಾರೆ ಸಂವಹನದಲ್ಲಿ ಸಮರ್ಥವಾಗಿ ಬಳಸುವ ಕೌಶಲಗಳನ್ನು ವೃದ್ಧಿಸುವತ್ತ ಕಾಳಜಿ ವಹಿಸಬೇಕು. ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಅಭಿವೃದ್ಧಿ ಪ್ರಾಧಿಕಾರ ಮತ್ತು ಕನ್ನಡ ಕಾಳಜಿಯ ಇಂಥ ಇತರ ಸಂಸ್ಥೆಗಳು ಗಮನಹರಿಸುವುದು ಒಳ್ಳೆಯದು.

ವಾಚಕರ ವಾಣಿ

ನಕಲಿ ದಾಖಲೆ ವೀರರಿದ್ದಾರೆ... ಎಚ್ಚರ

'ಅರ್ಜಿ ಸಲ್ಲಿಸಿದ ಒಂದು ದಿನದಲ್ಲೇ ಭೂ ಪರಿವರ್ತನೆ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ, ಆದೇಶ ಹೊರಡಿಸಲು ಅವಕಾಶ ಕಲ್ಪಿಸುವ ಯೋಜನೆಯನ್ನು ಜಾರಿಗೊಳಿಸಲಾಗುವುದು' ಎಂದು ಕಂದಾಯ ಸಚಿವರು ಹೇಳಿರುವುದು (ಪ್ರ.ವಾ., ಡಿ. 9) ಸಂತೋಷದ ಸಂಗತಿ. ಆದರೆ ಸರ್ಕಾರ ಈ ಯೋಜನೆಯನ್ನು ಆತುರಾತುರವಾಗಿ ಜಾರಿಗೆ ತರದೆ, ಅದನ್ನು ಪರಿಶೀಲಿಸಿ, ತಜ್ಞರಿಂದ ಸಲಹೆ ಪಡೆಯುವುದು ಸೂಕ್ತ.

ಏಕೆಂದರೆ ಅಸಲಿ ದಾಖಲೆಗಳನ್ನು ಮೀರಿಸುವಂತೆ ನಕಲಿ ದಾಖಲೆಗಳನ್ನು ಸೃಷ್ಟಿಸಿ, ಯೋಜನೆಗಳ ಸದುದ್ದೇಶವನ್ನೇ ಬುಡಮೇಲು ಮಾಡುವ ಚಾಣಾಕ್ಷರು ನಮ್ಮಲ್ಲಿ ಇದ್ದಾರೆ. ಹೀಗಾಗಿ ಈ ಬಗ್ಗೆ ಎಚ್ಚರಿಕೆಯಿಂದ ನಡೆದುಕೊಳ್ಳಬೇಕಾದ ಅಗತ್ಯವಿದೆ.

ರಾ.ಬಾ.ವರದರಾಜನ್, ಬೆಂಗಳೂರು

ಏಕೈಕ ಕೃಷಿಮಾರ್ಗ: ಅಪಾಯ ತಪ್ಪಿದ್ದಲ್ಲ

ರಾಸಾಯನಿಕ ಕೃಷಿ ಪದ್ಧತಿಯನ್ನು ಪ್ರೊ. ಶಾಂತು ಶಾಂತಾರಾಮ್ ಅವರು ತಮ್ಮ ಲೇಖನದಲ್ಲಿ (ಪ್ರ.ವಾ., ಡಿ. 8) ಸಮರ್ಥಿಸಿಕೊಂಡಿದ್ದಾರೆ. ಈ ಪದ್ಧತಿಯು ಭಾರತಕ್ಕೆ ಆಹಾರ ಭದ್ರತೆ ಒದಗಿಸುತ್ತಿದೆ ನಿಜ. ಆದರೆ, ಹಸಿರುಕ್ರಾಂತಿಯ ಶುರುವಿನಿಂದ ಹಿಡಿದು ಇಲ್ಲಿಯವರೆಗೂ ಕೃತಕ ರಾಸಾಯನಿಕ ಬಳಸಿದುದರ ಪರಿಣಾಮವಾಗಿ ನಮ್ಮ ಭೂಮಿಯ ಫಲವಂತಿಕೆ ಕುಂದುತ್ತಿದೆ ಎಂಬುದು ಅನೇಕ ಸಂಶೋಧನೆಗಳಿಂದ ದೃಢಪಟ್ಟಿದೆ. ಸಾವಯವ ಗೊಬ್ಬರವೊಂದನ್ನೇ ದೇಶದಲ್ಲಿ ಬಳಸಬೇಕು ಎಂಬ ಶ್ರೀಲಂಕಾ ಸರ್ಕಾರದ ಆತುರಾತುರ ಮತ್ತು ಏಕಪಕ್ಷೀಯ ನಿರ್ಧಾರವು ಆ ದೇಶದ ಈಗಿನ ಆಹಾರದ ಬಿಕ್ಕಟ್ಟಿಗೆ ಮುಖ್ಯ ಕಾರಣ.

ಇನ್ನು ಸಮೀಕ್ಷೆಯೊಂದರ ಪ್ರಕಾರ, ಶ್ರೀಲಂಕಾದ ಶೇ 80ರಷ್ಟು ರೈತರಿಗೆ ಸಾವಯವ ಕೃಷಿಯ ಬಗ್ಗೆ ಪೂರ್ತಿಪ್ರಮಾಣದ ಅರಿವಿರಲಿಲ್ಲ ಎಂಬುದು ಗೋಚರಿಸಿದೆ. ಸಾವಯವ ಗೊಬ್ಬರದ ಕೊರತೆ ಕೂಡ ಮುಖ್ಯ ಕಾರಣವಾಗಿದೆ.

ಹೆಚ್ಚಾಗಿ ಬಳಸುತ್ತಿರುವ ಕೃತಕ ರಾಸಾಯನಿಕಗಳಿಂದಾಗಿ ಮಣ್ಣಿನ ಮಾಲಿನ್ಯವಾಗುತ್ತಿರುವುದು ಮಾತ್ರವಲ್ಲದೆ ಅಂತರ್ಜಲವೂ ಕೆಡುತ್ತಿದೆ. ನಮ್ಮ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿದೆ.

ಈ ದಿಸೆಯಲ್ಲಿ ಕೃಷಿ ಇಲಾಖೆ, ಸರ್ಕಾರ ಮತ್ತು ರೈತರು ಒಟ್ಟುಗೂಡಿ ಸಹಜ ಕೃಷಿ, ಸಾವಯವ ಕೃಷಿ, ರಾಸಾಯನಿಕ ಕೃಷಿ ಪದ್ಧತಿಗಳ ಬಗ್ಗೆ ಪ್ರಾಯೋಗಿಕವಾಗಿ ಅಧ್ಯಯನ ನಡೆಸಬೇಕಾದ ಅನಿವಾರ್ಯವಿದೆ. ನಂತರ ಭಾರತಕ್ಕೆ ಈ ಮೂರನ್ನೂ ಒಟ್ಟುಗೂಡಿಸಿದ ವೈಜ್ಞಾನಿಕ ಕೃಷಿಯನ್ನು ಉತ್ತೇಜಿಸಿದಾಗ ಮಾತ್ರ ನಮ್ಮ ನೆಲದ ಫಲವಂತಿಕೆಯನ್ನು ಕಾಪಿಟ್ಟುಕೊಂಡು ಆಹಾರದ ಭದ್ರತೆಯನ್ನು ಕೊಡಬಹುದು. ಇದಾಗದಿದ್ದಲ್ಲಿ, ಒಂದೇ ಕೃಷಿಮಾರ್ಗವನ್ನು ಅವಲಂಬಿಸಿದರೆ ಅಪಾಯ ತಪ್ಪಿದ್ದಲ್ಲ.

ಸುನಿಲ್ ರಾಜ್ ಪಿ.ಎಂ., ಬೆಂಗಳೂರು

ಪ್ರತಿಕ್ರಿಯೆಯ ಬಗ್ಗೆ ಇರಲಿ ಪ್ರಜ್ಞೆ

ಹೆಲಿಕಾಪ್ಟರ್ ದುರಂತದಲ್ಲಿ ಭಾರತದ ಸೇನಾಪಡೆಗಳ ಮೊದಲ ಮುಖ್ಯಸ್ಥ ಬಿಪಿನ್ ರಾವತ್ ಅವರು ಅಕಾಲ ಮರಣಕ್ಕೆ ಈಡಾಗಿರುವುದು ಇಡೀ ದೇಶವೇ ದುಃಖಪಡುವ ಆಘಾತಕಾರಿ ಸಂಗತಿ. ಆದರೆ, ತಿಳಿದವರು ಎನಿಸಿಕೊಳ್ಳುವ ಕೆಲವರು ಇದಕ್ಕೆ ವಿಕೃತವಾಗಿ ಟ್ವೀಟ್ ಮಾಡಿದ್ದಾರೆ. ನಾಗರಿಕ ಸಮಾಜ ತಲೆ ತಗ್ಗಿಸದ ರೀತಿಯಲ್ಲಿ ಪ್ರತಿಕ್ರಿಯಿಸುವ ಪ್ರಜ್ಞೆ ಇಂತಹವರಿಗೆ ಬರುವುದು ಈ ಕ್ಷಣದ ಅಗತ್ಯವಾಗಿದೆ.

ವೆಂಕಟೇಶ ಮುದಗಲ್, ಕಲಬುರಗಿ

ನೆರವಿಗೆ ಬಾರದ ಅನುಭವ

ಸೇನಾಪಡೆಗಳ ಮುಖ್ಯಸ್ಥ (ಸಿಡಿಎಸ್) ಬಿಪಿನ್ ರಾವತ್ ಅವರಿದ್ದ ಹೆಲಿಕಾಪ್ಟರ್ ಪತನದ ಸುದ್ದಿ ಓದಿ ಬಹಳ ದುಃಖವಾಯಿತು. ಧೀಮಂತ ರಾವತ್ ಅವರು ಪಾಕಿಸ್ತಾನದ ದೃಷ್ಟಿಯಲ್ಲಿ ರಾವಣನಾಗಿದ್ದರು. ಭಯೋತ್ಪಾದಕರನ್ನು ಸದೆಬಡಿಯುತ್ತೇವೆ, ಪಾಕ್ ಮೂಲದ ಯಾವುದೇ ತೊಂದರೆಗೆ ಹೆದರುವುದಿಲ್ಲ ಎಂದಿದ್ದ ರಾವತ್ ಈ ರೀತಿಯಲ್ಲಿ ದುರ್ಮರಣ ಹೊಂದಿದ್ದು ದೇಶಕ್ಕೆ ಬಹುದೊಡ್ಡ ಹಾನಿಯಾಗಿದೆ. ಕ್ಯಾಪ್ಟನ್ ವರುಣ್ ಸಿಂಗ್ ಅವರಂತಹ ಅನುಭವಿ ಪೈಲಟ್‌ಗಳಿದ್ದಾಗ್ಯೂ ಇಂತಹ ದುರಂತ ಸಂಭವಿಸಿರುವುದು ವಿಷಾದಕರ ಸಂಗತಿಯೇ ಸರಿ.

ಬಾಲಕೃಷ್ಣ ಎಂ.ಆರ್., ಬೆಂಗಳೂರು

ಸೌಜನ್ಯದ ನಡೆ ಕಸಿದ ಮೊಬೈಲ್

ಮಕ್ಕಳನ್ನು ಕಾಡುತ್ತಿರುವ ಮೊಬೈಲ್ ಮೋಹದ ವಿವಿಧ ಆಯಾಮಗಳನ್ನು ದೀಪಾ ಹಿರೇಗುತ್ತಿ ಅವರು ತಮ್ಮ ಲೇಖನದಲ್ಲಿ (ಸಂಗತ, ಡಿ. 8) ತುಂಬಾ ಸೊಗಸಾಗಿ ನಿರೂಪಿಸಿದ್ದಾರೆ. ಇಂದು ಮಕ್ಕಳ ಮನಸ್ಸನ್ನು ಮೊಬೈಲ್ ಫೋನ್ ಎಷ್ಟರಮಟ್ಟಿಗೆ ಆವರಿಸಿಬಿಟ್ಟಿದೆಯೆಂದರೆ ಅವರು ಊಟ, ತಿಂಡಿಯನ್ನಾದರೂ ಬಿಟ್ಟಾರು ಮೊಬೈಲ್ ಮಾತ್ರ ಬಿಡಲೊಲ್ಲರು!


ಕೆಲವು ವರ್ಷಗಳ ಹಿಂದೆ ನನ್ನ ಮಗ ಕಾರ್ಕಳದ ಭುವನೇಂದ್ರ ಕಾಲೇಜಿನಲ್ಲಿ ಪಿಯು ಓದುತ್ತಿದ್ದಾಗ ಕಾಲೇಜಿನ ಗೋಡೆಗಳ ಮೇಲೆ ಅಲ್ಲಲ್ಲಿ ತೂಗಾಡುತ್ತಿದ್ದ 'ಮೊಬೈಲ್ ಬಿಡಿ, ಪುಸ್ತಕ ಹಿಡಿ' ಎಂಬಂತಹ ಫಲಕಗಳು ನನ್ನ ಮನಸ್ಸಿನ ಮೇಲೆ ಗಾಢವಾದ ಪರಿಣಾಮ ಬೀರಿದ್ದವು. ಮಕ್ಕಳು ಮೊಬೈಲ್ ಒತ್ತುತ್ತಾ ಕುಳಿತರೆಂದರೆ ಎದುರಿಗೆ ಯಾರೇ ಬಂದರೂ ತಲೆ ಎತ್ತಿ ನೋಡುವಷ್ಟು ಸೌಜನ್ಯವೂ ಅವರಲ್ಲಿ ಇರುವುದಿಲ್ಲ. ಈ ಮೊಬೈಲ್‌ನಿಂದ ಮನುಷ್ಯರ ನಡುವಿನ ಸಂಬಂಧಗಳು, ಓದುವ, ಬರೆಯುವ ಹವ್ಯಾಸಗಳೆಲ್ಲಾ ಮರೆಯಾಗಿ ಹೋಗಿವೆ. ನಮಗಂತೂ ಬೆಳಿಗ್ಗೆ ಮುಂಚೆ ಪತ್ರಿಕೆ ಓದದೇ ಇದ್ದರೆ ಅಂದು ಇಡೀ ದಿನವೆಲ್ಲಾ ಏನನ್ನೋ ಕಳೆದುಕೊಂಡ ಅನುಭವ. ಈಗಿನ ಮಕ್ಕಳಲ್ಲಿ, 'ನೀವು ಪತ್ರಿಕೆ ಓದುವುದಿಲ್ಲವೇ?' ಎಂದು ಪ್ರಶ್ನಿಸಿದರೆ, 'ನಾವು ಮೊಬೈಲ್‌ನಲ್ಲಿಯೇ ಪತ್ರಿಕೆ ನೋಡುತ್ತೇವೆ' ಎಂಬ ಉತ್ತರ ಬರುತ್ತದೆ. ಪತ್ರಿಕೆಯನ್ನು ಕೈಯಲ್ಲಿ ಹಿಡಿದುಕೊಂಡು ಓದುವುದರಲ್ಲಿ ಸಿಗುವ ತೃಪ್ತಿ ಮೊಬೈಲ್‌ನಲ್ಲಿ ಓದುವುದರಲ್ಲಿ ಅದ್ಹೇಗೆ ಸಿಗುವುದೋ ದೇವರೇ ಬಲ್ಲ!

ಚಾವಲ್ಮನೆ ಸುರೇಶ್ ನಾಯಕ್, ಹಾಲ್ಮತ್ತೂರು, ಕೊಪ್ಪ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಅರ್ಧ ಜಗತ್ತಿನ ಕೈ ಖಾಲಿ

ಸಂಪತ್ತು ಮತ್ತು ಆದಾಯವು ದೇಶದ ಜನರಲ್ಲಿ ಅಸಮಾನಾವಾಗಿ ಹಂಚಿಕೆಯಾಗಿದೆ. ದೇಶದ ಶೇ 10ರಷ್ಟು ಜನರು, ದೇಶದ ಒಟ್ಟು ಸಂಪತ್ತಿನ ಶೇ 64.6ರಷ್ಟನ್ನು ಹೊಂದಿದ್ದಾರೆ. ದೇಶದ ಶೇ 50ರಷ್ಟಿರುವ ಬಡವರು, ದೇಶದ ಒಟ್ಟು ಸಂಪತ್ತಿನ ಶೇ 5.9ರಷ್ಟನ್ನು ಮಾತ್ರ ಹೊಂದಿದ್ದಾರೆ. ದೇಶದ ಶೇ 10ರಷ್ಟು ಮಂದಿ ಆದಾಯದಲ್ಲಿ ಶೇ 57.1ರಷ್ಟು ಪಾಲು ಹೊಂದಿದ್ದಾರೆ. ಶೇ 50ರಷ್ಟಿರುವ ಬಡವರು, ಒಟ್ಟು ರಾಷ್ಟ್ರೀಯ ಆದಾಯದ ಶೇ 13.1ರಷ್ಟು ಪಾಲನ್ನು ಮಾತ್ರ ಹೊಂದಿದ್ದಾರೆ. ಸ್ವಾತಂತ್ರ್ಯಪೂರ್ವ, ಸ್ವಾತಂತ್ರ್ಯಾನಂತರದ ದಿನಗಳಲ್ಲೂ ಈ ಎರಡೂ ವರ್ಗಗಳ ನಡುವಣ ಸಂಪತ್ತಿನ ಹಂಚಿಕೆ ಅಸಮಾನವಾಗಿಯೇ ಇತ್ತು. ಈಚಿನ ವರ್ಷಗಳಲ್ಲಿ ಈ ಅಂತರವು ಮತ್ತಷ್ಟು ಹೆಚ್ಚಿದೆ. ಈಚಿನ ಮೂರು ವರ್ಷಗಳಲ್ಲಿ ಭಾರತ ಸರ್ಕಾರವು ಬಿಡುಗಡೆ ಮಾಡಿರುವ ವರದಿಗಳಲ್ಲಿ ಸಂಪತ್ತಿನ ಹಂಚಿಕೆಯನ್ನು ನಿಖರವಾಗಿ ಸೂಚಿಸುವ ಮಾಹಿತಿ ಇಲ್ಲ ಎಂದು 'ವರ್ಲ್ಡ್ ಇನ್‌ಇಕ್ವಾಲಿಟಿ ರಿಪೋರ್ಟ್–2022' ಹೇಳಿದೆ.



ಶ್ರೀಮಂತರ ಆದಾಯ ಏರಿಕೆ

ಸ್ವಾತಂತ್ರ್ಯ ಪೂರ್ವದಲ್ಲಿ ದೇಶದ ಒಟ್ಟು ಜನಸಂಖ್ಯೆಯ ಶೇ 10ರಷ್ಟು ಜನರು, ದೇಶದ ಶೇ 50ರಷ್ಟು ಆದಾಯವನ್ನು ಹೊಂದಿದ್ದರು. ಆದರೆ ಸ್ವಾತಂತ್ರ್ಯಾನಂತರದ ದಿನಗಳಲ್ಲಿ ಸರ್ಕಾರವು ಸಮಾಜವಾದಿ ನೀತಿಗಳನ್ನು ಅಳವಡಿಸಿಕೊಂಡಿದ್ದರಿಂದ ಶ್ರೀಮಂತರ ಆದಾಯದ ಪ್ರಮಾಣ ಕಡಿಮೆಯಾಗಿತ್ತು. ಆದರೆ 90ರ ದಶಕದ ನಂತರ ಉದಾರೀಕರಣ ಮತ್ತು ಖಾಸಗೀಕರಣ ಜಾರಿಗೆ ತಂದ್ದದರ ಪರಿಣಾಮವಾಗಿ ಶ್ರೀಮಂತ ವರ್ಗದ ಆದಾಯದ ಪ್ರಮಾಣವು ಭಾರಿ ಪ್ರಮಾಣದಲ್ಲಿ ಏರಿಕೆಯಾಗಿದೆ.

50 % 1858–1947ರ ಅವಧಿಯಲ್ಲಿ ದೇಶದ ಒಟ್ಟು ವಾರ್ಷಿಕ ಆದಾಯದಲ್ಲಿ, ದೇಶದ ಒಟ್ಟು ಜನಸಂಖ್ಯೆಯ ಶೇ 10ರಷ್ಟಿರುವ ಶ್ರೀಮಂತರ ಪಾಲು


35 % 1960–80ರ ಅವಧಿಯಲ್ಲಿ ದೇಶದ ಒಟ್ಟು ವಾರ್ಷಿಕ ಆದಾಯದಲ್ಲಿ, ದೇಶದ ಒಟ್ಟು ಜನಸಂಖ್ಯೆಯ ಶೇ 10ರಷ್ಟಿರುವ ಶ್ರೀಮಂತರ ಪಾಲು

64.6 % 2010–21ರ ಅವಧಿಯಲ್ಲಿ ದೇಶದ ಒಟ್ಟು ವಾರ್ಷಿಕ ಆದಾಯದಲ್ಲಿ, ದೇಶದ ಒಟ್ಟು ಜನಸಂಖ್ಯೆಯ ಶೇ 10ರಷ್ಟಿರುವ ಶ್ರೀಮಂತರ ಪಾಲು


ಸಂಪತ್ತಿನ ಅಸಮಾನ ಹಂಚಿಕೆ

ಜಗತ್ತಿನಲ್ಲಿ ಸಂಪತ್ತಿನ ಹಂಚಿಕೆಯಲ್ಲಿ ತೀವ್ರ ತರದ ಅಸಮಾನತೆ ಕಂಡುಬಂದಿದೆ. ಜಗತ್ತಿನ ಶೇ 50ರಷ್ಟು ಜನರ ಬಳಿ ಇರುವುದು ಶೇ 2ರಷ್ಟು ಸಂಪತ್ತು ಮಾತ್ರ. ಅಂದರೆ ಜಗತ್ತಿನ ಅರ್ಧದಷ್ಟು ಜನರು ಬಹುತೇಕ ಖಾಲಿ ಕೈಯಲ್ಲಿದ್ದಾರೆ. ಆದರೆ, ಜಗತ್ತಿನ ಶೇ 10ರಷ್ಟು ಶ್ರೀಮಂತರು ಶೇ 76ರಷ್ಟು ಸಂಪತ್ತಿನ ಒಡೆಯರಾಗಿದ್ದಾರೆ. ಅಂದರೆ ಹತ್ತು ಪ್ರತಿಶತದಷ್ಟು ಜನರು ಜಗತ್ತಿನ ಮುಕ್ಕಾಲು ಪಾಲು ಸಂಪತ್ತನ್ನು ಅನುಭವಿಸುತ್ತಿದ್ದಾರೆ.

ಆದಾಯದಲ್ಲೂ ಈ ಅಸಮಾನತೆ ಕಾಣಿಸಿದೆ. ಜಗತ್ತಿನ ಶೇ 10ರಷ್ಟು ಜನರು ಜಗತ್ತಿನ ಶೇ 52ರಷ್ಟು ಆದಾಯವನ್ನು ಗಳಿಸುತ್ತಿದ್ದಾರೆ. ಇದೇ ಹೊತ್ತಿನಲ್ಲಿ ಶೇ 50ರಷ್ಟು ಜನರು ಕೇವಲ ಶೇ 8.5ರಷ್ಟು ಆದಾಯವನ್ನು ಹಂಚಿಕೊಳ್ಳುತ್ತಿದ್ದಾರೆ. ಆದಾಯಕ್ಕೆ ಹೋಲಿಸಿದರೆ, ಸಂಪತ್ತಿನ ಅಸಮಾನತೆ ಭಾರಿ ಪ್ರಮಾಣದಲ್ಲಿ ಗೋಚರಿಸುತ್ತದೆ.



ಜನರ ಆದಾಯವು ಜಗತ್ತಿನ ವಿವಿಧ ಪ್ರದೇಶಗಳಲ್ಲಿ ಅಸಮಾನವಾಗಿ ಹಂಚಿಕೆಯಾಗಿದೆ. ಯುರೋಪ್ ಖಂಡದಲ್ಲಿ ಶೇ 50ರಷ್ಟು ಜನಸಂಖ್ಯೆಯು ಶೇ 19ರಷ್ಟು ಆದಾಯವನ್ನು ಹಂಚಿಕೊಂಡಿದೆ. ಈ ಪ್ರಮಾಣ ಮಧ್ಯಪ್ರಾಚ್ಯ ಹಾಗೂ ಆಫ್ರಿಕಾ ಖಂಡದ ದೇಶಗಳಲ್ಲಿ ಕೇವಲ ಶೇ 9ರಷ್ಟಿದೆ. ಆದರೆ ಈ ದೇಶಗಳಲ್ಲಿರುವ ಶ್ರೀಮಂತರು ಶೇ 50ಕ್ಕಿಂತಲೂ ಹೆಚ್ಚು ಪ್ರಮಾಣದ ಆದಾಯವನ್ನು ಹಂಚಿಕೊಂಡಿದ್ದಾರೆ. ಸಂಪತ್ತು ಹಂಚಿಕೆಯಲ್ಲಿಯೂ ಭಾರಿ ತಾರತಮ್ಯ ಕಂಡುಬಂದಿದೆ. ಲ್ಯಾಟಿನ್ ಅಮೆರಿಕ ವಲಯದಲ್ಲಿ ಶೇ 50ರಷ್ಟು ಜನನ ಬಳಿಯಿರುವುದು ಶೇ 1ರಷ್ಟು ಸಂಪತ್ತು ಮಾತ್ರ. ಯುರೋಪ್ ಮತ್ತು ಪೂರ್ವ ಏಷ್ಯಾಗಳಲ್ಲಿ ಈ ಪ್ರಮಾಣ ಶೇ 5ರಷ್ಟಿದೆ. ಮಧ್ಯಪ್ರಾಚ್ಯ, ಆಫ್ರಿಕಾ, ಲ್ಯಾಟಿನ್ ಅಮೆರಿಕ, ಉತ್ತರ ಅಮೆರಿಕ ಮತ್ತು ಮಧ್ಯ ಏಷ್ಯಾದಲ್ಲಿ ಶೇ 70ಕ್ಕಿಂತಲೂ ಹೆಚ್ಚಿನ ಸಂಪತ್ತು ಶ್ರೀಮಂತರಲ್ಲಿ ಕ್ರೋಡೀಕೃತವಾಗಿದೆ.




ವರದಿ: ಜಯಸಿಂಹ ಆರ್., ಅಮೃತ್ ಕಿರಣ್ ಬಿ. ಎಂ.
ಪ್ರಜಾವಾಣಿ ಗ್ರಾಫಿಕ್ಸ್ | ಮಂಜುನಾಥ ಹುಲಕೊಪ್ಪದ

ಆಧಾರ: ವರ್ಲ್ಡ್ ಇನ್‌ಇಕ್ವಾಲಿಟಿ ಲ್ಯಾಬ್‌ನ, 'ವರ್ಲ್ಡ್ ಇನ್‌ಇಕ್ವಾಲಿಟಿ ರಿಪೋರ್ಟ್–2022' ವರದಿ

ಸಂಸದರ ಅಮಾನತು ಪ್ರಸಂಗ

'ಗೋಯಲ್ ನಿಲುವಿನಿಂದ ಬಿಕ್ಕಟ್ಟು ಬಗೆಹರಿಯುತ್ತಿಲ್ಲ'

• ಶೆಮಿನ್ ಜಾಯ್



ಪ್ರಜಾವಾಣಿ ಸಂದರ್ಶನ

ಜೈರಾಂ ರಮೇಶ್

ಸಂಸತ್ತಿನ ಚಳಿಗಾಲದ ಅಧಿವೇಶನದ ಮೊದಲ ದಿನವೇ, ಅಧಿವೇಶನದ ಉಳಿದ ಅವಧಿಯವರೆಗೆ ವಿರೋಧ ಪಕ್ಷಗಳ 12 ಸಂಸದರನ್ನು ಅಮಾನತು ಮಾಡಲಾಗಿದೆ. ಈ ಅಮಾನತು ಆದೇಶವು ಪ್ರಜಾಪ್ರಭುತ್ವಕ್ಕೆ ವಿರುದ್ಧವಾದುದು ಮತ್ತು ಸಂಪೂರ್ಣ ಕಾನೂನುಬಾಹಿರ ಎಂದು ವಿರೋಧ ಪಕ್ಷಗಳು ಪ್ರತಿಪಾದಿಸುತ್ತಿದ್ದು, ಅಮಾನತನ್ನು ರದ್ದುಪಡಿಸಬೇಕು ಎಂದು ಒತ್ತಾಯಿಸುತ್ತಿವೆ. ಅಮಾನತು ಆದೇಶದ ವಿರುದ್ಧ ಸಂಸತ್ತಿನ ಒಳಗೂ ಹೊರಗೂ ಪ್ರತಿಭಟನೆ ನಡೆಸುತ್ತಿವೆ. ಆದರೆ ಸರ್ಕಾರವು, 'ಸಂಸದರು ಕ್ಷಮೆಯಾಚಿಸಿದರೆ ಮಾತ್ರ ಅಮಾನತು ರದ್ದುಮಾಡುತ್ತೇವೆ' ಎಂದು ಹೇಳಿದೆ. ಕ್ಷಮೆ ಕೇಳುವ ಪ್ರಶ್ನೆಯೇ ಇಲ್ಲ ಎಂಬುದು ವಿರೋಧಪಕ್ಷಗಳ ಪಟ್ಟು. ರಾಜ್ಯಸಭೆಯಲ್ಲಿ ಕಾಂಗ್ರೆಸ್‌ನ ಮುಖ್ಯ ಸಚೇತಕರಾಗಿರುವ ಜೈರಾಂ ರಮೇಶ್ ಅವರು ಈ ಕುರಿತು 'ಪ್ರಜಾವಾಣಿ' ಜತೆಗೆ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡಿದ್ದಾರೆ.

● ಅಮಾನತಾಗಿರುವ ಸಂಸದರು ಧರಣಿ ಕೂತು ಒಂದು ವಾರ ಕಳೆದಿದೆ. ಇದಕ್ಕೆ ಪರಿಹಾರ ಕಾಣುತ್ತಿದೆಯೇ?

ಇದಕ್ಕೆ ಪರಿಹಾರ ಕಂಡುಕೊಳ್ಳಿ ಎಂದು ರಾಜ್ಯಸಭೆ ಸಭಾಪತಿ ಎಂ.ವೆಂಕಯ್ಯ ನಾಯ್ಡು ಅವರು ಸದನದ ನಾಯಕ ಪೀಯೂಷ್ ಗೋಯಲ್, ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಮತ್ತು ಎಲ್ಲಾ ಪಕ್ಷಗಳ ನಾಯಕರಿಗೆ ಹೇಳಿದ್ದಾರೆ. ಪರಿಹಾರಕ್ಕೆ ಇರುವ ವಿವಿಧ ಆಯ್ಕೆಗಳ ಬಗ್ಗೆ ನಾವು ಚರ್ಚಿಸಿದ್ದೇವೆ. ಸಭಾಪತಿಯು ಹೊಂದಾಣಿಕೆಗೆ ತಯಾರಿದ್ದಾರೆ. ಆದರೆ, ಪೀಯೂಷ್ ಗೋಯಲ್ ಅವರ ನಿಲುವು ಸಂಪೂರ್ಣ ಮೂಲಭೂತವಾದುದು. ಅವರ ನಿಲುವಿನ ಕಾರಣದಿಂದ ಯಾವುದೇ ಹೊಂದಾಣಿಕೆಗೆ ಅವಕಾಶವೇ ಇಲ್ಲದಂತಾಗಿದೆ. ಅಮಾನತಾಗಿರುವ ಪ್ರತಿಯೊಬ್ಬ ಸಂಸದ ಸದನದಲ್ಲಿ ಕ್ಷಮೆ ಕೇಳಲೇಬೇಕು ಎಂದು ಗೋಯಲ್ ಹೇಳುತ್ತಿದ್ದಾರೆ. ಈ ಅಮಾನತು ಸಂವಿಧಾನಬಾಹಿರ ಮತ್ತು ಕಾನೂನುಬಾಹಿರ. ಹೀಗಾಗಿ ಕ್ಷಮೆ ಕೇಳುವ ಪ್ರಶ್ನೆಯೇ ಉದ್ಭವಿಸುವುದಿಲ್ಲ ಎಂದು ನಾವು ಮೊದಲ ದಿನದಿಂದಲೇ ಹೇಳುತ್ತಿದ್ದೇವೆ. ಸಭಾಪತಿಗೆ ಬರೆದ ಪತ್ರದಲ್ಲಿ ಖರ್ಗೆ ಅವರು ಇದನ್ನು ವಿವರಿಸಿ ಹೇಳಿದ್ದಾರೆ.

● ಹಾಗಿದ್ದರೆ, ಬಿಕ್ಕಟ್ಟು ಮುಂದುವರಿಯುತ್ತದೆ?

ಬಿಕ್ಕಟ್ಟು ಪರಿಹಾರವಾಗಬೇಕು ಎಂದು ವಿರೋಧ ಪಕ್ಷಗಳು ಬಯಸುತ್ತವೆ. ಸಭಾಪತಿ ಸಹ ಇದನ್ನೇ ಬಯಸುತ್ತಾರೆ. ನಾನು ಬಿಜೆಪಿಯ ಹಲವರೊಂದಿಗೆ ಮಾತನಾಡಿದ್ದೇನೆ. ಅವರೆಲ್ಲರೂ, ಕೂತು ಸಮಸ್ಯೆಯನ್ನು ಬಗೆಹರಿಸಿಕೊಳ್ಳಲು ಸಿದ್ಧರಿದ್ದಾರೆ. ಆದರೆ, ಸದನದಲ್ಲಿ ಆಡಳಿತ ಪಕ್ಷದ ನಾಯಕರಾದ ಪೀಯೂಷ್ ಗೋಯಲ್ ಮಾತ್ರ ಯಾವ ಹೊಂದಾಣಿಕೆಗೂ ತಯಾರಿಲ್ಲ. ಬೇರೆ-ಬೇರೆ ನಾಯಕರೊಂದಿಗೆ ಚರ್ಚಿಸಿದ ನಂತರ ನಾನು, ಸಭಾಪತಿ ನಾಯ್ಡು ಅವರಿಗೆ ಹಲವು ಪರ್ಯಾಯಗಳನ್ನು ಸೂಚಿಸಿದ್ದೇನೆ. ವಿರೋಧ ಪಕ್ಷಗಳ ನಾಯಕರ ಮನೆಗೆ ಹೋಗಿದ್ದೇನೆ. ಆದರೆ ಇದು ನನ್ನ ಕರ್ತವ್ಯ ಅಲ್ಲ. ಬದಲಿಗೆ ಪರಿಹಾರ ಕಂಡುಹಿಡಿಯುವುದು ಸದನದ ನಾಯಕನ ಕರ್ತವ್ಯ.

● ಕಾಂಗ್ರೆಸ್ ಮತ್ತು ಉಳಿದ ವಿರೋಧ ಪಕ್ಷಗಳು ಸಾಮೂಹಿಕವಾಗಿ ವಿಷಾದ ವ್ಯಕ್ತಪಡಿಸುವ ಮೂಲಕ ಅಮಾನತು ರದ್ದಾಗುವಂತೆ ಮಾಡುವ ಯೋಚನೆಯಲ್ಲಿವೆಯೇ?

ಅಂತಿಮವಾಗಿ ಏನಾಗುತ್ತದೆ ಎಂಬುದನ್ನು ನಾನು ಹೇಳಲು ಸಾಧ್ಯವಿಲ್ಲ. ನಾವು ಬೇರೆ ಬೇರೆ ಆಯ್ಕೆಗಳನ್ನು ಪರಿಶೀಲಿಸುತ್ತಿದ್ದೇವೆ. ಆದರೆ ಅಗತ್ಯವೇ ಇಲ್ಲದ ಕ್ಷಮೆಯನ್ನು ಕೇಳುವ ಪ್ರಶ್ನೆ ಉದ್ಭವಿಸುವುದಿಲ್ಲ.

● ವಿಷಾದ ವ್ಯಕ್ತಪಡಿಸುವುದು ಒಂದು ಆಯ್ಕೆಯೇ?

ಕೆಲವು ಆಯ್ಕೆಗಳಿವೆ. ಈ ಬಗ್ಗೆ ಸಭಾಪತಿ ಜತೆಗೆ ಚರ್ಚಿಸಿದ್ದೇನೆ. ವಿರೋಧ ಪಕ್ಷಗಳ ನಾಯಕರ ಜತೆಗೂ ಚರ್ಚಿಸಿದ್ದೇನೆ. ಇದು ನನ್ನ ನಿರ್ಧಾರವೂ ಅಲ್ಲ, ಕಾಂಗ್ರೆಸ್‌ನ ನಿರ್ಧಾರವೂ ಅಲ್ಲ. ಎಲ್ಲರೂ ಸೇರಿ ನಿರ್ಧಾರ ತೆಗೆದುಕೊಳ್ಳಬೇಕು. ಎಎಪಿ, ಸಮಾಜವಾದಿ ಪಕ್ಷ ಮತ್ತು ಇತರರ ಜತೆಗೆ ಚರ್ಚಿಸುತ್ತಿದ್ದೇವೆ. ಸದ್ಯಕ್ಕೆ ಟಿಎಂಸಿ ನಮ್ಮೊಟ್ಟಿಗೆ ಇದೆ. ಆದರೆ ಅದು ವಿಪಕ್ಷಗಳ ಒಕ್ಕೂಟದಿಂದ ಹೊರಗಿದೆ ಎಂಬುದನ್ನು ಘೋಷಿಸಿಕೊಂಡಿದೆ. ಆ ಪಕ್ಷದ ಪರವಾಗಿ ನಾನು, ಏನು ಹೇಳಲೂ ಸಾಧ್ಯವಿಲ್ಲ.

● ಹಾಗಿದ್ದರೆ, ಇದಕ್ಕೆ ಪರಿಹಾರವೇನು?

ಸದನದ ನಾಯಕ ಎಲ್ಲಾ ಪಕ್ಷಗಳ ನಾಯಕರನ್ನು ಮಾತುಕತೆಗೆ ಕರೆಯಬೇಕು. ಅದು ಪರಿಹಾರದ ಮೊದಲ ಹೆಜ್ಜೆ. ಸದನದ ನಾಯಕ ಕರೆಯಲು ಸಿದ್ಧವಿಲ್ಲದೇ ಇದ್ದರೆ, ಸಂಸದೀಯ ವ್ಯವಹಾರಗಳ ಸಂಪುಟ ಸಮಿತಿಯ ಅಧ್ಯಕ್ಷರಾಗಿರುವ ರಾಜನಾಥ್ ಸಿಂಗ್ ಅವರು ಕರೆಯಲಿ. ಆಗ ಅದು ಮೊದಲ ಹೆಜ್ಜೆಯಾಗುತ್ತದೆ. ಇದು ಆಗದೇ ಇದ್ದರೆ ಅದು ಸದನದ ನಾಯಕನ ವೈಫಲ್ಯವೇ ಹೊರತು, ವಿರೋಧ ಪಕ್ಷಗಳ ನಾಯಕರ ವೈಫಲ್ಯವಲ್ಲ. ಇದೆಲ್ಲಾ ಸದನದ ನಾಯಕನ ಮಿತಿಯಿಲ್ಲದ ದುರಹಂಕಾರವಷ್ಟೆ.

ಪಿವಿ ಫ್ಯಾಕ್ಟ್ ಚೆಕ್


ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

ರಸ್ತೆಗಳಲ್ಲಿ ಮುಸ್ಲಿಮರು ನಮಾಜ್ ಮಾಡುತ್ತಿರುವ ವಿಚಾರ ಚರ್ಚೆಯಲ್ಲಿರುವ ಸಮಯದಲ್ಲೇ, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಅವರು ನೀಡಿದ್ದಾರೆ ಎನ್ನಲಾದ ಹೇಳಿಕೆಯೊಂದು ವೈರಲ್ ಆಗಿದೆ. 'ರಸ್ತೆಗಳಲ್ಲಿ ಪ್ರಾರ್ಥನೆ ಸಲ್ಲಿಸುವುದಕ್ಕೆ ಮುಸ್ಲಿಮರಿಗೆ ಒಂದು ವೇಳೆ ನಿರ್ಬಂಧ ವಿಧಿಸಿದರೆ, ಉದ್ಯಾನಗಳಲ್ಲಿ ಯೋಗ ಮಾಡಲೂ ಬಿಡುವುದಿಲ್ಲ' ಎಂದು ಪ್ರಿಯಾಂಕಾ ಅವರು ಉತ್ತರ ಪ್ರದೇಶದ ಚುನಾವಣಾ ಪ್ರಚಾರದ ವೇಳೆ ಹೇಳಿಕೆ ನೀಡಿದ್ದಾರೆ ಎನ್ನಲಾಗಿದೆ.



ನಮಾಜ್ ಕುರಿತಂತೆ ಪ್ರಿಯಾಂಕಾ ಗಾಂಧಿ ಅವರು ನೀಡಿದ್ದಾರೆ ಎನ್ನಲಾದ ಹೇಳಿಕೆ ಬಗ್ಗೆ ಯಾವುದೇ ಅಧಿಕೃತ ವರದಿಗಳು ದೊರೆತಿಲ್ಲ ಎಂದು ಇಂಡಿಯಾ ಟುಡೇ ವರದಿ ಮಾಡಿದೆ. ಒಂದು ವೇಳೆ ಅವರು ಇಂತಹ ಹೇಳಿಕೆ ನೀಡಿದ್ದರೆ ಅದು ಮಾಧ್ಯಮಗಳಲ್ಲಿ ದೊಡ್ಡ ಸುದ್ದಿಯಾಗುತ್ತಿತ್ತು. ಉತ್ತರ ಪ್ರದೇಶ ಕಾಂಗ್ರೆಸ್ ವಕ್ತಾರ ಸುರೇಂದ್ರ ರಜಪೂತ್ ಅವರನ್ನು ಸಂಪರ್ಕಿಸಿದಾಗ, 'ಪ್ರಿಯಾಂಕಾ ಅವರು ಇಂಥ ಹೇಳಿಕೆ ನೀಡಿಲ್ಲ, ವೈರಲ್ ಆಗಿರುವ ಹೇಳಿಕೆ ಅವರದ್ದಲ್ಲ' ಎಂದು ಸ್ಪಷ್ಟಪಡಿಸಿದ್ದಾರೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ಅನುಭವದ ಮುಖಗಳು

ಅನುಭವದ ಪರಿ ನೂರ್ವರಿಗೆ ನೂರುನೂರು ಪರಿ |
ದಿನವೊಂದರೊಳೆ ಅದೊಬ್ಬಂಗೆ ನೂರುಪರಿ ||
ಎಣಿಪುದಾರನುಭವವನ್, ಆವ ಪ್ರಮಾಣದಲಿ? |
ಮಣಲಗೋಪುರವೊ ಅದು – ಮಂಕುತಿಮ್ಮ ||
516 ||

ಪದ-ಅರ್ಥ: ಪರಿ = ರೀತಿ, ಅದೊಬ್ಬಂಗೆ = ಅದು + ಒಬ್ಬಂಗೆ(ಒಬ್ಬನಿಗೆ), ಎಣಿಪುದಾರನುಭವವನ್ = ಎಣಿಪುದು(ಗಣಿಸುವುದು, ಒಪ್ಪುವುದು-) + ಆರ(ಯಾರ) + ಅನುಭವವನ್ (ಅನುಭವವನ್ನು), ಮಣಲ = ಮರಳಿನ

ವಾಚ್ಯಾರ್ಥ: ನೂರಾರು ಜನರಿಗೆ ನೂರಾರು ಅನುಭವಗಳು. ಒಂದೇ ದಿನದಲ್ಲಿ ಒಬ್ಬನಿಗೇ ನೂರು ಅನುಭವಗಳು. ಯಾರ ಅನುಭವವನ್ನು, ಯಾವ ಪ್ರಮಾಣದಲ್ಲಿ ಗಣಿಸುವುದು? ಅದೊಂದು ಮರಳಿನ ಗೋಪುರ.

ವಿವರಣೆ: ಮನೆಯಲ್ಲಿ ಮದುವೆಯ ಸಂಭ್ರಮ. ಬೀಗರು ಬಂದಿದ್ದಾರೆ. ಕಲ್ಯಾಣ ಮಂಟಪ ಅಲಂಕಾರಗೊಂಡಿದೆ. ಮದುವೆ ಗಂಡಿಗೆ ಕಾತರ. ತನ್ನ ಮಡದಿಯಾಗುವವಳನ್ನು ಕಾಣುವ, ಸ್ಪರ್ಶಿಸುವ ತವಕ. ಹುಡುಗಿಗೆ ಎದೆಯಲ್ಲಿ ಅವಲಕ್ಕಿ ಕುಟ್ಟಿದ ಅನುಭವ. ಹುಡುಗನೇನೋ ಗೊತ್ತು, ಆದರೆ ಮನೆಯವರು ಹೇಗೋ ಏನೋ? ಇಷ್ಟು ವರ್ಷ ಹುಟ್ಟಿ ಬೆಳೆದಿದ್ದ ಮನೆಯನ್ನು, ಪರಿವಾರದವರನ್ನು ಬಿಟ್ಟು ಹೋಗಬೇಕಲ್ಲ ಎಂಬ ಆತಂಕ.

ಹುಡುಗಿಯ ತಂದೆ-ತಾಯಿಯರಿಗೆ ಎಲ್ಲವೂ ಸರಿಯಾದರೆ ಸಾಕು, ಬಂದವರಲ್ಲಿ ಯಾರಿಗೂ ಅಸಮಾಧಾನವಾಗದೆ, ಬೀಗರು ತೃಪ್ತಿಯಾಗಿದ್ದರೆ ಸಾಕು. ಅವರಿಗೆ ಅಂದೇ ಮಗಳನ್ನು ಕಳುಹಿಸಿಕೊಡಬೇಕಲ್ಲ ಎಂಬ ದುಃಖ. ಅಡುಗೆಯ ಕಾಂಟ್ರಾಕ್ಟ್ ತೆಗೆದುಕೊಂಡವನಿಗೆ ಬಂದವರ ಲೆಕ್ಕದ ಚಿಂತೆ. 'ಸರ್ ಪಲ್ಯ ಮುಗೀತಾ ಬಂದಿದೆ. ಮತ್ತಷ್ಟು ಮಾಡಲೇ?' ಎಂದು ಅಡುಗೆಯವನು ಕೇಳಿದಾಗ, 'ಬೇಡಯ್ಯಾ, ಬಡಿಸುವವರಿಗೆ ಸ್ವಲ್ಪ ಕೈ ಬಿಗಿದು ಬಡಿಸಲು ಹೇಳು. ಹೇಗಿದ್ದರೂ ಚಟ್ನಿ ಹೆಚ್ಚಿದೆಯಲ್ಲ. ಅದನ್ನೇ ಜಾಸ್ತಿ ಹಾಕಲು ಹೇಳಿ ಅಡ್ಜೆಸ್ಟ್ ಮಾಡು' ಅವನದು ಅಡ್ಜೆಸ್ಟ್ ಮಾಡುವ ವ್ಯವಹಾರ. ಹೂವಿನ ಅಲಂಕಾರದವನಿಗೆ, ಎಷ್ಟು ಕಡಿಮೆ ಹೂವುಗಳನ್ನು ಬಳಸಿ, ಅಲಂಕಾರ ಮಾಡಿ ಹೆಚ್ಚು ಹಣ ಗಳಿಸುವ ಯೋಜನೆ. ಕಲ್ಯಾಣ ಮಂಟಪದ ಮ್ಯಾನೇಜರ್‌ನಿಗೆ, ತನ್ನ ಕಟ್ಟಡಕ್ಕೆ, ಉಪಕರಣಗಳಿಗೆ ಏನಾದರೂ ಹಾನಿಯಾದೀತೇ ಎಂದು ಗಮನಿಸುವುದರೊಂದಿಗೆ, ಇವರನ್ನು ಸರಿಯಾದ ಸಮಯಕ್ಕೆ ಹೊರಗೆ ಹಾಕಿ, ಮುಂದಿನ ಮದುವೆಗೆ ಬರುವವರಿಗೆ ಎಲ್ಲವನ್ನೂ ಒಪ್ಪಿಸುವ ಹವಣು. ಎಲೆ ಎತ್ತಿ, ಪಾತ್ರೆ ತೊಳೆಯುವವರಿಗೆ, ಇದು ಮುಗಿದು ಹೋಗಿ, ತಮಗೆ ಬರುವ ಕಾಸು ಬಂದರೆ ಸಾಕು ಎನ್ನಿಸಿದೆ. ಯಾರು, ಯಾರನ್ನು ಮದುವೆಯಾಗುತ್ತಾರೆ ಎಂಬ ಚಿಂತೆ ಅವರಿಗೇಕೆ?

ಒಂದು ಮದುವೆಯಲ್ಲಿಯೇ ನೂರು ಜನರಿಗೆ ನೂರು ಅನುಭವಗಳು. ಹೀಗಿದ್ದಾಗ ಈ ವಿಶಾಲ ವಿಶ್ವದಲ್ಲಿ ಜನರಿಗೆ ಅದೆಷ್ಟು ಅನುಭವಗಳು ದೊರಕಲಿಕ್ಕಿಲ್ಲ? ಒಂದೇ ದಿನದಲ್ಲಿ ನೂರು ಅನುಭವಗಳು ಆಗುವುದಿಲ್ಲವೆ? ಎಲ್ಲರೂ ತಮ್ಮ ಅನುಭವವೇ ಸತ್ಯ ಎನ್ನುವವರು. ಒಂದು ದೃಶ್ಯ, ಒಂದು ಘಟನೆ, ಒಂದು ಮಾತು, ವಿವಿಧ ಜನರಿಗೆ ವಿವಿಧ ಅನುಭವಗಳನ್ನೇ ಕೊಡುತ್ತದೆ. ಅದು ಅವರವರ ಮನ:ಪರಿಪಾಕದಂತೆ ಗೋಚರವಾಗುತ್ತದೆ. ಜೋಗ ಜಲಪಾತ ಎಂತಹ ಅದ್ಭುತ ಎಂದು ನಿಸರ್ಗಪ್ರೇಮಿಗೆ ತೋರಿದರೆ, ವಿಜ್ಞಾನಿಗೆ, ಛೇ ಅದೆಷ್ಟು ನೀರು ಪೋಲಾಗುತ್ತಿದೆ, ಅದರಿಂದ ವಿದ್ಯುತ್ತನ್ನು ಪಡೆಯಬಹುದಲ್ಲ ಎನ್ನಿಸುತ್ತದೆ. ಹಾಗಾದರೆ ಯಾರ ಅನುಭವವನ್ನು ಯಾವ ಪ್ರಮಾಣದಲ್ಲಿ ಸ್ವೀಕರಿಸಿದರೆ ನಮಗೆ ಸತ್ಯ ಹೊಳೆದೀತು. ಅದಕ್ಕೇ ಕಗ್ಗ ಅದನ್ನು ಮರಳಿನ ಗೋಪುರ ಎಂದು ಕರೆಯುತ್ತದೆ. ಯಾಕೆಂದರೆ ಅದು ಗಟ್ಟಿಯಾಗಿ ನಿಲ್ಲುವುದಿಲ್ಲ, ಕಾಲಕಾಲಕ್ಕೆ ಬಂದ ವಿಶೇಷ ಅನುಭವಗಳು ಹಿಂದಿನ ಎಲ್ಲ ಅನುಭವ ಪ್ರಜ್ಞೆಯನ್ನು ಬದಲಾಯಿಸಿಬಿಡಬಹುದು. ❖

ದಿನ ಭವಿಷ್ಯ

ಶುಕ್ರವಾರ ಡಿಸೆಂಬರ್ 10, 2021

ಶ್ರೀಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಹಿಮಂತ ಋತು ಮೃಗಶಿರ ಮಾಸ ಶುಕ್ಲಪಕ್ಷ ಪಕ್ಷ ಮಳೆ ನಕ್ಷತ್ರ ಜ್ಯೇಷ್ಠ ಸಪ್ತಮಿ ಗಂ. 44-31 (ರಾ. 12-25) ಶುಕ್ರವಾರ ನಿತ್ಯ ನಕ್ಷತ್ರ ಶತಭಿಷ ಗಂ. 51-42 (ರಾ. 3-17) ಹರ್ಷ ನಾಮ ಯೋಗ ಗಂ. 19-12 ಗರಜ ಕರಣ ಗಂ. 15-50 ವಿಷ ಗಂ. 10-28 ಅಮೃತ ಗಂ 34-14 : ರಾಹುಕಾಲ ಬೆ ಗಂ. 10-30 ರಿಂದ 12-00 ಗುಳಿಕ ಬೆ ಕಾಲ ಗಂ 7-30 ರಿಂದ 9-00 ಯಮಗಂಡ ಕಾಲ ಮ ಗಂ 3-00 ರಿಂದ 4-30 : ಸೂರ್ಯೋದಯ: 6-33 ಸೂರ್ಯಾಸ್ತ: 5-49 ಅದೃಷ್ಟ ಸಂಖ್ಯೆ 1, 4

ಮೇಷ: ವಿಘ್ನಸಂತೋಷಿಗಳಿಂದ ಕೆಲಸಕ್ಕೆ ತಡೆಯೊಡ್ಡುವ ಸಾಧ್ಯತೆ. ಸಕಾಲಿಕ ಸಲಹೆ ದೊರೆತು ಕಾರ್ಯದಲ್ಲಿ ಯಶಸ್ಸು. ಸರ್ಕಾರದಿಂದ ಬರಬೇಕಾದ ಹಣಕಾಸಿನ ಸೌಲತ್ತುಗಳು ಬಂದೊದಗುವುದು. ಪತ್ನಿ ವರ್ಗದವರಿಂದ ನೆರವು.

ವೃಷಭ: ಯೋಜಿತ ಕೆಲಸಗಳಿಗೆ ಸಕಾಲಿಕ ಸಲಹೆ ದೊರೆತು ಯಶಸ್ಸಿನ ಮಾರ್ಗ ಕಾಣುವುದು. ನೆರೆಹೊರೆಯವರಿಂದ ನಿಮ್ಮ ಕೆಲಸಗಳಿಗೆ ಸಹಕಾರ. ಮಂಗಳಕಾರ್ಯಗಳಲ್ಲಿ ಭಾಗಿಯಾಗುವ ಸಾಧ್ಯತೆ. ಅಪರೂಪದ ವ್ಯಕ್ತಿಗಳ ದರ್ಶನ ಭಾಗ್ಯ.

ಮಿಥುನ: ಕೌಟುಂಬಿಕ ಸಮಸ್ಯೆಗಳು ಪರಿಹಾರವಾಗಿ ಮಾನಸಿಕ ನೆಮ್ಮದಿ. ಮಹಿಳೆಯರು ತಮ್ಮ ಅಮೂಲ್ಯ ಆಭರಣಗಳ ಬಗ್ಗೆ ಎಚ್ಚರಿಕೆ ವಹಿಸುವುದು ಉತ್ತಮ. ರಾಜಕೀಯದಲ್ಲಿರುವವರಿಗೆ ಯಶಸ್ಸು. ನಿವೇಶನ ವಾ ಆಸ್ತಿ ಖರೀದಿ.

ಕರ್ಕಾಟಕ: ವಿಶೇಷ ವ್ಯಕ್ತಿಗಳ ಪರಿಚಯದಿಂದಾಗಿ ಪ್ರಭಾವಿತರಾಗಿ ಮನಸ್ಸಿನಲ್ಲಿ ಉಲ್ಲಾಸ ಮೂಡುವುದು. ಹೆಣ್ಣುಮಕ್ಕಳ ವಿಚಾರದಲ್ಲಿ ಸ್ವಲ್ಪಮಟ್ಟಿನ ಮುತುವರ್ಜಿ ವಹಿಸುವುದು ಉತ್ತಮ. ವದಂತಿಗಳಿಗೆ ತಲೆ ಕೆಡಿಸಿಕೊಳ್ಳದಿರಿ.

ಸಿಂಹ: ಪ್ರಯತ್ನಕ್ಕೆ ತಕ್ಕುದಾದ ಪ್ರತಿಫಲ ದೊರಕಲಿದೆ. ಸರ್ಕಾರಿ ಉದ್ಯೋಗಿಗಳಿಗೆ ಇಲಾಖೆಗಳಲ್ಲಿ ಮುಂಬಡ್ತಿ ಸಾಧ್ಯತೆ. ಮೀನು ಮುಂತಾದ ಸಮುದ್ರಖಾದ್ಯ ಉದ್ಯಮಿಗಳಿಗೆ ಉತ್ತಮ ಲಾಭದ ನಿರೀಕ್ಷೆ. ವಿದ್ಯಾರ್ಥಿಗಳಿಗೆ ಅಭ್ಯಾಸದಲ್ಲಿ ಪ್ರಗತಿ.

ಕನ್ಯಾ: ಹಿರಿಯರ ಮಾತುಗಳಿಗೆ ಅಗೌರವ ತೋರದಿರಿ. ಯಾವುದೇ ಸಂಕಷ್ಟಗಳು ಬಂದರೂ ಹಿರಿಯರ ಜಾಣ್ಮೆಯ ಮಾತುಗಳಿಂದಾಗಿ ಪರಿಹಾರ. ಮಕ್ಕಳ ಶೈಕ್ಷಣಿಕ ವಿಚಾರದಲ್ಲಿ ಅತಿಯಾದ ಒತ್ತಡ ಹೇರದಿರಿ.

ತುಲಾ: ಉತ್ತಮ ಕೆಲಸಗಳಿಗಾಗಿ ಮುನ್ನುಗ್ಗಿ ಯಶಸ್ಸು ಸಾಧಿಸುವಿರಿ. ಹಣಕಾಸಿನ ವ್ಯವಹಾರ ಅಷ್ಟೊಂದು ಲಾಭ ತರಲಾರದು. ಕುಟುಂಬ ಸಮೇತರಾಗಿ ಕ್ಷೇತ್ರದರ್ಶನ ಅವಕಾಶ. ಮಕ್ಕಳದೆಸೆಯಿಂದ ವಿದೇಶ ಪ್ರಯಾಣ ಯೋಗ.

ವೃಶ್ಚಿಕ: ಮಾನಸಿಕ ದ್ವಂದ್ವ ನಿಲುವಿನಿಂದಾಗಿ ಆರ್ಥಿಕ ನಷ್ಟ. ತೃಪ್ತಿದಾಯಕ ದಾಂಪತ್ಯ ಜೀವನ. ವಸ್ತ್ರಾಭರಣ ಖರೀದಿ ಸಾಧ್ಯತೆ. ಪುಣ್ಯ ಕ್ಷೇತ್ರ ದರ್ಶನ ಭಾಗ್ಯ. ದೃಢ ನಿರ್ಧಾರದಿಂದಾಗಿ ಕೆಲಸ–ಕಾರ್ಯಗಳು ಸುಗಮ.

ಧನು: ಸ್ನೇಹಿತರಿಂದಾಗಿ ಬಹುದಿನಗಳಿಂದ ಕಾಡುತ್ತಿದ್ದ ಸಮಸ್ಯೆಗಳಿಗೆ ಪರಿಹಾರ. ಸಹೋದ್ಯೋಗಿಗಳೊಂದಿಗೆ ಹೊಂದಾಣಿಕೆಯಿಂದಾಗಿ ಉತ್ತಮ ಕಾರ್ಯನಿರ್ವಹಣೆ. ಅನಿರೀಕ್ಷಿತ ದೂರದ ನೆಂಟರ ಆಗಮನ ಸಾಧ್ಯತೆ.

ಮಕರ: ವಿಶೇಷ ಕಾರ್ಯಗಳ ಯಶಸ್ಸಿನಲ್ಲಿ ಪಾಲುದಾರರಾಗುವ ಅವಕಾಶ. ಸಹೋದ್ಯೋಗಿಗಳಿಂದ ಮಾನ್ಯತೆ. ಮನೆ ಮಂದಿಯೊಂದಿಗೆ ಸಮಾರಂಭಗಳಲ್ಲಿ ಜವಾಬ್ದಾರಿಯುತವಾಗಿ ಭಾಗಿಯಾಗುವ ಸಾಧ್ಯತೆ. ಗೌರವ ಸಂಪಾದನೆ.

ಕುಂಭ: ವೃತ್ತಿ ಸಮಸ್ಯೆಗಳು ಉಲ್ಬಣಗೊಂಡರೂ ಕ್ರಮೇಣ ಪರಿಹಾರ ಕಂಡುಕೊಳ್ಳುವವು. ಉದ್ಯೋಗ ಪ್ರಾಪ್ತಿ. ವಾಹನ ಸವಾರರು ಎಚ್ಚರಿಕೆಯಿಂದಿರುವುದು ಒಳಿತು. ಆರೋಗ್ಯದಲ್ಲಿ ಏರುಪೇರಾಗುವ ಸಾಧ್ಯತೆ.

ಮೀನ: ಪ್ರತಿಭಾವಂತ ಕಲಾವಿದರು, ವಿದ್ವಾಂಸರುಗಳಿಗೆ ಸಾಮಾಜಿಕ ಗೌರವ. ಮಹಿಳೆಯರು ಅಧಿಕ ಮಾತಿನಿಂದಾಗಿ ಸಂಕಷ್ಟಕ್ಕೊಳಗಾಗಬಹುದು. ಮನೆಯವರ ಕೆಲಸ–ಕಾರ್ಯಗಳಿಗೆ ಸಹಕಾರ ನೀಡಿ ಆನಂದ.


ನಿಮ್ಮ ಜನ್ಮದಿನ 10-ಡಿಸೆಂಬರ್ ಇಂದು ಅತ್ಯಂತ ಶುಭದಾಯಕ. ಆರ್ಥಿಕ ಸಶಕ್ತತೆಗಾಗಿ ಮಾಡಿದ ಯೋಜನೆಗಳು ಕಾರ್ಯರೂಪಕ್ಕೆ ಬರುವುದು. ಹಣಕಾಸು ಸಂಸ್ಥೆಗಳಿಂದ ಸಕಾಲಿಕ ಅನುಕೂಲತೆಗಳು ಪ್ರಾಪ್ತವಾಗಿ ಗೃಹ ನಿರ್ಮಾಣ ಕಾಮಗಾರಿಗಳು ಸುಗಮಗೊಳ್ಳುವವು. ಕಣ್ಣಿನ ಸಮಸ್ಯೆಯಿಂದಾಗಿ ತಲೆನೋವು ಕಾಣಿಸಿಕೊಳ್ಳುವ ಸಾಧ್ಯತೆ ಇದ್ದು ವೈದ್ಯರ ಸಲಹೆ ಪಡೆಯಿರಿ.

ಪದಬಂಧ 4803

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
4.ಬೆಲೆಯುಳ್ಳ ಮಣಿ (2)
5.ಮಂದಿ ಹೊಕ್ಕಿರುವ ಗುಡಿ (3)
6.ನಾಗರಿಕತೆ ರೂಢಿಸಿಕೊಂಡಿರುವ ಸ್ತ್ರೀ (2)
7.ಅಕ್ಕರೆಯಿಂದ ತಿನಿಸಿದ ಸಿಹಿ ಉಲ್ಟಾ ಕಾಣುತ್ತಿದೆ (3)
9.ಟಾರ ರಸ್ತೆ ಬಳಿಯಿರುವ ಮೋರಿ (3)
10.ವಾದವನ್ನು ಮಂಡಿಸುವ ಕ್ರಮ (5)
11.ಕತ್ತರಿಸುವ ಸಾಧನ (3)
12.ತಲೆಯಲ್ಲಿರುವ ದುಂಡನೆಯ ಪಾತ್ರೆ! (3)
15.ವಸ್ತುಗಳನ್ನಿಡುವ ತಗಡಿನ ಪೆಟ್ಟಿಗೆ (2)
16.ಖಚಿತವಾಗಿಯೂ ಇದು ಪುಕ್ಕಟೆ! (3)
17.ಉತ್ತರದವರ ಚಿಕ್ಕಪ್ಪ (2)

ಮೇಲಿಂದ ಕೆಳಕ್ಕೆ
1.ಹಾಲಿನ ಧಾರೆಯಿದು (4)
2.ಗಂಡನ ತಂಗಿ ಅಥವಾ ತಮ್ಮನ ಹೆಂಡತಿ (3)
3.ವಾರದ ಕೊನೆಗೆ ನೆರೆದ ಸುತ್ತಲಿನ ಜನ (4)
8.ಪ್ರಾಣಿ ಅಥವಾ ವಾಹನದ ಮೇಲೆ ಕುಳಿತು ಹೋಗುವಿಕೆ (3)
9.ಗಣಿಯ ಬಳಿ ಕಲಿತ ಲೆಕ್ಕ ಶಾಸ್ತ್ರ (3)
11.ಕನ್ನಡಿಗನ ಚಾಳೀಸು ಇಲ್ಲಿದೆ (4)
13.ಲೆಕ್ಕಕ್ಕೆ ಸಂಬಂಧಪಟ್ಟದ್ದು (4)
14.ಸಣ್ಣ ಮಕ್ಕಳ ತಲೆಗೆ ಕಟ್ಟುವ ಕುಲಾವಿ (3)



4802ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಸುಲಭ 3.ಅಂಗರಾಗ 5.ಶಿಷ್ಯ 6.ಮಾರಾಮಾರಿ 7.ರತ್ನಖಚಿತಪೀಠ 10.ಸೆರೆಮನೆ 11.ಹಾವು 12.ಗುಣಗ್ರಾಹಿ 13.ಗೆಳತಿ
ಮೇಲಿಂದ ಕೆಳಕ್ಕೆ: 2.ಭವಿಷ್ಯ 4.ಗಡಾರಿ 5.ಶಿಖರ 6.ಮಾರುತ 8.ಖಜಾನೆ 9.ಠರಾವು 10.ಸೆರಗು 11.ಹಾಸಿಗೆ

ಸುಡೊಕು 5189

9	2			5		8	4	
			3		9			1
	4			1			5	7
	3	2		9		7		6
			1		2		9	
7	9			3		2	1	
3	1		9		5		7	
				8		1	6	9
	6	9			1		3	8

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5188 ಸುಡೊಕು

4	2	1	3	8	9	5	6	7
8	7	9	1	5	6	4	2	3
3	6	5	4	2	7	9	8	1
6	8	7	5	9	4	3	1	2
2	1	4	7	6	3	8	5	9
5	9	3	8	1	2	6	7	4
9	3	2	6	7	8	1	4	5
1	4	8	2	3	5	7	9	6
7	5	6	9	4	1	2	3	8


₹30 ಕೋಟಿ ವೆಚ್ಚದಲ್ಲಿ ತುಂಗಾ ಆರತಿ ಮಂಟಪ: ಬೊಮ್ಮಾಯಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಶಿಯಲ್ಲಿ ಗಂಗಾ ಆರತಿ ಆಯೋಜಿಸುವ ಮಾದರಿಯಲ್ಲೇ ದಾವಣಗೆರೆಯ ಹರಿಹರದಲ್ಲಿ ತುಂಗಾ ಆರತಿ ನಡೆಸಲು ₹ 30 ಕೋಟಿ ವೆಚ್ಚದಲ್ಲಿ ಮಂಟಪಗಳನ್ನು ನಿರ್ಮಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಜನವರಿ 13 ಮತ್ತು 14ರಂದು ನಡೆಯುವ ಹರ ಜಾತ್ರೆಯ ಲಾಂಛನ, ಟಿ ಷರ್ಟ್ ಮತ್ತು ಸಿ.ಡಿ ಯನ್ನು ಗುರುವಾರ ಬಿಡುಗಡೆ ಮಾಡಿ ಮಾತನಾಡಿದ ಅವರು, ಜನವರಿಯಲ್ಲಿ ನಡೆಯುವ ಹರ ಜಾತ್ರೆಯ ಸಂದರ್ಭದಲ್ಲೇ ತುಂಗಾ ಆರತಿ ಮಂಟಪಗಳ ನಿರ್ಮಾಣಕ್ಕೆ ಚಾಲನೆ ನೀಡಲಾಗುವುದು ಎಂದರು.

ತುಂಗಾ ಆರತಿ ಮಂಟಪಗಳ ನಿರ್ಮಾಣ ಹರಿಹರ ಪಂಚಮಸಾಲಿ ಪೀಠದ ವಚನಾನಂದ ಸ್ವಾಮೀಜಿಯವರ ಕನಸು. ಅವರೇ ಕಟ್ಟಡಗಳ ವಿನ್ಯಾಸ ಮತ್ತು ಯೋಜನಾ ವರದಿ ಸಿದ್ಧಪಡಿಸಿ, ಸರ್ಕಾರಕ್ಕೆ ಸಲ್ಲಿಸಿದ್ದರು. ಅವರ ಕೋರಿಕೆಯಂತೆ ₹ 30 ಕೋಟಿ ವೆಚ್ಚದಲ್ಲಿ



ಹರಿಹರದ ಪಂಚಮಸಾಲಿ ಪೀಠದ ನೇತೃತ್ವದಲ್ಲಿ ನಡೆಯುವ ಹರ ಜಾತ್ರೆ ಕುರಿತ ಸಿ.ಡಿ ಯನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಗುರುವಾರ ಬೆಂಗಳೂರಿನಲ್ಲಿ ಬಿಡುಗಡೆ ಮಾಡಿದರು. ಹರಿಹರ ಪಂಚಮಸಾಲಿ ಪೀಠದ ವಚನಾನಂದ ಸ್ವಾಮೀಜಿ, ಸಚಿವರಾದ ಡಾ.ಸಿ.ಎನ್‌. ಅಶ್ವತ್ಥನಾರಾಯಣ, ಮುರುಗೇಶ ಆರ್‌. ನಿರಾಣಿ, ಶಂಕರಪಾಟೀಲ ಮುನೇನಕೊಪ್ಪ ಇದ್ದರು

ಕಾಮಗಾರಿ ಕೈಗೆತ್ತಿಕೊಳ್ಳಲು ನಿರ್ಧರಿಸಲಾಗಿದೆ ಎಂದು ಹೇಳಿದರು.

ಹರ ಜಾತ್ರೆ ವರ್ಷದಿಂದ ವರ್ಷಕ್ಕೆ ಜನಪ್ರಿಯವಾಗುತ್ತಿದೆ. ಈ ಜಾತ್ರೆಯ ಮೂಲಕ ಸಂಸ್ಕೃತಿಯನ್ನು ಉಳಿಸುವ ಕೆಲಸ ನಡೆಯುತ್ತಿದೆ. ಮಠದ ಶೈಕ್ಷಣಿಕ ಮತ್ತು ಧಾರ್ಮಿಕ ಕೆಲಸಗಳಿಗೂ ಸರ್ಕಾರ ಬೆಂಬಲ ನೀಡಲಿದೆ ಎಂದು ಮುಖ್ಯಮಂತ್ರಿ ತಿಳಿಸಿದರು.

ನ್ಯಾಯ ಒದಗಿಸಲು ಮಾರ್ಗದರ್ಶನ: ‘ವಚನಾನಂದ ಸ್ವಾಮೀಜಿ ಪಂಚಮಸಾಲಿ ಸಮುದಾಯಕ್ಕೆ ನ್ಯಾಯ ಒದಗಿಸಲು ನಿರಂತರವಾಗಿ ಶ್ರಮಿಸುತ್ತಿದ್ದಾರೆ. ಕಿತ್ತೂರಿನ ಅಭಿವೃದ್ಧಿಗಾಗಿ ಪಾದಯಾತ್ರೆ ನಡೆಸಿದ್ದರು. ಪಂಚಮಸಾಲಿ ಸಮುದಾಯಕ್ಕೆ ಹಿಂದುಳಿದ ವರ್ಗಗಳ ಪ್ರವರ್ಗ 2–ಎ ಅಡಿಯಲ್ಲಿ ಮೀಸಲಾತಿ ನೀಡಬೇಕೆಂಬ ಬೇಡಿಕೆಯನ್ನು ಕಾನೂನಾತ್ಮಕವಾಗಿ ಸರ್ಕಾರದ ಮುಂದೆ ಮಂಡಿಸುತ್ತಿದ್ದಾರೆ’ ಎಂದು ಹೇಳಿದರು.

ಮೀಸಲಾತಿ ಬೇಡಿಕೆ ವಿಚಾರದಲ್ಲಿ ಸ್ವಾಮೀಜಿ ಸಾಕಷ್ಟು ಅಧ್ಯಯನ, ಸಂಶೋಧನೆ ನಡೆಸಿದ್ದಾರೆ. ಅದನ್ನು ಆಧರಿಸಿ ಹಿಂದುಳಿದ ವರ್ಗಗಳ ಆಯೋಗ ಮತ್ತು ನ್ಯಾಯಮೂರ್ತಿ ಸುಭಾಷ್ ಬಿ.ಅಡಿ ಸಮಿತಿಗಳ ಎದುರು ಬೇಡಿಕೆ ಸಲ್ಲಿಸಿದ್ದಾರೆ. ಇವೆಲ್ಲವೂ ಸಮುದಾಯಕ್ಕೆ ನ್ಯಾಯ ಒದಗಿಸುವ ವಿಷಯದಲ್ಲಿ ಮಾರ್ಗದರ್ಶನ ನೀಡಲಿವೆ ಎಂದರು.

ವಚನಾನಂದ ಸ್ವಾಮೀಜಿ, ಸಚಿವರಾದ ಡಾ.ಸಿ.ಎನ್‌. ಅಶ್ವತ್ಥನಾರಾಯಣ, ಮುರುಗೇಶ ನಿರಾಣಿ, ಶಂಕರಪಾಟೀಲ ಮುನೇನಕೊಪ್ಪ ಅವರು ಉಪಸ್ಥಿತರಿದ್ದರು.

ಪ್ರಧಾನಿಯಿಂದ ಗೌರವ ಸಲ್ಲಿಕೆ

ನವದೆಹಲಿ (ಪಿಟಿಐ): ಹೆಲಿಕಾಪ್ಟರ್ ಅಪಘಾತದಲ್ಲಿ ನಿಧರಾದ ಸೇನಾಪಡೆಗಳ ಮುಖ್ಯಸ್ಥ ಬಿಪಿನ್ ರಾವತ್, ಅವರ ಪತ್ನಿ ಮಧುಲಿಕಾ ರಾವತ್, ಬ್ರಿಗೇಡಿಯರ್ ಲಖ್ವಿಂದರ್ ಸಿಂಗ್ ಲಿದ್ದರ್ ಮತ್ತು ಉಳಿದ 10 ಮಂದಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಗುರುವಾರ ಇಲ್ಲಿ ಗೌರವ ಸಲ್ಲಿಸಿದರು.

ಅಪಘಾತದಲ್ಲಿ ಮೃತಪಟ್ಟ 13 ಜನರ ಶವಗಳನ್ನು ಸೇನಾ ವಿಮಾನದಲ್ಲಿ ಗುರುವಾರ ದೆಹಲಿಯ ಪಾಲಂ ವಿಮಾನ ನಿಲ್ದಾಣಕ್ಕೆ ತರಲಾಯಿತು. ಸೂಲೂರು ವಿಮಾನ ನಿಲ್ದಾಣದಿಂದ ವಾಯು ಪಡೆಯ ಸಿ–130ಜೆ ಸರಕುಸಾಗಣೆ ವಿಮಾನದ ಮೂಲಕ ಶವಗಳನ್ನು ಇಲ್ಲಿಗೆ ತರಲಾಯಿತು. ನಿಲ್ದಾಣದ ಹ್ಯಾಂಗರ್‌ನಲ್ಲಿ ಮೃತರ ಶವಪೆಟ್ಟಿಗೆಗಳನ್ನು ಇರಿಸಲಾಗಿದೆ.

ಪ್ರಧಾನಿ ಮೋದಿ, ರಕ್ಷಣಾ ಸಚಿವ ರಾಜನಾಥ್ ಸಿಂಗ್, ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ಢೊಬಾಲ್, ಸೇನಾ ಮುಖ್ಯಸ್ಥ ಎಂ.ಎಂ.ನರವಣೆ, ನೌಕಾಪಡೆ ಮುಖ್ಯಸ್ಥ ಅಡ್ಮಿರಲ್ ಆರ್.ಹರಿಕುಮಾರ್ ಮತ್ತು ವಾಯು ಪಡೆಯ ಮುಖ್ಯಸ್ಥ ಏರ್ ಚೀಫ್ ಮಾರ್ಷಲ್ ಎ.ವಿ.ಆರ್.ಚೌಧರಿ ಮತ್ತು ರಕ್ಷಣಾ ಕಾರ್ಯದರ್ಶಿ ಅಜಯ್ ಕುಮಾರ್ ಅವರು ಮೃತರಿಗೆ ಗೌರವ ಸಲ್ಲಿಸಿದರು. ಮೃತರ ಕುಟುಂಬದ ಸದಸ್ಯರು ಸ್ಥಳದಲ್ಲಿ ಹಾಜರಿದ್ದರು.

ಇಂದು ಅಂತ್ಯಕ್ರಿಯೆ

ಬಿಪಿನ್ ರಾವತ್, ಅವರ ಪತ್ನಿ ಮಧುಲಿಕಾ ರಾವತ್ ಮತ್ತು ಬ್ರಿಗೇಡಿಯರ್ ಲಖ್ವಿಂದರ್ ಸಿಂಗ್ ಲಿದ್ದರ್ ಅವರ ಅಂತ್ಯಸಂಸ್ಕಾರವನ್ನು ಇಲ್ಲಿನ ಬ್ರಾರ್ ಸ್ಕ್ವೇರ್ ಚಿತಾಗಾರದಲ್ಲಿ ಶುಕ್ರವಾರ ನಡೆಸಲಾಗುತ್ತದೆ.

ಅದಕ್ಕೂ ಮುನ್ನ ರಾವತ್ ದಂಪತಿಯ ಶವಗಳನ್ನು ಇಲ್ಲಿನ ಕಾಮರಾಜ್ ಮಾರ್ಗದಲ್ಲಿರುವ ಅವರ ನಿವಾಸ ಎದುರು ಬೆಳಿಗ್ಗೆ 11ರಿಂದ ಮಧ್ಯಾಹ್ನ 12.30ರವರೆಗೆ ಸಾರ್ವಜನಿಕರ ಅಂತಿಮ ದರ್ಶನಕ್ಕೆ ಇಡಲಾಗುತ್ತದೆ. 12.30ರಿಂದ 1.30ರವರೆಗೆ ಸೇನಾ ಸಿಬ್ಬಂದಿಯ ಅಂತಿಮ ದರ್ಶನಕ್ಕೆ ಅವಕಾಶ ಮಾಡಿಕೊಡಲಾಗುತ್ತದೆ. ಮಧ್ಯಾಹ್ನ ಎರಡರ ನಂತರ ಚಿತಾಗಾರದತ್ತ ಮೆರವಣಿಗೆ ಆರಂಭವಾಗಲಿದೆ. ಸಂಜೆ 4ಕ್ಕೆ ಅಂತ್ಯಸಂಸ್ಕಾರ ನೆರವೇರಿಸಲಾಗುತ್ತದೆ. ಬ್ರಿಗೇಡಿಯರ್ ಲಖ್ವಿಂದರ್ ಸಿಂಗ್ ಲಿದ್ದರ್ ಅವರ ಅಂತ್ಯಸಂಸ್ಕಾರವನ್ನು ಬೆಳಿಗ್ಗೆ 9ಕ್ಕೆ ನೆರವೇರಿಸಲಾಗುತ್ತದೆ.

ವಿವಿಧ ಸ್ಥಳಗಳಲ್ಲಿ ಹೂಮಳೆ

ಚೆನ್ನೈ: ಬಿಪಿನ್ ರಾವತ್ ಮತ್ತು ಇತರರ ಮೃತದೇಹಗಳನ್ನು ಹೊತ್ತ ವಾಹನಗಳು ಸಾಗಿದ ಊಟಿ–ಕೊಯಮತ್ತೂರು ರಸ್ತೆಯ ವಿವಿಧ ಸ್ಥಳಗಳಲ್ಲಿ ಜನರು ರಸ್ತೆ ಬದಿ ಸಾಲಾಗಿ ನಿಂತು ಹೂವಿನ ಪಕಳೆಗಳನ್ನು ಎಸೆದರು.

ರಸ್ತೆಯ ಎರಡೂ ಬದಿಗಳಲ್ಲಿ ನಿಂತಿದ್ದ ಜನರು ‘ಭಾರತ್ ಮಾತಾ ಕೀ ಜೈ’ ಮತ್ತು ‘ವೀರ ವಣಕ್ಕಂ’ (ಧೀರ ನಮನ) ಎಂಬ ಘೋಷಣೆ ಕೂಗಿದರು. ಶಾಲಾ ವಿದ್ಯಾರ್ಥಿಗಳು ರಾಷ್ಟ್ರ ಧ್ವಜ ಹಿಡಿದು ನಿಂತಿದ್ದರು.

ವ್ಯಾನ್ ಅಪಘಾತ: ಮೃತ ದೇಹ ಒಯ್ಯುತ್ತಿದ್ದ ಒಂದು ವಾಹನವು ಮೆಟ್ಟುಪಾಳ್ಯಂನಲ್ಲಿ ಅಪಘಾತಕ್ಕೆ ಒಳಗಾಯಿತು. ಈ ವ್ಯಾನ್ ಮುಂದಿದ್ದ ಇನ್ನೊಂದು ವ್ಯಾನ್‌ಗೆ ಡಿಕ್ಕಿ ಹೊಡೆಯಿತು. ತಕ್ಷಣವೇ, ಆ ವ್ಯಾನ್‌ನಲ್ಲಿ ಇದ್ದ ಮೃತದೇಹವನ್ನು ಬೇರೊಂದು ವಾಹನಕ್ಕೆ ಸ್ಥಳಾಂತರ ಮಾಡಲಾಯಿತು. ಈ ವಾಹನದ ಬೆಂಗಾವಲಿಗೆ ಇದ್ದ ವಾಹನವು ಕೂಡ ಅಪಘಾತಕ್ಕೆ ಒಳಗಾಯಿತು. ಅದರಲ್ಲಿ ಇದ್ದ ಐವರು ಪೊಲೀಸರಿಗೆ ಸಣ್ಣಪುಟ್ಟ ಗಾಯಗಳಾಗಿವೆ.

ನಕಲಿ ಅಂಕಪಟ್ಟಿ ಬಳಸಿದ್ದ ಬಿಜೆಪಿ ಶಾಸಕ ಅನರ್ಹ, 5 ವರ್ಷ ಜೈಲು ಶಿಕ್ಷೆ

ಪ್ರಜಾವಾಣಿ ವಾರ್ತೆ

ಲಖನೌ: 28 ವರ್ಷಗಳ ಹಳೆಯ ಪ್ರಕರಣದಲ್ಲಿ ಅಯೋಧ್ಯೆಯ ಗೋಸಾಯಿಗಂಜ್‌ನ ಬಿಜೆಪಿ ಶಾಸಕ ಉತ್ತರ ಪ್ರದೇಶ ವಿಧಾನಸಭೆಯ ಸದಸ್ಯತ್ವ ಕಳೆದುಕೊಂಡಿದ್ದಾರೆ.

ಇಂದ್ರ ಪ್ರತಾಪ್ ಅಲಿಯಾಸ್ ಖಬ್ಬು ತಿವಾರಿ, ಕಾಲೇಜು ಪ್ರವೇಶಾತಿಗಾಗಿ ನಕಲಿ ಅಂಕಪಟ್ಟಿ ಬಳಸಿದ್ದಕ್ಕಾಗಿ ವಿಶೇಷ ನ್ಯಾಯಾಲಯವು ಐದು ವರ್ಷಗಳ ಜೈಲು ಶಿಕ್ಷೆಯನ್ನು ವಿಧಿಸಿದೆ.

ಉತ್ತರ ಪ್ರದೇಶದ ವಿಧಾನಸಭೆಯ ಸದಸ್ಯತ್ವದಿಂದಲೂ ಅನರ್ಹಗೊಳಿಸಲಾಗಿದೆ ಎಂದು ವಿಧಾನಸಭಾ ಪ್ರಧಾನ ಕಾರ್ಯದರ್ಶಿ ಪ್ರದೀಪ್ ಕುಮಾರ್ ದುಬೆ ಹೊರಡಿಸಿರುವ ಅಧಿಸೂಚನೆಯಲ್ಲಿ ತಿಳಿಸಲಾಗಿದೆ.

ಅಯೋಧ್ಯೆಯ ಸಂಸದ/ಶಾಸಕ ವಿಶೇಷ ನ್ಯಾಯಾಲಯದ ನ್ಯಾಯಧೀಶ ಪೂಜಾ ಸಿಂಗ್ ಅಕ್ಟೋಬರ್ 18ರಂದು ತೀರ್ಪು ನೀಡಿದ್ದರು. ನಂತರ ತಿವಾರಿ ಅವರನ್ನು ಕಸ್ಟಡಿಗೆ ತೆಗೆದುಕೊಂಡು ಜೈಲಿಗೆ ಕಳುಹಿಸಲಾಯಿತು. ನ್ಯಾಯಾಲಯವು ಆತನಿಗೆ ₹8,000 ರೂಪಾಯಿಗಳ ದಂಡವನ್ನು ವಿಧಿಸಿದೆ.

1992ರಲ್ಲಿ ಅಯೋಧ್ಯೆ ಸಾಕೇತ್ ಪದವಿ ಕಾಲೇಜಿನ ಪ್ರಾಂಶುಪಾಲರಾಗಿದ್ದ ಯದುವಂಶ್ ರಾಮ್ ತ್ರಿಪಾಠಿ ತಿವಾರಿ ವಿರುದ್ಧ ನಕಲಿ ಅಂಕಪಟ್ಟಿ ಬಳಕೆಗೆ ರಾಮ ಜನ್ಮಭೂಮಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು.

ಹಣ ಅಕ್ರಮ ವರ್ಗಾವಣೆ: ಸುಕೇಶ್ ಆಪ್ತನ ಸೆರೆ

ನವದೆಹಲಿ: ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ವಂಚನೆ ಆರೋಪ ಎದುರಿಸುತ್ತಿರುವ ಸುಕೇಶ್ ಚಂದ್ರಶೇಖರ್ ಅವರ ಆಪ್ತ ಪಿಂಕಿ ಇರಾನಿ ಅವರನ್ನು ಜಾರಿ ನಿರ್ದೇಶನಾಲಯ(ಇ.ಡಿ) ಗುರುವಾರ ಬಂಧಿಸಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಎರಡನೇ ದಿನವೂ ಬಾಲಿವುಡ್ ನಟಿ ಜಾಕ್ವೆಲಿನ್ ಫರ್ನಾಂಡಿಸ್ ಅವರನ್ನು ವಿಚಾರಣೆಗೆ ಒಳಪಡಿಸಿರುವುದಾಗಿ ಇ.ಡಿ ಅಧಿಕಾರಿಗಳು ತಿಳಿಸಿದ್ದಾರೆ.

‘ಬಯಸಿದ್ದನ್ನು ತಿನ್ನಲು ಅಡ್ಡಿ ಬೇಡ’

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ‘ಏನು ತಿನ್ನಬೇಕು, ತಿನ್ನಬಾರದು ಎಂಬುದು ಅವರವರ ಇಷ್ಟಕ್ಕೆ ಬಿಟ್ಟಿದ್ದು. ತಾವು ಬಯಸಿದ್ದನ್ನು ತಿನ್ನಲು ಜನರಿಗೆ ತಡೆಯೊಡ್ಡಬೇಡಿ. ಕೆಲವು ಜನರ ಅಹಂ ಸಂತೃಪ್ತಿಗೊಳಿಸಬೇಡಿ’ ಎಂದು ಗುಜರಾತ್ ಹೈಕೋರ್ಟ್ ಹೇಳಿದೆ.

ಅಹಮದಾಬಾದ್ ಸ್ಥಳೀಯ ಆಡಳಿತವು ಮೊಟ್ಟೆ ಮತ್ತು ಮಾಂಸ ಮಾರಾಟ ಮಾಡುತ್ತಿದ್ದ ಬೀದಿಬದಿ ವ್ಯಾಪಾರಿಗಳನ್ನು ಗುರಿಯಾಗಿಸಿ ತೊಂದರೆ ನೀಡುತ್ತಿರುವ ಬಗ್ಗೆ ವ್ಯಾಪಾರಿಗಳು ಕೋರ್ಟ್ ಮೊರೆ ಹೋಗಿದ್ದರು.

ಕೆಲವರ ಅಹಂ ಅನ್ನು ತಣಿಸಲು ಅಥವಾ ನಿರ್ದಿಷ್ಟ ಪದಾರ್ಥಗಳ ವಿರುದ್ಧ ಆಡಳಿತಾರೂಢ ಪಕ್ಷಗಳು ನಿರ್ಣಯ ಕೈಗೊಂಡಿವೆ ಎಂಬ ಕಾರಣಕ್ಕೆ ವ್ಯಾಪಾರಿಗಳಿಗೆ ತೊಂದರೆಯಾಗುವ ಯಾವುದೇ ನಿರ್ಧಾರ ಕೈಗೊಳ್ಳಬಾರದು ಎಂದು ಸ್ಥಳೀಯ ಆಡಳಿತಕ್ಕೆ ಕೋರ್ಟ್ ತಾಕೀತು ಮಾಡಿದೆ.

‘ನಿಮ್ಮ ಸಮಸ್ಯೆ ಏನು? ಮಾಂಸಾಹಾರ ನಿಮಗೆ ಇಷ್ಟವಾಗದಿದ್ದರೆ ಅದು ನಿಮ್ಮ ಅನಿಸಿಕೆ. ನಾನು ಹೊರಗೆ ಏನು ತಿನ್ನಬೇಕೆಂಬುದನ್ನು ನೀವು ಹೇಗೆ ನಿರ್ಧರಿಸುವಿರಿ. ಡಯಾಬಿಟಿಸ್ ಬರುತ್ತದೆ ಎಂದು ನಾಳೆ ನೀವು ಕಬ್ಬಿನ ಹಾಲು ಕುಡಿಯಬಾರದು ಎಂದು ಹೇಳಬಹುದು ಅಥವಾ ಕಾಫಿ ಆರೋಗ್ಯಕ್ಕೆ ಹಾನಿಕರ ಎನ್ನಬಹುದು ಎಂದು ನ್ಯಾಯಮೂರ್ತಿ ಬಿರೇನ್ ವೈಷ್ಣವ್ ಅವರು ಹೇಳಿದರು.

‘ಇದಕ್ಕೆ ನಿಮ್ಮ ಪ್ರತಿಕ್ರಿಯೆ ಏನು’ ಎಂದು ರಾಜ್ಯ ಸರ್ಕಾರ ಪ್ರತಿನಿಧಿಸಿದ್ದ ಸಹಾಯಕ ಪಬ್ಲಿಕ್ ಪ್ರಾಸಿಕ್ಯೂಟರ್ ಅವರನ್ನು ಕೇಳಿದರು. ಅಲ್ಲದೆ ಅಹಮದಾಬಾದ್ ನಗರಪಾಲಿಕೆಯ ಕಮಿಷನರ್ ಅವರು ಕೋರ್ಟ್‌ಗೆ ಹಾಜರಾಗಬೇಕು ಎಂದು ಸೂಚಿಸಿದರು.

ಸಂಕ್ಷಿಪ್ತ ಸುದ್ದಿ

ಮಸೂದೆಗೆ ಅಂಗೀಕಾರ

ನವದೆಹಲಿ: ಕೇಂದ್ರೀಯ ತನಿಖಾ ದಳ (ಸಿಬಿಐ) ಮತ್ತು ಜಾರಿ ನಿರ್ದೇಶನಾಲಯದ (ಇ.ಡಿ) ನಿರ್ದೇಶಕರ ಅಧಿಕಾರಾವಧಿಯನ್ನು ಎರಡು ವರ್ಷಗಳಿಂದ ಗರಿಷ್ಠ ಐದು ವರ್ಷಗಳವರೆಗೆ ವಿಸ್ತರಿಸುವ ಎರಡು ಮಸೂದೆಗಳನ್ನು ಗುರುವಾರ ಲೋಕಸಭೆಯಲ್ಲಿ ಧ್ವನಿ ಮತದಿಂದ ಅಂಗೀಕರಿಸಲಾಯಿತು.

ಇದಕ್ಕೂ ಮೊದಲು ವಿರೋಧ ಪಕ್ಷಗಳು ಮಸೂದೆ ವಿರೋಧಿಸಿ ಪ್ರತಿಭಟನೆ ನಡೆಸಿದ್ದವು, ಕಾಂಗ್ರೆಸ್ ಸದಸ್ಯರು ಸಭಾತ್ಯಾಗ ಮಾಡಿದರು.

ತೀರ್ಪು ಕಾಯ್ದಿರಿಸಿದ ‘ಸುಪ್ರೀಂ’

ನವದೆಹಲಿ: 2002ರ ಗುಜರಾತ್ ಗಲಭೆ ಪ್ರಕರಣದಲ್ಲಿ ಅಂದಿನ ಮುಖ್ಯಮಂತ್ರಿ ನರೇಂದ್ರ ಮೋದಿ ಸೇರಿದಂತೆ ಹಲವರಿಗೆ ವಿಶೇಷ ತನಿಖಾ ಸಂಸ್ಥೆ (ಎಸ್‌ಐಟಿ) ಕ್ಲೀನ್‌ಚಿಟ್ ನೀಡಿರುವುದನ್ನು ಪ್ರಶ್ನಿಸಿ, ಹತ್ಯೆಗೀಡಾದ ಕಾಂಗ್ರೆಸ್ ಮುಖಂಡ ಎಹ್ಸಾನ್ ಜಾಫ್ರಿ ಅವರ ಪತ್ನಿ ಜಾಕಿಯಾ ಜಾಫ್ರಿ ಸಲ್ಲಿಸಿದ ಅರ್ಜಿಯ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್ ತೀರ್ಪನ್ನು ಕಾಯ್ದಿರಿಸಿದೆ.

ಕೋರ್ಟ್‌ನಲ್ಲಿ ಸ್ಫೋಟ

ನವದೆಹಲಿ: ಇಲ್ಲಿನ ರೋಹಿಣಿ ಜಿಲ್ಲಾ ನ್ಯಾಯಾಲಯದ ಕೊಠಡಿ ಸಂಖ್ಯೆ 102 ರಲ್ಲಿ ಗುರುವಾರ ಬೆಳಿಗ್ಗೆ ಲಘು ತೀವ್ರತೆಯ ಸ್ಫೋಟ ಸಂಭವಿಸಿದ್ದು, ಒಬ್ಬರು ಗಾಯಗೊಂಡಿದ್ದಾರೆ.

ಲ್ಯಾಪ್‌ಟಾಪ್ ಬ್ಯಾಗ್ ಸ್ಫೋಟಗೊಂಡಿರುವ ಸಾಧ್ಯತೆ ಇದೆ ಎಂದು ದೆಹಲಿ ಪೊಲೀಸರು ತಿಳಿಸಿದ್ದಾರೆ. ಸ್ಫೋಟದ ಕಾರಣ ರೋಹಿಣಿ ಕೋರ್ಟ್ ಆವರಣದಲ್ಲಿ ಭದ್ರತೆಯನ್ನು ಹೆಚ್ಚಿಸಲಾಗಿದೆ.

ಮುಂದಿನ ವರ್ಷ ಮಾನವರಹಿತ ಬಾಹ್ಯಾಕಾಶ ಯಾನ

ನವದೆಹಲಿ: ‘2022ರ ಅಂತ್ಯದ ವೇಳೆಗೆ ಭಾರತವು ಎರಡು ಮಾನವರಹಿತ ಬಾಹ್ಯಾಕಾಶ ಯಾನ ಯೋಜನೆಗಳನ್ನು ಹಮ್ಮಿಕೊಳ್ಳಲಿದೆ’ ಎಂದು ಬಾಹ್ಯಾಕಾಶ ಖಾತೆ ರಾಜ್ಯ ಸಚಿವ ಜಿತೇಂದ್ರ ಸಿಂಗ್ ಗುರುವಾರ ಹೇಳಿದ್ದಾರೆ.

ಬಾಹ್ಯಾಕಾಶ ಯೋಜನೆಗಳ ಬಗ್ಗೆ ರಾಜ್ಯಸಭೆಯಲ್ಲಿ ಮಾಹಿತಿ ನೀಡಿದ ಅವರು, 2022ರ ವೇಳೆಗೆ ಶುಕ್ರಗ್ರಹದ ಬಳಿಗೆ ಹಾಗೂ 2022–23ರ ವೇಳೆಗೆ ಸೂರ್ಯನ ಕುರಿತು ಅಧ್ಯಯನ ನಡೆಸಲು ಬಾಹ್ಯಾಕಾಶ ನೌಕೆಗಳನ್ನು ಕಳುಹಿಸುವ ಯೋಜನೆಗಳನ್ನು ಹಮ್ಮಿಕೊಳ್ಳುವ ಚಿಂತನೆ ನಡೆಸಲಾಗಿದೆ ಎಂದಿದ್ದಾರೆ.

ಜ. 31ರ ವರೆಗೂ ಅಂತರರಾಷ್ಟ್ರೀಯ ವಿಮಾನ ಸೇವೆ ರದ್ದು

ನವದೆಹಲಿ: ಕೊರೊನಾ ವೈರಸ್‌ನ ರೂಪಾಂತರ ತಳಿ ಓಮೈಕ್ರಾನ್ ಸೋಂಕಿನ ಕಳವಳ ಹೆಚ್ಚುತ್ತಿರುವ ಬೆನ್ನಲ್ಲೇ ಭಾರತವು ಅಂತರರಾಷ್ಟ್ರೀಯ ಪ್ರಯಾಣಿಕ ವಿಮಾನಗಳ ಸೇವೆಯನ್ನು ಮುಂದಿನ ವರ್ಷ ಜನವರಿ 31ರ ವರೆಗೂ ರದ್ದುಪಡಿಸಿದೆ.

ಡಿಸೆಂಬರ್ 15ರಿಂದ ಅಂತರರಾಷ್ಟ್ರೀಯ ವಿಮಾನ ಸೇವೆಗಳಿಗೆ ಮರುಚಾಲನೆ ನೀಡುವ ನಿರ್ಧಾರವನ್ನು ನಾಗರಿಕ ವಿಮಾನಯಾನ ನಿರ್ದೇಶನಾಲಯವು (ಡಿಜಿಸಿಎ) ಡಿಸೆಂಬರ್ 1ರಂದೇ ಮುಂದೂಡಿತ್ತು.

ಇಂಡಿಯನ್ ಸೂಪರ್ ಲೀಗ್: ಜೆಮ್ಶೆಡ್‌ಪುರ ಎಫ್‌ಸಿಗೆ ನಿರಾಶೆ; ಇಂದು ಒಡಿಶಾ–ನಾರ್ತ್ ಈಸ್ಟ್ ಮುಖಾಮುಖಿ

ಮುಂಬೈ ಸಿಟಿಗೆ ಹ್ಯಾಟ್ರಿಕ್ ಗೆಲುವು

ಫತೋರ್ಡ, ಗೋವಾ (ಪಿಟಿಐ): ಅಮೋಘ ಲಯದಲ್ಲಿರುವ ಮುಂಬೈ ಸಿಟಿ ಎಫ್‌ಸಿ ತಂಡ ಇಂಡಿಯನ್ ಸೂಪರ್ ಲೀಗ್ ಫುಟ್‌ಬಾಲ್ ಟೂರ್ನಿಯಲ್ಲಿ ಮತ್ತೊಂದು ಭರ್ಜರಿ ಜಯ ಗಳಿಸಿತು. ಬ್ಯಾಂಬೊಲಿಮ್‌ನ ಜವಾಹರಲಾಲ್ ನೆಹರು ಕ್ರೀಡಾಂಗಣದಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ತಂಡ 4–2ರಲ್ಲಿ ಜೆಮ್ಶೆಡ್‌ಪುರ ಎಫ್‌ಸಿಯನ್ನು ಮಣಿಸಿತು. ಇದು ತಂಡದ ಸತತ ಮೂರನೇ ಜಯವಾಗಿದೆ.

ಮೊದಲಾರ್ಧದಲ್ಲೇ ಮೂರು ಗೋಲುಗಳನ್ನು ಗಳಿಸಿ ಮುಂಬೈ ಸಿಟಿ ಮುನ್ನಡೆ ಸಾಧಿಸಿತು. ಮೂರನೇ ನಿಮಿಷದಲ್ಲಿ ಕ್ಯಾಸಿಯೊ ಗ್ಯಾಬ್ರಿಯೆಲ್ ಮೊದಲ ಗೋಲು ಗಳಿಸಿದರು. ಎಡಬದಿಯಿಂದ ಕಾರ್ನರ್ ಕಿಕ್ ತೆಗೆದ ಅಹಮ್ಮದ್ ಜಹೋ ಗೋಲು ಆವರಣದ ಹೊರಗಿದ್ದ ಕ್ಯಾಸಿಯೊಗೆ ಚೆಂಡು ನೀಡಿದರು. ಅವರು ಚೆಂಡಿನೊಂದಿಗೆ ಗೋಲು ಆವರಣಕ್ಕೆ ನುಗ್ಗಿದರು. ನಂತರ ಸುಲಭವಾಗಿ ಗುರಿಯತ್ತ ಒದ್ದರು.

17ನೇ ನಿಮಿಷದಲ್ಲಿ ಬಿಪಿನ್ ಸಿಂಗ್ ಯಶಸ್ಸು ಸಾಧಿಸಿದರು. ಮಿಡ್‌ಫೀಲ್ಡ್ ವಿಭಾಗದಿಂದ ಚೆಂಡಿನೊಂದಿಗೆ ಧಾವಿಸಿದ ಕ್ಯಾಸಿಯೊ ಎದುರಾಳಿ ತಂಡದ ಆವರಣಕ್ಕೆ ತಲುಪುತ್ತಿದ್ದಂತೆ ಬಿಪಿನ್ ಅವರತ್ತ ಕ್ರಾಸ್ ಮಾಡಿದರು. ಅವರು ನಿರಾಯಾಸದಿಂದ ಗೋಲುಪೆಟ್ಟಿಗೆಯೊಳಗೆ ತಳ್ಳಿದರು. ಇಗರ್ ಆಂಗುಲೊ 24ನೇ ನಿಮಿಷದಲ್ಲಿ ಗಳಿಸಿದ ಗೋಲು ತಂಡಕ್ಕೆ 3–0 ಮುನ್ನಡೆ ಗಳಿಸಿಕೊಟ್ಟಿತು. ಈ ಗೋಲಿಗೂ ಕ್ಯಾಸಿಯೊ ನೆರವಾದರು. ಜೆಮ್ಶೆಡ್‌ಪುರದ ಮಿಡ್‌ಫೀಲ್ಡ್ ವಿಭಾಗದ ಆಟಗಾರರನ್ನು ವಂಚಿಸಿ ಚೆಂಡಿನೊಂದಿಗೆ ಸಾಗಿದ ಅವರು ಕೊನೆಗೆ ಇಗರ್ ಆಂಗುಲೊ ಅವರತ್ತ ತಳ್ಳಿದರು.

ಡಿಫೆಂಡರ್ ಎಲಿ ಸಾಬಿಯ ಅವರು ತಡೆಯಲು ಮುಂದಾದರೂ ಫಲ ಕಾಣಲಿಲ್ಲ. ದ್ವಿತೀಯಾರ್ಧದಲ್ಲಿ ಎರಡು ಗೋಲು ಗಳಿಸಿ ಜೆಮ್ಶೆಡ್‌ಪುರ ತಿರುಗೇಟು ನೀಡಲು ಪ್ರಯತ್ನಿಸಿತು. 48ನೇ ನಿಮಿಷದಲ್ಲಿ ಕೋಮಲ್ ತತಾಲ್ ಮತ್ತು 55ನೇ ನಿಮಿಷದಲ್ಲಿ ಎಲಿ ಸಾಬಿಯಾ ಚೆಂಡನ್ನು ಗುರಿ ಮುಟ್ಟಿಸುವಲ್ಲಿ ಯಶಸ್ವಿಯಾದರು. ಮುನ್ನಡೆಯನ್ನು ಉಳಿಸಿಕೊಂಡ ಮುಂಬೈ 70ನೇ ನಿಮಿಷದಲ್ಲಿ ವೈಗರ್ ಕಟಾಟು ಅವರ ಗೋಲಿನೊಂದಿಗೆ ಜಯದ ಅಂತರವನ್ನು ಹೆಚ್ಚಿಸಿದರು.



ಮುಂಬೈ ಪರ ಗೋಲು ಗಳಿಸಿದ ಇಗರ್ ಆಂಗುಲೊ ಅವರನ್ನು ಸಹ ಆಟಗಾರರು ಅಭಿನಂದಿಸಿದರು –ಐಎಸ್‌ಎಲ್ ಚಿತ್ರ

ಒಡಿಶಾ ಎಫ್‌ಸಿ–ನಾರ್ತ್ ಈಸ್ಟ್ ಮುಖಾಮುಖಿ

ಉತ್ತಮ ಸಾಮರ್ಥ್ಯ ತೋರುತ್ತ ಬಂದಿರುವ ಒಡಿಶಾ ಎಫ್‌ಸಿ ಶುಕ್ರವಾರದ ಹಣಾಹಣಿಯಲ್ಲಿ ನಾರ್ತ್ ಈಸ್ಟ್ ಯುನೈಟೆಡ್ ವಿರುದ್ಧ ಸೆಣಸಲಿದೆ. ಸತತ ಎರಡು ಪಂದ್ಯಗಳಲ್ಲಿ ಭಾರಿ ಅಂತರದಿಂದ ಜಯ ಗಳಿಸಿರುವ ಒಡಿಶಾ ಎಫ್‌ಸಿ ಕಳೆದ ಪಂದ್ಯದಲ್ಲಿ ಕೇರಳ ಬ್ಲಾಸ್ಟರ್ಸ್‌ಗೆ ಮಣಿದಿತ್ತು. ಹೀಗಾಗಿ ಗೆಲುವಿನ ಲಯಕ್ಕೆ ಮರಳಲು ತಂಡ ಪ್ರಯತ್ನಿಸಲಿದೆ.

ಕಳೆದ ಬಾರಿ ಒಡಿಶಾ ಪಾಯಿಂಟ್ ಪಟ್ಟಿಯಲ್ಲಿ ಕೊನೆಯ ಸ್ಥಾನದಲ್ಲಿತ್ತು. ಈ ಬಾರಿ ಮೊದಲ ಪಂದ್ಯದಲ್ಲೇ ಬೆಂಗಳೂರು ಎಫ್‌ಸಿಯನ್ನು 3–1ರಲ್ಲಿ ಮಣಿಸಿತ್ತು. ನಂತರ ಎಸ್‌ಸಿ ಈಸ್ಟ್ ಬೆಂಗಾಲ್ ವಿರುದ್ಧ 6–4ರಲ್ಲಿ ಜಯ ಗಳಿಸಿತ್ತು. ಗೆದ್ದು ಪಾಯಿಂಟ್ ಪಟ್ಟಿಯ ಅಗ್ರ ಐದರಲ್ಲಿ ಸ್ಥಾನ ಗಳಿಸುವ ಗುರಿಯೊಂದಿಗೆ ಶುಕ್ರವಾರದ ಪಂದ್ಯದಲ್ಲಿ ಕಣಕ್ಕೆ ಇಳಿಯಲಿದೆ. ಜೊನಾಥಸ್ ಕ್ರಿಸ್ಟಿಯನ್ ಈ ಪಂದ್ಯಕ್ಕೆ ಲಭ್ಯ ಇಲ್ಲ ಎಂದು ಕೋಚ್ ಕಿಕೊ ರಮಿರೆಜ್ ತಿಳಿಸಿದ್ದಾರೆ.

ಮೊದಲ ಮೂರು ಪಂದ್ಯಗಳಲ್ಲಿ ಒಂದರಲ್ಲಿ ಡ್ರಾ ಸಾಧಿಸಿ ಎರಡನ್ನು ಸೋತಿದ್ದ ನಾರ್ತ್ ಈಸ್ಟ್ ಯುನೈಟೆಡ್ ತಂಡ ಹಿಂದಿನ ಪಂದ್ಯದಲ್ಲಿ ಬಲಿಷ್ಠ ಎಫ್‌ಸಿ ಗೋವಾ ವಿರುದ್ಧ ಗೆದ್ದು ಭರವಸೆಯಲ್ಲಿದೆ. ನಾಲ್ಕು ಪಂದ್ಯಗಳಿಂದ ನಾಲ್ಕು ಪಾಯಿಂಟ್ ಕಲೆ ಹಾಕಿರುವ ತಂಡ ಪಾಯಿಂಟ್ ಪಟ್ಟಿಯ ಅಗ್ರ ಐದರಲ್ಲಿ ಸ್ಥಾನ ಗಳಿಸಬೇಕಾದರೆ ಮುಂದಿನ ಪಂದ್ಯಗಳನ್ನು ಗೆಲ್ಲಬೇಕಾಗಿದೆ. ಗಾಯದಿಂದ ಬಳಲುತ್ತಿರುವ ಫೆಡರಿಕೊ ಗಾಲೆಗೊ ಪಂದ್ಯಕ್ಕೆ ಲಭ್ಯ ಇಲ್ಲ.

ಆರಂಭ: ರಾತ್ರಿ 7.30
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್



ಚೆಂಡಿನ ಮೇಲೆ ಹಿಡಿತಕ್ಕಾಗಿ ಎಂಇಜಿ–ಸೆಂಟರ್ ಎಫ್‌ಸಿಯ ಇಮ್ನಾಕುಮ್ (ಎಡ) ಮತ್ತು ಕೊಡಗು ಎಫ್‌ಸಿಯ ಶರತ್‌ಕುಮಾರ್ ಪೈಪೋಟಿ ನಡೆಸಿದರು –ಪ್ರಜಾವಾಣಿ ಚಿತ್ರ

ಈಗಲ್ಸ್ ಜಯಭೇರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೊದಲಾರ್ಧದಲ್ಲೇ ಎರಡು ಗೋಲು ಗಳಿಸಿದ ಬೆಂಗಳೂರು ಈಗಲ್ಸ್ ಎಫ್‌ಸಿ ತಂಡ ಬೆಂಗಳೂರು ಜಿಲ್ಲಾ ಫುಟ್‌ಬಾಲ್ ಸಂಸ್ಥೆ ಆಶ್ರಯದ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್‌ನಲ್ಲಿ ಗೆಲುವು ಗಳಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನ ಗುರುವಾರದ ಪಂದ್ಯದಲ್ಲಿ ಈಗಲ್ಸ್ 2–0ಯಿಂದ ಯಂಗ್ ಚಾಲೆಂಜರ್ಸ್ ಎಫ್‌ಸಿಯನ್ನು ಮಣಿಸಿತು.

ಡೋರ್ಜಿ ವಾಂಫು ಖೊಂಗ್ 15ನೇ ನಿಮಿಷದಲ್ಲಿ ಮತ್ತು ಕ್ಲೀಟಸ್ ಡೊಮಿನಿಕ್ ಜೇಕಬ್ 36ನೇ ನಿಮಿಷದಲ್ಲಿ ಗೋಲು ಗಳಿಸಿದರು.

ಎಂಇಜಿ–ಸೆಂಟರ್ ಎಫ್‌ಸಿ ಹಾಗೂ ಕೊಡಗು ಎಫ್‌ಸಿ ನಡುವಿನ ಪಂದ್ಯ 2–2 ಗೋಲುಗಳಿಂದ ಡ್ರಾ ಆಯಿತು. ಎಂಇಜಿ ಪರವಾಗಿ ರೋಹಿತ್ ಸಿ.ಎಂ (64ನೇ ನಿಮಿಷ) ಮತ್ತು ಅರ್ಜುನ್ ಮಧು (71ನೇ ನಿ) ಗೋಲು ಗಳಿಸಿದರೆ ಸಂಜಯ್ ಭುಟಿಯಾ (5ನೇ ನಿ) ಮತ್ತು ವಿನು ಎಚ್.ಆರ್ (32ನೇ ನಿ) ಚೆಂಡನ್ನು ಗುರಿ ಮುಟ್ಟಿಸಿದರು.

ಥಾಂಕೋಸ್ ಸ್ಟೂಡೆಂಟ್ಸ್ ಯೂನಿಯನ್ ಎಫ್‌ಸಿ ಮತ್ತು ಬೆಂಗಳೂರು ಯುನೈಟೆಡ್ ಎಫ್‌ಸಿ ನಡುವಿನ ಪಂದ್ಯವೂ 2–2ರಲ್ಲಿ ಡ್ರಾ ಆಯಿತು. ಸುಬಿನ್ ರಾಜ್ (35ನೇ ನಿ), ಸುಜಿತ್ ಕುಮಾರ್ (75ನೇ ನಿ) ಥಾಂಕೋಸ್ ಪರವಾಗಿ, ಗಯ್ ಹೆರ್ಮನ್ ಅಟಿಮೆಲೆ (26, 31ನೇ ನಿ) ಬೆಂಗಳೂರು ಯುನೈಟೆಡ್ ಪರವಾಗಿ ಗೋಲು ಗಳಿಸಿದರು.

ಎಲ್‌ಎಲ್‌ಸಿಗೆ ಅಮಿತಾಭ್ ರಾಯಭಾರಿ

ಬೆಂಗಳೂರು: ನಟ ಅಮಿತಾಬ್ ಬಚ್ಚನ್ ನಿವೃತ್ತ ಅಂತರರಾಷ್ಟ್ರೀಯ ಕ್ರಿಕೆಟ್ ಆಟಗಾರರನ್ನೊಳಗೊಂಡ ಲೆಜೆಂಡ್ಸ್ ಲೀಗ್ ಕ್ರಿಕೆಟ್‌ನ ರಾಯಭಾರಿಯಾಗಿದ್ದಾರೆ. ಅವರೊಂದಿಗೆ ಒಪ್ಪಂದ ಮಾಡಿಕೊಂಡಿರುವುದಾಗಿ ಲೀಗ್ ಆಡಳಿತ ಪ್ರಕಟಣೆಯಲ್ಲಿ ತಿಳಿಸಿದೆ. ಲೀಗ್ ಬಗ್ಗೆ ಪ್ರತಿಕ್ರಿಯಿಸಿರುವ ಅಮಿತಾಬ್ 'ಹಳೆಯ ನೆನಪುಗಳನ್ನು ಮೆಲುಕು ಹಾಕಲು ಇದು ಉತ್ತಮ ವೇದಿಕೆಯಾಗಲಿದ್ದು ಪಂದ್ಯಗಳನ್ನು ವೀಕ್ಷಿಸಲು ಕಾತರನಾಗಿದ್ದೇನೆ' ಎಂದಿದ್ದಾರೆ. ಭಾರತ, ಏಷ್ಯಾ ಮತ್ತು ವಿಶ್ವ ಇತರೆ ತಂಡಗಳ ನಡುವೆ ನಡೆಯಲಿರುವ ಲೀಗ್‌ನ ಪಂದ್ಯಗಳಿಗೆ ಒಮನ್‌ನ ಅಲ್ ಅಮೆರತ್ ಕ್ರೀಡಾಂಗಣ ಮುಂದಿನ ವರ್ಷದ ಜನವರಿಯಲ್ಲಿ ಆತಿಥ್ಯ ನೀಡಲಿದೆ.



ಅಮಿತಾಬ್ ಬಚ್ಚನ್

ಬಾಕ್ಸಿಂಗ್: ರಾಷ್ಟ್ರೀಯ ಶಿಬಿರಕ್ಕೆ ಮೇರಿ, ಪಂಘಾಲ್ ಇಲ್ಲ

ನವದೆಹಲಿ (ಪಿಟಿಐ): ಆರು ಬಾರಿಯ ವಿಶ್ವ ಚಾಂಪಿಯನ್ ಎಂ.ಸಿ. ಮೇರಿ ಕೋಮ್ ಮತ್ತು ಏಷ್ಯನ್ ಗೇಮ್ಸ್ ಚಿನ್ನದ ಪದಕ ವಿಜೇತ ಅಮಿತ್ ಪಂಘಾಲ್ ಅವರನ್ನು ರಾಷ್ಟ್ರೀಯ ಬಾಕ್ಸಿಂಗ್ ಶಿಬಿರಕ್ಕೆ ಆಯ್ಕೆ ಮಾಡಿಲ್ಲ.

ಇದೇ 11ರಿಂದ 13 ದಿನಗಳ ಶಿಬಿರ ನಡೆಯಲಿದೆ. ಪುರುಷರ ಶಿಬಿರದಲ್ಲಿ 52 ಬಾಕ್ಸರ್‌ಗಳು ಭಾಗವಹಿಸುವರು. ಪಟಿಯಾಲದ ಎನ್‌ಐಎಸ್‌ನಲ್ಲಿ ಶಿಬಿರ ನಡೆಯುವುದು.

ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸಿದ್ದ ಮನೀಷ್ ಕೌಶಿಕ್, ಆಶಿಶ್ ಚೌಧರಿ, ವಿಕಾಶ್ ಕೃಷ್ಣನ್ ಮತ್ತು ಸತೀಶ್ ಕುಮಾರ್ ಕೂಡ ಶಿಬಿರಕ್ಕೆ ಆಯ್ಕೆಯಾಗಿಲ್ಲ. ವಿಕಾಸ್ ಭುಜದ ಗಾಯದಿಂದ ಬಳಲುತ್ತಿದ್ದಾರೆ. ಅವರಿಗೆ ಶಸ್ತ್ರಚಿಕಿತ್ಸೆಯ ಅಗತ್ಯವಿದೆ.

ಮಹಿಳೆಯರ ಶಿಬಿರವು ಹರಿಯಾಣದ ರೋಹತಕ್‌ನಲ್ಲಿರುವ ಭಾರತೀಯ ಕ್ರೀಡಾ ಪ್ರಾಧಿಕಾರದಲ್ಲಿ ನಡೆಯಲಿದೆ. 49 ಬಾಕ್ಸರ್‌ಗಳು ಭಾಗವಹಿಸಲಿದ್ದಾರೆ. ಟೋಕಿಯೊ ಒಲಿಂಪಿಕ್ಸ್ ಕಂಚಿನ ಪದಕ ವಿಜೇತರಾದ ಲವ್ಲಿನಾ ಬೊರ್ಗೊಹೈನ್ (70ಕೆಜಿ), ಮಾಜಿ ಜೂನಿಯರ್ ವಿಶ್ವ ಚಾಂಪಿಯನ್ ನಿಖತ್ ಝರೀನ್ (52ಕೆಜಿ) ಮತ್ತು ಏಷ್ಯನ್ ಚಾಂಪಿಯನ್ ಪೂಜಾರಾಣಿ (81ಕೆಜಿ) ಶಿಬಿರದಲ್ಲಿದ್ದಾರೆ. ಯೂತ್ ವಿಶ್ವ ಚಾಂಪಿಯನ್ ಅರುಂಧತಿ ಚೌಧರಿ ಕೂಡ ಸ್ಥಾನ ಪಡೆದಿದ್ದಾರೆ. ಆದರೆ ಮೇರಿ ಕೋಮ್ ಅವರನ್ನು ಆಯ್ಕೆ ಮಾಡಿಲ್ಲ.

ಈ ಕುರಿತು ಪ್ರತಿಕ್ರಿಯಿಸಿದ ಕೋಮ್, 'ಸದ್ಯ ನಾನು ಮನೆಯಲ್ಲಿಯೇ ಅಭ್ಯಾಸ ಮಾಡುತ್ತಿದ್ದೇನೆ. ನಮ್ಮ ತಂಡದೊಂದಿಗೆ ಜನವರಿಯಲ್ಲಿ ಕಠಿಣ ಅಭ್ಯಾಸ ಮಾಡುತ್ತೇನೆ. ಮುಂದಿನ ವರ್ಷದ ನಡೆಯುವ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಸ್ಪರ್ಧಿಸಲು ಸಿದ್ಧತೆ ಮಾಡಿಕೊಳ್ಳುವೆ' ಎಂದಿದ್ದಾರೆ.

38 ವರ್ಷದ ಮೇರಿ ಕೋಮ್ ರಾಜ್ಯಸಭಾ ಸದಸ್ಯೆಯಾಗಿದ್ದಾರೆ.

ಆ್ಯಷಸ್ ಟೆಸ್ಟ್: ಟ್ರಾವಿಸ್ ಅಬ್ಬರದ ಶತಕ

ಬ್ರಿಸ್ಬೇನ್ (ಎಪಿ): ಆರಂಭಿಕ ಬ್ಯಾಟರ್ ಡೇವಿಡ್ ವಾರ್ನರ್ ಹಾಕಿದ ಅಡಿಪಾಯದ ಮೇಲೆ ಟ್ರಾವಿಸ್ ಹೆಡ್ ಶತಕದಾಟದ ಮೂಲಕ ಆತಿಥೇಯ ತಂಡಕ್ಕೆ ಉತ್ತಮ ಮುನ್ನಡೆ ಒದಗಿಸಿಕೊಟ್ಟರು.

ಗಾಬಾದಲ್ಲಿ ನಡೆಯುತ್ತಿರುವ ಆ್ಯಷಸ್ ಟೆಸ್ಟ್ ಸರಣಿಯ ಮೊದಲ ಪಂದ್ಯದ ಎರಡನೇ ದಿನವಾದ ಗುರುವಾರ ಆರು ರನ್‌ಗಳಿಂದ ಶತಕ ತಪ್ಪಿಸಿಕೊಂಡ ವಾರ್ನರ್ (94; 176ಎಸೆತ, 11 ಬೌಂಡರಿ, 2 ಸಿಕ್ಸರ್) ಮತ್ತು ಮಿಂಚಿನ ಶತಕ ಬಾರಿಸಿ ಕ್ರೀಸ್‌ನಲ್ಲಿ ಉಳಿದಿರುವ ಹೆಡ್ (112; 95 ಎ, 12 ಬೌಂ, 2 ಸಿ) ಆಟದಿಂದ ಆಸ್ಟ್ರೇಲಿಯಾ ತಂಡವು 196 ರನ್‌ಗಳ ಮುನ್ನಡೆ ಗಳಿಸಿದೆ.

ದಿನದಾಟದ ಕೊನೆಗೆ ತಂಡವು 84 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 343 ರನ್ ಗಳಿಸಿದೆ. ಇಂಗ್ಲೆಂಡ್ 147 ರನ್ ಗಳಿಸಿ ಮೊದಲ ದಿನವೇ ಆಲೌಟ್ ಆಗಿತ್ತು.

ಆಸ್ಟ್ರೇಲಿಯಾ ತಂಡದ ಆರಂಭವೂ ಚೆನ್ನಾಗಿರಲಿಲ್ಲ. ಆರನೇ ಓವರ್‌ನಲ್ಲಿ ಒಲಿ ರಾಬಿನ್ಸನ್ ಬೌಲಿಂಗ್‌ನಲ್ಲಿ ಮಾರ್ಕಸ್ ಹ್ಯಾರಿಸ್ ಔಟಾದರು. ಆದರೆ ವಾರ್ನರ್ ಜೊತೆಗೂಡಿದ ಮಾರ್ನಸ್ ಲಾಬುಷೇನ್ (74; 117ಎ) ಎರಡನೇ ವಿಕೆಟ್ ಜೊತೆಯಾಟದಲ್ಲಿ 166 ರನ್ ಸೇರಿಸುವುದರೊಂದಿಗೆ ಇಂಗ್ಲೆಂಡ್ ತಂಡದ ಮೊತ್ತವನ್ನೂ ಚುಕ್ತಾ ಮಾಡಿದರು. 32ನೇ ಓವರ್‌ನಲ್ಲಿ ರೋರಿ ಬರ್ನ್ಸ್ ಸ್ಲಿಪ್‌ನಲ್ಲಿ ವಾರ್ನರ್ ಕ್ಯಾಚ್ ಕೈಚೆಲ್ಲಿದ್ದು, ಇಂಗ್ಲೆಂಡ್ ತಂಡಕ್ಕೆ ತುಟ್ಟಿಯಾಯಿತು.

ಸ್ಮಿತ್ ಹೆಚ್ಚು ಹೊತ್ತು ಆಡದಂತೆ ಮಾರ್ಕ್ ವುಡ್ ನೋಡಿಕೊಂಡರು. ಈ ಹೊತ್ತಿನಲ್ಲಿ ಕ್ರೀಸ್‌ಗೆ ಬಂದ ಹೆಡ್ ಆಟ ರಂಗೇರಿತು. ಟಿ20 ಮಾದರಿಯ ಬ್ಯಾಟಿಂಗ್ ಮಾಡಿದ ಅವರು 117.89ರ ಸ್ಟ್ರೈಕ್‌ರೇಟ್‌ನಲ್ಲಿ ರನ್ ಗಳಿಸಿದರು.

56ನೇ ಓವರ್‌ನಲ್ಲಿ ವಾರ್ನರ್ ವಿಕೆಟ್ ಗಳಿಸಿದ ರಾಬಿನ್ಸನ್ ಇಂಗ್ಲೆಂಡ್ ತಂಡವನ್ನು ಮತ್ತೆ ಹೋರಾಟದ ಹಾದಿಗೆ ತಂದರು. ಅವರು ಕ್ಯಾಮರೂನ್ ಗ್ರೀನ್‌ಗೆ ಖಾತೆ ತೆರೆಯಲೂ ಬಿಡಲಿಲ್ಲ. ಅಲೆಕ್ಸ್ ಕ್ಯಾರಿ, ಪ್ಯಾಟ್ ಕಮಿನ್ಸ್ ಕೂಡ ಬೇಗ ನಿರ್ಗಮಿಸಿದರು. ಹೆಡ್ ಜೊತೆಗೆ ಮಿಚೆಲ್ ಸ್ಟಾರ್ಕ್ ಕ್ರೀಸ್‌ನಲ್ಲಿ ಉಳಿದಿದ್ದಾರೆ.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್, ಇಂಗ್ಲೆಂಡ್: 50.1 ಓವರ್‌ಗಳಲ್ಲಿ 147; **ಆಸ್ಟ್ರೇಲಿಯಾ:** 84 ಓವರ್‌ಗಳಲ್ಲಿ 7ಕ್ಕೆ 343 (ಡೇವಿಡ್ ವಾರ್ನರ್ 94, ಮಾರ್ನಸ್ ಲಾಬುಷೇನ್ 74, ಸ್ಟೀವನ್ ಸ್ಮಿತ್ 12, ಟ್ರಾವಿಡ್ ಹೆಡ್ ಬ್ಯಾಟಿಂಗ್ 112, ಮಿಚೆಲ್ ಸ್ಟಾರ್ಕ್ ಬ್ಯಾಟಿಂಗ್ 10; ಕ್ರಿಸ್ ವೋಕ್ಸ್ 56ಕ್ಕೆ1, ಒಲಿ ರಾಬಿನ್ಸನ್ 48ಕ್ಕೆ3, ಮಾರ್ಕ್ ವುಡ್ 57ಕ್ಕೆ1, ಜ್ಯಾಕ್ ಲೀಚ್ 95ಕ್ಕೆ1, ಜೋ ರೂಟ್ 29ಕ್ಕೆ1.



ಟ್ರಾವಿಸ್ ಹೆಡ್ –ಎಎಫ್‌ಪಿ ಚಿತ್ರ

ಏಷ್ಯನ್ ಹಾಕಿ: ಭಾರತ ತಂಡಕ್ಕೆ ಕೋವಿಡ್ ಕಂಟಕ

ಡಾಂಗೆ, ದಕ್ಷಿಣ ಕೊರಿಯಾ (ಪಿಟಿಐ): ಏಷ್ಯನ್ ಮಹಿಳಾ ಹಾಕಿ ಚಾಂಪಿಯನ್‌ಷಿಪ್‌ನಿಂದ ಭಾರತ ತಂಡವು ಹೊರಬಿದ್ದಿದೆ. ತಂಡದಲ್ಲಿ ಆಟಗಾರ್ತಿಯೊಬ್ಬರಿಗೆ ಕೋವಿಡ್ ಖಚಿತಪಟ್ಟಿದ್ದರಿಂದ ಟೂರ್ನಿಯಿಂದ ನಿರ್ಗಮಿಸಿದೆ.

ಇದರೊಂದಿಗೆ ಕೋವಿಡ್ ಕಾರಣದಿಂದಾಗಿ ನಿರ್ಗಮಿಸಿದ ಎರಡನೇ ತಂಡವಾಗಿದೆ. ಈಚೆಗೆ ಮಲೇಷ್ಯಾ ತಂಡದ ಆಟಗಾರ್ತಿಗೆ ಕೋವಿಡ್ ಖಚಿತಪಟ್ಟಿತ್ತು.


ಬುಧವಾರ ಭಾರತ ತಂಡದ ಆಟಗಾರ್ತಿಯೊಬ್ಬರಿಗೆ ಕೋವಿಡ್ ಇರುವುದು ಖಚಿತವಾದ ಮೇಲೆ ಹಾಲಿ ಚಾಂಪಿಯನ್ ಕೊರಿಯಾ ಮತ್ತು ಚೀನಾ ವಿರುದ್ಧದ ಪಂದ್ಯಗಳನ್ನು ರದ್ದುಮಾಡಲಾಗಿತ್ತು.

'ಸೋಂಕಿತ ಆಟಗಾರ್ತಿಯ ಹೆಸರನ್ನು ಬಹಿರಂಗಪಡಿಸುವುದಿಲ್ಲ. ತಂಡದ ಆಟಗಾರ್ತಿ, ನೆರವು ಸಿಬ್ಬಂದಿ ಕ್ವಾರಂಟೈನ್‌ನಲ್ಲಿದೆ. ಇನ್ನುಳಿದ ಪಂದ್ಯಗಳಲ್ಲಿಯೂ ತಂಡವು ಆಡುವುದು ಸಾಧ್ಯವಿಲ್ಲ. ಹೋದ ಬಾರಿಯ ರನ್ನರ್ಸ್ ಅಪ್ ಆಗಿರುವ ಭಾರತ ತಂಡವು ಟೂರ್ನಿಯ ಇನ್ನುಳಿದ ಪಂದ್ಯಗಳಲ್ಲಿ ಆಡುವುದಿಲ್ಲ' ಎಂದು ಏಷ್ಯನ್ ಹಾಕಿ ಫೆಡರೇಷನ್ (ಎಎಚ್‌ಎಫ್) ತಿಳಿಸಿದೆ.

ಭಾರತ ತಂಡವು ಗುಂಪು ಹಂತದ ಪಂದ್ಯದಲ್ಲಿ ಥಾಯ್ಲೆಂಡ್ ವಿರುದ್ಧ 13–0ಯಿಂದ ಜಯಿಸಿತ್ತು. ಆ ಪಂದ್ಯದಲ್ಲಿ ಗುರ್ಜಿತ್ ಕೌರ್ ಐದು ಗೋಲು ಹೊಡೆದಿದ್ದರು. ಈ ಟೂರ್ನಿಯು 2020ರಲ್ಲಿ ನಡೆಯಬೇಕಿತ್ತು. ಆದರೆ ಕೋವಿಡ್ ನಿಂದಾಗಿ ಮುಂದೂಡಲಾಗಿತ್ತು.

ಷೇರುಪೇಟೆ ವಹಿವಾಟು

157



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,469
ಇಂದಿನ ಅಂತ್ಯ	17,516
▲	47
ದಿನದ ಗರಿಷ್ಠ	17,543

ವಿನಿಮಯ ದರ

$ ಡಾಲರ್	75.6
£ ಪೌಂಡ್	99.74
€ ಯುರೊ	85.59
¥ ಯೆನ್ (100ಕ್ಕೆ)	66.68

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹505
12 ಮೊಟ್ಟೆಗೆ	₹66
ಮೈಸೂರು	
100 ಮೊಟ್ಟೆಗೆ	₹505

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1310 (1330)
ಸೋಯಾ (ರಿಫೈನ್ಡ್)	₹1220(1225)
ಸೂರ್ಯಕಾಂತಿ (ರಿಫೈನ್ಡ್)	₹1270 (1270)
ಪಾಮೋಲಿನ್	₹1180 (1185)

16 ತಿಂಗಳ ಕನಿಷ್ಠ ಮಟ್ಟಕ್ಕೆ ಕುಸಿದ ರೂಪಾಯಿ ಮೌಲ್ಯ

ಮುಂಬೈ (ಪಿಟಿಐ): ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು 16 ತಿಂಗಳ ಕನಿಷ್ಠ ಮಟ್ಟಕ್ಕೆ ಕುಸಿದಿದೆ. ಗುರುವಾರದ ವಹಿವಾಟಿನಲ್ಲಿ ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ರೂಪಾಯಿ ಮೌಲ್ಯವು ಅಮೆರಿಕದ ಡಾಲರ್ ಎದುರು 75.60ಕ್ಕೆ ಇಳಿಕೆ ಆಗಿದೆ.

ದೇಶದ ಷೇರು ಮಾರುಕಟ್ಟೆಗಳಿಂದ ವಿದೇಶಿ ಹೂಡಿಕೆ ಹಿಂದಕ್ಕೆ ಹೋಗುತ್ತಿರುವುದು ಮತ್ತು ಅಮೆರಿಕದ ಡಾಲರ್ ಬಲಗೊಳ್ಳುತ್ತಿರುವುದು ಇದಕ್ಕೆ ಕಾರಣ ಎಂದು ತಜ್ಞರು ಹೇಳಿದ್ದಾರೆ.

ಈ ಮೊದಲು 2020ರ ಜುಲೈ 1ರಂದು ರೂಪಾಯಿ ಮೌಲ್ಯವು ಈಗಿನ ಹಂತವನ್ನು ತಲುಪಿತ್ತು. ಆರ್‌ಬಿಐನ ದ್ವೈಮಾಸಿಕ ಹಣಕಾಸು ನೀತಿಯು ವಿದೇಶಿ ವಿನಿಯಮ ಮಾರುಕಟ್ಟೆಯಲ್ಲಿ ರೂಪಾಯಿ ಮೌಲ್ಯ ಹೆಚ್ಚಿಸಲು ನೆರವಾಗಿಲ್ಲ.

ಬೈವೋಲ್ಟೀನ್: ಕೆ.ಜಿ.ಗೆ ₹840

• ಕೊಂಡ್ಲಹಳ್ಳಿ ಜಯಪ್ರಕಾಶ

ಮೊಳಕಾಲ್ಮುರು: ತಾಲ್ಲೂಕಿನ ಕೊಂಡ್ಲಹಳ್ಳಿಯ ರೈತ ದಂಪತಿ ಗುರಮ್ಮ, ಎನ್.ಎಚ್.ಮಂಜುನಾಥ್ ಅವರು ತಂದಿದ್ದ ಬಿಳಿ ರೇಷ್ಮೆಗೂಡು (ಬೈವೋಲ್ಟೀನ್) ರಾಮನಗರ ಮಾರುಕಟ್ಟೆಯಲ್ಲಿ ಗುರುವಾರ ಕೆ.ಜಿ.ಗೆ ದಾಖಲೆಯ ದರ ₹ 840ಕ್ಕೆ ಮಾರಾಟವಾಗಿದೆ.

ಬಿಳಿ ರೇಷ್ಮೆಗೂಡಿನ ದರ ದಿನೇ ದಿನೇ ಹೆಚ್ಚುತ್ತಿದೆ. ರಾಮನಗರ ಮಾರುಕಟ್ಟೆಯಲ್ಲಿ ಬಿಳಿ ರೇಷ್ಮೆಗೂಡು ಕೆ.ಜಿ.ಗೆ ₹ 840ಕ್ಕೆ ಮಾರಾಟವಾಗಿರುವುದು ಇದುವರೆಗಿನ ಅತಿ ಹೆಚ್ಚಿನ ದರ ಎನ್ನಲಾಗಿದೆ.

'ಪ್ರತಿ ಕೆ.ಜಿ ಗೂಡಿಗೆ ಸರಾಸರಿ ₹ 400ರಿಂದ ₹ 500 ದರ ಸಿಗುತ್ತಿತ್ತು. ಈಗ ಹೆಚ್ಚು ದರ ದೊರೆಯುತ್ತಿರುವುದು ಕೋವಿಡ್ ಸಂಕಷ್ಟದ ಸಮಯದಲ್ಲಿ ಸಂಜೀವಿನಿ ಸಿಕ್ಕಂತಾಗಿದೆ. ಇಷ್ಟೊಂದು ದರ ನಿರೀಕ್ಷೆ ಮಾಡಿರಲಿಲ್ಲ' ಎಂದು ಬೆಳೆಗಾರ ತಿಪ್ಪೇಸ್ವಾಮಿ ಸಂತಸ ವ್ಯಕ್ತಪಡಿಸಿದರು.



ನಾವು ಮಾರುಕಟ್ಟೆಗೆ ತಂದ ರೇಷ್ಮೆ ಗೂಡು ಗುರುವಾರ ಕೆ.ಜಿಗೆ ₹ 840ಕ್ಕೆ ಮಾರಾಟವಾಗಿದ್ದು, ಖುಷಿಯಾಗಿದೆ.
ಎನ್.ಎಚ್. ಮಂಜುನಾಥ್, ರೇಷ್ಮೆ ಬೆಳೆಗಾರ, ಕೊಂಡ್ಲಹಳ್ಳಿ

'ಬಿಳಿ ರೇಷ್ಮೆಗೂಡಿಗೆ ಇಷ್ಟೊಂದು ದರ ಸಿಕ್ಕಿರುವುದು ಇದೇ ಮೊದಲು. ರಾಜ್ಯದಲ್ಲಿ ನೂಲು ಬಿಚ್ಚಣಿಕೆ ಕೇಂದ್ರಗಳು ಹೆಚ್ಚು ಆರಂಭವಾಗುತ್ತಿರುವುದು ಬೆಲೆ ಹೆಚ್ಚಳಕ್ಕೆ ಕಾರಣ. ಚಿತ್ರದುರ್ಗ ಭಾಗದ ಗೂಡಿನಿಂದ ತಯಾರಿಸುವ ದಾರ ಉತ್ಕೃಷ್ಟ ಗುಣಮಟ್ಟದ್ದಾಗಿರುತ್ತದೆ' ಎಂದು ರೇಷ್ಮೆ ಇಲಾಖೆ ಜಿಲ್ಲಾ ಉಪನಿರ್ದೇಶಕ ಕೃಷ್ಣಪ್ಪ ತಿಳಿಸಿದರು.



ಬಾಲಿವುಡ್ ನಟ ವಿಕ್ಕಿ ಕೌಶಲ್ ಮತ್ತು ನಟಿ ಕತ್ರಿನಾ ಕೈಫ್ ಅವರ ವಿವಾಹ ಸಮಾರಂಭವು ರಾಜಸ್ಥಾನದ ಬರ್ವಾರಾದ ಸಿಕ್ಸ್ ಸೆನ್ಸ್ ಫೋರ್ಟ್ ರೆಸಾರ್ಟ್‌ನಲ್ಲಿ ನಡೆಯಿತು. –ಪಿಟಿಐ ಚಿತ್ರ

ವೇತನ ಏರಿಕೆಯಲ್ಲಿ ಲಿಂಗ ತಾರತಮ್ಯ

ನವದೆಹಲಿ (ಪಿಟಿಐ): ಕೋವಿಡ್–19 ಸಾಂಕ್ರಾಮಿಕದ ಸಂದರ್ಭದಲ್ಲಿ ಪುರುಷ ಹಾಗೂ ಮಹಿಳಾ ಉದ್ಯೋಗಿಗಳ ನಡುವಿನ ವೇತನ ತಾರತಮ್ಯವು ಹೆಚ್ಚಳ ಆಗಿದೆ ಎಂದು ಎಡಿಪಿ ಅಧ್ಯಯನ ವರದಿ ಹೇಳಿದೆ. ವೇತನ ಹೆಚ್ಚಳ ಹಾಗೂ ಬೋನಸ್ ನೀಡುವ ವಿಚಾರದಲ್ಲಿ ಮಹಿಳೆಯರನ್ನು ಉಪೇಕ್ಷಿಸಲಾಗಿದೆ ಎಂದು ಅದು ಹೇಳಿದೆ.

ಹುರೂನ್ ಇಂಡಿಯಾ, ಬುಗುಂಡಿ ಪ್ರೈವೇಟ್ ವರದಿ

ರಿಲಯನ್ಸ್, ಟಿಸಿಎಸ್ ದೇಶದ ಮುಂಚೂಣಿ ಕಂಪನಿಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹುರೂನ್ ಇಂಡಿಯಾ ಮತ್ತು ಎಕ್ಸಿಸ್ ಬ್ಯಾಂಕ್‌ನ ಬುಗುಂಡಿ ಪ್ರೈವೇಟ್ ಜೊತೆಯಾಗಿ ಭಾರತದ ಮುಂಚೂಣಿ 500 ಕಂಪನಿಗಳ ಪಟ್ಟಿಯನ್ನು ಸಿದ್ಧಪಡಿಸಿದ್ದು, ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ ಕಂಪನಿಯು ಮೊದಲ ಸ್ಥಾನದಲ್ಲಿ ಇದೆ. ಈ ಪಟ್ಟಿಯಲ್ಲಿ ಇರುವ 53 ಕಂಪನಿಗಳು ಕರ್ನಾಟಕದಲ್ಲಿ ತಮ್ಮ ಮುಖ್ಯ ಕಚೇರಿಯನ್ನು ಹೊಂದಿವೆ.

ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ (ಟಿಸಿಎಸ್) ಮತ್ತು ಎಚ್‌ಡಿಎಫ್‌ಸಿ ಬ್ಯಾಂಕ್ ಕ್ರಮವಾಗಿ ಎರಡು ಹಾಗೂ ಮೂರನೆಯ ಸ್ಥಾನಗಳಲ್ಲಿ ಇವೆ. ಕಂಪನಿಗಳ ಮೌಲ್ಯದ ಆಧಾರದಲ್ಲಿ ಈ ಪಟ್ಟಿ ಸಿದ್ಧಪಡಿಸಲಾಗಿದೆ. 'ಕಂಪನಿಗಳ ಈಗಿನ ಸಾಧನೆ ಹಾಗೂ ಭವಿಷ್ಯದಲ್ಲಿ ಅವು ತೋರಬಹುದಾದ ಸಾಧನೆಯನ್ನು ಪರಿಗಣಿಸಿ ಅವುಗಳ ಮೌಲ್ಯವನ್ನು ತೀರ್ಮಾನಿಸಲಾಗಿದೆ' ಎಂದು ಹುರೂನ್ ಇಂಡಿಯಾ ಸಂಸ್ಥೆಯ ಮುಖ್ಯ ಸಂಶೋಧಕ ಅನಸ್ ರೆಹಮಾನ್ ಜುನೈದ್ ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಕೋವಿಡ್ ಸಾಂಕ್ರಾಮಿಕದ ಅವಧಿಯಲ್ಲಿ ಈ ಐದುನೂರು ಕಂಪನಿಗಳ ಒಟ್ಟು ಮೌಲ್ಯದಲ್ಲಿ ಶೇಕಡ 68ರಷ್ಟು ಹೆಚ್ಚಳ ಕಂಡುಬಂದಿದೆ. 200 ಕಂಪನಿಗಳ ಮೌಲ್ಯವು ದುಪ್ಪಟ್ಟಾಗಿದೆ. 20 ಕಂಪನಿಗಳ ಮೌಲ್ಯವು ₹ 1 ಲಕ್ಷ ಕೋಟಿಗಿಂತ ಹೆಚ್ಚಾಗಿದ್ದು, ರಿಲಯನ್ಸ್, ಟಿಸಿಎಸ್, ಇನ್ಫೊಸಿಸ್ ಮತ್ತು ಐಸಿಐಸಿಐ ಬ್ಯಾಂಕ್ ಮೌಲ್ಯ ಹೆಚ್ಚಳದಲ್ಲಿ ಮುಂಚೂಣಿಯಲ್ಲಿ ಇವೆ.

ಕೋವಿಡ್–19ಕ್ಕೆ ಲಸಿಕೆಗಳನ್ನು ಉತ್ಪಾದಿಸುವ ಸೀರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ ಕಂಪನಿಯ ಮೌಲ್ಯವು 2021ರಲ್ಲಿ ಶೇಕಡ 127ರಷ್ಟು ಹೆಚ್ಚಳ ಆಗಿದೆ. ಭಾರತದಲ್ಲಿ ಷೇರುಪೇಟೆಯಲ್ಲಿ ನೋಂದಾಯಿತ ಆಗಿರದ ಕಂಪನಿಗಳ ಪೈಕಿ ಅತ್ಯಂತ ಮೌಲ್ಯಯುತ ಕಂಪನಿ ಇದು ಎಂದು ಹುರೂನ್ ಇಂಡಿಯಾ ಮತ್ತು ಬುಗುಂಡಿ ಪ್ರೈವೇಟ್ ವರದಿ ಹೇಳಿದೆ.

ಈ ವರದಿಯಲ್ಲಿ ಸ್ಥಾನ ಪಡೆದಿರುವ 500 ಕಂಪನಿಗಳು ದೇಶದ 43 ನಗರಗಳಿಂದ ಕಾರ್ಯಾಚರಿಸುತ್ತಿವೆ. 500 ಕಂಪನಿಗಳ ಪೈಕಿ 167 ಕಂಪನಿಗಳು ಮುಂಬೈನಲ್ಲಿ ನೆಲೆ ಕಂಡುಕೊಂಡಿವೆ. ಬೆಂಗಳೂರು ಮತ್ತು ಚೆನ್ನೈನಲ್ಲಿ ಕ್ರಮವಾಗಿ 52 ಹಾಗೂ 38 ಕಂಪನಿಗಳು ಪ್ರಧಾನ ಕಚೇರಿ ಹೊಂದಿವೆ. ಟಾಪ್ 500 ಕಂಪನಿಗಳ ಪಟ್ಟಿಯಲ್ಲಿ ಈ ಮೂರು ನಗರಗಳಲ್ಲಿ ಇರುವ ಕಂಪನಿಗಳ ಪ್ರಮಾಣ ಶೇಕಡ 50ಕ್ಕಿಂತ ಹೆಚ್ಚು.

ದೇಶದ ಟಾಪ್10 ಕಂಪನಿಗಳು

ಸ್ಥಾನ	ಕಂಪನಿ	ಮೌಲ್ಯ (ಲಕ್ಷ ಕೋಟಿಯಲ್ಲಿ)	ಸಿಇಒ/ಎಂ.ಡಿ.
1	ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್	₹16.65	ಮುಕೇಶ್ ಅಂಬಾನಿ
2	ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್	₹13.09	ರಾಜೇಶ್ ಗೋಪಿನಾಥನ್
3	ಎಚ್‌ಡಿಎಫ್‌ಸಿ ಬ್ಯಾಂಕ್	₹9.05	ಶಶಿಧರ್ ಜಗದೀಶನ್
4	ಇನ್ಫೊಸಿಸ್	₹7.51	ಸಲೀಲ್ ಪಾರೇಖ್
5	ಐಸಿಐಸಿಐ ಬ್ಯಾಂಕ್	₹5.37	ಸಂದೀಪ್ ಬಕ್ಷಿ
6	ಎಚ್‌ಡಿಎಫ್‌ಸಿ	₹5.01	ಕೆಕಿ ಎಂ. ಮಿಸ್ತ್ರಿ
7	ಬಜಾಜ್ ಫೈನಾನ್ಸ್	₹4.31	ಸಂಜೀವ್ ಬಜಾಜ್
8	ಕೋಟಕ್ ಮಹೀಂದ್ರ ಬ್ಯಾಂಕ್	₹4.17	ಉದಯ್ ಕೋಟಕ್
9	ಭಾರ್ತಿ ಏರ್‌ಟೆಲ್	₹3.85	ಗೋಪಾಲ್ ವಿಟ್ಟಲ್
10	ವಿಪ್ರೊ	₹3.67	ಥಿಯರಿ ಡೆಲಾಪೋರ್ಟ್

ಕರ್ನಾಟಕದ ಟಾಪ್10 ಕಂಪನಿಗಳು

ಸ್ಥಾನ	ಕಂಪನಿ	ಮೌಲ್ಯ		ಸಿಇಒ/ಎಂ.ಡಿ.
1	ಇನ್ಫೊಸಿಸ್	₹7.51	ಲಕ್ಷ ಕೋಟಿ	ಸಲೀಲ್ ಪಾರೇಖ್
2	ವಿಪ್ರೊ	₹3.67		ಥಿಯರಿ ಡೆಲಾಪೋರ್ಟ್
3	ಬೈಜುಸ್	₹1.35		ಬೈಜು ರವೀಂದ್ರನ್
4	ಇನ್‌ಮೊಬಿ	₹90,000	ಕೋಟಿ	ನವೀನ್ ತಿವಾರಿ
5	ಮೈಂಡ್‌ಟ್ರೀ	₹75,468		ದೇವಶಿಶ್ ಚಟರ್ಜಿ
6	ಪೇಜ್ ಇಂಡಸ್ಟ್ರೀಸ್	₹41,963		ಗಣೇಶ್ ವಿ.ಎಸ್.
7	ಸ್ವಿಗ್ಗಿ	₹41,250		ಶ್ರೀಹರ್ಷ ಮಜೆಟಿ
8	ಬಯೋಕಾನ್	₹40,524		ಸಿದ್ಧಾರ್ಥ ಮಿತ್ತಲ್
9	ಓಲಾ ಎಲೆಕ್ಟ್ರಿಕ್	₹37,500		ಭವೀಶ್ ಅಗರ್ವಾಲ್
10	ಮೀಶೊ	₹36,750		ವಿದಿತ್ ಆತ್ರೇಯ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	500- 550
ನಡುಗೋಲು	600-650
ರಾಶಿ	700-800
ರಾಶಿ ಉತ್ತಮ	800-900
ಜರಡಿ	1000 -1050
ಹೆರಕಿದ್ದು	1200-1300
ಹಸಿರು ಸಾಧಾರಣ	750-850
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1300-1400
ಕಾಳು ಮೆಣಸು	525
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-43500
ಹಳತು	46000-52500
ಚನ್ನಗಿರಿ	
ರಾಶಿ	45899-47799
ಕಾರ್ಕಳ	
ಹೊಸತು	38000-43500
ಹಳತು	46000-52500
ಕುಂದಾಪುರ	
ಹೊಸಚಾಲಿ	38000-43500
ಮಂಗಳೂರು	
ಕೋಕ	29000-35000
ಪುತ್ತೂರು	
ಕೋಕ	11000-26000
ಹೊಸತು	27500-43500

ಸಾಗರ	
ಬಿಳಿಗೋಟು	20899-39889
ಚಾಲಿ	34099-48499
ಕೋಕ	24519-37899
ಕೆಂಪುಗೋಟು	35199-38899
ರಾಶಿ	37219-48289
ಸಿಪ್ಪೆಗೋಟು	6269-27210
ಶಿವಮೊಗ್ಗ	
ಬೆಟ್ಟೆ	48199-53869
ಗೊರಬಲು	17200-39489
ರಾಶಿ	45099-47899
ಸರಕು	49500-72896
ಸಿದ್ದಾಪುರ	
ಬಿಳಿಗೋಟು	31499-42408
ಚಾಲಿ	46282-51099
ಕೋಕ	27499-38699
ಹೊಸಚಾಲಿ	33299-38900
ಕೆಂಪುಗೋಟು	26099-34099
ರಾಶಿ	44109-49009

ತಟ್ಟಿಬೆಟ್ಟೆ	40699-47899
ಶಿರಸಿ	
ಬೆಟ್ಟೆ	21899-47898
ಬಿಳಿಗೋಟು	24688-45126
ಚಾಲಿ	45829-51118
ರಾಶಿ	38299-50209
ಯಲ್ಲಾಪುರ	
ಆಪಿ	55965-55965
ಬಿಳಿಗೋಟು	38016-42169
ಚಾಲಿ	42499-50910
ಕೋಕ	22899-32899
ಕೆಂಪುಗೋಟು	30899-34100
ರಾಶಿ	45678-50681
ತಟ್ಟಿಬೆಟ್ಟೆ	38009-45030
ರಾಮನಗರ ರೇಷ್ಮೆ	
ಮಿಶ್ರತಳಿ (ಸಿ.ಬಿ)	350-653
ದ್ವಿತಳಿ (ಬಿ.ವಿ)	300-840

ಕಾಫಿ

(50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15,400	15,300	15,400	264.20ಸೆಂಟ್ಸ್
ಎಸಿ	6,750	6,500	6,400	
ಆರ್‌ಪಿ	6,200	-	-	ಲಂಡನ್
ಆರ್‌ಸಿ	3,820	3,700	-	2409ಡಾಲರ್ಸ್

ಗೋಧಿ ಹುಗ್ಗಿಗೆ ಮಾನ್ಯತೆ

ಧಾರವಾಡ: ಉತ್ತರ ಕರ್ನಾಟಕದ ಪ್ರಸಿದ್ಧ ಸಿಹಿ ತಿನಿಸು ಗೋಧಿ ಹುಗ್ಗಿಗೆ ಕೇಂದ್ರ ವೈಜ್ಞಾನಿಕ ಹಾಗೂ ಕೈಗಾರಿಕಾ ಸಂಶೋಧನಾ ಸಮಿತಿ (ಸಿಎಸ್‌ಐಆರ್) – ಕೇಂದ್ರ ಆಹಾರ ತಂತ್ರಜ್ಞಾನಗಳ ಸಂಶೋಧನಾ ಸಂಸ್ಥೆಯ (ಸಿಎಫ್‌ಟಿಆರ್‌ಐ) ಮಾನ್ಯತೆ ದೊರೆತಿದೆ.

ಮನೆಯಲ್ಲೇ ಸರಳವಾಗಿ ಸಿದ್ಧಪಡಿಸಿಕೊಳ್ಳಬಹುದಾದ ಗೋಧಿ ಹುಗ್ಗಿಯ ಪೇಸ್ಟ್ ಅನ್ನು ಇಲ್ಲಿನ ಬೇಲೂರು ಕೈಗಾರಿಕಾ ಪ್ರದೇಶದಲ್ಲಿರುವ ಲಟ್ಟಿ ಫುಡ್ಸ್ ಸಂಸ್ಥೆಯು ಅಭಿವೃದ್ಧಿಪಡಿಸಿದೆ. ಇದನ್ನು ಆರು ತಿಂಗಳು ಕೆಡದಂತೆ ಇಡಬಹುದಾಗಿದೆ. ಇದರಲ್ಲಿ ಯಾವುದೇ ರಾಸಾಯನಿಕ ಪದಾರ್ಥಗಳನ್ನು (ಪ್ರಿಸರ್ವೆಟಿವ್ಸ್) ಬಳಸಿಲ್ಲ ಎಂದು ಸಂಸ್ಥೆ ಹೇಳಿದೆ.

'ಗೋಧಿ ಹುಗ್ಗಿಯ ಪೇಸ್ಟ್‌ಗೆ ಅಂತರರಾಷ್ಟ್ರೀಯ ಮಟ್ಟದಲ್ಲಿಯೂ ಮಾರುಕಟ್ಟೆ ಸಿಗುವಂತೆ ಮಾಡಲಾಗುವುದು. 225 ಗ್ರಾಂ ಡಬ್ಬದಲ್ಲಿ ಲಭ್ಯವಿರುವ ಪೇಸ್ಟ್ ಅನ್ನು 150 ಮಿ.ಲೀ. ಬಿಸಿ ಹಾಲಿಗೆ ಹಾಕಿದರೆ, ಹುಗ್ಗಿ ಸಿದ್ಧ' ಎಂದು ಲಟ್ಟಿ ಫುಡ್ಸ್‌ನ ಮಾಲೀಕ ವೀರಭದ್ರಪ್ಪ ಲಟ್ಟಿ ಹೇಳಿದರು.

'ಈಗ ಗೋಧಿ ಹುಗ್ಗಿ ಮಾಡುವುದು ತೀರಾ ಅಪರೂಪ. ಹುಗ್ಗಿ ಸಿದ್ಧಪಡಿಸಲು ಬಹಳ ಸಮಯ, ಶ್ರಮ ಬೇಕು. ಹೀಗಾಗಿ ಸರಳವಾಗಿ ತಯಾರಿಸಲು ಆಗುವಂತೆ ಹುಗ್ಗಿ ಸಿದ್ಧಪಡಿಸಲಾಗಿದೆ. ಇದಕ್ಕೆ ಮೈಸೂರಿನ ಸಿಎಫ್‌ಟಿಆರ್‌ಐ ಸಂಸ್ಥೆಯು ನೆರವಾಗಿದೆ' ಎಂದರು.

'ದೇಶಪಾಂಡೆ ಪ್ರತಿಷ್ಠಾನದ ಸಹಾಯದಿಂದ ಗೋಧಿ ಹುಗ್ಗಿಯ ಡಬ್ಬಿ ಸಿದ್ಧಪಡಿಸಲಾಗಿದೆ. 225 ಗ್ರಾಂ ಗೋಧಿ ಹುಗ್ಗಿಯನ್ನು ₹ 90ರಂತೆ ಮಾರಾಟ ಮಾಡಲು ಯೋಚಿಸಲಾಗಿದೆ' ಎಂದು ಲಟ್ಟಿ ಹೇಳಿದರು.

ಸಿಎಫ್‌ಟಿಆರ್‌ಐ ಮುಖ್ಯ ಸಂಶೋಧಕ ಡಾ. ಎಚ್.ಎಸ್.ಸತೀಶ್ ಮಾತನಾಡಿ, 'ಸಿದ್ಧ ಆಹಾರದಲ್ಲಿ ಯಾವುದೇ ರಾಸಾಯನಿಕ ಬಳಸದೆ, ಸ್ಟರ್ಲೈಸೇಷನ್ ತಂತ್ರಜ್ಞಾನ ಬಳಸಿ ಆಹಾರದಲ್ಲಿರುವ ಅತಿಸೂಕ್ಷ್ಮ ಜೀವಿಗಳನ್ನು ನಿಷ್ಕ್ರಿಯಗೊಳಿಸಲಾಗುತ್ತದೆ. ಆಹಾರ ಕೆಡಿಸುವ ಯಾವುದೇ ಬ್ಯಾಕ್ಟೀರಿಯ ಇರದ ಕಾರಣ ಎರಡು ವರ್ಷಗಳವರೆಗೂ ಕೆಡುವುದಿಲ್ಲ' ಎಂದು ಹೇಳಿದರು. ಸಂಪರ್ಕ ಸಂಖ್ಯೆ: 93416 91831

ಮುಂಬೈ ಧಾರಣೆ

ಶೇಂಗಾ

9-12-2021

ಜಾವಾ 70/80(ಹೊಸ)	10700-10750
ಜಾವಾ 80/90(ಹೊಸ)	10300-10350
ದಪ್ಪ ಮಧ್ಯಪ್ರದೇಶ(ಹೊಸ)	10000-10050
ದಪ್ಪ ಗುಜರಾತ್(ಹೊಸ)	8600-8700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1320 (1340)
ಒಂದು ವಾರದ ಡೆಲಿವರಿ	1315 (1335)
ಸೋಯಾ ಕಚ್ಚಾ	1170 (1175)
ಪಾಮ್ ವಾರದ ಡೆಲಿವರಿ	1178 (1183)
ಸೂರ್ಯಕಾಂತಿ ಎಣ್ಣೆ ಕಚ್ಚಾ	1200 (1200)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
47,700 (47,750)
ಬೆಳ್ಳಿ ಕೆ.ಜಿ
60,500 (61,000)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಪರಸ್ಪರ ಅಂತರ ಕಾಯ್ದುಕೊಳ್ಳಿ

ಮ್ಯೂಚುವಲ್ ಫಂಡ್ ಹೂಡಿಕೆ ಹೆಚ್ಚಳ

ನವದೆಹಲಿ (ಪಿಟಿಐ): ಈಕ್ವಿಟಿ ಮ್ಯೂಚುವಲ್ ಫಂಡ್‌ಗಳಲ್ಲಿನ ಹೂಡಿಕೆಯ ಮೊತ್ತವು ನವೆಂಬರ್‌ನಲ್ಲಿ ₹ 11,615 ಕೋಟಿಯಷ್ಟು ಹೆಚ್ಚಳ ಆಗಿದೆ. ಷೇರು ಮಾರುಕಟ್ಟೆಯಲ್ಲಿ ಅಸ್ಥಿರತೆ ಇದ್ದರೂ ಎಸ್‌ಐಪಿ (ವ್ಯವಸ್ಥಿತ ಹೂಡಿಕೆ ಯೋಜನೆ) ಮೂಲಕ ಆಗುವ ಹೂಡಿಕೆಗಳು ಹೆಚ್ಚಳ ಆಗಿದ್ದು ಇದಕ್ಕೆ ಕಾರಣ.

ಜುಲೈ ನಂತರದಲ್ಲಿ ಅಗಿರುವ ಅತಿಹೆಚ್ಚಿನ ಹೂಡಿಕೆ ಮೊತ್ತ ಇದು ಎಂದು ಭಾರತೀಯ ಮ್ಯೂಚುವಲ್ ಫಂಡ್ ಕಂಪನಿಗಳ ಒಕ್ಕೂಟ (ಎಎಂಎಫ್‌ಐ) ತಿಳಿಸಿದೆ. ಈ ವರ್ಷದ ಮಾರ್ಚ್ ನಂತರದಲ್ಲಿ ಈಕ್ವಿಟಿ ಮ್ಯೂಚುವಲ್ ಫಂಡ್‌ಗಳಲ್ಲಿನ ಹೂಡಿಕೆಯ ಮೊತ್ತವು ಹೆಚ್ಚುತ್ತಲೇ ಸಾಗಿದೆ.

ನವೆಂಬರ್ ಅಂತ್ಯದ ಹೊತ್ತಿಗೆ ದೇಶದ ಮ್ಯೂಚುವಲ್ ಫಂಡ್ ಉದ್ಯಮ ನಿರ್ವಹಿಸುತ್ತಿರುವ ಆಸ್ತಿಯ ಒಟ್ಟು ಮೌಲ್ಯವು ₹ 38.45 ಲಕ್ಷ ಕೋಟಿಗೆ ತಲುಪಿದೆ.

ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಟೂರ್ನಿ: ತಮಿಳುನಾಡು ತಂಡಕ್ಕೆ ಭರ್ಜರಿ ಜಯ

ಕಳಪೆ ಬ್ಯಾಟಿಂಗ್‌ಗೆ ದಂಡ ತೆತ್ತ ಕರ್ನಾಟಕ

ತಿರುವನಂತಪುರ: ತಮಿಳುನಾಡಿನ ಬೌಲಿಂಗ್ ಮುಂದೆ ಕುಸಿದ ಕರ್ನಾಟಕ ತಂಡವು ಗುರುವಾರ ನಡೆದ ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಟೂರ್ನಿಯ ಎರಡನೇ ಪಂದ್ಯದಲ್ಲಿ ಹೀನಾಯವಾಗಿ ಸೋತಿತು.

ಗ್ರೀನ್‌ಫೀಲ್ಡ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಎನ್. ಜಗದೀಶನ್ ನಾಯಕತ್ವದ ತಮಿಳುನಾಡು 8 ವಿಕೆಟ್‌ಗಳಿಂದ ಜಯಿಸಿತು.

ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಕರ್ನಾಟಕ ತಂಡವು ಕಿಶೋರ್ (28ಕ್ಕೆ3) ಮತ್ತು ಮಣಿಮಾರನ್ ಸಿದ್ಧಾರ್ಥ್ (23ಕ್ಕೆ4) ಅವರ ಬೌಲಿಂಗ್ ಎದುರು ಕುಸಿಯಿತು. 36.3 ಓವರ್‌ಗಳಲ್ಲಿ 122 ರನ್ ಗಳಿಸಿತು. ಅದಕ್ಕುತ್ತರವಾಗಿ ತಮಿಳುನಾಡು ತಂಡವು 28 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 123 ರನ್ ಗಳಿಸಿತು. ಬಾಬಾ ಇಂದ್ರಜಿತ್ (ಅಜೇಯ 51; 74ಎ, 6ಬೌಂಡರಿ) ಅರ್ಧಶತಕ ಹೊಡೆದರು.

ಮಧ್ಯಮವೇಗಿ ಸಂದೀಪ್ ವರಿಯರ್ ಮೊದಲ ಓವರ್‌ನಲ್ಲಿ ಕರ್ನಾಟಕಕ್ಕೆ ದೊಡ್ಡ ಹೊಡೆತ ಕೊಟ್ಟರು. ಪುದುಚೇರಿ ಎದುರಿನ ಪಂದ್ಯದಲ್ಲಿ ಅಮೋಘವಾಗಿ ಆಡಿದ್ದ ಸಮರ್ಥ್ ಇಲ್ಲಿ ಖಾತೆಯನ್ನೇ ತೆರೆಯಲಿಲ್ಲ.

ಕೆ.ವಿ. ಸಿದ್ಧಾರ್ಥ್ (6 ರನ್) ಕೂಡ ದೊಡ್ಡ ಇನಿಂಗ್ಸ್ ಆಡಲಿಲ್ಲ. ಆದರೆ, ರೋಹನ್ ಕದಂ (37; 69ಎ) ಮತ್ತು ನಾಯಕ ಮನೀಷ್ ಪಾಂಡೆ (40; 54ಎ) ಇನಿಂಗ್ಸ್‌ಗೆ ಬಲ ತುಂಬಲು ಪ್ರಯತ್ನಿಸಿದರು. ಇಬ್ಬರೂ ತಾಳ್ಮೆಯಿಂದ ಆಡಿದ್ದರಿಂದ ರನ್ ಗಳಿಕೆ ವೇಗ ಹೆಚ್ಚಿರಲಿಲ್ಲ.

ಈ ಒತ್ತಡದ ಸನ್ನಿವೇಶವನ್ನು ಸಮರ್ಥವಾಗಿ ಬಳಸಿಕೊಂಡ ವಾಷಿಂಗ್ಟನ್ ಸುಂದರ್ ಅವರು ಕದಂ ವಿಕೆಟ್ ಗಳಿಸಿ, ಜೊತೆಯಾಟವನ್ನು ಮುರಿದರು. ನಂತರದ ಆಟದಲ್ಲಿ ಸಿದ್ಧಾರ್ಥ್ ತಮ್ಮ ಸ್ಪಿನ್ ಮೋಡಿ ಮೆರೆದರು.

ಸಿದ್ಧಾರ್ಥ್ ಎಸೆತದ ತಿರುವು ಗುರುತಿಸುವಲ್ಲಿ ವಿಫಲರಾದ ಮನೀಷ್ ಕ್ಲೀನ್ ಬೌಲ್ಡ್ ಆದರು. ಕರುಣ್ ನಾಯರ್‌ಗೂ ಸಿದ್ಧಾರ್ಥ್ ಅವರೇ ಪೆವಿಲಿಯನ್ ದಾರಿ ತೋರಿಸಿದರು.

ಶ್ರೀನಿವಾಸ್ ಶರತ್ ಕೂಡ ವಿಫಲರಾದರು. ಕೆಳಕ್ರಮಾಂಕದ ವಿಕೆಟ್‌ಗಳನ್ನು ಸಿದ್ಧಾರ್ಥ್ ಮತ್ತು ಸಾಯಿಕಿಶೋರ್ ಹಂಚಿಕೊಂಡು ಕರ್ನಾಟಕದ ಇನಿಂಗ್ಸ್‌ಗೆ ಬೇಗನೆ ತೆರೆಯೆಳೆದರು.



ವಾಷಿಂಗ್ಟನ್ ಸುಂದರ್ –ಟ್ವಿಟರ್ ಚಿತ್ರ

ಸ್ಕೋರ್ ಕಾರ್ಡ್

ಕರ್ನಾಟಕ 122 (36.3 ಓವರ್)
ಸಮರ್ಥ್ ಸಿ ಕಾರ್ತಿಕ್ ಬಿ ವರಿಯರ್ 0 (4ಎ), ಕದಂ ಬಿ ವಾಷಿಂಗ್ಟನ್ 37 (69ಎ, 4X1), ಸಿದ್ಧಾರ್ಥ್ ಎಲ್‌ಬಿಡಬ್ಲ್ಯು ಬಿ ಸಿಲಂಬರಸನ್ 6 (14ಎ, 4X1), ಪಾಂಡೆ ಬಿ ಸಿದ್ಧಾರ್ಥ್ 40, ಕರುಣ್ ಸಿ ಸುಂದರೇಶನ್ ಬಿ ಸಿದ್ಧಾರ್ಥ್ 9 (16ಎ), ಶರತ್ ಬಿ ಸಾಯಿಕಿಶೋರ್ 3 (21ಎ), ಸುಚಿತ್ ಸ್ಟಂಪ್ಡ್ ಕಾರ್ತಿಕ್ ಬಿ ಸಿದ್ಧಾರ್ಥ್ 0 (1ಎ), ವೆಂಕಟೇಶ್ ಸಿ ಕಾರ್ತಿಕ್ ಬಿ ಸಾಯಿಕಿಶೋರ್ 0 (1ಎ), ವಿದ್ಯಾಧರ್ ಎಲ್‌ಬಿಡಬ್ಲ್ಯು ಸಿದ್ಧಾರ್ಥ್ 1 (12ಎ), ಕಾರ್ಯಪ್ಪ ಬಿ ಸಾಯಿಕಿಶೋರ್ 9 (9ಎ, 6X1), ಕೌಶಿಕ್ ಔಟಾಗದೆ 1 (9ಎ)
ಇತರೆ (ಲೆಗ್‌ಬೈ 2, ವೈಡ್ 12) 14
ವಿಕೆಟ್ ಪತನ: 1–0 (ಸಮರ್ಥ್; 0.4), 2–20 (ಸಿದ್ಧಾರ್ಥ್; 5.5), 3–87 (ಕದಂ; 22.1), 4–103 (ಮನೀಷ್ ಪಾಂಡೆ; 25.2), 5–105 (ಕರುಣ್ ನಾಯರ್; 27.1), 6–106 (ಸುಚಿತ್; 27.3), 7–109 (ವೆಂಕಟೇಶ್ ಮುರಳೀಧರ್; 30.1), 8–112 (ಶರತ್ ಶ್ರೀನಿವಾಸ್; 32.3), 9–114 (ವಿದ್ಯಾಧರ್ ಪಾಟೀಲ; 33.6), 10–122 (ಕಾರ್ಯಪ್ಪ; 36.3)
ಬೌಲಿಂಗ್: ಸಂದೀಪ್ ವರಿಯರ್ 8–1–22–1, ಸಿಲಂಬರಸನ್ 5–1–11–1, ಸಾಯಿಕಿಶೋರ್ 7.3–0–28–3, ಜೆ. ಕೌಶಿಕ್ 2–0–9–0, ವಾಷಿಂಗ್ಟನ್ ಸುಂದರ್ 5–0–27–1, ಎಂ. ಸಿದ್ಧಾರ್ಥ್ 9–2–23–4

ತಮಿಳುನಾಡು 2ಕ್ಕೆ 123 (28 ಓವರ್)
ಸಾಯಿ ಸುಂದರೇಶನ್ ಬಿ ಸುಚಿತ್ 18 (44ಎ, 4X2), ಜಗದೀಶನ್ ಬಿ ವಿದ್ಯಾಧರ್ 16 (20ಎ, 4X3), ಇಂದ್ರಜೀತ್ ಔಟಾಗದೆ 51 (74ಎ, 4X6), ವಾಷಿಂಗ್ಟನ್ ಔಟಾಗದೆ 31 (33ಎ, 4X3)
ಇತರೆ (ಬೈ 2, ಲೆಗ್‌ಬೈ 1, ವೈಡ್ 1, ನೋಬಾಲ್ 3) 7
ವಿಕೆಟ್ ಪತನ: 1–26 (ಜಗದೀಶನ್; 6.3), 2–58 (ಸುಂದರೇಶನ್; 15.3)
ಬೌಲಿಂಗ್: . ಕೌಶಿಕ್ 4–1–13–0, ವಿದ್ಯಾಧರ್ ಪಾಟೀಲ 5–1–22–1, ಜೆ ಸುಚಿತ್ 7–0–24–1, ವೆಂಕಟೇಶ್ ಮುರಳೀಧರ್ 2–0–8–0, ಕೆ.ಸಿ. ಕಾರ್ಯಪ್ಪ 8–0–39–0, ಕರುಣ್ ನಾಯರ್ 2–0–14–0

ಫಲಿತಾಂಶ: ತಮಿಳುನಾಡಿಗೆ 8 ವಿಕೆಟ್‌ಗಳ ಜಯ

ಸುಲಭ ಗುರಿಯನ್ನು ಬೆನ್ನಟ್ಟಿದ ತಮಿಳುನಾಡಿಗೆ ಮಧ್ಯಮವೇಗಿ ವಿದ್ಯಾಧರ್ ಪಾಟೀಲ ಏಳನೇ ಓವರ್‌ನಲ್ಲಿ ಹೊಡೆತ ನೀಡಿದರು. ಜಗದೀಶನ್ ವಿಕೆಟ್ ಗಳಿಸಿದರು. 16ನೇ ಓವರ್‌ನಲ್ಲಿ ಸಾಯಿ ಸುದರ್ಶನ್ ವಿಕೆಟ್ ಪಡೆದ ಸುಚಿತ್ ಸಂಭ್ರಮಿಸಿದರು. ನಂತರದ ಆಟದಲ್ಲಿ ಕರ್ನಾಟಕ ತಂಡವು ಸಡಗರಪಡಲು ಬಾಬಾ ಮತ್ತು ವಾಷಿಂಗ್ಟನ್ ಅವಕಾಶವನ್ನೇ ಕೊಡಲಿಲ್ಲ.




ಮನೀಷ್ ಪಾಂಡೆ

ಋತುರಾಜ್ ಎರಡನೇ ಶತಕ

ರಾಜಕೋಟ್ (ಪಿಟಿಐ): ಮಹಾರಾಷ್ಟ್ರ ತಂಡದ ಋತುರಾಜ್ ಗಾಯಕವಾಡ್ ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಸತತ ಎರಡನೇ ಶತಕ ಗಳಿಸಿದರು.

ಗುರುವಾರ ನಡೆದ ಡಿ ಗುಂಪಿನ ಪಂದ್ಯದಲ್ಲಿ ಋತುರಾಜ್ (154; 143ಎಸೆತ, 14ಬೌಂಡರಿ, 5ಸಿಕ್ಸರ್) ಭರ್ಜರಿ ಶತಕದ ಬಲದಿಂದ ಮಹಾರಾಷ್ಟ್ರ ತಂಡವು 8 ವಿಕೆಟ್‌ಗಳಿಂದ ಛತ್ತೀಸಗಢದ ಎದುರು ಜಯಿಸಿತು. ಋತುರಾಜ್ ಬುಧವಾರ ಮಧ್ಯಪ್ರದೇಶ ಎದುರಿನ ಪಂದ್ಯದಲ್ಲಿಯೂ ಶತಕ ಬಾರಿಸಿದ್ದರು.



ಋತುರಾಜ್ ಗಾಯಕವಾಡ್

ಸಂಕ್ಷಿಪ್ತ ಸ್ಕೋರು: ತಿರುವನಂತಪುರ: ಬಿ ಗುಂಪು: ಬರೋಡಾ: 49.1 ಓವರ್‌ಗಳಲ್ಲಿ 210 (ವಿಷ್ಣು ಸೋಳಂಕಿ 94, ಅತಿಥ್ ಶೇಟ್ 24, ಶಮ್ಸ್ ಮುಲಾನಿ 40ಕ್ಕೆ2, ಪ್ರಶಾಂತ್ ಸೋಳಂಕಿ 61ಕ್ಕೆ3, ತನುಷ್ ಕೊಟ್ಯಾನ್ 44ಕ್ಕೆ3) **ಮುಂಬೈ:** 23 ಓವರ್‌ಗಳಲ್ಲಿ 3ಕ್ಕೆ100 (ಯಶಸ್ವಿ ಜೈಸ್ವಾಲ್ ಔಟಾಗದೆ 41, ಅರ್ಮಾನ್ ಜಾಫರ್ 21, ಕಾರ್ತಿಕ್ ಕಾಕಡೆ 20ಕ್ಕೆ1, ಕೃಣಾಲ್ ಪಾಂಡ್ಯ 20ಕ್ಕೆ1) ಫಲಿತಾಂಶ: ಮುಂಬೈ ತಂಡಕ್ಕೆ 13 ರನ್‌ಗಳಿಗೆ ಜಯ (ವಿಜೆಡಿ ಪದ್ಧತಿ)

ಬಂಗಾಳ: 50 ಓವರ್‌ಗಳಲ್ಲಿ 8ಕ್ಕೆ 264 (ಶ್ರೀವತ್ಸ ಗೋಸ್ವಾಮಿ 45, ಸುದೀಪ್ ಚಟರ್ಜಿ 27, ಋತ್ವಿಕ್ ಚೌಧರಿ 32, ಸುಮಂತ್ ಗುಪ್ತಾ 22, ಶಾಬಾಜ್ ಅಹಮದ್ ಔಟಾಗದೆ 85, ಸುಬೋಧ್ ಭಾಟಿ 70ಕ್ಕೆ3, ಭರತ್ ಶರ್ಮಾ 45ಕ್ಕೆ2, ಸಾಗರ್ ಉದೇಶಿ 44ಕ್ಕೆ2) ಪುದುಚೇರಿ: 30 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 132 (ಪವನ್ ದೇಶಪಾಂಡೆ ಔಟಾಗದೆ 62, ಪರಸ್ ಡೋಗ್ರಾ ಔಟಾಗದೆ 41. ಮುಕೇಶ್ ಕುಮಾರ್ 17ಕ್ಕೆ1, ಶಾಬಾಜ್ ಅಹಮದ್ 15ಕ್ಕೆ1) ಫಲಿತಾಂಶ: ಪುದುಚೇರಿ ತಂಡಕ್ಕೆ 8 ರನ್‌ಗಳ ಜಯ (ವಿಜೆಡಿ ಪದ್ಧತಿ)

ರಾಜ್‌ಕೋಟ್: ಡಿ ಗುಂಪು: ಛತ್ತೀಸಗಡ: 50 ಓವರ್‌ಗಳಲ್ಲಿ 7ಕ್ಕೆ 275 (ಆಶುತೋಷ್ 33, ಅಮನದೀಪ್ ಖರೆ 82, ಶಶಾಂಕ್ ಸಿಂಗ್ 63, ಅಜಯ್ ಮಂಡಲ್ 28, ಶುಭಂ ಅಗರವಾಲ್ ಔಟಾಗದೆ 22, ಮುಖೇಶ್ ಚೌಧರಿ 67ಕ್ಕೆ4, ತ್ರಿಪಾಠಿ 25ಕ್ಕೆ2) **ಮಹಾರಾಷ್ಟ್ರ:** 47 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 276 (ಋತುರಾಜ್ ಗಾಯಕವಾಡ್ ಔಟಾಗದೆ 154, ಯಶ್ ನೆಹರ್ 52, ನೌಶಾದ್ ಶೇಖ್ 37, ರಾಹುಲ್ ತ್ರಿಪಾಠಿ ಔಟಾಗದೆ 23, ಅಜಯ್ ಜಾಧವ್ ಮಂಡಲ 47ಕ್ಕೆ2) ಫಲಿತಾಂಶ: ಮಹಾರಾಷ್ಟ್ರ ತಂಡಕ್ಕೆ 8 ವಿಕೆಟ್ ಜಯ.

ಮಧ್ಯಪ್ರದೇಶ: 50 ಓವರ್‌ಗಳಲ್ಲಿ 9ಕ್ಕೆ 329 (ಅಭಿಷೇಕ್ ಭಂಡಾರಿ 49, ರಜತ್ ಪಾಟೀದಾರ್ 49, ವೆಂಕಟೇಶ್ ಅಯ್ಯರ್ 112, ಶುಭಂ ಶರ್ಮಾ 82, ವಿಷ್ಣು ವಿನೋದ್ 59ಕ್ಕೆ3, ಬಾಸಿಲ್ ಥಂಪಿ 62ಕ್ಕೆ2), ಕೇರಳ: 49.4 ಓವರ್‌ಗಳಲ್ಲಿ 289 (ರೋಹನ್ ಕುನ್ನುಮ್ಮಳ 66, ಮೊಹಮ್ಮದ್ ಅಜರುದ್ದೀನ್ 34, ಸಚಿನ್ ಬೇಬಿ 66, ಜಲಜ್ ಸಕ್ಸೆನಾ 34, ಪುನೀತ್ ದಾತೆ 59ಕ್ಕೆ4, ವೆಂಕಟೇಶ್ ಅಯ್ಯರ್ 55ಕ್ಕೆ3) ಫಲಿತಾಂಶ: ಮಧ್ಯಪ್ರದೇಶಕ್ಕೆ 40 ರನ್‌ಗಳ ಜಯ.

ಕ್ರಾಸ್ ಕಂಟ್ರಿ ಮುಂದೂಡಿಕೆ

ಬೆಂಗಳೂರು: ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರದಲ್ಲಿ ಇದೇ 19ರಂದು ನಡೆಸಲುದ್ದೇಶಿಸಿದ್ದ ರಾಜ್ಯ ಕ್ರಾಸ್ ಕಂಟ್ರಿ ಚಾಂಪಿಯನ್‌ಷಿಪ್ ಮುಂದೂಡಲಾಗಿದೆ ಎಂದು ಕರ್ನಾಟಕ ರಾಜ್ಯ ಅಥ್ಲೆಟಿಕ್ಸ್ ಸಂಸ್ಥೆ ತಿಳಿಸಿದೆ.

ಪರೀಕ್ಷೆಗಳು ನಡೆಯಲಿರುವುದರಿಂದ ಚಾಂಪಿಯ್‌ಷಿಪ್ ಮುಂದೂಡಲಾಗಿದ್ದು ಇದೇ 27ರಂದು ನಡೆಯಲಿದೆ ಎಂದು ಸಂಸ್ಥೆಯ ಗೌರವ ಕಾರ್ಯದರ್ಶಿ ಎ. ರಾಜವೇಲು ತಿಳಿಸಿದ್ದಾರೆ.

ಕೊಹ್ಲಿಗೆ ಬಿಸಿಸಿಐ ಕೃತಜ್ಞತೆ

ನವದೆಹಲಿ (ಪಿಟಿಐ): ಸೀಮಿತ ಓವರ್‌ಗಳ ಕ್ರಿಕೆಟ್ ತಂಡದ ನಾಯಕತ್ವದಲ್ಲಿ ವಿರಾಟ್ ಕೊಹ್ಲಿಯ ಸಾಧನೆಯನ್ನು ಶ್ಲಾಘಿಸಿರುವ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು ಕೃತಜ್ಞತೆ ಸಲ್ಲಿಸಿದೆ.

ಬುಧವಾರ ಏಕದಿನ ಕ್ರಿಕೆಟ್ ತಂಡಕ್ಕೆ ರೋಹಿತ್ ಶರ್ಮಾ ಅವರನ್ನು ನಾಯಕರನ್ನಾಗಿ ನೇಮಕ ಮಾಡಿ, ಕೊಹ್ಲಿಯನ್ನು ಟೆಸ್ಟ್ ನಾಯಕರನ್ನಾಗಿ ಉಳಿಸಿಕೊಳ್ಳಲಾಗಿದೆ.

ಈ ಹಿಂದೆ ಟಿ20 ತಂಡಕ್ಕೆ ರೋಹಿತ್ ಅವರನ್ನು ನೇಮಕ ಮಾಡಲಾಗಿತ್ತು. ಕೊಹ್ಲಿ ಟಿ20 ವಿಶ್ವಕಪ್ ನಂತರ ಚುಟುಕು ಕ್ರಿಕೆಟ್ ತಂಡದ ನಾಯಕತ್ವ ಬಿಟ್ಟುಕೊಟ್ಟಿದ್ದರು.

'ತಂಡವನ್ನು ಎದೆಗಾರಿಕೆ, ಧೃಡ ನಿಶ್ಚಯ ಮತ್ತು ಅಗಾಧ ಪ್ರೇಮದಿಂದ ಮುನ್ನಡೆಸಿದ ನಾಯಕ ವಿರಾಟ್. ಅವರಿಗೆ ಧನ್ಯವಾದಗಳು' ಎಂದು ಮಂಡಳಿಯು ಟ್ವೀಟ್ ಮಾಡಿದೆ.


ಸೀಮಿತ ಓವರ್‌ಗಳ ತಂಡಕ್ಕೆ 2017ರಲ್ಲಿ ಪೂರ್ಣಾವಧಿ ನಾಯಕರಾಗಿ ನೇಮಕವಾದ ಕೊಹ್ಲಿ, 95 ಏಕದಿನ ಪಂದ್ಯಗಳ ಪೈಕಿ 65ರಲ್ಲಿ ಜಯಿಸಿದ್ದಾರೆ.

ರೋಹಿತ್ ಶರ್ಮಾ ಇದೇ ತಿಂಗಳು ದಕ್ಷಿಣ ಆಫ್ರಿಕಾದಲ್ಲಿ ನಡೆಯಲಿರುವ ಏಕದಿನ ಟೂರ್ನಿಯಲ್ಲಿ ತಂಡವನ್ನು ಮುನ್ನಡೆಸಲಿದ್ದಾರೆ.

ತಂಡಕ್ಕೆ ವಿರಾಟ್ ಬೇಕೆ ಬೇಕು: 'ಅದ್ಭುತ ಬ್ಯಾಟರ್ ಆಗಿರುವ ವಿರಾಟ್ ಕೊಹ್ಲಿಯ ಆಟ ಮತ್ತು ನಾಯಕತ್ವದ ಗುಣಗಳು ನಮ್ಮ ತಂಡಕ್ಕೆ ಎಲ್ಲ ಹಂತದಲ್ಲಿಯೂ ಅತ್ಯಗತ್ಯವಾಗಿ ಬೇಕು' ಎಂದು ರೋಹಿತ್ ಶರ್ಮಾ ಹೇಳಿದ್ದಾರೆ.

'ಟಿ20 ಮಾದರಿಯಲ್ಲಿ 50ಕ್ಕಿಂತ ಹೆಚ್ಚು ಸರಾಸರಿ ಹೊಂದಿರುವ ಬ್ಯಾಟರ್ ವಿರಾಟ್ ಕೊಹ್ಲಿ. ಇದೊಂದು ಅಸಾಮಾನ್ಯ ಸಾಧನೆ. ನಿರಂತರವಾಗಿ ಈ ಶ್ರೇಯ ಕಾಪಾಡಿಕೊಂಡು ಬಂದಿರುವುದು ಅದ್ಭುತ' ಎಂದು ರೋಹಿತ್ ಬಣ್ಣಿಸಿದರು.

'ಪಂದ್ಯದಲ್ಲಿ ಆಟಗಾರರ ಸಂಯೋಜನೆ ಮತ್ತು ಅಗತ್ಯಕ್ಕೆ ತಕ್ಕಂತೆ ಆಡುವ ಸಾಮರ್ಥ್ಯದ ಆಟಗಾರರ ಆಯ್ಕೆ ಮಾಡುವುದು ನಾಯಕನ ಕೆಲಸ. ತಾಂತ್ರಿಕ ಅಂಶಗಳನ್ನು ಗಮನಿಸಬೇಕು. ಸಮಯಕ್ಕೆ ತಕ್ಕ ನಿರ್ಣಯಗಳನ್ನು ಕೈಗೊಳ್ಳಬೇಕು' ಎಂದು ರೋಹಿತ್ 'ಬ್ಯಾಕ್‌ಸ್ಟೇಜ್ ವಿತ್ ಬೊರಿಯಾ' ಯೂಟ್ಯೂಬ್ ವಾಹಿನಿ ಕಾರ್ಯಕ್ರಮದಲ್ಲಿ ಹೇಳಿದರು.



ವಿರಾಟ್ ಕೊಹ್ಲಿ ಮತ್ತು ಸೌರವ್ ಗಂಗೂಲಿ

ಇಬ್ಬರು ನಾಯಕರಿರುವುದು ತರವಲ್ಲ: ಗಂಗೂಲಿ

ಏಕದಿನ ಕ್ರಿಕೆಟ್ ತಂಡದಕ್ಕೆ ವಿರಾಟ್ ಕೊಹ್ಲಿಯ ಬದಲು ರೋಹಿತ್ ಶರ್ಮಾ ಅವರನ್ನು ನೇಮಕ ಮಾಡಿರುವುದರ ಕುರಿತು ಬಿಸಿಸಿಐ ಅಧ್ಯಕ್ಷ ಸೌರವ್ ಗಂಗೂಲಿ ಮೌನ ಮುರಿದಿದ್ದಾರೆ.

'ಸೀಮಿತ ಓವರ್‌ಗಳ ಮಾದರಿಯ ಕ್ರಿಕೆಟ್ ತಂಡಕ್ಕೆ ಇಬ್ಬರು ನಾಯಕರಿರುವುದು ಒಳ್ಳೆಯದಲ್ಲ. ನಿರ್ಣಯ ಕೈಗೊಳ್ಳುವಾಗ ಮತ್ತು ತಂಡಗಳ ತಂತ್ರಗಾರಿಕೆ ರೂಪಿಸುವಾಗ ತೊಂದರೆಯಾಗುತ್ತದೆ. ಅಲ್ಲದೇ ಸಮತೋಲನದ ಕೊರತೆಯೂ ಆಗುತ್ತದೆ. ಆದ್ದರಿಂದ ಆಯ್ಕೆ ಸಮಿತಿಯು ಶ್ವೇತವರ್ಣದ ಚೆಂಡಿನ ಕ್ರಿಕೆಟ್ ತಂಡಕ್ಕೆ ಒಬ್ಬರನ್ನೇ ನಾಯಕರನ್ನಾಗಿ ಮಾಡಲು ನಿರ್ಧರಿಸಿದೆ' ಎಂದು ಗಂಗೂಲಿ ಸ್ಪಷ್ಟಪಡಿಸಿದರು.

'ಸ್ವತಃ ನಾನು ಮತ್ತು ಆಯ್ಕೆ ಸಮಿತಿ ಮುಖ್ಯಸ್ಥ ಚೇತನ್ ಶರ್ಮಾ ಅವರು ಕೊಹ್ಲಿಯೊಂದಿಗೆ ಮಾತನಾಡಿದ ನಂತರವೇ ನಿರ್ಧಾರ ಕೈಗೊಳ್ಳಲಾಗಿದೆ. ಇದಕ್ಕೆ ವಿರಾಟ್ ಸಮ್ಮತಿಸಿದ್ದಾರೆ. ಏನೇನು ಮಾತುಕತೆ ನಡೆಯಿತು ಎಂಬುದನ್ನು ನಾನು ವಿವರಿಸಲು ಸಾಧ್ಯವಿಲ್ಲ' ಎಂದು ಗಂಗೂಲಿ ಹೇಳಿದರು.

'ರೋಹಿತ್ ನಾಯಕತ್ವ ಹೇಗಿರಲಿದೆ ಎಂಬುದನ್ನು ಈಗಲೇ ಊಹಿಸಲು ಸಾಧ್ಯವಿಲ್ಲ. ಅವರು ಉತ್ತಮವಾಗಿ ಕಾರ್ಯನಿರ್ವಹಿಸುವ ಭರವಸೆ ಇದೆ. ಅವರಿಗೆ ಒಳ್ಳೆಯದಾಗಲಿ' ಎಂದು ಶುಭ ಕೋರಿದರು.

ಟಿಟಿ: ತನಿಷ್ಕಾಗೆ ಕಂಚು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ತನಿಷ್ಕಾ ಅವರು ಡೆಹ್ರಾಡೂನ್‌ನಲ್ಲಿ ನಡೆಯುತ್ತಿರುವ ರಾಷ್ಟ್ರೀಯ ರ್‍ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಕಂಚಿನ ಪದಕ ಗಳಿಸಿದರು. ಸೆಮಿಫೈನಲ್‌ನಲ್ಲಿ ಪಶ್ಚಿಮ ಬಂಗಾಳದ ಅಂಕೋಲಿಕ ಚಕ್ರವರ್ತಿ ಎದುರು ಅವರು 0–3ರಲ್ಲಿ ಸೋತರು.

ಕ್ವಾರ್ಟರ್ ಫೈನಲ್‌ನಲ್ಲಿ ಶುಭೊಮಿತಾ ಬಾಸಕ್ ವಿರುದ್ಧ ತನಿಷ್ಕಾ 3–0ಯಿಂದ ಜಯ ಗಳಿಸಿದ್ದರು. ಪ್ರೀ ಕ್ವಾರ್ಟರ್ ಫೈನಲ್‌ನಲ್ಲಿ ಚಾರ್ಮಿ ತ್ರಿವೇದಿ ವಿರುದ್ಧ 3–0ಯಿಂದ ಗೆದ್ದಿದ್ದ ಅವರು ಮುಖ್ಯ ಸುತ್ತಿನ ಮೊದಲ ಪಂದ್ಯದಲ್ಲಿ ಪಶ್ಚಿಮ ಬಂಗಾಳದ ಬಿಬೇಷ್ನಾ ಸಹಾ ಅವರನ್ನು 3–0ಯಿಂದ ಸೋಲಿಸಿದ್ದರು.



ತನಿಷ್ಕಾ ಕೆ

ಭಾರತ 'ಎ' ತಂಡಕ್ಕೆ ಪ್ರಶಸ್ತಿ

ವಿಜಯವಾಡ (ಪಿಟಿಐ): ಬ್ಯಾಟರ್‌ಗಳಾದ ಯಷ್ಟಿಕಾ ಭಾಟಿಯಾ ಮತ್ತು ಚಲ್ಲಾ ಝಾನ್ಸಿ ಲಕ್ಷ್ಮಿ ಅವರ ಆಕರ್ಷಕ ಅರ್ಧ ಶತಕಗಳ ನೆರವಿನಿಂದ ಭಾರತ 'ಎ' ತಂಡ ಫೈನಲ್‌ನಲ್ಲಿ ಮೂರು ವಿಕೆಟ್‌ಗಳಿಂದ ಭಾರತ 'ಡಿ' ತಂಡವನ್ನು ಸೋಲಿಸಿ ಮಹಿಳಾ ಚಾಲೆಂಜರ್ ಟ್ರೋಫಿ ಗೆದ್ದುಕೊಂಡಿತು.

ಗುರುವಾರ ನಡೆದ ಪಂದ್ಯದಲ್ಲಿ ಪೂಜಾ ವಸ್ತ್ರಕಾರ್ ನೇತೃತ್ವದ ತಂಡ ಮೊದಲು ಆಡಿ 50 ಓವರುಗಳಲ್ಲಿ 8 ವಿಕೆಟ್‌ಗೆ 219 ರನ್ ಪೇರಿಸಿತು.

ಆರಂಭ ಆಟಗಾರ್ತಿ ಎಸ್. ಮೇಘನಾ (44 ಎಸೆತಗಳಲ್ಲಿ 45) ಮತ್ತು ಕೆಳ ಮಧ್ಯಮ ಕ್ರಮಾಂಕದ ಆಟಗಾರ್ತಿ ಅಮನ್‌ಜೋತ್ ಕೌರ್ (74 ಎಸೆತಗಳಲ್ಲಿ 55) ಅವರು ಗಮನಾರ್ಹ ಕಾಣಿಕೆ ನೀಡಿದರು. ನಾಲ್ಕು ತಂಡಗಳ ಟೂರ್ನಿಯ ಏಕೈಕ ಅಜೇಯ ತಂಡವೆಂಬ ಹೆಗ್ಗಳಿಕೆಯೊಡನೆ ಭಾರತ 'ಡಿ' ತಂಡ ಇಲ್ಲಿ ಆಡಲು ಇಳಿದಿತ್ತು.

ಆದರೆ ಈ ಮೊತ್ತವನ್ನು ಸ್ನೇಹಾ ರಾಣಾ ಬಳಗ 45.4 ಓವರುಗಳಲ್ಲಿ ದಾಟಿತು. ಯಷ್ಟಿಕಾ ಭಾಟಿಯಾ 102 ಎಸೆತಗಳನ್ನೆದುರಿಸಿ 86 ರನ್ ಬಾರಿಸಿದರೆ, ಲಕ್ಷ್ಮೀ 70 ಎಸೆತಗಳಲ್ಲಿ 64 ರನ್ ಸೇರಿಸಿ ತಂಡವನ್ನು ಸುಲಭವಾಗಿ ಗುರಿಮುಟ್ಟಿಸಿದರು.

ಬೆಂಗಳೂರು ರೇಸ್

ಬ್ರನ್‌ಹಿಲ್ಡ್ ಗೆಲ್ಲುವ ನಿರೀಕ್ಷೆ

ಬೆಂಗಳೂರು 1000 ಗಿನ್ನೀಸ್ ಶುಕ್ರವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು ಬ್ರನ್‌ಹಿಲ್ಡ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 1.30ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಟಾಪ್ ನ್ಯೂಸ್ 7, ಫ್ಲೋರೆನ್ಸಿಯಾ 6, ಸ್ಟಾರ್ ಸಿಟಿಜನ್ 9
2ನೇ ರೇಸ್: ಸೀಜ್ ಪೆರಿಲಸ್ 3, ಟ್ಯಾಕ್ಟಿಕಲ್ ಕಮಾಂಡ್ 4, ಒನ್ಲಿ ಯು 7
3ನೇ ರೇಸ್: ಚಿಸಾಕ್ಸ್ 4, ಎಂಬೊಸಮ್ 5, ಕಮಾಂಡ್ ಪೋಸ್ಟ್ 1
4ನೇ ರೇಸ್: ಎವಾಲ್ಡೊ 1, ಮ್ಯೂರ್‌ಫೀಲ್ಡ್ 7, ಅನಾಲೆಕ್ಟ್ 6
5ನೇ ರೇಸ್: ಆಟೊಮ್ಯಾಟಿಕ್ 2, ಸಿಲ್ವರಸ್ 5, ಪಿಸ್ಸಾರೊ 3
6ನೇ ರೇಸ್: ಬ್ರನ್‌ಹಿಲ್ಡ್ 2, ಕೆನ್‌ಸಿಂಗ್ಟನ್ ಕೋರ್ಟ್ 5, ಮೆಡೋರ 6
7ನೇ ರೇಸ್: ದಿ ಸಾವರಿನ್ ಆರ್ಬ್ 8, ಪೆಲೂಷ್ 1, ಫಸ್ಟ್ ಇಂಪ್ರೆಷನ್ 4
8ನೇ ರೇಸ್: ವೆಲ್‌ಕಮ್ ಸಪ್ರೈಸ್ 4, ಗ್ಯಾಲಕ್ಟಿಕಲ್ 8, ಇಂಪೆಕಬಲ್ 5

ಉತ್ತಮ ಬೆಟ್: ಸೀಜ್ ಪೆರಿಲಸ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
4,5,6,7,8	3,4,5	6,7,8

'ಕೇರ್ ಫಾರ್ ಹಾಕಿ'ಗೆ ರಾಣಿ ರಾಯಭಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತದ ಖಾಸಗಿ ಸಾಮಾನ್ಯ ವಿಮಾ ಕಂಪನಿಗಳಲ್ಲಿ ಒಂದಾಗಿರುವ ಬಜಾಜ್ ಅಲಯನ್ಸ್ 'ಕೇರ್ ಫಾರ್ ಹಾಕಿ' ಅಭಿಯಾನಕ್ಕೆ ಗುರುವಾರ ಚಾಲನೆ ನೀಡಿದೆ. ಭಾರತ ಮಹಿಳಾ ಹಾಕಿ ತಂಡದ ನಾಯಕಿ ರಾಣಿ ರಾಂಪಾಲ್ ಈ ಅಭಿಯಾನದ ರಾಯಭಾರಿಯಾಗಿದ್ದಾರೆ.

ದೇಶದಲ್ಲಿ ಹಾಕಿ ಕ್ರೀಡೆಗೆ ಇನ್ನಷ್ಟು ಗೌರವ ತಂದುಕೊಡುವುದು ಮತ್ತು ನೆರವಿನ ಮೂಲಕ ಸಮಾಜದಲ್ಲಿ ಬದಲಾವಣೆ ತರಲು ಪ್ರಯತ್ನಿಸುವುದು ಈ ಅಭಿಯಾನದ ಉದ್ದೇಶ ಎಂದು ಪ್ರಕಟಣೆ ತಿಳಿಸಿದೆ.

ಹಾಕಿಯನ್ನು ತಳಮಟ್ಟದಿಂದ ಬೆಳೆಸಲು ಈ ಅಭಿಯಾನ ಗಮನ ನೀಡಲಿದೆ. ರಾಣಿ ರಾಂಪಾಲ್ ಅವರ ದೃಢಸಂಕಲ್ಪ, ಏಕಾಗ್ರತೆ ಮತ್ತು ಸೋಲೊಪ್ಪಿಕೊಳ್ಳದ ಮನೋಭಾವ ಅಭಿಯಾನದ ಯಶಸ್ಸಿಗೆ ನೆರವಾಗುವ ಭರವಸೆ ಇದೆ ಎಂದು ಪ್ರಕಟಣೆಯಲ್ಲಿ ಅಭಿಪ್ರಾಯಪಡಲಾಗಿದೆ.